# ವಿಶ್ವಗುಣಾದರ್ಶ

## ನಮ್ಮ ಗುರುಗಳು



ಪರಮಪೂಜ್ಯ ಡಾ॥ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು

ಡಾ|| ಯೋಗೀಂದ್ರ ಭಟ್ ಉಳಿ

# ವಿಶ್ವಗುಣಾದರ್ಶ

## ನಮ್ಮ ಗುರುಗಳು

ಡಾ। ಯೋಗೀಂದ್ರ ಭಟ್, ಉಳಿ


KAVACHADA MUDDINA

# ವಿಶ್ವಗುಣಾದರ್ಶ



**ಶ್ರೀ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು**
ಕಿರಿಯಪಟ್ಟ, ಪರ್ಯಾಯ ಶ್ರೀ ಪುತ್ತಿಗೆ
ಶ್ರೀಕೃಷ್ಣ ಮಠ, ಉಡುಪಿ

**ಈ** "ವಿಶ್ವಗುಣಾದರ್ಶ" ಎಂಬ ಹೊತ್ತಿಗೆ ಅತ್ಯಂತ ಅಪೂರ್ವ ಹಾಗೂ ನಮ್ಮ ಗುರುಗಳ ಅನನ್ಯ ಸಾಧನೆಗಳ ಬಗ್ಗೆ ಸ್ಪಷ್ಟವಾಗಿ ಅರಿಯಲು ಅತ್ಯವಶ್ಯಕ ಎಂಬುವುದಾಗಿ ನಾವು ತಿಳಿಯುತ್ತೇವೆ. ನಮ್ಮ ಗುರುಗಳು ಮಾಡಿದ ವಿಶ್ವಪರ್ಯಟನೆಯ ಒಂದು ಅಪೂರ್ವ ನೋಟವನ್ನು ಇಲ್ಲಿ ಮನೋಜ್ಞವಾಗಿ ಸೆರೆಹಿಡಿಯಲಾಗಿದೆ. ಶ್ರೀಹರಿಗುರುಗಳ ಅನುಗ್ರಹದಿಂದ ಇಪ್ಪತ್ತೆಂಟು ವರ್ಷಗಳ ಹಿಂದೆಯೇ (1997) ದೂರದ ಕಡಲಾಚೆಯ ಅಮೇರಿಕಾ ದೇಶಕ್ಕೆ ತೆರೆಳಿ, ತದನಂತರ ಅನ್ಯದೇಶಗಳಲ್ಲೂ ಸಂಚರಿಸಿ ಅಲ್ಲಿ ನೆಲೆಸಿರುವ ನಮ್ಮ ಸಮುದಾಯದವರಲ್ಲಿ ಧರ್ಮ ಜಾಗೃತಿಯಾಗಬೇಕು, ನಮ್ಮ ಸಂಸ್ಕೃತಿ ಬೆಳೆಯಬೇಕು ಎಂಬ ಏಕೈಕ ಚಿಂತನೆಯೊಂದಿಗೆ ಇಲ್ಲಿಯ ತನಕ ವಿದೇಶಗಳಲ್ಲಿ ಹದಿನೈದು ಮಠಗಳ ಸಂಸ್ಥಾಪನೆ ಮಾಡಿದ್ದು ನಮ್ಮ ಗುರುಗಳಿಂದ ಮಾತ್ರ ಸಾಧ್ಯವೆನಿಸಿದ ಅನ್ಯಾದೃಶಸಾಧನೆ!

ಮೇಲ್ನೋಟಕ್ಕೆ ಎಲ್ಲವೂ ತಿಳಿಯಾಗಿ, ಸುಲಲಿತವಾಗಿ ಕಂಡರೂ ನಮ್ಮದಲ್ಲದ ದೇಶದಲ್ಲಿ ನೆಲೆಸಿರುವ ನಮ್ಮವರ ಏಳಿಗೆಗಾಗಿ, ಸನಾತನ ಧರ್ಮದ ಉಳಿವಿಗಾಗಿ ಗುರುಗಳು ನಡೆದ ಹಾದಿ ಸುಲಭದ್ದೇನೂ ಆಗಿರಲಿಲ್ಲ! ಇದನ್ನು ಸ್ವತಃ ನಮ್ಮ ಗುರುಗಳೇ ನಮಗೆ ಅನೇಕಬಾರಿ ಹೇಳಿದ್ದುಂಟು! ಒಳ್ಳೆಯ ಕೆಲಸಕ್ಕೆ ಅನೇಕ ಅಡೆತಡೆಗಳು ಎನ್ನುವುದು ಇಲ್ಲಿ ಅಲ್ಲಿ ಎಲ್ಲಕಡೆಯಲ್ಲಿಯೂ, ಯಾವಾಗಲೂ ಇರುವಂತದ್ದೇ. ಅತ್ಯಂತ ನಿಕಟವರ್ತಿಗಳಿಗೆ ಇಂತಹ ಅನೇಕ ವಿಚಾರಗಳು ತಿಳಿದಿದ್ದರೂ ಹೆಚ್ಚಿನ ಜನರಿಗೆ ಎಷ್ಟೋ ವಿಷಯಗಳು ಇನ್ನೂ ತಿಳಿದೇ ಇಲ್ಲ! "ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ" ಎಂಬಂತೆ "ಅಮೇರಿಕಾದಲ್ಲಿ ಎಲ್ಲ ಸುಲಭರೀ" ಎಂದು ಉದ್ಗರಿಸುವವರನ್ನು ನಾವೂ ಎಷ್ಟೋ ಕಡೆಗಳಲ್ಲಿ ನೋಡಿದ್ದೇವೆ.

ಈ "ವಿಶ್ವಗುಣಾದರ್ಶ" ಅಲ್ಲಿನ ವಾಸ್ತವತೆಯು ಚಿತ್ರಣವನ್ನು ಸ್ಥೂಲವಾಗಿಯಾದರೂ ನೀಡುವ ಪ್ರಯತ್ನ ಮಾಡಿದೆ. ನಮ್ಮ ಪ್ರೀತಿಯ ಯೋಗೀಂದ್ರ ಭಟ್ ಉಳಿ ಅವರು ಗುರುಗಳ ಬಹುತೇಕ ಪ್ರಯತ್ನದಲ್ಲಿ ಅವರ ಸಹಯೋಗದ ಅನುಗ್ರಹಕ್ಕೆ ಪಾತ್ರರಾಗಿದ್ದು ಬಹಳ ಹತ್ತಿರದಿಂದ ಎಲ್ಲವನ್ನೂ ನೋಡಿದವರು ಮತ್ತು ಅನುಭವಿಸಿದವರು. ಅವರ ಮುಖೇನ ಹೊತ್ತಗೆ ಹೊರಬರುತ್ತಿರುವುದು ಔಚಿತ್ಯಪೂರ್ಣ.

ಗುರುಗಳು ವಿದೇಶಗಳಲ್ಲಿ ಸಂಸ್ಥಾಪಿಸಿದ ಒಂದೊಂದು ಮಠದಿಂದಲೂ ಜ್ಞಾನಕಾರ್ಯ, ದೇವತಾಕಾರ್ಯ, ಪಿತೃಕಾರ್ಯಾದಿ ನಾನಾವಿಧದ ಸೌಲಭ್ಯಗಳನ್ನು, ಸಹಾಯಗಳನ್ನು ಪಡೆದವರು ಸಾವಿರಾರು ಜನ. ಮತ್ತು ವಿಶ್ವದಾದ್ಯಂತ ಸಂಚರಿಸಿ ಗುರುಗಳು ಕೈಗೊಂಡ ಇಂತಹ ಅನೇಕ ಮಹತ್ಕಾರ್ಯಗಳಿಗೆ ಸಹಕರಿಸಿ ದೇವರ, ಗುರುಗಳ ಅನುಗ್ರಹಕ್ಕೆ ಪಾತ್ರರಾದವರೂ ಸಹಸ್ರಾರು ಮಂದಿ. ಹೀಗೆ ನಮ್ಮ ಗುರುಗಳು ಮಾಡಿದ ಸಾಧನೆ ಮತ್ತು ಅನ್ಯದೇಶಗಳಲ್ಲೂ ಮೂಡಿಸಿದ ಧಾರ್ಮಿಕತೆಯ ಛಾಪು ವರ್ಣನಾತೀತ. ಅದೆಲ್ಲವನ್ನೂ ಒಟ್ಟು ಸೇರಿಸಿ ಓದುಗರಿಗೆ ಕೊಡುವ ಪ್ರಯತ್ನವನ್ನು ಈ ಹೊತ್ತಗೆ ಮಾಡಿರುವುದು ಶ್ಲಾಘನೀಯ. ಶ್ರೀಕೃಷ್ಣಮುಖ್ಯಪ್ರಾಣರ ಅನುಗ್ರಹದಿಂದ, ಗುರುಗಳಮೇಲಿನ ಅಪಾರ ಗೌರವದಿಂದ ಈ ಪ್ರಯತ್ನವನ್ನು ಮಾಡಿದ ಶ್ರೀ ಯೋಗೀಂದ್ರ ಭಟ್ ಉಳಿ ಇವರಿಗೆ ನಮ್ಮ ಆರಾಧ್ಯಮೂರ್ತಿ ಶ್ರೀಕೃಷ್ಣಮುಖ್ಯಪ್ರಾಣರ ಪರಿಪೂರ್ಣ ಅನುಗ್ರಹವಾಗಲಿ. ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಅನುಗ್ರಹದಿಂದ ಈ ಹೊತ್ತಗೆ ಎಲ್ಲ ಜನರಿಗೂ ತಲುಪುವಂತಾಗಲಿ. ನಮ್ಮ ಗುರುಗಳ ಕೀರ್ತಿ ಚಿರವಾಗಿರಲಿ.

ಶ್ರೀಮನ್ನಾರಾಯಣ ಸ್ಮರಣೆಗಳು.

# ಆದರ್ಶಗುಣಗಣಿ–ಮಾನ್ಯರ ಮುದ್ದಿನರಗಿಣಿ–ವಿಶ್ವದಲ್ಲಿನ ಕಣ್ಮಣಿ



**ಮಹಾಮಹೋಪಾಧ್ಯಾಯ**
**ಡಾ. ಶತಾವಧಾನಿ ಉಡುಪಿ ರಾಮನಾಥ ಆಚಾರ್ಯ**

**ಗು**ರುಗಳ ಶ್ರೀ ಸುಗುಣೇಂದ್ರತೀರ್ಥರ ಆದರ್ಶಗುಣಗಳಲ್ಲಿ ವಿಶ್ವಕ್ಕೆ ಎದ್ದುಕಾಣುವ ಒಂದಂಶ, ಅವರು ನಿಶ್ಚಲವಾಗಿ ನಡೆಸುವ ವೇದಾಂತಪಾಠ. ಇದನ್ನು ಎಳವೆಯಿಂದಲೂ ನಾನು ಅನುಭವಿಸಿದವ. ಪ್ರತ್ಯಕ್ಷ ಸಾಕ್ಷಿ. ಗುರುಕುಲದ ಪದ್ಧತಿಯಲ್ಲಿ ಅಧ್ಯಯನ ನಡೆಸಿದ ಶ್ರೀಪಾದರು ತಮ್ಮ ಗುರುಗಳ ಆದೇಶದಂತೆ ಅದೇ ರೀತಿಯಲ್ಲಿ ಪಾಠವನ್ನು ನಡೆಸುತ್ತಾ ಬಂದವರು. ಅವರು ಕಲಿತ ಪಾಠಕ್ಕೆ ಅವರಿಗೆ ಕಲಿಸುವ ಕಲೆ ಇದೆ ಎಂದು ಗೊತ್ತಾಗಲು ಕಾರಣ ನಾನು. ಅಂದರೆ ಮದುವೆಯಾದವ ಮಗನಿಂದಾಗಿ ಅಪ್ಪನಾದಂತೆ. ಅವರು ಮಾಡಿದ ಪರಿಪೂರ್ಣ ರೀತಿಯ ಮಧ್ವವಿಜಯದ ಪ್ರತಿ ಶ್ಲೋಕದ ಪಾಠವನ್ನು ನಾನು ಪ್ರತಿನಿತ್ಯ ಅವರ ಗುರುಗಳಿಗೆ ಅದನ್ನು ಒಪ್ಪಿಸಬೇಕಿತ್ತು. ಇದು ಶ್ರೀ ವಿದ್ಯಾಮಾನ್ಯತೀರ್ಥರು ಶ್ರೀ ಸುಗುಣೇಂದ್ರತೀರ್ಥರಿಗೆ ನಡೆಸುವ ಪರೋಕ್ಷ ಪರೀಕ್ಷೆ ಆಗಿತ್ತು.

ಹೀಗೊಮ್ಮೆ ಅರ್ಧಮಧ್ವವಿಜಯದ ಮಂಗಳ ಪರೀಕ್ಷೆಯು ರಥಬೀದಿಯ ವೇದಿಕೆಯಲ್ಲಿ ನನಗೆ ನಡೆದಿತ್ತು. ಇದು ಗುರು ಶ್ರೀಪಾದರಿಗೆ ಗೌರವ ಅದೇ ವೇದಿಕೆಯಲ್ಲಿ ಸಾಗಿದ್ದು ಇಂದೂ ನೆನೆಪಿದೆ. ಆಗ ಅವರಿಗಿತ್ತ ಗೌರವ ಸಂಭಾವನೆಯೂ ನನ್ನ ಕೈಸೇರಿತ್ತು. ಮುಂದೆ ಮಧ್ವವಿಜಯದ ಪೂರ್ಣ ಮಂಗಳೋತ್ಸವದ ಬಳಿಕ ಶ್ರೀಪಾದರಲ್ಲಿ ಬೆಳವೆಯಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದ ಪಾಠ ಸಾಗಿತ್ತು. ಇದು ಹಿಂದಿನಂತೆ ದಿನಕ್ಕೊಂದು ಶ್ಲೋಕದಂತೆ ಸಾಗದೆ ಹತ್ತಿಪ್ಪತ್ತು ಶ್ಲೋಕಗಳ ವೇಗದಲ್ಲಿ ಸಾಗುತ್ತಾ ನಡುವೆ ಪ್ರಶ್ನೆ ಬಂದಲ್ಲಿ ಮಾತ್ರವೇ ಗುರುಗುರುಗಳ ಸನಿಹ ಚಿಂತನೆ ಆಗುತ್ತಿತ್ತು. ಇದೊಂದು ನನಗೆ ಮಹಾಭಾರತದೆಡೆಗೆ ನುಗ್ಗಲು ಪ್ರವೇಶಪತ್ರ ಸಿಕ್ಕಂತೆ ಎಂದು ಇಂದು ಅನಿಸುತ್ತಿದೆ. ಮತ್ತೆ ಎರಡನೆಯ ಪರ್ಯಾಯದಲ್ಲಿ ಶ್ರೀಕೃಷ್ಣನ ಇದಿರು ಮಹಾಭಾರತದ ನಿತ್ಯಪ್ರವಚನಕ್ಕೆ

ನಾನು ಆಯ್ಕೆಯಾಗಿದ್ದೆ. ಗೀತಾಮಂದಿರದ ಪ್ರತಿಷ್ಠೆಯಲ್ಲಿ ಬನ್ನಂಜೆಯವರ ಜೊತೆ ಸೇವೆಗೈಯುವ ಭಾಗ್ಯ ನನ್ನ ಪಾಲಿಗೆ ದೊರೆತಿದ್ದು ಅದರ ಕೆತ್ತನೆಯ ಬಿತ್ತರಕ್ಕೆ ಮೂರನೆಯ ಪರ್ಯಾಯದಲ್ಲಿ ಮಹಾಭಾರತದ ಗೀತೆಯ ಪ್ರತಿ ಶ್ಲೋಕದ ಪ್ರವಚನ ಗೀತಾಮಂದಿರದಲ್ಲಿ ಆಗಿಹೋದವು. ಇಂದೂ ನಾಲ್ಕನೆಯ ಪರ್ಯಾಯದಲ್ಲಿ ಚಾತುರ್ಮಾಸ್ಯದ 18 ಏಕಾದಶಿಗಳೂ ಮಹಾಭಾರತದ ಪರ್ವಸಂಗ್ರಹದಲ್ಲಿ ಸಮರ್ಪಿತವಾಗಿದ್ದವು.

ನನ್ನ ತಂದೆ ಕಾಪು ಹಯಗ್ರೀವಾಚಾರ್ಯರು ಭಂಡಾರಕೇರಿ ಶ್ರೀಪಾದರಲ್ಲಿ ಶ್ರೀವಿದ್ಯಾಮಾನ್ಯರಲ್ಲಿ ವೇದಾಂತಪಾಠಕ್ಕೆ ಸೇರಿದವರು. ಸ್ವಲ್ಪಕಾಲದ ಬಳಿಕ ಶ್ರೀ ವಿಶ್ವೇಶತೀರ್ಥರೂ ಪಾಠಕ್ಕೆ ಗುರುಗಳಲ್ಲಿ ಸೇರಿಕೊಂಡವರು. ಹೀಗಾಗಿ ತಂದೆಯ ಜೊತೆಯಲ್ಲಿ ಶ್ರೀ ವಿಶ್ವೇಶತೀರ್ಥರ ಹೆಚ್ಚಿನ ಚಿಂತನ–ಮಂಥನ ಆಗ ಬಹಳವಾಗಿ ಗುರುಗಳ ಆದೇಶದಂತೆ ನಡೆಯುತ್ತಿತ್ತು. ಇದು ಮೊದಲ ಹಂತದ ಶ್ರೀ ವಿದ್ಯಾಮಾನ್ಯತೀರ್ಥರ ಗುರುಕುಲ ಶಿಕ್ಷಣ ಭಂಡಾರಕೇರಿಯಲ್ಲಿ. ಮುಂದೆ ಎರಡನೆಯ ಹಂತದಲ್ಲಿ ಅದಮಾರಿನಲ್ಲಿ ಗುರುಕುಲ ಶಿಕ್ಷಣ ಯತಿವೃಂದಕ್ಕೆ.

ಕಡೆಗೆ ಶ್ರೀ ಸುಗುಣೇಂದ್ರತೀರ್ಥರು ಸುಧಾಮಣಿಗಳೆಂದು ವಿಖ್ಯಾತರಾದ ಮೇಲೆ ಅವರ ಜೊತೆಯಲ್ಲಿ ಶ್ರೀ ವಿಶ್ವೇಶತೀರ್ಥರ ವಿದ್ಯಾರ್ಥಿಗಳೀರ್ವರು ಪಾಠಕ್ಕಾಗಿ ಸೇರಿಕೊಂಡರು. ಇದು ಮತ್ತೆ ಶ್ರೀ ವಿದ್ಯಾಮಾನ್ಯತೀರ್ಥರ ಪರೀಕ್ಷೆಯ ವಿಧಾನ. ತಮ್ಮ ಶಿಷ್ಯರ ಗಟ್ಟಿತನದ ಆವಿಷ್ಕಾರ.

ಹೀಗೆ ಶ್ರೀ ವಿದ್ಯಾಮಾನ್ಯತೀರ್ಥರು ತನ್ನಲ್ಲಿ ಓದಿದ ನನ್ನ ತಂದೆಯ ವಿಶ್ವಾಸದಲ್ಲಿ ಮೊದಲಿನಿಂದಲೂ ನನ್ನನ್ನು ತಮ್ಮ ಪ್ರೀತಿಯ ಶಿಷ್ಯ ಶ್ರೀ ಸುಗುಣೇಂದ್ರತೀರ್ಥರಲ್ಲಿ ಪರ್ಯಾಯವಾಗಿ ಓದಿಸಿ ನನ್ನನ್ನು ತಯಾರಿಸಿದ್ದರು. ಹೀಗೆ ಕೊನೆಗೊಮ್ಮೆ ನಾನು ಸುಧಾವಿದ್ಯಾರ್ಥಿಯಾಗಿ ಶ್ರೀ ಸುಗುಣೇಂದ್ರರಲ್ಲಿ ಸೇರಿಕೊಂಡೆ. ತಂದೆ ಶ್ರೀ ವಿಶ್ವೇಶತೀರ್ಥರ ಜೊತೆಯಲ್ಲಿ ಓದಿಕೊಂಡವರು ಮುಂದೆ ಮಂಗಳ ನಡೆದು ಅವರ ವಿದ್ಯಾಪೀಠದಲ್ಲಿಯೇ ವೇದಾಂತಪಾಠದ ಸೇವೆಯಲ್ಲಿ ನಿಯುಕ್ತರಾದರು. ಅತ್ತ ಸಹಪಾಠಿಯ ಮಗನಾಗಿಯೂ ನಾನು ಶ್ರೀ ವಿಶ್ವೇಶತೀರ್ಥರ ವಿದ್ಯಾರ್ಥಿಗಳ ಜೊತೆ ಪಾಠಕ್ಕೆ ಸರಿಯಾದೆ. ಮುಂದೆ ಶ್ರೀ


ಸುಗುಣೇಂದ್ರತೀರ್ಥರ ಸಂಚಾರದಲ್ಲಿ ಉಡುಪಿ ಬಿಡಲಾಗದ ನಾನು ಪಾಠಕ್ಕೆ ಹಿಂದೆ ಬಿದ್ದೆ. ಮುಂದಿನ ದಿನಗಳಲ್ಲಿ ರಥಬೀದಿಯ ಪುತ್ತಿಗೆ ಮಠದ ಉಪ್ಪರಿಗೆಯಲ್ಲಿ ನನಗೆ ನ್ಯಾಯಸುಧೆಯ ಉಳಿದ ಭಾಗಗಳ ಪಾಠವು ಬೆಳಗು ಮುಂಚೆ ಒಬ್ಬನಿಗಾಗಿಯೇ ನಡೆದಿತ್ತು. ಅನೇಕ ಬಾರಿ ಪರ್ಯಾಯ ಪೂಜೆಯ ಒತ್ತಡಗಳಿದ್ದರೂ ಪಾಠಕ್ಕೆ ರಜೆಯಿರಲಿಲ್ಲ. ಪ್ರಶ್ನೆಗೆ ಎಂದೂ ಉತ್ತರಿಸಲು ಹಿಂಜರಿಯುತ್ತಿರಲಿಲ್ಲ ಗುರುಗಳು.

ಮುಂದೆ ಭೀಮನಕಟ್ಟೆ ಶ್ರೀಪಾದರ ಸುಧಾ ಮನನದೊಂದಿಗೆ ಇತರ ವಿದ್ಯಾರ್ಥಿಗಳ ಅನೇಕ ಪಾಠಗಳಿಗೆ ನಾನಾದೆ.ಈಗಣ ಪರ್ಯಾಯದಲ್ಲಿಯೂ ಕಿರಿಯ ಶ್ರೀಪಾದರಿಗೆ ಋಗ್ಭಾಷ್ಯ ಪಾಠಕ್ಕೆ ನಾನು ನಿಯೋಜಿತನಾದೆ.

ತೆರೆದು ನಿಂತ ಸುಗುಣದ ಪುಟಗಳಿಗೆ ಅಕ್ಷರಗಳ ಸಾಲಿನಲ್ಲಿಯೂ ಮೊದಲಿಂದಲೂ ನಾನಿದ್ದೆ. ಮುಂದೆ ಬಿಡುಗಡೆಗೊಂಡ ಹತ್ತೈವತ್ತು ಹೊತ್ತಗೆಗಳಿಗೂ ಗುರುಗಳ ಅನುಗ್ರಹವೇ ಬಳುವಳಿಯಾಗಿ ನನಗೆ ಸೇರಿತ್ತು. ಎರಡು ಅವಧಾನದೆಡೆಗೆ ಚಿತ್ತೈಸಿ ನಡೆಸಿಕೊಟ್ಟು ವಿದ್ವದಾದ್ಯ ಎಂದು ಹೃದಯ ತುಂಬಿ ಹರಸಿ ಶಾಸ್ತ್ರಕಡಲಿನಲ್ಲಿ ಕಡೆದು ನವನೀತ ತೆಗೆವಂತೆ ಕೃಷ್ಣನ ಹೆಸರಿನಲ್ಲಿ ಕಡೆಗೋಲು ಕೊಟ್ಟ ಶ್ರೀ ಸುಗುಣೇಂದ್ರತೀರ್ಥರು ಆದರ್ಶಗುಣಗಣಿ, ಅಂದು ಮಾನ್ಯರ ಮುದ್ದಿನರಗಿಣಿ, ಇಂದು ವಿಶ್ವದಲ್ಲಿನ ಕಣ್ಮಣಿ. ಈ ಪರಿಯನ್ನು ಹತ್ತಿರದಲ್ಲಿ ಕಂಡು ನಮಿಸಿ ನುತಿಸಿದ ಉಳಿಯ ಕೃಷ್ಣನ ಅರ್ಚಕ ಯೋಗೀಂದ್ರ ಭಟ್ಟರ ಸೇವೆ ಪುಸ್ತಕಪುಷ್ಪ ಹೃನ್ಮನ ತುಂಬಿ ಪರಿಮಳವ ನಿರಂತರ ಪಸರಿಸಲಿ.

●

# ವಿಕ್ರಮದಿಂದ ತ್ರಿವಿಕ್ರಮ



**ಶ್ರೀ ಪ್ರಸನ್ನಾಚಾರ್ಯ**
ಶ್ರೀಗಳ ಅಂತಾರಾಷ್ಟ್ರೀಯ ಕಾರ್ಯದರ್ಶಿ

**ಪೂ**ಜ್ಯ ಶ್ರೀಸುಗುಣೇಂದ್ರ ತೀರ್ಥ ಶ್ರೀಪಾದರೆಂದರೆ ನೆನಪಾಗುವುದು ಅವರ ವಿಶ್ವವಿಕ್ರಮ. ವಿಶ್ವದಾದ್ಯಂತ ಧರ್ಮಪ್ರಸಾರದ ದೀಕ್ಷಾಬದ್ಧತೆ. ಎಲ್ಲಾ ಅಡೆತಡೆಗಳನ್ನು ಮೀರಿ ಸಾಹಸಕ್ಕೆ ಕೈಹಾಕಿ, ಸಹಸ್ರಾರು ಭಕ್ತರ ಹೃದಯದಲ್ಲಿ ಸ್ಥಾನವನ್ನು ಗಿಟ್ಟಿಸಿಕೊಂಡ ಅವರ ಕಾರ್ಯಕ್ಷಮತೆ.

ಶ್ರೀಪುತ್ತಿಗೆ ಮಠದ ಶ್ರೀ ಉಪೇಂದ್ರತೀರ್ಥರ ಪೀಠವೇ ಹಾಗೆ. ಸಾಹಸಕ್ಕೆ ಎತ್ತಿದ ಕೈ. ಮುಂದೆ ಕವೀಂದ್ರ ತೀರ್ಥರು, ಭುವನೇಂದ್ರ ತೀರ್ಥರು ಸುರೇಂದ್ರತೀರ್ಥರಾದಿಯಾಗಿ ಎಲ್ಲರೂ ಕ್ರಾಂತಿಕಾರರೇ ಆಗಿ ಹೋದ ಪರಂಪರೆಯ ಕೈ.

ಇಂತಹ ಗುರುಪರಂಪರೆಯಲ್ಲಿ ಮೂವತ್ತನೆಯ ಯತಿಪುಂಗವರಾದ ಶ್ರೀ ಸುಗುಣೇಂದ್ರತೀರ್ಥರದ್ದು ಸಾಹಸದ ಕೈ. ಅವರ ನಡೆ ಆನೆಯ ನಡೆ. ಕಲ್ಲು ಮುಳ್ಳುಗಳನ್ನು ಮೆಟ್ಟಿ ಆನೆ ಸಾಗಿ ಪಥಿಕರಿಗೆ ಸುಗಮ ದಾರಿ ಮಾಡಿದಂತೆ, ಶ್ರೀಪಾದರು ಆಧ್ಯಾತ್ಮಸಾಧಕರಿಗೆ ವಿಶ್ವದಾದ್ಯಂತ ಹೆದ್ದಾರಿಗಳನ್ನು ರಚಿಸಿದ್ದಾರೆ. ಶ್ರೀಕೃಷ್ಣ ಮಂದಿರದ ಅವರ ಕನಸುಗಳು ನೂರೆಂಟು. ಈಗಾಗಲೇ ಹದಿನೈದು ಮಂದಿರಗಳು ವಿಶ್ವದಾದ್ಯಂತ ಭಕ್ತರ ಆಕರ್ಷಣೆಯ ಕೇಂದ್ರ ಬಿಂದುಗಳಾಗಿವೆ. ಇಂತಹ ಶ್ರೀಪಾದರ ಈ ನಡೆ ವಿಶ್ವದಾದ್ಯಂತ ಭಕ್ತಿಪ್ರಚಾರದ ನಡೆ ಅಷ್ಟು ಸುಲಭವಾಗಿರಲಿಲ್ಲ. ಕೇವಲ ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀವಿದ್ಯಾಮಾನ್ಯತೀರ್ಥರ ಕೃಪಾಕಟಾಕ್ಷ, ಅತ್ಯಪೂರ್ವ ಶಿಷ್ಯವಾತ್ಸಲ್ಯ, ಗುರುಪರಂಪರೆಯ ಕೃಪಾಧಾರೆಯ ಸಿಂಚನದಿಂದ ಮಾತ್ರ ಸಾಧ್ಯವಾಯಿತು. ಯೋಗ ಮತ್ತು ಯೋಗ್ಯತೆಯ

ಸಮಷ್ಟಿಲೇಪನದಿಂದ ಮಾತ್ರ ಸಾಧ್ಯವಾಯಿತು ಎನ್ನಬಹುದು. ಪ್ರಸಿದ್ಧವಾದ ಈ ಮಾತಿನಂತೆ "ಪರಂ ಶ್ರೀಮತ್ಪೂರ್ಣಪ್ರಮತಿಗುರುಕಾರುಣ್ಯಸರಣಿಂ ಪ್ರಪನ್ನಾಃ ಮಾನ್ಯಾಃ ಸ್ಮಃ" ತ್ರೈಲೋಕ್ಯಾಚಾರ್ಯರಾದ ಶ್ರೀಮದಾನಂದತೀರ್ಥರ ಅನುಗ್ರಹಮಾತ್ರದಿಂದ ಇಂತಹ ಕಾರ್ಯಗಳನ್ನು ಮಾಡಲು ಸಾಧ್ಯವಾಯಿತು ಎಂದು ಭಕ್ತಿಗೌರವದಿಂದ ವಿನೀತರಾಗಿ ಹೇಳುವ ಶ್ರೀಪಾದರ ಸುವಾಣಿಯನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು.

ಪೂಜ್ಯ ಶ್ರೀಪಾದರು ವಿದೇಶಗಳಲ್ಲಿ ಹೇಗಿರುತ್ತಾರೆ ಎಂಬ ಸಕೌತುಕ ಪ್ರಶ್ನೆ ಜಿಜ್ಞಾಸುಗಳಿಗೆ ಬರುವುದು ಸಹಜ. ಶ್ರೀಪಾದರ ಈ ಭಕ್ತಿ ಯಜ್ಞದಲ್ಲಿ ಹತ್ತಿರದಿಂದ ಅವರ ಒಡನಾಟದ ಸದವಕಾಶವನ್ನು ಪಡೆದ ನಾನು ಈ ಬಗ್ಗೆ ಸ್ವಲ್ಪ ಹೇಳಲೇಬೇಕು. ಪೂಜ್ಯ ಶ್ರೀಪಾದರು ಆಚಾರ ವಿಚಾರದಲ್ಲಿ ತಮ್ಮ ಗುರುಗಳಂತೆ ಕಠಿಣರು. ಹತ್ತಾರು ಗಂಟೆಗಳ ದೀರ್ಘಪ್ರಾಯಣದಲ್ಲೂ ನಿರಾಹಾರಿಗಳು. ಗಮ್ಯಸ್ಥಾನವನ್ನು ಸೇರಿದಮೇಲೆ ಜಪ, ಪೂಜಾದಿಗಳನ್ನು ನೆರವೇರಿಸಿದ ನಂತರವಷ್ಟೇ ಪ್ರಸಾದಸ್ವೀಕಾರ. ಇದರಲ್ಲಿ ಯಾವುದೇ ರಾಜಿಮಾಡಿಕೊಳ್ಳದ ಅಖಂಡ ಬ್ರಹ್ಮಚರ್ಯ ಬದ್ಧರು. ವಿಮಾನ ಸಂಚಾರದಲ್ಲೂ ಅಧ್ಯಯನಶೀಲರು. ಲೇಖನಾದಿಗಳಲ್ಲಿ ಸಮಯದ ಸಾರ್ಥಕ್ಯವನ್ನು ಕಂಡುಕೊಂಡವರು. ಸನ್ಯಾಸಿಗಳಿಗೆ ವಿಹಿತವಾದ ಕಾಷಾಯವಸ್ತ್ರಧಾರಿಗಳಾಗಿಯೇ ವಿಶ್ವದಾದ್ಯಂತ ಸಂಚರಿಸುವವರು. ಅತಿ ಶೀತ ವಾತಾವರಣದಲ್ಲಿಯೂ, ಜಾಗತಿಕ ಸಮ್ಮೇಳನಗಳಲ್ಲೂ ವಿಶ್ವನಾಯಕರ ಜೊತೆಗೆ ಹಾಗೆಯೇ ಗುರುತಿಸಿಕೊಂಡವರು.

ಶ್ರೀಮಧ್ವವಿಜಯದಲ್ಲಿ ಶ್ರೀಮದಾಚಾರ್ಯರ ಬಗ್ಗೆ ಉಲ್ಲೇಖವಾದಂತೆ 'ಸ್ವಭಾವಶೋಭಾ ಅನುಪಮೇತಿ ಜಂತವಃ' ಎನ್ನುವಂತೆ ಯಾವುದೇ ಅಲಂಕಾರ ರಹಿತರಾಗಿ ಸ್ವಾಭಾವಿಕ ತೇಜಸ್ಸಿನಿಂದ ಶೋಭಿಸುವವರು ಆಗಿರುವರು.

●

# ವಿಶ್ವಗುರುಪೀಠಕ್ಕೆ ಭೂಷಣಪ್ರಾಯರು

**ಶ್ರೀ ಮಹೀತೋಷ ಆಚಾರ್ಯ**
ಸಂಪಾದಕರು
ಸುಗುಣಮಾಲಾ ಮಾಸಪತ್ರಿಕೆ



**ವಿ**ಶ್ವಗುರುಗಳಾದ ಶ್ರೀಮನ್ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಶ್ರೀ ಉಪೇಂದ್ರತೀರ್ಥರ ದಿವ್ಯಪರಂಪರೆಯಲ್ಲಿ ಅಧುನಾ ಪೀಠಾಧಿರೂಢರಾಗಿರುವ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ವಿಶ್ವದೆಲ್ಲೆಡೆ ವಿಶ್ವಗುರುಗಳ ಶ್ರೀ ಮಧ್ವಾಚಾರ್ಯರ ಭಕ್ತಿ ಸಿದ್ಧಾಂತವನ್ನು ನಿಜಾರ್ಥದಲ್ಲಿ ಪ್ರಸರಣಗೈಯ್ಯುತ್ತಿರುವರು. ಅವರು ವಿಶ್ವಗುರು ಭಾರತದ ನೈಜ ಸಂತರು.

800 ವರ್ಷಗಳ ಹಿಂದಿನ ಶುದ್ಧಪರಂಪರೆಯನ್ನು ಶುದ್ಧಜ್ಞಾನವನ್ನು ಗುರುಗಳಾದ ಶ್ರೀವಿದ್ಯಾಮಾನ್ಯತೀರ್ಥರ ಆದರ್ಶವನ್ನು ಅದಮಾರಿನ ಆದರ್ಶ ಗುರುಕುಲದಲ್ಲಿ ಅಭ್ಯಾಸಗೈದು ಗುರುಗಳ ನಡೆಯನ್ನು ನುಡಿಯನ್ನು ಆದರ್ಶವಾಗಿಟ್ಟುಕೊಂಡು ಪರಿವ್ರಾಜಕ ಧರ್ಮವನ್ನು ಚೆನ್ನಾಗಿ ನಡೆಸುತ್ತಾ ಎಲ್ಲೆಡೆ ಆಚಾರ್ಯರ ಭಕ್ತಿಸಿದ್ಧಾಂತದ ಮರ್ಮವನ್ನು ಜಾತಿ–ಲಿಂಗ–ಅಂತಸ್ತು–ಪ್ರದೇಶ ಭೇದವಿಲ್ಲದೆ ಸಾಧಕರೆಲ್ಲರಿಗೂ ಸಿಗುವಂತೆ ಪ್ರಸ್ತುತ ಕಾಲಘಟ್ಟಕ್ಕೆ ಹೊಂದುವಂತೆ, ಮೂಲವನ್ನು ಬಿಡದಂತೆ, ಮೌಢ್ಯಕ್ಕೆ ಬಲಿಬೀಳದಂತೆ ಕೇವಲ ಭಾರತದಲ್ಲಷ್ಟೇ ಅಲ್ಲದೆ ವಿಶ್ವದೆಲ್ಲೆಡೆ ಶ್ರೀಕೃಷ್ಣನ ಮುಖ್ಯಪ್ರಾಣನ ರಾಘವೇಂದ್ರ ಸ್ವಾಮಿಗಳ ಸನ್ನಿಧಿಯನ್ನು ನಿರ್ಮಿಸಿ ಧರ್ಮಜಾಗೃತಿಯನ್ನು ಮೂಡಿಸುತ್ತಿರುವರು. ಅಮೇರಿಕಾ, ಆಸ್ಟ್ರೇಲಿಯಾ, ಕೆನಡ, ಇಂಗ್ಲೆಂಡ್ ಮೊದಲಾದ ಕಡೆ ಮಠ ಸಂಸ್ಥಾಪನೆ ಮಾಡಿ ಸನ್ಮತಪ್ರಚಾರಗೈಯ್ಯುತ್ತಿರುವರು.

ಆ ಎಲ್ಲ ಮಠಮಂದಿರಗಳ ಕುರಿತಾದ ವಿವರಗಳನ್ನು ಸ್ಥಾಪನೆಯ ಹಿಂದಿನ ಪರಿಶ್ರಮವನ್ನು ಆಯಾಯ ಪ್ರದೇಶಗಳ ಹಿನ್ನೆಲೆಯನ್ನು ಕಣ್ಣಿಗೆ ಕಟ್ಟುವಂತೆ ಶ್ರೀಪಾದರ ಆತ್ಮೀಯ ಶಿಷ್ಯರಾದ ಶ್ರೀ ಯೋಗೀಂದ್ರ ಭಟ್ ಉಳಿ ಅವರು ಶ್ರೀಪಾದರಿಂದ ಸ್ಥಾಪಿತವಾದ ಸುಗುಣಮಾಲಾ ಮಾಸ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆಯುತ್ತಿದ್ದು ಇದೀಗ "ವಿಶ್ವಗುಣಾದರ್ಶ"ವೆಂಬ ಹೆಸರಿನ ಈ ಅಪೂರ್ವ ಪುಸ್ತಕವನ್ನು ಸುಗುಣಮಾಲಾದ 40ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣ. ಶ್ರೀ ಯೋಗೀಂದ್ರ ಭಟ್ಟರಿಗೆ ಅಭಿನಂದನೆಗಳು. ಅವರಿಂದ ಇನ್ನಷ್ಟು ಲೇಖನಗಳು ಹೊರಬಂದು ಶ್ರೀಪಾದರ ಆದರ್ಶ ವಿಶ್ವದೆಲ್ಲೆಡೆ ಪಸರಿಸಲಿ.

●

# ವಿಶ್ವಗುಣಾದರ್ಶ

**ನಮ್ಮ ಗುರುಗಳು**



**ಶ್ರೀ ಯೋಗೀಂದ್ರ ಭಟ್, ಉಳಿ**

**ಎ**ಲ್ಲರನ್ನೂ ತನ್ನೆಡೆಗೆ ಸೆಳೆದುಕೊಳ್ಳುವ ಸೂಜಿಗಲ್ಲಿನಂತಹ ರಮಣೀಯಗುಣ ನಮ್ಮ ಗುರುಗಳದ್ದು! ಪ್ರಸ್ತುತ ವಿಶ್ವದೆಲ್ಲೆಡೆ ಅವ್ಯಾಹತವಾಗಿ ವ್ಯಾಪಿಸಿದ್ದು! ದೇಶ, ಭಾಷೆ, ಮತ, ಸಂಪ್ರದಾಯಗಳೇ ಮೊದಲಾದ ಎಲ್ಲ ಎಲ್ಲೆಗಳನ್ನೂ ಮೀರಿ ನಿಂತದ್ದು! ಏನೇನೂ ಅಲ್ಲದ ನನ್ನಂತಹ ಕ್ಷುಲ್ಲಕ ಶಿಷ್ಯರಿಂದ ಹಿಡಿದು, ಈ ವಿಶಾಲ ಪ್ರಪಂಚದ ನಾನಾ ಕ್ಷೇತ್ರಗಳಲ್ಲಿ ಅತ್ಯಪೂರ್ವ ಸಾಧನೆಗೈದ ಅನೇಕಾನೇಕ ಮಹನೀಯರೂ ಮತ್ತೆ ಮತ್ತೆ ಓಡೋಡಿ ಬಂದು ಚರಣಕ್ಕೆರಗಿ ನೆಮ್ಮದಿಯನ್ನು ಪಡೆದು ಕೃತಾರ್ಥರೆನಿಸಿಕೊಳ್ಳುವಷ್ಟು ಆಕರ್ಷಣೀಯವಾದದ್ದು! ಅಂತಹ ಅಗಣಿತಸುಗುಣಗಣಾರ್ಣವರೆನಿಸಿದ ನಮ್ಮ ಗುರುಗಳ **'ಶ್ರೀ ಶ್ರೀ ಸುಗುಣೇಂದ್ರತೀರ್ಥ'**ರೆನ್ನುವ ಆ ಪುಣ್ಯನಾಮವದೆಷ್ಟು ಅರ್ಥಪೂರ್ಣ?

'ಜ್ಞಾನೇನೈವ ಪರಂ ಪದಂ' ಎಂಬ ಶ್ರೀಮದಾನಂದತೀರ್ಥ ಭಗವತ್ಪಾದರ ಗಂಭೀರವಾದ ಸಂದೇಶದ ಅರ್ಥರಾಶಿಯ ಒಂದು ಬಿಂದು ಸಾಮಾನ್ಯರಲ್ಲಿ ಅತಿಸಾಮಾನ್ಯರೆನಿಸಿದ ನಮ್ಮ ಪಾಲಿಗೆ ಬಹುಶಃ ಇದೇ ಇರಬಹುದು! ಅತಿದುರ್ಗಮವಾದ ಕಲಿಯುಗದ ಈ ನಿಮ್ಮ ಸಾಧನಾಪಥದಲ್ಲಿ ಶ್ರೀ 'ಸುಜ್ಞಾನೇಂದ್ರರ' ಕರಸಂಜಾತರಾದ ಶ್ರೀ 'ಸುಗುಣೇಂದ್ರರ' 'ಚರಣ'ವೇ ನಿಮಗೆ 'ಗತಿ', ಎಂಬ ಸಂದೇಶವನ್ನು ಆಚಾರ್ಯರು ಸೂಕ್ಷ್ಮವಾಗಿ ನಮಗೆ ಸಾರಿ ಹೇಳಿದ್ದಿರಬಹುದು!

ಶಿಷ್ಟಶಿಷ್ಯೋದ್ಧರಣವೆಂಬ ಏಕೈಕ ಸಂಕಲ್ಪದೊಂದಿಗೆ ಅತಿಶಯ ವಿಷಯಾಸಕ್ತ ಪ್ರಸಕ್ತ ಪ್ರಪಂಚದ ಅನೇಕ ದೇಶಗಳಲ್ಲಿ ನಿತ್ಯಾನುಷ್ಠಾನನಿಷ್ಠರಾಗಿ, ಪರಮವೈರಾಗ್ಯ ಸಂಪನ್ನರಾಗಿ ಸಂಚರಿಸುತ್ತಾ, ಶ್ರೀಮನ್ಮಧ್ವಸಿದ್ಧಾಂತವೆಂಬ ಸುಮಧುರವಾದ

ಉಪದೇಶಾಮೃತಧಾರೆಯನ್ನು ಎಡೆಬಿಡದೆ ಸುರಿಸುತ್ತಾ, ಜೀವನ ಮೌಲ್ಯಗಳ ಮಹತ್ವವನ್ನೇ ಅರಿಯದೆ ತೀರಾ ಲೌಕಿಕರೆನಿಸಿ ದಾರಿತಪ್ಪಿ ನಿರರ್ಥಕವಾಗಿ ಬದುಕು ಸವೆಸುತ್ತಿದ್ದ ಲಕ್ಷಾಂತರ ಸಂಖ್ಯೆಯ ನಮ್ಮ ಜನರನ್ನು, ಸ್ವರೂಪೋದ್ಧಾರಕ್ಕೆ ಏಕಮಾತ್ರ ಉಪಾಯವೆನಿಸಿದ ಅರಿವಿನ ಮಾರ್ಗಕ್ಕೆ ತಂದು ಸ್ಥಿರವಾಗಿ ನೆಲೆನಿಲ್ಲಿಸಿದ ನಮ್ಮ ಗುರುಗಳ ಕರುಣೆಗೆ ಎಣೆಯೆಂಬುವುದುಂಟೇ?

ಅವರ ಪಾದಸ್ಪರ್ಶದಿಂದ ಪಾವನವಾದ ವಿದೇಶದ ಮಹಾನಗರಗಳಲ್ಲಿ ಸ್ಥಾಪನೆಗೊಂಡು ಇಂದು ಅನ್ಯಾದೃಶವಾಗಿ ಮರೆಯುತ್ತಿರುವ ಅನೇಕ ಮಾಧ್ವಮಠಗಳೇ ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಲ್ಲವೇ? ತನ್ಮೂಲಕ ತಮ್ಮ ಜೀವನಕ್ರಮವನ್ನೇ ಬದಲಿಸಿಕೊಂಡು ವ್ರತಾನುಷ್ಠಾನನಿಷ್ಠರಾಗಿ ಸಮ್ಯಕ್ ಉದ್ಧೃತರಾದ, ಸಂತೃಪ್ತರಾದ, ಧನ್ಯರಾದ, ಕೃತಕೃತ್ಯರಾದ ಅನೇಕ ಮಂದಿ ಸದ್ಭಕ್ತರ ಭಾವಪೂರ್ಣ ಕತೆಗಳೇ ಅದಕ್ಕೆ ಜ್ವಲಂತ ನಿದರ್ಶನವಲ್ಲವೇ?

ದೇಶ ವಿದೇಶಗಳಲ್ಲಿ ಅನೇಕ ವೈದಿಕ ವಿದ್ಯಾಪೀಠಗಳನ್ನು, ಮಠಮಂದಿರಗಳನ್ನು, ಜ್ಞಾನಕೇಂದ್ರಗಳನ್ನು ಸಂಸ್ಥಾಪಿಸಿ, ವಿಶ್ವದಾದ್ಯಂತ ಅವಿರತವಾಗಿ ಸ್ವತಃ ಸಂಚರಿಸಿ, ಅಸಂಖ್ಯಾತ ಸಾತ್ವಿಕ ಸಜ್ಜನರಿಗೆ ಸನ್ಮಾರ್ಗವನ್ನು ತೋರಿಸಿ, ಭಗವದ್ಭಕ್ತರನ್ನಾಗಿಸಿ ಕರುಣೆಯಿಂದ ಪೊರೆಯುತ್ತಿರುವ ನಮ್ಮ ಗುರುಗಳ ಮಹಿಮೆಯನ್ನಿಲ್ಲಿ ಸ್ವಲ್ಪ ತಿಳಿಯೋಣ ಬನ್ನಿ.

ಶ್ರೀಕೃಷ್ಣಪೂಜಾರ್ಪಿತಚಿತ್ತವೃತ್ತಿಂ ವಿರಕ್ತಚೂಡಾಮಣಿಮಿಂದುಶಾಂತಂ
ಅನಂತಸದ್ಭಕ್ತಪ್ರಿಯಂ ಮಮಾಪಿ ಸುಗುಣೇಂದ್ರತೀರ್ಥಂ ಪರಮಾಶ್ರಿತೋಽಹಂ

ವಿದೇಶಗಳಲ್ಲಿ ಸಂಸ್ಥಾಪಿತವಾದ ಶ್ರೀಮಠದ ಹದಿನೈದು ಶಾಖೆಗಳ ಬಗ್ಗೆ ಮತ್ತು ಮಹನೀಯಗುಣಾರ್ಣವರೆನಿಸಿ ಮೆರೆಯುತ್ತಿರುವ ನಮ್ಮ ಗುರುಗಳ ಮುಖೇನ ಶ್ರೀಕೃಷ್ಣ, ಮುಖ್ಯಪ್ರಾಣರು ಮಾಡಿಸಿದ ಅನೇಕ ಸಾಧನೆಗಳ ಏಕದೇಶದ ಸಂದರ್ಶನಕ್ಕೆ, "ವಿಶ್ವಗುಣಾದರ್ಶ" ವೆಂಬ ಈ ಸತ್ಯಕಥಾಸಂಕಲನಕ್ಕೆ ನಿಮಗಿದೋ ಹಾರ್ದಿಕ ಸ್ವಾಗತ!

# ಅನುಷ್ಠಾನ ನಿಷ್ಠತೆ ಪುತ್ತಿಗೆ ಮಠದ ಶ್ರೇಷ್ಠತೆ

**ಜ**ಪ, ಪಾರಾಯಣ, ದೇವರಪೂಜೆ ಅಥವಾ ಹೋಮ ಹವನಾದಿ ಕರ್ಮಗಳಲ್ಲಿ ಶ್ರದ್ಧೆ ಮತ್ತು ನಂಬಿಕೆ ಪ್ರತಿಯೋರ್ವ ಸನಾತನ ಧರ್ಮೀಯನಿಗೂ ಇದ್ದೇ ಇರುತ್ತದೆ. ಪ್ರತಿದಿನವೂ ದೇವರ ಕೋಣೆಯಲ್ಲಿ ದೀಪ ಬೆಳಗಿಸಿ ತನಗೆ ತಿಳಿದಷ್ಟು ಜಪವನ್ನೋ, ದೇವರ ಪೂಜೆಯನ್ನೋ ಆಚರಿಸಿ ಅಥವಾ ಕನಿಷ್ಠ ಪಕ್ಷ ಒಂದೆರಡು ಸ್ತೋತ್ರಗಳನ್ನಾದರೂ ಪಠಿಸಿ ತಮ್ಮ ದಿನಚರಿಯನ್ನು ಆರಂಭಿಸುವ ಸಂಪ್ರದಾಯ ಪ್ರತಿ ಮನೆಯಲ್ಲೂ ಕಾಣಸಿಗುತ್ತದೆ. ಅನುಕೂಲವಿದ್ದವರು ಹತ್ತಿರದಲ್ಲಿರುವ ಮಠ ಮಂದಿರ, ದೇವಸ್ಥಾನಗಳಿಗೆ ಭೇಟಿಯಿತ್ತು ಅಲ್ಲಿ ನಡೆಯುವ ನಿತ್ಯಾನುಷ್ಠಾನಗಳನ್ನು ಶ್ರದ್ಧೆಯಿಂದ ವೀಕ್ಷಿಸಿ, ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸುವುದರಲ್ಲಿ ಅಪಾರ ನೆಮ್ಮದಿಯನ್ನು ಕಾಣುತ್ತಾರೆ. ಆದರೂ ವರ್ಷಕ್ಕೊಂದು ಬಾರಿ ಗುರುಗಳನ್ನು ಮನೆಗೆ ಕರೆಸಿ ಹೋಮ, ಪೂಜಾದಿ ಅನುಷ್ಠಾನಗಳನ್ನು ಶಾಸ್ತ್ರೀಯವಾಗಿ, ಕ್ರಮಪ್ರಕಾರವಾಗಿ ನಡೆಸಿದರೆ ಅದೇನೋ ಒಂದು ಸಮಾಧಾನ.

ಈ ರೀತಿಯ ಚಿಂತನೆ ಮತ್ತು ಸಾತ್ವಿಕಾನುಭವದ ಜೊತೆಗಿನ ಸತ್ಸಂಪ್ರದಾಯವನ್ನು, ಜೀವನಕ್ರಮವನ್ನು ಇಂದು ವಿದೇಶವಾಸಿ ಭಾರತೀಯರ ಬದುಕಿನಲ್ಲೂ ಹಾಸುಹೊಕ್ಕಾಗಿಸಿದ ಪುಣ್ಯಕೀರ್ತಿ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರದ್ದು!

ವಿದ್ಯಾಭ್ಯಾಸ ಅಥವಾ ಉದ್ಯೋಗದ ಅವಕಾಶಕ್ಕಾಗಿ ವಿದೇಶಗಳಿಗೆ ಹೋಗಿ ನೆಲೆಸುವ ನಮ್ಮ ಲಕ್ಷಾಂತರ ಭಾರತೀಯರಲ್ಲಿ ಹೆಚ್ಚಿನವರು ಯುವಕ, ಯುವತಿಯರು. ಲೌಕಿಕಾಕರ್ಷಣೆಗೆ ಸುಲಭವಾಗಿ ಬಲಿಯಾಗಬಲ್ಲ ಈ ಬಿಸಿರಕ್ತದ ತರುಣ, ತರುಣಿಯರ ಪ್ರೌಢ ಮನಸ್ಸುಗಳಿಗೆ ಧಾರ್ಮಿಕ ಆಚರಣೆ ಮತ್ತು, ವೈಚಾರಿಕ ಚಿಂತನೆಗಳ ರುಚಿ ಹತ್ತಿಸಿದ್ದು ಶ್ರೀ ಪುತ್ತಿಗೆ ಮಠದ ಹತ್ತಾರು ವಿದೇಶೀ ಶಾಖೆಗಳು! ಮತ್ತು ಅವರಿಗೆಲ್ಲಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪುತ್ತಿಗೆ ಮಠದ ವಿದ್ವಾಂಸರು, ಶ್ರೀ ಪುತ್ತಿಗೆ ವಿದ್ಯಾಪೀಠದ ವಿಧೇಯ ವಿದ್ಯಾರ್ಥಿಗಳು!

ಲೋಕದಲ್ಲಿ ಹೇಳಿಕೊಟ್ಟು ಅಥವಾ ಕೇಳಿ ಕಲಿಯುವುದಕ್ಕಿಂತ, ನೋಡಿ ಕಲಿಯುವುದಕ್ಕೇ ಹೆಚ್ಚಿನ ಪ್ರಭಾವವಂತೆ. ಪೂಜ್ಯ ಶ್ರೀಪಾದರ ಅನುಷ್ಠಾನಗಳಲ್ಲಿನ ಪರಮ ನಿಷ್ಠತೆಯನ್ನು ನಿತ್ಯವೂ ಕಂಡು ಧನ್ಯರಾದ ನಮಗೆ ಅವರ ಮೇಲಿನ ಗೌರವ ಹೆಚ್ಚಾಗಿದ್ದು ಮಾತ್ರವಲ್ಲ, ಅವರಂತೆಯೇ ನಾವೂ ಕಠಿನ ಅನುಷ್ಠಾನನಿಷ್ಠರಾಗಬೇಕೆಂಬ ಹಂಬಲವೂ ಗಟ್ಟಿಯಾಗತೊಡಗಿತು. ಮೊದಮೊದಲು ವಿದೇಶಕ್ಕೆ ಹೋಗುವಾಗ ನಮಗೂ ಅಷ್ಟೊಂದು ಜನ ಪ್ರಜ್ಞಾವಂತ ಶಿಷ್ಯರು ಸಿಗುತ್ತಾರೆ, ಹೆಜ್ಜೆ ಹೆಜ್ಜೆಗೂ ನಮ್ಮನ್ನು ಅನುಸರಿಸುತ್ತಾರೆ, ನಮ್ಮಿಂದ ಪ್ರೇರಿತರಾಗಿ ತಾವೂ ಅನುಷ್ಠಾನನಿಷ್ಠರಾಗುತ್ತಾರೆ ಎಂಬ ಕಲ್ಪನೆಯೂ ನಮಗಿರಲಿಲ್ಲ. ಗುರುಗಳನ್ನು ಮನಸಾರೆ ಮೆಚ್ಚಿ, ಕಣ್ಣು ಮುಚ್ಚಿ ಅನುಸರಿಸುತ್ತಿದ್ದ ನಮಗೆ ಅವರ ಪರಿಶುದ್ಧ, ಪಾರದರ್ಶಕ ಮತ್ತು ಅನುಷ್ಠಾನನಿಷ್ಠ ಜೀವನಕ್ರಮವೇ ಒಂದು ಆದರ್ಶ ಮತ್ತು ಆಕರ್ಷಣೆಯಾಗಿತ್ತು.

ನೀರನ್ನು ಬಿಟ್ಟು ಮೀನಿನ ಬದುಕಿಲ್ಲ. ಪ್ರಾಣವಾಯು (ಆಮ್ಲಜನಕ) ವಿಲ್ಲದ ಜಾಗದಲ್ಲಿ ನಾವ್ಯಾರೂ ಬದುಕಲು ಸಾಧ್ಯವಿಲ್ಲ. ಹಾಗೆಯೇ ಜೀವನಾವಶ್ಯಕವಾದ ಉಸಿರು ಮತ್ತು ಆಹಾರದಂತೆಯೇ ನಿತ್ಯಾನುಷ್ಠಾನಗಳೂನಮಗೆ ಅತ್ಯಂತ ಅಗತ್ಯ ಎಂಬ ಧೋರಣೆ ಪೂಜ್ಯ ಶ್ರೀಪಾದರದ್ದು. ಜೀವನದ ಶಿಸ್ತು ಮತ್ತು ಅನುಷ್ಠಾನದ ವಿಷಯದಲ್ಲಿ ಯಾವ ಹೊಂದಾಣಿಕೆಗೂ ಅವಕಾಶವಿಲ್ಲ. ಆಗಬೇಕೆಂದರೆ ಆಗಲೇಬೇಕು, ಅಷ್ಟೆ. ಆದ್ದರಿಂದ ಪ್ರಯಾಣವು ಎಷ್ಟು ದೀರ್ಘವಾಗಿದ್ದರೂ ಪೂರ್ವನಿಗದಿತ ಯೋಜನೆಯಂತೆ ಎಲ್ಲವನ್ನೂ ಚಾಚೂತಪ್ಪದೆ ನಿಭಾಯಿಸಿಕೊಂಡು ಹೋಗಲು ಖಂಡಿತಾ ಸಾಧ್ಯವಾಗುತ್ತದೆ ಎಂಬುವುದನ್ನು ಗುರುಗಳು ಮೊದಲ ಯಾತ್ರೆಯಲ್ಲಿಯೇ ತೋರಿಸಿಕೊಟ್ಟದ್ದು ಇಂದಿಗೂ ನಮಗೆ ಅನುಕರಣೀಯವಾಗಿದೆ.

ಪ್ರಯಾಣಕಾಲದ ಸಂಪೂರ್ಣ ಉಪವಾಸ ಮತ್ತು ನಿತ್ಯದ ಸಂಧ್ಯಾವಂದನೆ, ಸಾಲಿಗ್ರಾಮ ಪೂಜೆ, ಔಪಾಸನ ಹೋಮಾದಿಗಳಿಗೆ ಸರಿಯಾದ ವ್ಯವಸ್ಥೆಯನ್ನು, ಎಲ್ಲಿ ಯಾವಾಗ ಇತ್ಯಾದಿಗಳನ್ನು ಮೊದಲೇ ನಿಶ್ಚಯಿಸಿಕೊಂಡು ಸಂಚರಿಸುವ ಕಟ್ಟುನಿಟ್ಟಿನ ಕ್ರಮವನ್ನು ನಮ್ಮ ಎಲ್ಲ ಶಾಖೆಗಳ ಪ್ರತಿನಿಧಿಗಳೂ ಶ್ರದ್ಧೆಯಿಂದ ಅನುಸರಿಸುತ್ತಿದ್ದಾರೆ. ಮತ್ತು ಸಾಂಪ್ರದಾಯಿಕ ಉಡುಗೆ ತೊಡುಗೆಗಳೊಂದಿಗೆ ನಮ್ಮ ಸನಾತನ ಧರ್ಮದ

ಅಧಿಕೃತ ಪ್ರತಿನಿಧಿಗಳಾಗಿ ವಿಶ್ವವಿಖ್ಯಾತ ಮಹಾನಗರಗಳಲ್ಲಿ ಸಂಚರಿಸುವುದಕ್ಕೆ ನಮಗೂ ಹೆಮ್ಮೆಯೆನಿಸುತ್ತದೆ.

ಮೊದಲ ಸಲ ವಿದೇಶದಿಂದ ಮರಳಿದಾಗ ನನಗೊಬ್ಬರು ಮುಗ್ಧತೆಯಿಂದ ಪ್ರಶ್ನೆಯೊಂದನ್ನು ಕೇಳಿದ್ದರು. 'ಅಲ್ಲಿ ನೀವು ಊಟಕ್ಕೇನು ಮಾಡುತ್ತೀರಿ? ಬ್ರೆಡ್ಡು, ಬಿಸ್ಕೆಟ್ಟು, ಚಾಕಲೇಟುಗಳನ್ನೇ ತಿಂದು ಬದುಕುವುದಾ!?'

ಅಭೋಜ್ಯ ಪದಾರ್ಥಗಳನ್ನು ತಿಂದು ಬದುಕುವ ದರ್ದು ನಮಗಿಲ್ಲ ಮತ್ತು ಅವುಗಳ ರುಚಿಯನ್ನು ನಾವು ಕನಸಿನಲ್ಲೂ ಕಂಡಿಲ್ಲ ಎಂಬಿತ್ಯಾದಿಯಾಗಿ ವಿವರಿಸಿ, ಅಲ್ಲಿನ ಕೆಲವು ಚಿತ್ರಗಳನ್ನು ತೋರಿಸಿದೆ. ಪಾಪ, ಅವರಿಗೆ ಭಾರತದಲ್ಲಿ ಸಿಗುವುದಕ್ಕಿಂತಲೂ ಉತ್ಕೃಷ್ಟವಾದ ತರಕಾರಿ, ಅಕ್ಕಿ, ಬೇಳೆ ಕಾಳುಗಳು, ಹಲಸಿನಹಣ್ಣು, ಮಾವಿನ ಹಣ್ಣು, ತುಳಸಿ, ತಾವರೆ, ಮಲ್ಲಿಗೆ ಮೊದಲಾದ ಹೂಗಳು ಅಲ್ಲಿ ಸಿಗುತ್ತವೆ ಎಂಬ ಕಲ್ಪನೆಯೂ ಇರಲಿಲ್ಲ!, "ಓ ಇದೆಲ್ಲವೂ ಅಲ್ಲಿ ಯಾವಾಗಲೂ ಸಿಗುತ್ತದಾ? ಇಲ್ಲಿಯೇ ಕೆಲವು ಸಲ ಸಿಗುವುದಿಲ್ಲ ಮಾರಾಯರೇ" ಎಂದು ಅಚ್ಚರಿ ಪಟ್ಟಿದ್ದರು!

ನಾವು ಎಲ್ಲಿರುತ್ತೇವೆ ಎಂಬುವುದು ಮುಖ್ಯವಲ್ಲ, ಹೇಗಿರುತ್ತೇವೆ ಎನ್ನುವುದಷ್ಟೇ ಮುಖ್ಯ ಎಂಬ ಪೂಜ್ಯ ಶ್ರೀ ಬನ್ನಂಜೆಯವರ ಮಾತಿನಂತೆ, ಎಲ್ಲಿದ್ದರೂ ನಾವು ನಮ್ಮತನವನ್ನು ಉಳಿಸಿಕೊಳ್ಳಲು ಬರುತ್ತದೆ ಮತ್ತು ಜೀವನದ ಶಿಸ್ತುಕ್ರಮವನ್ನು, ಕಟ್ಟು ನಿಟ್ಟಿನ ಅನುಷ್ಠಾನಗಳನ್ನು ಆಚರಿಸಿಕೊಂಡು ಬರುವುದು ಖಂಡಿತ ಸಾಧ್ಯವಾಗುತ್ತದೆ ಎನ್ನುವುದಕ್ಕೆ ಇಂದು ವಿಶ್ವದಾದ್ಯಂತ ಧರ್ಮಪ್ರಚಾರ ನಿರತರಾಗಿರುವ ಶ್ರೀ ಪುತ್ತಿಗೆ ಮಠದ ನೂರಾರು ಪ್ರತಿನಿಧಿಗಳೇ ಇಂದು ಉತ್ತಮ ನಿದರ್ಶನ. ಅವರನ್ನು ಶ್ರದ್ಧೆಯಿಂದ ಅನುಸರಿಸುತ್ತಿರುವ ಲಕ್ಷಾಂತರ ವಿದೇಶವಾಸಿ ಭಾರತೀಯರು ಹೆಮ್ಮೆಯಿಂದ ಸಾಮಾಜಿಕ ಜಾಲತಾಣಗಳಲ್ಲಿ ಮುಕ್ತವಾಗಿ ಪ್ರಸ್ತುತ ಪಡಿಸುತ್ತಿರುವುದೇ ಅದಕ್ಕೆ ಜ್ವಲಂತ ಸಾಕ್ಷಿ!

'ಬ್ರಾಹ್ಮಣಸ್ಯ ಚ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ಕೃಚ್ಛ್ರಾಯ ತಪಸೇ ಚೈವ ಪ್ರೇತ್ಯಾನಂತ ಸುಖಾಯ ಚ'





# ವಿದೇಶಗಳಲ್ಲಿ ಧರ್ಮಸಂಸ್ಥಾಪನೆ, ಪುತ್ತಿಗೆ ಶ್ರೀಗಳ ಸಾಧನೆ

**ಸ**ನಾತನ ಹಿಂದೂ ಧರ್ಮದ ಆಚರಣೆ ಭಾರತದಲ್ಲಿ ಎಷ್ಟು ನಡೆಯುತ್ತದೋ ಅದಕ್ಕಿಂತಲೂ ಹೆಚ್ಚಿನ ಶ್ರದ್ಧಾಭಕ್ತಿಯ ಆಚರಣೆಗಳು ಇಂದು ಅಮೇರಿಕ, ಇಂಗ್ಲೆಂಡ್, ಕೆನಡ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಕಂಡುಬರುತ್ತಿವೆ. ಶುದ್ಧ ಕನ್ನಡದಲ್ಲಿ ಮಾತನಾಡುವ , ಸಂಸ್ಕೃತವನ್ನೂ ಕಲಿತಿರುವ ಮತ್ತು ಸಂಪೂರ್ಣ ಭಗವದ್ಗೀತೆಯನ್ನು ಕಂಠಸ್ಥಗೊಳಿಸಿಕೊಂಡಿರುವ ಸಾವಿರಾರು ಮಂದಿ ನಮಗಿಂದು ಅಲ್ಲಿ ಕಾಣಸಿಗುತ್ತಾರೆ. ಇದನ್ನು ಸುಮಾರು ಇಪ್ಪತ್ತೈದು ವರ್ಷಗಳಿಂದೀಚೆಗೆ ನಡೆದ ಅಭೂತಪೂರ್ವ ಧಾರ್ಮಿಕ ಕ್ರಾಂತಿ ಎನ್ನಬಹುದು ಮತ್ತು ಇದರ ಕಾರಣಕರ್ತರು ನಮ್ಮ ಉಡುಪಿ ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. ಹಾಗೆಯೇ ವಿದೇಶಗಳಲ್ಲಿ ಹದಿನೈದು ಬೃಹತ್ ಶಾಖೆಗಳನ್ನು ಹೊಂದಿರುವ ಕರ್ನಾಟಕದ ಹೆಮ್ಮೆಯ ಏಕೈಕ ಧಾರ್ಮಿಕ ಸಂಸ್ಥೆಯೆಂದರೆ ಅದು ನಮ್ಮ ಉಡುಪಿಯ ಶ್ರೀ ಪುತ್ತಿಗೆ ಮಠ!

ಭಾರತದಲ್ಲಿದ್ದುಕೊಂಡು ಇಲ್ಲಿಯೇ ವಿದ್ಯೆ, ಉದ್ಯೋಗಗಳನ್ನು ಸಂಪಾದಿಸಿ, ಒಳ್ಳೆಯ ಮನೆ ನಿರ್ಮಿಸಿ ಚಂದದ ಬದುಕೊಂದನ್ನು ಕಟ್ಟಿಕೊಳ್ಳಲು ನಾವು ಬಹಳ ಹೆಣಗಾಡಬೇಕಾಗುತ್ತದೆ. ಇನ್ನು ವಿದೇಶಗಳಿಗೆ, ಅದರಲ್ಲಿಯೂ ಅಮೇರಿಕಾದಂತಹ ಮುಂದುವರಿದ ದೇಶಗಳಿಗೆ ಹೋಗಿ ಅಲ್ಲಿಯೇ ನೆಲೆಸುವುದೆಂದರೆ ಸುಲಭದ ಮಾತೇನಲ್ಲ! ಅಲ್ಲಿನ ವೀಸಾ ಪಡೆಯುವುದು, ದೀರ್ಘಪ್ರಯಾಣ, ಉದ್ಯೋಗ ಹುಡುಕುವುದು, ದುಬಾರಿ ಖರ್ಚು ವೆಚ್ಚಗಳು ಇತ್ಯಾದಿ ಸಾಲು ಸಾಲು ಸವಾಲುಗಳು ಹೆಜ್ಜೆ ಹೆಜ್ಜೆಗೂ ಎದುರಾಗುತ್ತವೆ. ಆದರೂ ಹೊರದೇಶಕ್ಕೆ ಹೋಗಿ, ಸಾಧನೆ ಮಾಡಿ, ಅಲ್ಲಿಯೇ ಮನೆಮಾಡಿಕೊಂಡು ಇಂದು ನೆಮ್ಮದಿಯಿಂದ ಬದುಕುತ್ತಿರುವ ಪ್ರತಿಯೊಂದು ಭಾರತೀಯನ ಜೀವನದ ಹಿನ್ನೆಲೆಯಲ್ಲೂ ಅನೇಕ ಸಂಕಷ್ಟಗಳನ್ನು ಎದುರಿಸಿದ ಒಂದು ಅಪೂರ್ವ ಸಾಹಸ ಗಾಥೆಯಿರುತ್ತದೆ! ಹೊಸ ದೇಶ, ಹೊಸ ಭಾಷೆ, ಜನರು,

ವಾತಾವರಣ, ಜೀವನಕ್ರಮ ಇತ್ಯಾದಿಗಳಿಗೆ ಹೊಂದಿಕೊಂಡು ಅಲ್ಲಿಯೂ ಯಶಸ್ಸನ್ನು ಸಾಧಿಸುದೆಂದರೆ ದೊಡ್ಡ ಸಾಧನೆಯೇ ಸರಿ.

ಅಂತದ್ದರಲ್ಲಿ ಹದಿಹರೆಯದಲ್ಲೇ ಸನ್ಯಾಸ ದೀಕ್ಷೆ ಪಡೆದ, ಯಾವ ಲೌಕಿಕ ಜೀವನಾನುಭವವೂ ಇಲ್ಲದ, ಕೇವಲ ಅಧ್ಯಾತ್ಮಿಕ ವಿದ್ಯೆಯಲ್ಲಷ್ಟೇ ಪಾರಂಗತತ್ವವನ್ನು ಪಡೆದ ಯುವ ಯತಿಗಳೋರ್ವರು ವಿದೇಶಗಳಿಗೆ ಹೋಗಿ, ಅಲ್ಲಿ ಧರ್ಮಜಾಗೃತಿಯನ್ನುಂಟು ಮಾಡುತ್ತಾರೆ, ಹತ್ತಾರು ಮಠಮಂದಿರಗಳನ್ನು ನಿರ್ಮಿಸುತ್ತಾರೆ ಎಂದರೆ ನಂಬಲು ಸಾಧ್ಯವೇ? ಅದರಲ್ಲೂ ಈ ಆಧುನಿಕ ಯುಗದಲ್ಲಿ, ಎಂಟುನೂರು ವರ್ಷಗಳ ಇತಿಹಾಸವಿರುವ ಒಂದು ದೊಡ್ಡ ಸಂಸ್ಥಾನದ ಪೀಠಾಧಿಪತಿಗಳೋರ್ವರು ತಮ್ಮ ಕಟ್ಟುನಿಟ್ಟಿನ ಧಾರ್ಮಿಕ ಅನುಷ್ಠಾನಗಳನ್ನಿಟ್ಟುಕೊಂಡೇ ಅಲ್ಲಿಗೆ ಹೋಗಿದ್ದು, ಎಲ್ಲೆಡೆಯಲ್ಲೂ ತಮ್ಮ ಕಠಿಣ ಯತಿಧರ್ಮವನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದದ್ದು ಮತ್ತು ಇಂತಹ ಸನಾತನ ಆಚರಣೆಗಳನ್ನು ಸಂಕೋಚವಿಲ್ಲದೆ ಯಾರೂ ಎಲ್ಲಿಯೂ ನಡೆಸಿಕೊಂಡು ಬರಬಹುದು ಎಂದು ಆಧುನಿಕ ಜಗತ್ತಿಗೆ ತೋರಿಸಿಕೊಟ್ಟದ್ದೂ ಒಂದು ದೊಡ್ಡ ಸಾಧನೆಯಲ್ಲವೇ?

ಏಕೆಂದರೆ ಈಗಿನ ಕಾಲದಲ್ಲಿ ವಿದೇಶೀ ಆಕರ್ಷಣೆ ಮತ್ತು ಅವರ ಆಧುನಿಕ ಜೀವನ ಶೈಲಿಯ ಅನುಕರಣೆ ಭಾರತದಲ್ಲಿಯೇ ಅನೇಕ ಬದಲಾವಣೆಗಳನ್ನು ಉಂಟುಮಾಡಿದೆ. ಇಲ್ಲಿನ ಉಡುಗೆ ತೊಡುಗೆ, ಮಾತುಕತೆ ಮತ್ತು ಜೀವನಕ್ರಮಗಳಲ್ಲಿಯೇ ಬಹಳ ಮಾರ್ಪಾಡುಗಳಾಗಿವೆ. ಪರಂಪರಾಗತ ಆಚರಣೆಗಳು, ಶಾಸ್ತ್ರ ವಿದ್ಯೆಗಳು ಮತ್ತು ಬಹುತೇಕ ಪುರಾತನ ಧಾರ್ಮಿಕ ಅನುಷ್ಠಾನಗಳು ಗೊಡ್ಡು ಸಂಪ್ರದಾಯಗಳೆನಿಸಿಬಿಟ್ಟಿವೆ. ಆದರೂ ಅದನ್ನು ಕಷ್ಟಪಟ್ಟು ಉಳಿಸಿಕೊಂಡ ಕೆಲವಷ್ಟೇ ಉದಾಹರಣೆಗಳು ಭಾರತದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಅಮೇರಿಕಾದಂತಹ ಮುಂದುವರಿದ ದೇಶಕ್ಕೆ ಹೋಗಿ ಲೌಕಿಕ ವಿದ್ಯೆಯಲ್ಲಿ ಉನ್ನತ ಸಾಧನೆಯನ್ನು ಮೆರೆದು ಎಲ್ಲ ಸೌಕರ್ಯಗಳಿಂದ ಕೂಡಿದ ಐಷಾರಾಮಿ ಆಧುನಿಕ ಜೀವನವನ್ನು ಹೊಂದಿರು ಭಾರತೀಯರ ಬದುಕನ್ನು

ಸಂಪೂರ್ಣವಾಗಿ ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆಯತ್ತ ಪರಿವರ್ತಿಸಿದ್ದು ಪುತ್ತಿಗೆ ಶ್ರೀಗಳ ಅದ್ಭುತ ಸಾಧನೆ!

ಇನ್ನು ವಿದೇಶಕ್ಕೆ ಹೋದವರು ತಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಮರೆಯುತ್ತಾರೆ ಅಲ್ಲಿಯವರಂತೇ ಆಗಿ ಬಿಡುತ್ತಾರೆ ಎನ್ನುವುದಾಗಿ ಬಹಳ ಮಂದಿ ಹೇಳುತ್ತಾರೆ. ಅದಕ್ಕೆ ಕಾರಣವೂ ಇದೆ. ಅನ್ಯಮತೀಯ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರಾಗಿರುವವರು ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಹೆದರುತ್ತಾರೆ ಅಥವಾ ಸಹಜವಾಗಿಯೇ ಸಂಕೋಚಪಡುತ್ತಾರೆ. ಆದರೆ ಪುತ್ತಿಗೆ ಶ್ರೀಗಳಂತಹ ಧೀಮಂತ ಧಾರ್ಮಿಕ ನಾಯಕರು ಅಲ್ಲಿಗೆ ಕಾಲಿಟ್ಟರೆ ಅಲ್ಲಿನ ನಮ್ಮ ಸನಾತನ ಧರ್ಮಾನುಯಾಯಿಗಳಿಗೆ ತಮ್ಮ ಆಚರಣೆಗಳನ್ನು ಧೈರ್ಯದಿಂದ ಪಾಲಿಸಿಕೊಂಡು ಸೌಹಾರ್ದಯುತವಾಗಿ ಬದುಕಬಹುದು ಎನ್ನುವುದು ಸ್ಪಷ್ಟವಾಗಿದ್ದು ಪೂಜ್ಯ ಶ್ರೀಗಳ ಐತಿಹಾಸಿಕ ದುಬೈ, ಅಬುದಾಬಿ ಭೇಟಿಯ ನಂತರ!

ವಿಶ್ವಸಂಸ್ಥೆಯ ಧರ್ಮಶಾಂತಿ ಕಾರ್ಯಕ್ರಮದ ಅಂಗವಾಗಿ ದುಬೈಯಲ್ಲಿ ನಡೆದ ಧಾರ್ಮಿಕ ನಾಯಕರ ಸಮ್ಮೇಳನದಲ್ಲಿ ಭಾಗವಹಿಸುವಂತೆ ಪೂಜ್ಯ ಪುತ್ತಿಗೆ ಶ್ರೀಗಳಿಗೆ ಸ್ವತಃ ದುಬೈ ರಾಜನಿಂದಲೇ ಅಧಿಕೃತ ಆಹ್ವಾನ ಬಂತು. ಆ ಸಮಯದಲ್ಲಿ ಪೂಜ್ಯ ಶ್ರೀಗಳು ಅಲ್ಲಿನ ಅನೇಕ ಭಕ್ತರ ಮನೆಗಳಿಗೂ ಭೇಟಿ ನೀಡಿ ಪೂಜೆ, ಹೋಮಾದಿ ಕಾರ್ಯಕ್ರಮಗಳು ಮತ್ತು ಪ್ರವಚನಗಳನ್ನು ನಡೆಸಿಕೊಟ್ಟರು. ಅಲ್ಲಿಯ ತನಕ ತಮ್ಮ ಧಾರ್ಮಿಕ ಆಚರಣೆಗಳನ್ನು ಮನೆಯೊಳಗಿನ ನಾಲು ಗೋಡೆಗಳೊಳಗಷ್ಟೇ ಸೀಮಿತಗೊಳಿಸಿದ್ದ ಹಿಂದೂಗಳು, ಕಚ್ಚೆ ಪಂಚೆಗಳನ್ನುಟ್ಟುಕೊಂಡು ಪೂಜ್ಯ ಶ್ರೀಗಳನ್ನು ಅಲ್ಲಿನ ಬೀದಿ ಬೀದಿಗಳಲ್ಲಿ ಚೆಂಡೆ, ಶಂಖ ಘಂಟೆಗಳ ನಾದದೊಂದಿಗೆ, ವೇದ ಘೋಷಗಳೊಂದಿಗೆ ಸ್ವಾಗತಿಸುವಷ್ಟು ಧೈರ್ಯ ತೋರಿಸಿದ್ದು ಒಂದು ಅಪೂರ್ವವಾದ ಸನ್ನಿವೇಶ. ಇದೇ ಚಿತ್ರಣಗಳು ಪೂಜ್ಯರ ಅಮೇರಿಕಾ, ಇಂಗ್ಲೆಂಡ್, ಸಿಂಗಾಪುರ, ನ್ಯೂಜಿಲ್ಯಾಂಡ್, ಕೆನಡ, ಒಮಾನ್, ಬಹರೈನ್, ಆಸ್ಟ್ರೇಲಿಯ ಮೊದಲಾದ ದೇಶಗಳಿಗೆ

ಭೇಟಿಯಿತ್ತಾಗ ನೂರಾರು ಭಕ್ತರ ಪಾಲ್ಗೊಳ್ಳುವಿಕೆಯಲ್ಲಿ ಮತ್ತೆ ಮತ್ತೆ ಸಂಭವಿಸುತ್ತದೆ ಎನ್ನುವುದೊಂದು ಅಪೂರ್ವ ಸಾಧನೆಯಲ್ಲವೇ?

ಅಮೇರಿಕಾಕ್ಕೆ ಹೋದ ನಮ್ಮ ಮಕ್ಕಳು ಸಂಸ್ಕೃತಿ ಹೀನರಾಗುತ್ತಾರೆ ಎಂದು ಭಯಪಟ್ಟಿದ್ದ ಪೋಷಕರು ಇಂದು ಅತ್ಯಂತ ಸಮಾಧಾನ ಹೊಂದಿದ್ದಾರೆ. ಏಕೆಂದರೆ ನಮ್ಮ ಮಕ್ಕಳು, ಮೊಮ್ಮಕ್ಕಳು ಈಗ ನಮಗಿಂತಲೂ ಹೆಚ್ಚು ಧಾರ್ಮಿಕರಾಗಿದ್ದಾರೆ, ಹೆಚ್ಚು ಆಧ್ಯಾತ್ಮಿಕ ವಿಚಾರಗಳನ್ನು ತಿಳಿದುಕೊಂಡಿದ್ದಾರೆ, ವ್ರತ ಅನುಷ್ಠಾನಗಳ ಆಚರಣೆಯನ್ನು ಶ್ರದ್ಧೆಯಿಂದ ಮಾಡುತ್ತಿದ್ದಾರೆ ಎಂದು ತಿಳಿದಾಗ ಯಾವ ತಂದೆ ತಾಯಿಗಳಿಗೆ ತಾನೇ ಹೆಮ್ಮೆಯೆನಿಸುವುದಿಲ್ಲ ? ಶ್ರೀಮಠದ ವಿದೇಶಗಳಲ್ಲಿರುವ ಅಷ್ಟೂ ಶಾಖೆಗಳು ಈ ನಿಟ್ಟಿನಲ್ಲಿ ಅವಿಶ್ರಾಂತವಾಗಿ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡುತ್ತಿರುವ ಪೂಜ್ಯ ಪುತ್ತಿಗೆ ಶ್ರೀಗಳ ಸಾಧನೆಯನ್ನು ಇಂದು ಎಲ್ಲರೂ ಕೊಂಡಾಡುತ್ತಾರೆ.

ಸ್ವಾಮಿಗಳು ವಿದೇಶಕ್ಕೆ ಯಾಕೆ ಹೋಗಬೇಕು? ಧರ್ಮ ಜಾಗ್ರತಿಯನ್ನು ಇಲ್ಲೇ ಭಾರತದಲ್ಲೇ ಮಾಡಬಹುದಲ್ಲ? ಎಂದು ಕೆಲವರು ಪ್ರಶ್ನಿಸುತ್ತಾರೆ. ದುಡ್ಡುಮಾಡಲೆಂದೇ ಅಲ್ಲಿಗೆ ಹೋಗಿದ್ದಾರೆಂದು ಆರೋಪಿಸುವವರೂ ಇದ್ದಾರೆ. ಆದರೆ ಅದಕ್ಕೆ ಇಲ್ಲಿ ಬೇಕಾದಷ್ಟು ಮಠ ಮಂದಿರಗಳಿವೆ. ಧರ್ಮ ಗುರುಗಳೂ ಇದ್ದಾರೆ. ವಿದೇಶಗಳಲ್ಲಿ ಇಂತಹ ಸಾಧನೆಯನ್ನು ಮಾಡುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಅಲ್ಲಿನ ಭಕ್ತರ ತೀವ್ರ ಒತ್ತಾಯ ಮತ್ತು ವಿನಂತಿಯ ಮೇರೆಗೆ ಅಲ್ಲಿಗೆ ಪ್ರಯಾಣಿಸುವ ನಿರ್ಧಾರ ತಳೆದ ಶ್ರೀಗಳು ಅಲ್ಲಿರುವ ಲಕ್ಷಾಂತರ ಹಿಂದೂಗಳಲ್ಲಿ ಧರ್ಮಜಾಗೃತಿಯನ್ನು ಮೂಡಿಸುವ ಪಣತೊಟ್ಟ ಧೀಮಂತರು! ಅಲ್ಲಿನ ಸ್ಥಳೀಯ ಹಿಂದೂ ನಾಗರಿಕರ ನೇತೃತ್ವದಲ್ಲಿ ಅನೇಕ ಸಂಘಟನೆಗಳನ್ನು ರಚಿಸಿದ್ದಾರೆ. ಅಲ್ಲಿನ ಬ್ಯಾಂಕುಗಳಲ್ಲಿ ಹಲವಾರು ಮಿಲಿಯನ್ ಡಾಲರ್‌ಗಳಷ್ಟು ಸಾಲ ಮಾಡಿ ಚರ್ಚುಗಳನ್ನು ಖರೀದಿಸಿ ಮಂದಿರಗಳನ್ನು ನಿರ್ಮಿಸಿದ್ದಾರೆ! ಕನ್ನಡ, ಸಂಸ್ಕೃತ, ಭಗವದ್ಗೀತೆ ಇತ್ಯಾದಿಗಳನ್ನು ಎಲ್ಲರಿಗೂ ಕಲಿಸಿಕೊಡುತ್ತಿದ್ದಾರೆ. ಹಿಂದೂಗಳೆಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಭೇದ ಭಾವಗಳಿಲ್ಲದ ಸಹಪಂಕ್ತಿ ಭೋಜನ ಅಲ್ಲಿ ನಿತ್ಯವೂ ನಡೆಯುತ್ತದೆ.

ಒಟ್ಟಿನಲ್ಲಿ ಯಾವುದೇ ಟೀಕೆಗಳಿಗೆ ಎದೆಗುಂದದೆ ತಮ್ಮ ಕಠಿನ ನಿಯಮಾನುಷ್ಠಾನಗಳ ಯತಿಧರ್ಮದಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡಿಕೊಳ್ಳದೆ ಪೂಜ್ಯ ಶ್ರೀಗಳು ತಮ್ಮ ಸಾಧನೆಯ ಜೈತ್ರಯಾತ್ರೆಯನ್ನು ಮುಂದುವರಿಸುತ್ತಲೇ ಇದ್ದಾರೆ. ನೂರಾರು ಮಂದಿ ವೈದಿಕ ವಿದ್ವಾಂಸರನ್ನು ತರಾರಿಸಿ ಅವರಿಗೆ ವಿದೇಶಗಳಲ್ಲಿ ಉದ್ಯೋಗ ಅವಕಾಶಗಳನ್ನು ಕೊಡಿಸಿದ್ದಾರೆ.

ಕೇವಲ ಲೌಕಿಕ ವಿದ್ಯೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆದವರಷ್ಟೇ ವಿದೇಶಕ್ಕೆ ಹೋಗುತ್ತಾರೆ ಅಲ್ಲಿ ನೆಲೆಸುತ್ತಾರೆ ಎನ್ನುವುದೊಂದು ಸಾಮಾನ್ಯ ನಂಬಿಕೆಯಾಗಿತ್ತು. ಅಂತದ್ದರಲ್ಲಿ ಆಧ್ಯಾತ್ಮ ವಿದ್ಯಾಪಾರಂಗತರು, ಪರಂಪರಾಗತ ಅನುಷ್ಠಾನವಂತರು ಮತ್ತು ಶಿಖಾಧಾರಿಗಳೂ ಇಂದು ಸಾಂಪ್ರದಾಯಿಕ ಉಡುಗೆ ತೊಡುಗೆಗೆಳನ್ನುಟ್ಟುಕೊಂಡು ವಿದೇಶಗಳಲ್ಲಿ ಸಂಚರಿಸುತ್ತಾರೆ, ಅಲ್ಲಿಯೇ ನೆಲೆಸುತ್ತಾರೆ ಎಂದರೆ ಇದು ಪೂಜ್ಯ ಪುತ್ತಿಗೆ ಶ್ರೀಪಾದರು ಮಾಡಿದ ಧರ್ಮ ಕ್ರಾಂತಿಯಲ್ಲವೇ? ಅದ್ಭುತ ಸಾಧನೆಯಲ್ಲವೇ?

●

# ವಿದೇಶಗಳಲ್ಲಿ ವಿರಾಜಿಸುತ್ತಿರುವ ಶ್ರೀ ಪುತ್ತಿಗೆ ಮಠದ ಶಾಖೆಗಳು

**ಪು**ತ್ತಿಗೆ ಶ್ರೀಗಳು ಮೊದಲ ಬಾರಿಗೆ ವಿದೇಶ ಪ್ರಯಾಣ ಮಾಡಿದ್ದು 1997ರಲ್ಲಿ, ಅಮೇರಿಕಾ ದೇಶಕ್ಕೆ. ಸಾವಿರಾರು ಮಂದಿ ಹಿಂದೂಗಳು, ಮಾಧ್ವರು ಅದಾಗಲೇ ಅಲ್ಲಿ ಬಂದು ನೆಲೆಸಿದ್ದರೂ, ತಮ್ಮ ಧಾರ್ಮಿಕ ಅನುಷ್ಠಾನಗಳಿಗೆ ಸರಿಯಾದ ವ್ಯವಸ್ಥೆ, ಮಾರ್ಗದರ್ಶನಗಳಿಲ್ಲದೆ ಅವರು ಪರಿತಪಿಸುತ್ತಿದ್ದರು. ಅನಿವಾರ್ಯ ಹೋಮ, ಪೂಜಾದಿ ಅನುಷ್ಠಾನಗಳು, ಶ್ರಾದ್ಧಾದಿ ಕರ್ಮಗಳಿಗೆ ಪ್ರತಿಸಲವೂ ಭಾರತಕ್ಕೆ ಬಂದು ಹೋಗುವುದು ಅವರಿಗೆ ಅತ್ಯಂತ ಕಷ್ಟವಾಗುತ್ತಿತ್ತು. ಮತ್ತು ತಮ್ಮ ಮಕ್ಕಳಿಕೆ ಧಾರ್ಮಿಕ ಶಿಕ್ಷಣವನ್ನು ಕೊಡುವುದೂ ಅಸಾಧ್ಯವಾಗಿತ್ತು. ಯಾರಾದರೊಬ್ಬರು ಸಮರ್ಥ ಗುರುಗಳು, ಧಾರ್ಮಿಕ ನಾಯಕರು ಇಲ್ಲಿಗೆ ಬಂದರೆ ಮಾತ್ರ ಈ ಕೊರತೆ ನೀಗಬಹುದು, ನಮ್ಮ ಮುಂದಿನ ಪೀಳಿಗೆಗೂ ಒಂದು ದೃಢವಾದ ಧಾರ್ಮಿಕ ಚೌಕಟ್ಟು ದೊರೆಯಬಹುದು ಎನ್ನುವುದು ಅವರ ಅಪೇಕ್ಷೆಯಾಗಿತ್ತು.

ಅದೇ ಸಮಯದಲ್ಲಿ 'ಸೈಬರ್ ಮಾಧ್ವ ಸಂಘ' ಎಂಬ ಅಲ್ಲಿನ ಸ್ಥಳೀಯ ಸಂಘಟನೆ ಈ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಿ ಕೆಲವೊಂದು ಯೋಜನೆಗಳನ್ನು ರೂಪಿಸಿತ್ತು. ಸಂಘದ ಪ್ರತಿನಿಧಿಗಳು ಅಲ್ಲಿನ 'ಪಿಟ್ಸ್ ಬರ್ಗ್' ನಿವಾಸಿ ಶ್ರೀ ಬಿಂದುಮಾಧವನ್ ನೇತೃತ್ವದಲ್ಲಿ ಅನೇಕ ಮಠ ಮಂದಿರಗಳನ್ನು ಸಂಪರ್ಕಿಸಿ, ಅನೇಕ ಧರ್ಮ ಗುರುಗಳನ್ನು ಸಂದರ್ಶಿಸಿ, ಕೊನೆಗೆ ಬಹುತೇಕರ ಅಣತಿಯಂತೆ, ಉಡುಪಿಗೆ ಬಂದು ಪುತ್ತಿಗೆ ಶ್ರೀಗಳನ್ನು ಭೇಟಿ ಮಾಡಿದರು. ಆಗ ಪೂಜ್ಯ ಶ್ರೀಗಳ ವಯಸ್ಸು ಕೇವಲ 36! ಶ್ರೀಗಳ ಅದ್ಭುತ ಪಾಂಡಿತ್ಯ, ವರ್ಚಸ್ಸು, ಅಪಾರ ಜನಪ್ರಿಯತೆಯ ಜೊತೆಗೆ ಅವರಿಗಿದ್ದ ಸಾಮಾಜಿಕ ಕಳಕಳಿ, ಮತ್ತು ಆಂಗ್ಲಭಾಷೆಯ ಪ್ರಾವೀಣ್ಯವನ್ನು ಕಂಡು ಆಚ್ಚರಿಗೊಂಡರು! ವಿದೇಶದಲ್ಲಿ ಧರ್ಮ ಜಾಗೃತಿ ಮೂಡಿಸಲು ಇವರೊಬ್ಬರೇ ಸರ್ವಸಮರ್ಥರು ಎಂದು ಅಭಿಪ್ರಾಯಪಟ್ಟರು. ಪೂಜ್ಯ ಶ್ರೀ ಗಳನ್ನು ಅಮೇರಿಕಾ ದೇಶಕ್ಕೆ ಬಂದು ಹೋಗುವಂತೆ ಭಿನ್ನವಿಸಿದರು. ತಮ್ಮ ಧಾರ್ಮಿಕ ಅನುಷ್ಠಾನಗಳಿಗೆ

ಅಡ್ಡಿಯಾಗಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದ ಶ್ರೀಗಳು ಅವರ ವಿನಂತಿಯನ್ನು ನಯವಾಗಿ ನಿರಾಕರಿಸಿದರು.

ಭಾರತದಂತೆಯೇ ಅಲ್ಲಿಯೂ ನದೀ ಸ್ನಾನ, ಮಡಿ ಮೈಲಿಗೆಯ ಆಚರಣೆ, ನಿತ್ಯ ಪೂಜೆ, ಹೋಮ ಹವನ, ಜಪ ತಪಾದಿ ಧಾರ್ಮಿಕ ಅನುಷ್ಠಾನಗಳನ್ನು ಅತಿಸುಲಭವಾಗಿ ನಡೆಸಬಹುದು. ಮತ್ತು ಇಲ್ಲಿಗಿಂತಲೂ ಉತ್ತಮವಾದ ಹೂ ತುಳಸಿ, ಫಲಗಳು, ತರಕಾರಿ ಮತ್ತು ದವಸ ಧಾನ್ಯಗಳು ಎಲ್ಲ ಕಾಲದಲ್ಲಿಯೂ ವಿಪುಲವಾಗಿ ದೊರೆಯುತ್ತವೆ ಎಂಬವುದನ್ನು ಶ್ರೀಗಳಿಗೆ ವಿವರಿಸಿ ತಾವು ಬರಲೇ ಬೇಕೆಂದು ಪರಿಪರಿಯಾಗಿ ವಿನಂತಿಸಿ ಒತ್ತಾಯಿಸತೊಡಗಿದರು. ಸುಮಾರು ಒಂದು ವರ್ಷಗಳ ಪರ್ಯಂತ ಪರ್ಯಾಲೋಚಿಸಿ, ಹಿರಿಯರೊಡನೆ ಚರ್ಚಿಸಿ, ವಿಮರ್ಶಿಸಿದ ಶ್ರೀಗಳು ತಾವು ಅಲ್ಲಿಗೆ ಹೋಗಲೇಬೇಕಾದ ಅನಿವಾರ್ಯತೆಯನ್ನು ಮನಗಂಡು ಅಂತಿಮವಾಗಿ 1997ರಲ್ಲಿ ವಿದೇಶಕ್ಕೆ ಹೋಗಿ ಧರ್ಮಸಂಸ್ಥಾಪನೆ ಮಾಡಬೇಕೆಂಬ ಧೀರೋದಾತ್ತ ನಿರ್ಧಾರವನ್ನು ಕೈಗೊಂಡರು!

ತಮ್ಮ ಮಠದ ಆಪ್ತ ಶಿಷ್ಯವರ್ಗ ಮತ್ತು ವಿದ್ವಾಂಸರ ಜೊತೆಗೆ ಭಗವದ್ಗೀತೆಯ ಪುಸ್ತಕ ಮತ್ತು ಗಂಗಾಜಲವನ್ನು ಕೈಯ್ಯಲ್ಲಿ ಹಿಡಿದುಕೊಂಡೇ ಅಮೇರಿಕಾದ ನೆಲದಲ್ಲಿ ಕಾಲಿರಿಸಿದ ಪೂಜ್ಯಶ್ರೀಗಳು ತಮ್ಮ ಮೊದಲ ಭೇಟಿಯಲ್ಲಿಯೇ ದೇಶದ ಉದ್ದಗಲಕ್ಕೂ ಸಂಚರಿಸಿದರು. ಅಂತಹ ಅವಿಶ್ರಾಂತ ಸಂಚಾರದಲ್ಲಿಯೂ ಭಾರತದಲ್ಲಿರುವಾಗಿನ ತಮ್ಮ ಕಠಿಣ ನಿತ್ಯಾನುಷ್ಠಾನಕ್ರಮಗಳ ನಿಯಮಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ, ನಿತ್ಯ ಜಪ, ತಪ, ಪೂಜಾ ಪಾಠ ಪ್ರವಚನಳನ್ನು ನಡೆಸುತ್ತಾ, ವಿದೇಶದಲ್ಲಿಯೂ ಭಾರತದಲ್ಲಿರುದಕ್ಕಿಂತಲೂ ಚೆನ್ನಾಗಿ ಯತಿಧರ್ಮವನ್ನು, ಧಾರ್ಮಿಕತೆಯನ್ನು ಅನುಸರಿಸಬಹುದು ಎಂಬುದನ್ನು ಮೊಟ್ಟಮೊದಲ ಬಾರಿಗೆ ಜಗತ್ತಿಗೇ ತೋರಿಸಿಕೊಟ್ಟರು.

ಪೂಜ್ಯ ಶ್ರೀಗಳ ಆ ಐತಿಹಾಸಿಕ ಅಮೇರಿಕಾ ಸಂಚಾರ ಅಲ್ಲಿನ ಭಕ್ತರ ಧಾರ್ಮಿಕ ಜೀವನದಲ್ಲಿ ಅದ್ಭುತವಾದ ಸಂಚಲನವನ್ನೇ ಸೃಷ್ಟಿಸಿತು. ಅನೇಕ ಮಂದಿಯ ಜೀವನದಲ್ಲಿ ಅಭೂತಪೂರ್ವ ಬದಲಾವಣೆಗಳು ಉಂಟಾದವು. ಧರ್ಮಾಸಕ್ತಿ ಬೆಳೆಯಿತು. ಜ್ಞಾನದಾಹವೂ ಉಲ್ಬಣಿಸಿತು. ಎಲ್ಲೆಲ್ಲೋ ಚದುರಿದ್ದ ಹಿಂದೂಗಳು, ಮಾಧ್ವರು ಒಟ್ಟು

ಸೇರಿದರು. ಶ್ರೀಗಳನ್ನು ಮತ್ತೆ ಮತ್ತೆ ಅಮೇರಿಕಕ್ಕೆ ಬರುವಂತೆ ಒತ್ತಾಯಿಸಿದರು. ಮತ್ತು ಆ ನೆಲದಲ್ಲಿಯೂ ಶ್ರೀ ಮಠದ ಶಾಖೆಗಳನ್ನು ಪ್ರಾರಂಭಿಸುವಂತೆ ಬೇಡಿಕೊಂಡರು. ಅದಕ್ಕಾಗಿ ತಮ್ಮ ತನು, ಮನ, ಧನಾದಿ ಸಂಪೂರ್ಣ ಸಹಕಾರ ಸೇವೆಯನ್ನು ನೀಡುವುದಾಗಿ ಭರವಸೆ ನೀಡಿದರು.

ಮುಂದೆ ಭಕ್ತರ ಅಪೇಕ್ಷೆಯಂತೆ ಪೂಜ್ಯ ಶ್ರೀ ಗಳು ತಮ್ಮ ಶ್ರೀಮಠದ ಮೊದಲ ವಿದೇಶೀ ಶಾಖೆಯನ್ನು ಅರಿಜೋನಾ ರಾಜ್ಯದ ಫೀನಿಕ್ಸ್ ಎಂಬಲ್ಲಿ 2000ನೇ ಇಸವಿಯಲ್ಲಿ ಪ್ರಾರಂಭಿಸಿದರು. ವಿದೇಶಕ್ಕೂ ವಿಸ್ತರಿಸಿದ ಶ್ರೀ ಮಠದ ಶಾಖೆಗೆ 'ಶ್ರೀ ಕೃಷ್ಣ ವೃಂದಾವನ' ಎಂದು ನಾಮಕರಣ ಮಾಡಿದರು. ಉಡುಪಿ ಶ್ರೀ ಕೃಷ್ಣ, ಶ್ರೀನಿವಾಸನ, ಮುಖ್ಯಪ್ರಾಣ ವಿಗ್ರಹಗಳನ್ನು ಮತ್ತು ಶ್ರೀ ರಾಯರ ಮೃತ್ತಿಕಾ ವೃಂದಾವನವನ್ನು ವಿಧಿವತ್ತಾಗಿ ಪ್ರತಿಷ್ಠಾಪಿಸಿ ನಿತ್ಯಪೂಜೆಗೆ ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿದ ತಮ್ಮ ಶಿಷ್ಯರನ್ನು ಅರ್ಚಕರನ್ನಾಗಿ ನೇಮಿಸಿದರು. ಉಡುಪಿಯಂತೆ ಅಲ್ಲಿಯೂ ಭಕ್ತಾದಿಗಳಿಗೆ ಉಚಿತ ನಿತ್ಯ ಅನ್ನಸಂತರ್ಪಣೆಯ ವ್ಯವಸ್ಥೆಯಾಗಬೇಕೆಂದು ಉಡುಪಿಯ ಅಡುಗೆಯವರನ್ನೂ ಅಲ್ಲಿಗೆ ಕರೆತರಿಸಿದರು. ಮುಂದೆ ನಿತ್ಯ ಪೂಜೆ, ಭಜನೆ, ಹೋಮ ಹವನ, ಅನ್ನದಾನಾದಿಗಳ ಜೊತೆಗೆ ಪಾಠಪ್ರವಚನಗಳೂ ಎಡೆಬಿಡದೆ ನಡೆಯುವಂತಹ ಉತ್ತಮ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟರು. ಎಲ್ಲ ಹಬ್ಬ ಹರಿದಿನಗಳ ಅಚ್ಚುಕಟ್ಟಾದ ಆಚರಣೆ, ತಮ್ಮ ಸಂಪ್ರದಾಯದಂತೆ, ಭಾರತದಲ್ಲಿ ನಡೆಯುವಂತೆ ಶಾಸ್ತ್ರೀಯ ರೀತಿಯ ಶ್ರಾದ್ಧಕರ್ಮ, ವ್ರತ ಪೂಜಾದಿಗಳ ನಿರ್ವಹಣೆ ಅಲ್ಲಿನ ಭಕ್ತರಿಗೆ ಅಪೂರ್ವವಾದ ಸಮಾಧಾನವನ್ನು, ನೆಮ್ಮದಿಯನ್ನು  ಮತ್ತು ಮನಃಸಂತೋಷವನ್ನು ತಂದು ಕೊಟ್ಟಿತು.

ಮುಂದೆ ಅಮೇರಿಕಾದ ಅನ್ಯ ಮಹಾನಗರ ಪ್ರದೇಶಗಳಲ್ಲಿ ನೆಲೆಸಿದ ಭಕ್ತರ ಬೇಡಿಕೆಗಳಿಗೂ ಸಮ್ಮತಿಸಿದ ಶ್ರೀಗಳು ಇನ್ನಷ್ಟು ಶಾಖೆಗಳನ್ನು ಪ್ರಾರಂಭಿಸುವ ಸಂಕಲ್ಪ ಮಾಡಿದರು. 2002ರಲ್ಲಿ ನ್ಯೂಜೆರ್ಸಿಯಲ್ಲಿ ಎರಡನೇ ಶಾಖೆ ಆರಂಭವಾಯಿತು. ಹಾಗೆಯೇ ನಂತರ ಲಾಸ್ ಏಂಜಲೀಸ್, ಹ್ಯೂಸ್ಟನ್, ಸ್ಯಾನ್ ಹೋಸೆ, ಅಟ್ಲಾಂಟ, ಡಾಲಸ್, ರಾಲೇ, ಸಿಯಾಟಲ್, ಆಸ್ಟಿನ್, ಚಿಕಾಗೋ ಮಹಾನಗರಗಳಲ್ಲಿ ಒಟ್ಟಿಗೆ

ಇಲ್ಲಿಯ ತನಕ ಅಮೇರಿಕಾ ದೇಶವೊಂದರಲ್ಲೇ ಹನ್ನೊಂದು ಶಾಖೆಗಳು ಆರಂಭಗೊಂಡವು!

ಅಮೇರಿಕಾದಲ್ಲಿ ಜನಪ್ರಿಯವಾದ ಶ್ರೀಗಳ ಧಾರ್ಮಿಕ ಸಂಚಲನ ಇತರ ದೇಶಗಳ ಭಕ್ತರನ್ನೂ ಪ್ರೇರೇಪಿಸಿತು. ಅಲ್ಲಿನ ಭಕ್ತರ ಒತ್ತಾಯಪೂರ್ವಕ ವಿನಂತಿಯಂತೆ ಇತರ ದೇಶಗಳಿಗೂ ತಮ್ಮ ಧರ್ಮೋತ್ಥಾನದ ಜೈತ್ರಯಾತ್ರೆಯನ್ನು ಮುಂದುವರಿಸಿದ ಶ್ರೀಗಳು ನಂತರ 2011ನೇ ಇಸವಿಯಲ್ಲಿ ಕೆನಡಾ ದೇಶದ ಟೊರೊಂಟೋ ಮಹಾನಗರದಲ್ಲಿ ಮತ್ತು 2015ರಲ್ಲಿ ಇಂಗ್ಲೆಂಡಿನ ಲಂಡನ್ ಹಾಗೂ ಆಸ್ಟ್ರೇಲಿಯಾದ ಮೆಲ್ಬರ್ನ್ ಮತ್ತು 2018ರಲ್ಲಿ ಸಿಡ್ನಿ ಮಹಾನಗರದಲ್ಲಿಯೂ ಶಾಖೆಗಳನ್ನು ಆರಂಭಿಸಿದರು. ಒಟ್ಟಾರೆ ವಿದೇಶಗಳಲ್ಲಿ ಈವರಗೆ ಶ್ರೀ ಪುತ್ತಿಗೆ ಮಠದ 15 ಶಾಖೆಗಳು ಆರಂಭಗೊಂಡು ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಾ ಜನಪ್ರಿಯವಾಗಿಬಿಟ್ಟಿವೆ!

ಹಾಗೆಯೇ ಮೆಕ್ಸಿಕೊ, ಸಿಂಗಾಪುರ, ಮಲೇಷ್ಯಾ, ದುಬೈ, ಬಹರೈನ್, ಕುವೈಟ್, ಅಬುಧಾಬಿ, ಸ್ವಿಟ್ಜರ್ಲ್ಯಾಂಡ್, ನೆದರ್ಲ್ಯಾಂಡ್, ಜರ್ಮನಿ, ನ್ಯೂಜಿಲೆಂಡ್, ಶ್ರೀಲಂಕಾ ಇತ್ಯಾದಿ ದೇಶಗಳಿಗೂ ಶ್ರೀ ಮಠದ ವಿದ್ವಾಂಸರನ್ನು ಕಳುಹಿಸಿ ಅಲ್ಲಿಯೂ ಅನೇಕ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವ ವ್ಯವಸ್ಥೆಗಳನ್ನು ಶ್ರೀ ಮಠವು ಮಾಡುತ್ತಿದೆ. ಪೂಜ್ಯ ಶ್ರೀಪಾದರು ವಿದೇಶಗಳಲ್ಲಿ 108 ಶ್ರೀ ಕೃಷ್ಣಮಂದಿರಗಳ ನಿರ್ಮಾಣ ಮಾಡುವುದಾಗಿ ಘೋಷಿಸಿದ್ದಾರೆ.

ವಿದೇಶಗಳಲ್ಲಿ ಮಂದಿರ ನಿರ್ಮಾಣಮಾಡುವುದು ಸುಲಭದ ಕೆಲಸವೇನಲ್ಲ. ಅಲ್ಲಿನ ಕಾನೂನು ನಿಬಂಧನೆಗಳಿಗೆ ಅನುಗುಣವಾಗಿ ಅನುಮತಿಯನ್ನು ಪಡೆಯುವುದು ಅತ್ಯಂತ ತ್ರಾಸದಾಯಕ. ಮತ್ತು ಅಲ್ಲಿನ ಜಾಗಗಳ ಬೆಲೆಯೂ ಅತ್ಯಂತ ದುಬಾರಿ. ಅನೇಕ ಕಡೆಗಳಲ್ಲಿ ಮಾರಾಟಕ್ಕಿರುವ ಚರ್ಚುಗಳನ್ನೇ ಖರೀದಿಸಿ ಮಂದಿರವನ್ನಾಗಿ ಪರಿವರ್ತಿಸಬೇಕಾಯಿತು. ಆದರೂ ತನ್ನ ಅಪೂರ್ವವಾದ ಧಾರ್ಮಿಕ ಕಾರ್ಯಾಚರಣೆಗಳಿಂದ ಅಪಾರ ಜನಮನ್ನಣೆಯನ್ನು ಗಳಿಸಿದ ಶ್ರೀ ಮಠದ ಶಾಖೆಗಳು ಭಕ್ತರ ಸಂಪೂರ್ಣ ಸಹಕಾರದೊಂದಿಗೆ ಅತಿಶೀಘ್ರವಾಗಿ ಅಭಿವೃದ್ಧಿಗೊಳ್ಳುತ್ತಿವೆ. ಚಿಕ್ಕದಾಗಿ

ಪ್ರಾರಂಭಗೊಂಡ ಪ್ರತಿಯೊಂದು ಶಾಖೆಯೂ ಇಂದು ಹಲವಾರು ಎಕರೆ ಪ್ರದೇಶಗಳಲ್ಲಿ ವಿಸ್ತರಿಸಿ ಸಾವಿರಾರು ಭಕ್ತರನ್ನು ಸೇರಿಸಿಕೊಳ್ಳುವಷ್ಟು ವಿಶಾಲವಾಗಿ ಬೆಳೆದು ನಿಂತಿದೆ.

ಪ್ರತಿನಿತ್ಯವೂ ನಡೆಯುವ ಪ್ರವಚನ, ಭಗವದ್ಗೀತೆ, ವಿಷ್ಣುಸಹಸ್ರನಾಮ ಮತ್ತು ವೇದ ಪಾಠಗಳಲ್ಲಿ ಬಹಳಮಂದಿ ಭಕ್ತರು ಪಾಲ್ಗೊಳ್ಳುತ್ತಾರೆ. ಸಾವಿರಕ್ಕೂ ಅಧಿಕ ಮಂದಿ ಸಂಪೂರ್ಣ ಗೀತೆಯನ್ನು ಕಂಠಪಾಠ ಮಾಡಿದ್ದಾರೆ. ನಿತ್ಯ ಸಂಧ್ಯಾವಂದನೆ, ದೇವರ ಪೂಜೆ, ಏಕಾದಶೀ ಉಪವಾಸ, ಚಾತುರ್ಮಾಸ್ಯಾದಿ ವ್ರತಗಳನ್ನು ನೂರಾರು ಮಂದಿ ವಿದೇಶವಾಸಿ ಭಕ್ತರು ಶ್ರದ್ಧೆಯಿಂದ ಅನುಸರಿಸುತ್ತಾರೆ.

ಶ್ರೀ ಮಠದ ಎಲ್ಲ ಶಾಖೆಗಳೂ ಪೂಜ್ಯ ಶ್ರೀ ಪಾದರ ನಿರ್ದೇಶನದಂತೆ ಶ್ರೀ ಪುತ್ತಿಗೆ ವಿದ್ಯಾಪೀಠದ ವಿದ್ವಾಂಸರ ನೇತೃತ್ವದಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿವೆ. ಭಾರತೀಯ ಮೂಲದ ಹಿಂದೂ ಭಕ್ತನ್ನಷ್ಟೇ ಉತ್ತೇಜಿಸಿ ಧರ್ಮಮಾರ್ಗದಲ್ಲಿ ತಂದು ನಿಲ್ಲಿಸುವುದು ಪೂಜ್ಯ ಶ್ರೀಗಳ ಸಂಕಲ್ಪ. ಅನ್ಯಮತೀಯ ವಿದೇಶೀ ಭಕ್ತರನ್ನು ಆಕರ್ಷಿಸುವುದು, ಮತಾಂತರಿಸುವುದು ಇತ್ಯಾದಿಗಳನ್ನು ಶ್ರೀ ಮಠದ ಸಂಸ್ಥೆಗಳು ಮಾಡುವುದಿಲ್ಲ. ಆದರೂ ಶ್ರೀ ಮಠದ ಶಾಖೆಗಳು ಕೇವಲ ಧಾರ್ಮಿಕ ಆಚರಣೆಗಳಿಗಷ್ಟೇ ಸೀಮಿತವಾಗದೆ, ವಿಶ್ವಸಂಸ್ಥೆ, ಅಲ್ಲಿನ ಸರಕಾರ ಮತ್ತು ಸ್ಥಳೀಯ ಸಂಘಟನೆಗಳ ಜೊತೆಗೂಡಿ ನಡೆಸುವ ಅನೇಕ ಸಮಾಜ ಸೇವೆಗಳು ಮತ್ತು ವಿಶ್ವಶಾಂತಿ ಸಾಮರಸ್ಯದ ಬಗೆಗಿನ ಜನ ಜಾಗ್ರತಿ ಕಾರ್ಯಕ್ರಮಗಳು ಅಲ್ಲಿನ ಪ್ರಜೆಗಳೂ ಮೆಚ್ಚಿಕೊಳ್ಳುವಂತೆ ಮಾಡಿವೆ. ಶ್ರೀ ಮಠಕ್ಕೆ ಮತ್ತು ಶ್ರೀಗಳಿಗೆ ಒಳ್ಳೆಯ ಹೆಸರು ಮತ್ತು ಗೌರವವನ್ನೂ ತಂದು ಕೊಟ್ಟಿವೆ.

**ವಿಶೇಷಗಳು:**

ಜಗತ್ತಿನ ಅತ್ಯಂತ ದೊಡ್ಡ ಹಿಂದೂ ದೇಗುಲವಿರುವುದು ಭಾರತದಲ್ಲಲ್ಲ, ಕಾಂಬೋಡಿಯಾದಲ್ಲಿ! ವಿಶ್ವದ ಎರಡನೇ ದೊಡ್ಡ ಹಿಂದೂ ದೇವಸ್ಥಾನವಿರುವುದು ಅಮೇರಿಕಾದ ನ್ಯೂಜೆರ್ಸಿಯಲ್ಲಿ! ಹೀಗೆ ಅನಿವಾಸಿ ಭಾರತೀಯರು ತಮ್ಮ ಸತತ ಸಾಧನೆ ಮತ್ತು ಪರಿಶ್ರಮಗಳಿಂದ ವಿದೇಶಗಳಲ್ಲಿ ಉನ್ನತ ಸ್ಥಾನ ಮಾನಗಳನ್ನು ಗಳಿಸಿದ್ದು

ಮಾತ್ರವಲ್ಲ, ಭವ್ಯವಾದ ಧಾರ್ಮಿಕ ಕೇಂದ್ರಗಳನ್ನೂ ನಿರ್ಮಿಸುತ್ತಾ ನಮ್ಮ ಪುರಾತನ ಪರಂಪರೆಯ ಕೀರ್ತಿಯನ್ನು ಬೆಳಗುತ್ತಿದ್ದಾರೆ.

ಕಳೆದ ನಾಲ್ಕು ದಶಕಗಳಲ್ಲಿ ಉನ್ನತ ವಿದ್ಯಾಭ್ಯಾಸ ಅಥವಾ ಉದ್ಯೋಗದ ಅವಕಾಶವನ್ನರಸಿ ವಿದೇಶಗಳಿಗೆ ಹೋಗಿ ಬಳಿಕ ಅಲ್ಲೇ ನೆಲೆಕಂಡ ಭಾರತೀಯರ ಸಂಖ್ಯೆ ಸುಮಾರು ಐದು ಕೋಟಿ! ಅಮೇರಿಕಾ ಒಂದರಲ್ಲೇ ಸುಮಾರು 22 ಲಕ್ಷ ಹಿಂದೂಗಳಿದ್ದಾರೆ ಮತ್ತು 1500 ಕ್ಕೂಹೆಚ್ಚು ದೇಗುಲಗಳಿವೆ! ಇನ್ನೂ ನಿರ್ಮಾಣಗೊಳ್ಳುತ್ತಿವೆ!>

●



SHRI VENKATA KRISHNA KSHETRA TEMPLE, PHOENIX, ARIZONA. USA

# ಫೀನಿಕ್ಸಿನಲ್ಲಿ ಶ್ರೀಗಳಿಗೊಲಿದ ಶ್ರೀನಿವಾಸ!

**ಪೂ**ಜ್ಯ ಶ್ರೀಪಾದರು ಧರ್ಮಪ್ರಚಾರವೆಂಬ ತಮ್ಮ ಪರಮಧ್ಯೇಯದೊಂದಿಗೆ ಅಮೇರಿಕಾದಾದ್ಯಂತ ಸಂಚರಿಸುತ್ತಾ ಜನರಿಗೆ ಧಾರ್ಮಿಕತೆಯ ರುಚಿಹತ್ತಿಸುತ್ತಾ ಅರಿಜ಼ೋನಾ ರಾಜ್ಯದ ಫೀನಿಕ್ಸ್ ನಗರಕ್ಕೆ ಮೊದಲಸಲ ಪಾದಾರ್ಪಣೆಗೈದಿದ್ದು ಬಹುಶಃ 1997ನೇ ಇಸವಿಯ ವೈಶಾಖಮಾಸದಲ್ಲಿ. ಹೇಳಿಕೇಳಿ ಅದು ಮರುಭೂಮಿ. ಬೇಸಿಗೆಯ ಅಸಹ್ಯ ಸೆಖೆ. ಧಗಧಗಿಸುವ ಬಿಸಿಲು. ಪೂರ್ವ ಪ್ರಾಂತ್ಯದ ಕೊರೆಯುವ ಚಳಿ, ಅಗ್ನೇಯದ ಫ್ಲೋರಿಡಾದಲ್ಲಿನ ಸುಂಟರಗಾಳಿ, ಕ್ಯಾಲಿಫೋರ್ನಿಯಾದ ಭೂಕಂಪನ, ವಾಶಿಂಗ್ಟನ್ ರಾಜ್ಯದ ಎಡೆಬಿಡದ ಸುರಿಮಳೆ ಇತ್ಯಾದಿಯಾಗಿ ಪ್ರಾಕೃತಿಕ ವ್ಯತ್ಯಾಸಗಳ ವೈಪರೀತ್ಯವನ್ನು ಕಿಂಚಿತ್ತೂ ಲೆಕ್ಕಿಸದೆ ತಮ್ಮ ಯಥಾಪ್ರಕಾರ ಅನುಷ್ಠಾನಗಳೊಂದಿಗೆ ಸಂಚರಿಸುತ್ತಲೇ ಇದ್ದ ಪೂಜ್ಯ ಶ್ರೀಪಾದರನ್ನು ಅಲ್ಲಿನ ಉರಿ ಬಿಸಿಲೂ ಬಾಧಿಸಲಿಲ್ಲ. ಅದೇ ಮರದ ಹಾವಿಗೆ, ಅದೇ ಕಾವಿಯ ಪಂಚೆಶಾಲು ಮತ್ತು ಬೆಳ್ಳಿಯಲ್ಲಿ ಪೋಣಿಸಿದ ತುಳಸಿ, ಕಮಲಾಕ್ಷಮಣಿಗಳ ಸರ! ಮುಖದಲ್ಲಿ ಪ್ರಜ್ವಲಿಸುವ ಅಕ್ಷತೆ ಅಂಗಾರಕ! ದೇಶ ಕಾಲ ಯಾವುದೇ ಇರಲಿ, ವಾತಾವರಣ ಹೇಗೇ ಇರಲಿ ಇವಿಷ್ಟೇ ಶ್ರೀಗಳ ವೇಷಭೂಷಣ! ಎಂದೆಂದಿಗೂ ಬದಲಾಗದ 'ಪರ್ಮನೆಂಟ್ ಐಡೆಂಟಿಟಿ!'

ಅಲ್ಲಿನ ಸೆಖೆಗೆ ಬಳಲಿ ಬಸವಳಿದ ಶಿಷ್ಯರು 'ಅರಿಜ಼ೋನಾ'ವನ್ನು 'ಉರಿಜ಼ೋನಾ' ಎಂದು ಅಣಕಿಸುತ್ತಿದ್ದದ್ದನ್ನು ಗಮನಿಸಿದ ಶ್ರೀಗಳು ತತ್‌ಕ್ಷಣ ಅವರನ್ನು ತಿದ್ದಿದರು. 'ವರ್ಷಂತಂ ನ ನಿಂದ್ಯಾತ್ ತಪಂತಂ ನ ನಿಂದ್ಯಾತ್' ಎಂಬುವುದಾಗಿ ಪ್ರಕೃತಿಯನ್ನೆಂದಿಗೂ ನಿಂದಿಸದೆ ಯಥಾವತ್ತಾಗಿ ಆರಾಧಿಸುವ ಅಪೂರ್ವ ಪರಂಪರೆ ನಮ್ಮದು ಎಂಬುವುದನ್ನು ನೆನಪಿಸಿದರು. 'ಹರಿಜ಼ೋನ್' ಎಂದು ಕರೆಯಿರಿ ದೇವರ ಸ್ಮರಣೆಯಾದರೂ ಆಗುತ್ತದೆ ಎಂದು ಆದೇಶಿಸಿದರು. ಅದು ಭಗವಂತನೇ ಅವರ ಬಾಯಿಯಿಂದ ನುಡಿಸಿದ ಅರ್ಥಪೂರ್ಣ ಉದ್ಗಾರವಾಗಿತ್ತು. ಕೆಲವೇ ಸಮಯದಲ್ಲಿ ಶ್ರೀಗಳ ಮಾತು ಸತ್ಯವಾಗಿ ಬಿಟ್ಟಿತು. ಪುಣ್ಯಾತ್ಮರು ನುಡಿದದ್ದು ಸತ್ಯವಾಗುತ್ತದಂತೆ 'ವಾಚಂ ಅರ್ಥೋಽನುಧಾವತಿ'. ಮುಂದೆ ಅದು ಶ್ರೀ ವೆಂಕಟಕೃಷ್ಣಕ್ಷೇತ್ರವಾಯಿತು!

ಬಹಳ ಸಂಖ್ಯೆಯ ಭಾರತೀಯರು ಅಷ್ಟರಲ್ಲೇ ಅಲ್ಲಿಗೂ ಬಂದು ನೆಲೆಸಿದ್ದರು. ಅಲ್ಲಿನ ಪ್ರಸಿದ್ಧ ವಿಶ್ವವಿದ್ಯಾಲಯ 'ಅರಿಜೋ಼ನ ಸ್ಟೇಟ್ ಯುನಿವರ್ಸಿಟಿ' "ಎ.ಎಸ್.ಯು" ಅನ್ನು 'ಆಂಧ್ರ ಸ್ಟೇಟ್ ಯುನಿವರ್ಸಿಟಿ' ಎಂದು ನಮ್ಮವರು ಅಣಕಿಸುವಷ್ಟು ಹೆಚ್ಚಿನ ಸಂಖ್ಯೆಯು ತೆಲುಗು ಭಾಷಿಗರೂ ಅಲ್ಲಿ ಸೇರಿದ್ದರು. ಪೂಜ್ಯ ಶ್ರೀಪಾದರ ಪಾದಾರ್ಪಣೆಯಿಂದ ಪುಳಕಿತರಾದ ಭಾರತೀಯರೆಲ್ಲರೂ ಒಂದುಗೂಡಿ ಒಕ್ಕೊರಲಿನಿಂದ ಶ್ರೀಗಳ ಮುಂದೆ ಸಲ್ಲಿಸಿದ ಬೇಡಿಕೆ ಮಾತ್ರ ಒಂದೇ ಆಗಿತ್ತು. ಇಲ್ಲೊಂದು ದೇವಸ್ಥಾನ ಆಗಬೇಕು. ನಮ್ಮ ಮುಂದಿನ ಪೀಳಿಗೆಯ ಧಾರ್ಮಿಕ, ಆಧ್ಯಾತ್ಮಿಕ ಜೀವನ ಭವಿಷ್ಯಕ್ಕೊಂದು ಭದ್ರ ತಳಪಾಯಬೇಕು. ಅದು ನೀವು ಮನಸ್ಸು ಮಾಡಿದರೆ ಮಾತ್ರ ಸಾಧ್ಯವಾದೀತು ಎಂಬುವುದು ಅವರ ಅಚಲ ನಂಬಿಕೆಯಾಗಿತ್ತು.

ಡೆನ್ವರ್ ಬಳಿಯ ರೋಖೀ ಪರ್ವತಶ್ರೇಣಿಯಲ್ಲಿ ಉಗಮಿಸಿ ಇಳಿಜಾರಿನಲ್ಲಿ ರಭಸವಾಗಿ ಹರಿಯುವ 'ಕೊಲರಾಡೋ' ನದಿಯ ಕೋಟ್ಯಂತರ ವರ್ಷಗಳ ಕೊರೆತಗಳಿಂದ ಸೃಷ್ಟಿಯಾದ ಸಾವಿರಾರು ಅಡಿಗಳಷ್ಟು ಆಳದ 'ಗ್ರಾಂಡ್ ಕ್ಯಾನಿಯನ್' ಎಂದು ಪ್ರಸಿದ್ಧವಾದ ನಯನಮೋಹಕ ಕಣಿವೆಗಳ ಸುಂದರ ನಾಡು ಅದು. ಅಲ್ಲಿನ ಬಣ್ಣಬಣ್ಣದ ಮಣ್ಣು ಮತ್ತು ಕಲ್ಲು ಬಂಡೆಗಳ ಅಸಂಖ್ಯಾತ ಆಕರ್ಷಕ ಬೆಟ್ಟಗಳ ವೈಭವವನ್ನು, ಅವುಗಳ ಮೇಲಿನ ಸಹಜ ಚಿತ್ತಾರಗಳ ವೈಚಿತ್ರ್ಯವನ್ನು ಕಂಡು ನಿಬ್ಬೆರಗಾಗಿ, ಇಂತಹ ಅದ್ಭುತವನ್ನು ಸೃಷ್ಟಿಸಿದವನ ಮಹಿಮೆ ಅದೆಂಥದ್ದು!, ಎಂದು ದೇವರನ್ನು ನೆನೆದು ಕೊಂಡಾಡದವರಿಲ್ಲ! 'ಬಹುಚಿತ್ರಜಗತ್ ಬಹುಧಾಕರಣಾತ್ ಪರಶಕ್ತಿರನಂತಗುಣಃ ಪರಮಃ'

'ಮೌಂಟೈನ್ ಟೈಮ್ ಜೋ಼ನ್' ಎಂಬ ಬೆಟ್ಟಗಳ ವಲಯಕ್ಕೆ ಸೇರಿದ ಆ ಪ್ರದೇಶದಲ್ಲಿ ಸಪ್ತಗಿರೀಶ್ವರ ಶ್ರೀ ವೆಂಕಟೇಶ್ವರ ತಾನೇ ಬಂದು ನೆಲೆಸುವ ಸಂಕಲ್ಪ ಮಾಡಿದ್ದನೆಂದು ಕಾಣುತ್ತದೆ. ಅವನ ಪ್ರೇರಣೆಯಂತೆ, ಉಡುಪಿ ಕೃಷ್ಣನನ್ನು ನಿತ್ಯವೂ ಆರಾಧಿಸುವ, ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುವ ಶ್ರೀಗಳಿಗೆ ಅಲ್ಲಿ ಶ್ರೀನಿವಾಸನ ದೇಗುಲವನ್ನೇ ನಿರ್ಮಿಸಬೇಕೆನ್ನುವ ಬಯಕೆಯಾಯಿತು.

ಶ್ರೀಗಳ ನಡೆಯೇ ಒಂದು ಅದ್ಭುತ. ತಮ್ಮ ಪರಿಶುದ್ಧವಾದ ಅಂತಃಕರಣಲ್ಲಿ ಉಗಮಿಸುವ ಭಗವತ್ಪ್ರಚೋದನೆಯನ್ನು, ಸತ್ಸಂಕಲ್ಪವನ್ನು ತತ್‌ಕ್ಷಣಕ್ಕೆ ಕಾರ್ಯಗತ ಗೊಳಿಸಲೇಬೇಕೆನ್ನುವ ತುಡಿತ. ಮುಂದೆ ಸ್ವತಃ ಶ್ರೀಗಳೇ ಬೀದಿಗಿಳಿದು 'ಫೀನಿಕ್ಸ್' ನಗರದ ಸುತ್ತಮುತ್ತಲೆಲ್ಲ ತಿರುಗಿ ಬಹುತೇಕ ಭಾರತೀಯರೇ ನೆಲೆಸಿರುವ 'ಚಾಂಡ್ಲರ್' ಎಂಬ ಕಡೆ ಒಳ್ಳೆಯ ನಿವೇಶನದಲ್ಲಿರುವ ಮನೆಯೊಂದನ್ನು ಗುರುತಿಸಿದರು. ಆಶ್ಚರ್ಯವೆಂದರೆ ಆ ಮನೆಯ ಯಜಮಾನ ಅದನ್ನು ಮಾರಲು ಮುಂಚಿತವಾಗಿವೇ ಸಿದ್ಧನಾಗಿದ್ದು! ಸ್ಥಳೀಯ ಭಕ್ತವರ್ಗದ ಸಹಕಾರ, ಬ್ಯಾಂಕ್ ಸಾಲದ ಸಹಯೋಗದೊಂದಿಗೆ ಅದನ್ನು ಖರೀದಿಸಿಯೂ ಆಯಿತು! ಮುಂದಿನ ಪ್ರಕ್ರಿಯೆಗಳಿಗಾಗಿ ಪೂಜ್ಯ ಶ್ರೀಪಾದರು ತಮ್ಮ ಗುರುಗಳಾದ ಶ್ರೀ ಸುಜ್ಞಾನೇಂದ್ರ ತೀರ್ಥರ ಹೆಸರಿನಲ್ಲಿ 'ಸುಜ್ಞಾನ ಫೌಂಡೇಶನ್' ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ಅದರ ನಿರ್ವಹಣೆಗೆ ವಿಸ್ವಸ್ಥರನ್ನೂ ನೇಮಿಸಿದರು. ನಂತರ ಉಡುಪಿಯಿಂದ ಶ್ರೀದೇವಿ ಭೂದೇವಿ ಸಹಿತನಾದ ಶ್ರೀನಿವಾಸನ ಸುಂದರ ಪಂಚಲೋಹದ ಉತ್ಸವಮೂರ್ತಿಗಳನ್ನು ತರಿಸಿ ವಿಧಿವತ್ತಾಗಿ ಪ್ರತಿಷ್ಠಾಪಿಸಿದ್ದು 2000ನೇ ಇಸವಿಯಲ್ಲಿ.

ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಅಧ್ಯಯನ ನಡೆಸಿದ ವಿದ್ಯಾವಂತ, ನಿಷ್ಠಾವಂತ ಶಿಷ್ಯರನ್ನು ನಿತ್ಯಪೂಜೆಗೆಂದು ಮತ್ತು ನಿತ್ಯ ಅನ್ನದಾನಕ್ಕೆಂದು ಉಡುಪಿಯ ನುರಿತ ಅಡುಗೆಯವರನ್ನು ಅಲ್ಲಿ ನಿಯೋಜಿಸಿದ ಶ್ರೀಗಳು ಅಲ್ಲಿ ಶ್ರೀನಿವಾಸನ ಕೈಂಕರ್ಯ ಮತ್ತು ಭಕ್ತಸಮೂಹಕ್ಕೆ ಧರ್ಮೋಪದೇಶ, ಮಾರ್ಗದರ್ಶನದ ಸೇವೆ ನಿರಂತರ ನಡೆಯುವಂತೆ ನೋಡಿಕೊಂಡರು. ಒಂದಷ್ಟು ವರ್ಷಗಳು ಕಳೆದ ಮೇಲೆ ಅಲ್ಲಿ ಭಗವತ್ಸಾನ್ನಿಧ್ಯವೂ ವೃದ್ಧಿಸಿತು ಮತ್ತು ಬರುವ ಭಕ್ತರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿತು. ಜಾಗ ಚಿಕ್ಕದಾಯಿತು. ಮುಂದೆ ಅಲ್ಲೇ ಒಂದೈದು ಮೈಲಿ ದೂರದ 'ಟೆಂಪಿ' ಎಂಬಲ್ಲಿ ಸುಂದರ ಚರ್ಚ್ ಒಂದು ಖರೀದಿಸಲು ಲಭ್ಯವಿರುವ ವಿಚಾರ ತಿಳಿಯಿತು. ಕೂಡಲೇ ಕಾರ್ಯಪ್ರವೃತ್ತರಾದ ಅರ್ಚಕವರ್ಗ ಮತ್ತು ಭಕ್ತವೃಂದ ಶ್ರೀಗಳ ಮಾರ್ಗದರ್ಶನದಂತೆ ಸರ್ವ ಪ್ರಯತ್ನ ಮಾಡಿ ಆ ಜಾಗ ಶ್ರೀನಿವಾಸನಿಗೇ ಸಿಗುವಂತೆ ನೋಡಿಕೊಂಡರು.

ಆ ಹೊಸ ಜಾಗಕ್ಕೆ ಹೋಗಿ, ಅಲ್ಲಿ ಬೇಕಾದ ದುರಸ್ತಿ ಮತ್ತು ಅಭಿವೃದ್ಧಿಯ ವ್ಯವಸ್ಥೆಗಳನ್ನು ಮಾಡುತ್ತಿರುವಾಗಲೇ ಸುದ್ದಿಯೊಂದು ಬಂತು. ನ್ಯೂಯಾರ್ಕ್ ಕಡೆಯ ಉತ್ತರ ಭಾರತೀಯ ಭಕ್ತರೊಬ್ಬರು ಇದ್ದಕ್ಕಿದ್ದಂತೆ ಕರೆ ಮಾಡಿ, 'ನಾವು ಇಲ್ಲೊಂದು ದೇವಸ್ಥಾನ ಮಾಡುವ ಸಂಕಲ್ಪ ಮಾಡಿದ್ದೆವು. ಕಾರಣಾಂತರದಿಂದ ಆ ಪ್ರಯತ್ನ ಮುಂದುವರಿಯಲಿಲ್ಲ. ಆದರೆ ಅದಾಗಲೇ ಭಾರತದಲ್ಲಿ ಶ್ರೀನಿವಾಸನ ವಿಗ್ರಹನಿರ್ಮಾಣಕ್ಕೆ ಬೇಕಾದ ವ್ಯವಸ್ಥೆ ಮಾಡಿ ಸಾಕಷ್ಟು ಹಣ ಕೊಟ್ಟು ಬಂದಿದ್ದೆವು. ಈಗ ಆ ವಿಗ್ರಹವನ್ನು ಅವರು ಕಳಿಸಿಯೇ ಬಿಟ್ಟಿದ್ದಾರೆ. ನಮಗೇನು ಮಾಡಬೇಕೆಂದು ತೋಚಲಿಲ್ಲ. ಯಾರಿಂದಲೋ ನಿಮ್ಮ ಬಗ್ಗೆ ತಿಳಿಯಿತು. ಹಿಂದೆ ಮುಂದೆ ಯೋಚಿಸದೆ, ಯಾರನ್ನೂ ಕೇಳದೆ ವಿಗ್ರಹವನ್ನು ನಿಮ್ಮಲ್ಲಿಗೇ ಕಳುಹಿಸುವ ವ್ಯವಸ್ಥೆ ಮಾಡಿದ್ದೇವೆ. ಈವತ್ತೇ ತಲುಪಲಿದೆ ದಯವಿಟ್ಟು ಸ್ವೀಕರಿಸಿ' ಎಂದುಬಿಟ್ಟರು!

ಅಲ್ಲಿನ ವ್ಯವಸ್ಥಾಪಕರಿಗೆ ಮತ್ತು ಅರ್ಚಕರಿಗೆ ಭಯ ಮತ್ತು ಆತಂಕ! ಏನು ಮಾಡಬೇಕೆಂಬುದೇ ತೋಚಲಿಲ್ಲ! ಅಂತೂ ಅಲ್ಲಿಗೆ ಶ್ರೀನಿವಾಸ ಬಂದೇ ಬಿಟ್ಟಿದ್ದ ! ಬೃಹದಾಕಾರದ ಪೆಟ್ಟಿಗೆ ತೆರೆದು ನೋಡಿದರೆ ಆಳೆತ್ತರದ ಸುಂದರ ಶ್ರೀನಿವಾಸನ ಭವ್ಯವಾದ ಮೂರ್ತಿ! ಅತ್ಯಂತ ಆಕರ್ಷಕ ಮತ್ತು ನಯನ ಮನೋಹರ! ಮುಂದೆ ವಿಷಯತಿಳಿದ ಶ್ರೀಗಳು ಶ್ರೀನಿವಾಸನ ಮಹಿಮೆಗಳನ್ನು ನೆನೆದು ನಸುನಗುತ್ತಾ 'ಇನ್ನೇನೂ ಯೋಚಿಸಲಿಕ್ಕಿಲ್ಲ, ವಿಧ್ಯುಕ್ತವಾಗಿ ಅವನನ್ನು ಪ್ರತಿಷ್ಠಾಪಿಸಲು ಸಿದ್ಧರಾಗೋಣ' ಎಂದರು. ಮುಂದೆ ಕೆಲವೇ ತಿಂಗಳುಗಳಲ್ಲಿ ಗರ್ಭಗುಡಿಯ ನಿರ್ಮಾಣದಿಂದ ಹಿಡಿದು, ಬ್ರಹ್ಮಕಲಶಪೂರ್ವಕ ಪ್ರತಿಷ್ಠೆಗೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಯಿತು. ಶ್ರೀನಿವಾಸನ ಅನುಗ್ರಹದಿಂದ ಪವಾಡಸದೃಶವೆಂಬಂತೆ ಎಲ್ಲವೂ ಸಕಾಲದಲ್ಲಿ ಸಂಗೋಪಾಂಗವಾಗಿ ಸಂಪನ್ನಗೊಂಡಿತು. 2011ನೇ ಇಸವಿಯ ಜೂನ್ ತಿಂಗಳಲ್ಲಿ ಸ್ವತಃ ಶ್ರೀಗಳೇ ಫೀನಿಕ್ಸಿಗೆ ಚಿತ್ತಸಿ ಶ್ರೀನಿವಾಸನ ಪ್ರಾಣಪ್ರತಿಷ್ಠೆಯನ್ನು ಅನೇಕ ವಿದ್ವಾಂಸರ ಸಹಯೋಗದಲ್ಲಿ ವಿಧ್ಯುಕ್ತವಾಗಿ ನೆರವೇರಿಸಿದರು.

# ಗುರುಗಳ ಸೇವೆಯಿಂದ ವೃತ್ತಿಸಾರ್ಥಕ್ಯ



**ಶ್ರೀ ರಾಜೇಂದ್ರ ಕಾರಂತ್**
ಶ್ರೀಕೃಷ್ಣ ವೃಂದಾವನ
ನ್ಯೂಜೆರ್ಸಿ, ಚಿಕಾಗೋ, ಲಂಡನ್ ಮತ್ತು ಫೀನಿಕ್ಸ್
Arizona, USA

ವೃಕ್ಷದಿಂದುದುರಿದ ಪಾರಿಜಾತ ಹೂವಿಗೆ ದೇವರ ಪಾದವನ್ನು ಸೇರುವ ಯೋಗವಿದ್ದರೆ, ಯೋಗ್ಯತೆಯಿದ್ದರೆ ಯಾರಾದರೂ ಅದನ್ನು ಸಕಾಲದಲ್ಲಿ ಹೆಕ್ಕಿ ತಂದು ದೇವರ ಪೂಜೆಗೆಂದು ಒಪ್ಪಿಸುತ್ತಾರಂತೆ. ಹಾಗೆಯೇ ಅಂತಹ ಯೋಗಬಲದಿಂದಾಗಿಯೇ ಗುರುಗಳ ಅನುಗ್ರಹಕ್ಕೆ ಭಾಜನನಾದ ಬಹುದೊಡ್ಡ ಭಾಗ್ಯ ನನ್ನದು. ಲೌಕಿಕ ವಿದ್ಯಾಭ್ಯಾಸವನ್ನು ಒಂದು ಹಂತಕ್ಕೆ ಮುಗಿಸಿ ಪರಂಪರಾಗತ ಪಾಚಕ ವೃತ್ತಿಯಲ್ಲೇ ನೆಲೆಗೊಳ್ಳಲು ಹವಣಿಸುತ್ತಿದ್ದ ನನಗೆ, ಶ್ರೇಷ್ಠಗುರುಗಳು ಮತ್ತು ನನ್ನ ಜೀವನೋದ್ಧಾರಕರೂ ಆದ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥರ ಚರಣಕಮಲಗಳ ಸ್ಪರ್ಶ ಮಾಡಿಸಿದ ನನ್ನ ಹಿತೈಷಿಗಳಿಗೆ ಆದ್ಯ ನಮನಗಳು.

ಪೂಜ್ಯ ಶ್ರೀಪಾದರನ್ನು ಹತ್ತಿರದಿಂದ ಕಂಡದ್ದು ಮತ್ತು ಅವರ ಸೇವೆ ಮಾಡಿದ್ದು ನಾನು ಪಾಚಕನಾಗಿ ಅಮೇರಿಕಾದ ಫೀನಿಕ್ಸ್‌ಗೆ ಬಂದ ಮೇಲೆಯೇ. ಅದಕ್ಕೂ ಮುನ್ನ ಅವರನ್ನು ಭೇಟಿ ಮಾಡಿ ಅವರ ಆಶೀರ್ವಾದ ಮಂತ್ರಾಕ್ಷತೆಗಳನ್ನು ಪಡೆಯುವ ಅವಕಾಶಗಳು ಒಂದೆರಡು ಸಲ ಸಿಕ್ಕಿದ್ದವು. ಆದರೆ ಆಗಲೇ ತಮ್ಮ ಅಪೂರ್ವ ಸಾಹಸಮಯ ಧರ್ಮಪ್ರಚಾರ, ವಿದೇಶಗಳಲ್ಲಿ ಮಠಗಳ ಸ್ಥಾಪನೆ ಇತ್ಯಾದಿ ದೊಡ್ಡ ದೊಡ್ಡ ಸಾಧನೆಗಳಿಂದ ವಿಶ್ವವಂದ್ಯರಾಗಿ ಪ್ರಸಿದ್ಧರಾಗಿದ್ದ ಗುರುಗಳ ಬಗ್ಗೆ ನನಗೆ ಚೆನ್ನಾಗಿ ಗೊತ್ತಿತ್ತು. ಅಪಾರ ಗೌರವೂ ಇತ್ತು. ಅಂದು ಫೀನಿಕ್ಸ್‌ನಲ್ಲಿ ಮೊದಲ ಬಾರಿಗೆ ಗುರುಗಳ ಸಂಸ್ಥಾನ ಶ್ರೀ ವಿಜಯವಿಠ್ಠಲದೇವರ ಮಹಾನೈವೇದ್ಯ ಮತ್ತು ಶ್ರೀಗಳ ಭಿಕ್ಷೆಗೆ ಅಡುಗೆ ಮಾಡುವ ಅವಕಾಶ ದೊರಕಿದಾಗ ಭಯಭಕ್ತಿಗಳಿಂದ ಭಾವುಕನಾಗಿದ್ದೆ. ನನ್ನ ಪೂರ್ವಪರಂಪರೆಯ

ಕೊಡುಗೆಯಾದ ಪಾಚಕ ವೃತ್ತಿಯೆಂಬ ಪುಣ್ಯಕಾರ್ಯದ ನೈಜ ಧನ್ಯತೆಯನ್ನು, ಸಂತೃಪ್ತಿಯನ್ನು ನಾನು ಅಂದು ಮೊದಲಬಾರಿಗೆ ಅನುಭವಿಸಿದ್ದೆ.

ಅಡುಗೆಯವರ ಬಗ್ಗೆ ಸಾಮಾನ್ಯವಾಗಿ ಜನರು ತಾತ್ಸಾರ ಭಾವವನ್ನು ತೋರುವುದನ್ನು ಊರಿನಲ್ಲಿದ್ದಾಗ ಅನೇಕ ಬಾರಿ ಗಮನಿಸಿದ್ದೆ. ಅದಕ್ಕೆ ಬಹಳ ಕಾರಣಗಳೂ ಇವೆ. ವೃತ್ತಿಪರರಾದ ನಮ್ಮವರೂ ಸಾಕಷ್ಟು ಕಲಿಯಬೇಕಾಗಿದೆ. ಜನರ ಚಿಂತನೆಗಳು ಮಾತ್ರವಲ್ಲ ನಾವೂ ಕಾಲಕ್ಕೆ ತಕ್ಕಂತೆ ಬದಲಾಗಬೇಕಾಗಿದೆ, ಇರಲಿ. ಆದರೆ ಪೂಜ್ಯ ಶ್ರೀಪಾದರು ಮಾಡಿದ ಕ್ರಾಂತಿಯು ಕೇವಲ ವೈದಿಕ, ಧಾರ್ಮಿಕ ವೃತ್ತಿಯವರನ್ನು ಮಾತ್ರ ಉದ್ಧರಿಸಿದ್ದಲ್ಲ. ನನ್ನಂತಹ ಪಾಚಕ ಪರಂಪರೆಯವರಿಗೂ ನಮ್ಮ ಸಮುದಾಯದಲ್ಲಿ ಉನ್ನತ ಸ್ಥಾನಮಾನದ ಗೌರವ ದೊರಕುವಂತೆ ಮಾಡಿದೆ ಎಂದರೆ ತಪ್ಪಾಗದು. ಅದಕ್ಕೆ ನನ್ನ ಅನುಭವಗಳೇ ಸಾಕ್ಷಿ. ಗುರುಗಳ ಆಶೀರ್ವಾದ ಮತ್ತು ಅವರ ಆದೇಶದಂತೆ ನಾನು ಅಮೇರಿಕಾದಲ್ಲಿ ಮೊದಲು ಸೇವೆಗೆ ನಿಯುಕ್ತನಾದದ್ದು ಫೀನಿಕ್ಸ್‌ನಲ್ಲಿ.

ತದನಂತರ ಚಿಕಾಗೋ, ಲಂಡನ್ ಮತ್ತು ಪ್ರಸ್ತುತ ನ್ಯೂಜೆರ್ಸಿಯಲ್ಲಿ ನನ್ನ ನಿತ್ಯ ಕೈಂಕರ್ಯ ನಡೆಯುತ್ತಿದೆ. ಬಂದ ಭಕ್ತರೆಲ್ಲರಿಗೂ ಶುಚಿ ರುಚಿಯಾದ ಉಚಿತ ಅನ್ನಪ್ರಸಾದದ ವ್ಯವಸ್ಥೆಯಾಗಬೇಕೆಂಬ ಪೂಜ್ಯರ ಸಂಕಲ್ಪವೇ ಅದ್ಭುತವಾದದ್ದು. ನಾನು ಕೇಳಿ ತಿಳಿದಂತೆ ಅಮೇರಿಕಾ ದೇಶದಲ್ಲಿ ಮೊತ್ತ ಮೊದಲಬಾರಿಗೆ ಮಡಿ ಅಡುಗೆಯ ನೈವೇದ್ಯ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿ ಉಚಿತ ಅನ್ನಸಂತರ್ಪಣೆ ಎಂಬ ವ್ಯವಸ್ಥೆಯನ್ನು ಪರಿಚಯಿಸಿದವರೇ ಪೂಜ್ಯ ಪುತ್ತಿಗೆ ಶ್ರೀಪಾದರಂತೆ. ಹಾಗಾಗಿ ಇಲ್ಲಿನ ಎಲ್ಲ ಶಾಖೆಗಳಲ್ಲೂ ದೇವರ ದರ್ಶನ, ಸೇವೆಗೆಂದು ಬರುವ ಮತ್ತು ತದನಂತರ ಪ್ರಸಾದ ಸ್ವೀಕರಿಸುವ ಭಕ್ತರಿಗೆ ಗುರುಗಳೆಂದರೆ ಅಪಾರ ಗೌರವ. ಪೂಜ್ಯ ಗುರುಗಳ ಆಶಯದಂತೆ ನಿತ್ಯ ಸೇವೆ ಸಲ್ಲಿಸುವ ನಮ್ಮ ಜೊತೆಗೂ ಇಲ್ಲಿನ ಭಕ್ತರು ಅಪಾರ ಪ್ರೀತಿ ಗೌರವಗಳೊಂದಿಗೆ ವ್ಯವಹರಿಸುತ್ತಾರೆ. ಇಲ್ಲಿ ಪಾಚಕರಿಗೂ ಕಾಲು ಮುಟ್ಟಿ ನಮಸ್ಕರಿಸುವ, ಅರ್ಚಕವರ್ಗದವರಿಗೆ ಸಲ್ಲುವಷ್ಟೇ ಗೌರವಗಳನ್ನು ನಮಗೂ ಸಲ್ಲಿಸುವ ಭಕ್ತರನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಇಂತಹ ಸಂಸ್ಕಾರ, ಸಂಪ್ರದಾಯಗಳಿಗೆ ಅಮೇರಿಕಾದಂತಹ ಆಧುನಿಕ ದೇಶಗಳಲ್ಲೂ ಭದ್ರಬುನಾದಿಯನ್ನು ಹಾಕಿದ ಪೂಜ್ಯ ಶ್ರೀಪಾದರ ಬಗ್ಗೆ

ಹೆಮ್ಮೆಯೆನಿಸುತ್ತದೆ. ಜೊತೆಗೆ ಗುರುಗಳ ಆಶಯಕ್ಕೆ ಮತ್ತು ಸ್ಥಳೀಯ ಭಕ್ತರ ಭಕ್ತಿಶ್ರದ್ಧೆವಿಶ್ವಾಸಗಳಿಗೆ ಕಿಂಚಿತ್ತೂ ಮೋಸವಾಗದಂತೆ ನಾನೂ ನಡೆದುಕೊಳ್ಳಬೇಕು, ಇನ್ನಷ್ಟು ಉತ್ಕೃಷ್ಟವಾಗಿ ನನ್ನ ಸೇವೆಗಳನ್ನು ಸಲ್ಲಿಸಬೇಕು. ಜಪತಪಾದಿ ಅನುಷ್ಠಾನಗಳನ್ನು ಇನ್ನೂ ಶ್ರದ್ಧೆಯಿಂದ ಮಾಡಬೇಕು ಮತ್ತು ಹರಿಗುರುಗಳ ಸೇವೆಯನ್ನು ಜೀವನ ಪರ್ಯಂತ ಹೀಗೇ ಭಕ್ತಿಯಿಂದ ಮುಂದುವರಿಸಬೇಕು ಎಂಬ ನನ್ನ ಅಂತರಾಳದ ಆಸೆ ಇನ್ನಷ್ಟು ಜಾಗ್ರತವಾಗುತ್ತದೆ.

●



EDISON- NEW JERSEY



**EDISON- NEW JERSEY**

# ಉಡುಪಿ ಕೃಷ್ಣ ನ್ಯೂಜೆರ್ಸಿಗೆ ಬಂದ ಕತೆ

"**ನ್ಯೂ**ಜೆರ್ಸಿ" ಅಂದರೆ ನವ ವೃಂದಾವನ. ಸೃಷ್ಟಿಕರ್ತನ ಸಂಪೂರ್ಣ ಕೃಪೆಯಿಂದ ಪ್ರಕೃತಿಮಾತೆಗೆ ಇಲ್ಲಿ ನಿತ್ಯೋತ್ಸವ. ಫಲವತ್ತಾದ ಮಣ್ಣು, ಸಮೃದ್ಧ ಮಳೆ, ಎಲ್ಲೆಡೆ ಕಾಣುವ ವಿಸ್ತಾರವಾದ ಜೋಳದ ಗದ್ದೆಗಳು, ಬೇಸಿಗೆಯಲ್ಲಿ ಫಲ ಕೊಡುವ ಸೇಬು, ಕಿತ್ತಳೆ, ಪ್ಲಮ್, ಪೀಚ್, ಚೆರ್ರಿ, ಸ್ಟ್ರಾಬೆರಿ ಇತ್ಯಾದಿ ರಸಭರಿತ ಹಣ್ಣುಗಳ ಕಣ್ಮನ ಸೆಳೆಯುವ ಸುಂದರ ತೋಟಗಳು. ಎಲ್ಲಿ ನೋಡಿದರಲ್ಲಿ ಹರಿದ್ವರ್ಣದ ಮತ್ತು ಕಾಲ ಕಾಲಕ್ಕೆ ಕಾಮನಬಿಲ್ಲಿನಂತಹ ಬಣ್ಣಗಳಿಂದ ಕಂಗೊಳಿಸುವ ವೃಕ್ಷಸಂಕುಲಗಳು, ಕಪ್ಪು, ಕಂದುಬಣ್ಣದ ಕರಡಿಗಳು ಮನೆಮಾಡಿರುವ ದಟ್ಟ ಕಾನನಗಳು, ಚಳಿಗಾಲದಲ್ಲಿ ಇಲ್ಲಿಯ ನೆಲಕ್ಕೆ ಮತ್ತು ಗಿಡಮರಗಳಿಗೆ ಶುಭ್ರಹಿಮದ ಅಚ್ಚ ಬಿಳಿಯ ಹಾಸು ಹೊದಿಕೆಗಳು. ಸದಾಕಾಲ ತುಂಬಿ ಹರಿಯುತ್ತಿರುವ ಹಡ್ಸನ್, ರಾರಿಟನ್ ಇತ್ಯಾದಿ ಅನೇಕ ಗಂಭೀರ ನದಿಗಳು, ಸದಾ ತನ್ನ ಅಲೆಗಳಿಂದ ಇಲ್ಲಿನ ನೆಲವನ್ನು ಅಪ್ಪಳಿಸಿ, ಆಲಿಂಗಿಸಿ ಓಲೈಸುವ ಅಟ್ಲಾಂಟಿಕ್ ಮಹಾಸಾಗರ. ಕಾಡುನಾಡಿನೆಲ್ಲಡೆ ನಿರ್ಭಯವಾಗಿ ಓಡಾಡುವ ಅಸಂಖ್ಯ ಜಿಂಕೆಗಳು, ಮೊಲಗಳು, ಮನೆಮನೆಗಳ ಮುಂದೆ ಚಿಲಿಪಿಲಿಗುಡುತ್ತ ಸುತ್ತಾಡುವ ಗುಬ್ಬಚ್ಚಿಗಳು ಮತ್ತು ಹಲವು ಬಗೆಯ ಹಕ್ಕಿಗಳು, ಜೆರ್ಸಿ ಎಂದೇ ಪ್ರಸಿದ್ಧವಾದ ತಳಿಯ ಬೃಹತ್ ಗಾತ್ರದ ಸುದೃಢಕಾಯದ ಹಸುಗಳು, ಇಂತಹ ನ್ಯೂಜೆರ್ಸಿ ಎಂಬ ಸಹಜ ಸೌಂದರ್ಯದ ರಾಜ್ಯಕ್ಕೆ ಗೆ ಅಮೇರಿಕಾ ದೇಶದ "ಗಾರ್ಡನ್ ಸ್ಟೇಟ್" ಎನ್ನುವ ಅಧಿಕೃತವಾದ ಬಿರುದು. ಲಕ್ಷಗಟ್ಟಲೆ ಭಾರತೀಯರು, ಭಗವದ್ಭಕ್ತರು ಅದಾಗಲೇ ಬಂದು ಸೇರಿರುವ ಈ ಸುಂದರ ವೃಂದಾವನಕ್ಕೆ ನಮ್ಮ ಉಡುಪಿಯ ಕೃಷ್ಣ ಬರದಿರುತ್ತಾನೆಯೇ?

ಅಂದು ದ್ವಾಪರದಲ್ಲಿ ದೇವಕಿ ವಸುದೇವರನ್ನು ಹರಸಲೆಂದೇ ಕೃಷ್ಣ ಮಥುರೆಯಲ್ಲಿ ಅವತರಿಸಿದ, ಕಂಸನನ್ನು ಕೊಂದು ಮಥುರೆಯ ಮಹಾಜನತೆಯನ್ನು ಉದ್ಧರಿಸಿದ, ನಂದಗೋಪ ಯಶೋದೆಯರನ್ನು ಆನಂದಿಸಲೆಂದೇ ವೃಂದಾವನದಲ್ಲಿ ಬೆಳೆದ, ಅಲ್ಲಿನ ಗೋಪ ಗೋಪಿಕೆಯರ ಒಡನಾಡಿ ಅವರನ್ನೂ ಉದ್ಧರಿಸಿದ. ತನ್ನ ಅಸಂಖ್ಯಾತ

ಭಕ್ತರನ್ನು ರಕ್ಷಿಸಲೆಂದೇ ಸಮುದ್ರದಲ್ಲಿ ದ್ವಾರಕೆಯೆಂಬ ಮಹಾ ಸಾಮ್ರಾಜ್ಯವನ್ನು ನಿರ್ಮಿಸಿದ. ಅಲ್ಲಿ ಸಜ್ಜನರೆಲ್ಲರಿಗೂ ಆಶ್ರಯ ನೀಡಿ ಅವರನ್ನು ಪೋಷಿಸಿದ. ಮುಂದೆ ಕಲಿಯುಗದಲ್ಲಿ, ಆಚಾರ್ಯ ಮಧ್ವರ ಕರೆಗೆ ಓಗೊಟ್ಟು ದ್ವಾರಕೆಯಲ್ಲಿದ್ದ ಕೃಷ್ಣ ಕಡಲು ದಾಟಿ ಉಡುಪಿಗೆ ಬಂದ. ಆ ನೆಲದ ಸಮಸ್ತ ಭಕ್ತರಿಗೂ ವರದಾಯಿಕನಾಗಿ ಮೆರೆದು ನಿಂದ. ಹೀಗೆ ಮಹಾಮಹಿಮರ, ಮಹಾಪುಣ್ಯವಂತರ ಪ್ರೀತಿಯ ಕರೆಗೆ ಮಾತ್ರ ಒಲಿದು ಬರುವ, ಭಕ್ತರೆಲ್ಲರನ್ನು ಉದ್ಧರಿಸುವ ಕೃಷ್ಣನನ್ನು ನ್ಯೂಜೆರ್ಸಿಗೆ ಕರೆತರುವ ಸಂಕಲ್ಪ ಮಾಡಿದವರು ಉಡುಪಿ ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು.

ಪೂಜ್ಯ ಶ್ರೀಪಾದರು ಮಹಾನ್ ಸಾಧಕರು. ಧರ್ಮಸಂಸ್ಥಾಪನೆಯನ್ನೇ ತಮ್ಮ ಜೀವನದ ಧ್ಯೇಯವಾಗಿಸಿಕೊಂಡು ಆ ನಿಟ್ಟಿನಲ್ಲಿ ಅವಿರತವಾಗಿ ಶ್ರಮಿಸುವ ಪ್ರತಿಜ್ಞೆ ತೊಟ್ಟವರು. ಹದಿಹರೆಯಲ್ಲೇ ಸನ್ಯಾಸ ಸ್ವೀಕರಿಸಿದರು. ಹದಿಮೂರನೇ ವಯಸ್ಸಿಗೇ ಪ್ರಥಮ ಪರ್ಯಾಯ ನಡೆಸಿ ಉಡುಪಿ ಕೃಷ್ಣನನ್ನು ಪೂಜಿಸಿದ ಕೀರ್ತಿ ಅವರದ್ದು. ಇಪ್ಪತ್ತೊಂಭತ್ತರ ಹರೆಯದಲ್ಲಿ ಕೃಷ್ಣಪೂಜೆಯ ಎರಡನೇ ಪರ್ಯಾಯವನ್ನು ಅಭೂತಪೂರ್ವವಾಗಿ ನಡೆಸಿದರು. ಲಕ್ಷಗೀತಾ ಲೇಖನಯಜ್ಞ, ಗೀತಾಮಂದಿರ ನಿರ್ಮಾಣ ಇತ್ಯಾದಿ ಅನೇಕ ಅದ್ಭುತ ಸಾಧನೆಗಳಿಂದ ಇವರ ಕೀರ್ತಿ ಪತಾಕೆ ನೇಪಾಳದವರೆಗೂ ಪಸರಿಸಿತು. ಸ್ವತಃ ನೇಪಾಳದ ರಾಜನೇ ತನ್ನ ಪರಿವಾರ ಸಮೇತ ಉಡುಪಿಗೆ ಬಂದು ಪೂಜ್ಯ ಶ್ರೀಪಾದರನ್ನು ಗೌರವಿಸಿದ್ದು ಒಂದು ಇತಿಹಾಸ.

ಇಂತಹ ಅನನ್ಯ ಸಾಧಕ ಯತಿಗಳ ಮೂಲಕವೇ ವಿದೇಶದಲ್ಲಿ ತನ್ನ ಪ್ರತಿಷ್ಠಾಪನೆಯನ್ನು ಬಯಸಿದ ಶ್ರೀಕೃಷ್ಣ, ಪೂಜ್ಯರಿಗೆ "ವಿದೇಶ ಪ್ರಯಾಣ" ಎಂಬ ಈ ಧೀರೋದಾತ್ತ ನಿರ್ಣಯ ಕೈಗೊಳ್ಳುವ ಪ್ರೇರಣೆಯಿತ್ತದ್ದು 29 ವರ್ಷಗಳ ಹಿಂದೆ, 1997ನೇ ಇಸವಿಯ ಜೂನ್ ತಿಂಗಳಲ್ಲಿ. ಉಡುಪಿ ಮಾತ್ರವಲ್ಲದೆ, ಭಾರತದಾದ್ಯಂತ ಸಾಂಪ್ರದಾಯಿಕ ಮಠಮಂದಿರಗಳ ಆಸ್ತಿಕ ವಲಯ ಮತ್ತು ಕರ್ಮಠ ಭಕ್ತವರ್ಗದ

'ಯತಿಗಳು ಸಮುದ್ರ ದಾಟಬಾರದು' ಎಂಬ ನಂಬಿಕೆಯನ್ನು ಅಲ್ಲೋಲ ಕಲ್ಲೋಲಗೊಳಿಸಿದ ಮಹತ್ ತೀರ್ಮಾನವದು! ಅದರಿಂದ ಸಾಕಷ್ಟು ವಿರೋಧಗಳನ್ನು ಮತ್ತು ಸಂಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾಯಿತು. ಪೂಜ್ಯರಿಗೆ ಕೆಲವೆಡೆ ಬಹಿಷ್ಕಾರವನ್ನೂ ಹಾಕಲಾಯಿತು. ಅಪಮಾನ, ಅಪಪ್ರಚಾರಗಳನ್ನೂ ಸಹಿಸಿಕೊಳ್ಳಬೇಕಾಯಿತು. ಇದೆಲ್ಲದಕ್ಕೂ ಎದೆಯೊಡ್ಡಿ ತಮ್ಮ ದೃಢಸಂಕಲ್ಪದಿಂದ ಒಂದಿನಿತೂ ಹಿಂದೆ ಸರಿಯಾದ ಶ್ರೀಪಾದರ ಜೈತ್ರ ಯಾತ್ರೆಯಂತೂ ಮುಂದುವರಿಯುತ್ತಲೇ ಹೋಯಿತು. ಕಟ್ಟುನಿಟ್ಟಿನ ನಿತ್ಯಾನುಷ್ಠಾನ, ಪ್ರಯಾಣಕಾಲದ ಪ್ರಯಾಸ–ಉಪವಾಸಗಳ ಜೊತೆಗೆ ಚಾತುರ್ಮಾಸ್ಯಾದಿ ಕಠಿಣವ್ರತಗಳ ಆಚರಣೆ, ನಿರಂತರ ಪಾಠ ಪ್ರವಚನ ಇದು ಪೂಜ್ಯ ಶ್ರೀಗಳ ದೈನಂದಿನ ಕಾರ್ಯಾಚರಣೆ. ಹೀಗೆಯೇ ತಮ್ಮ ಶಿಷ್ಯವೃಂದದವರೊಂದಿಗೆ ಅಮೇರಿಕಾದ ಉದ್ದಗಲಕ್ಕೂ ಸಂಚರಿಸಿದ ಶ್ರೀಗಳಿಗಿದ್ದದ್ದು ಒಂದೇ ಧ್ಯೇಯ. ಅದು ಧರ್ಮ ಸಂಸ್ಥಾಪನೆ! ಅದಾಗಲೇ ಈ ದೇಶದಲ್ಲಿ ಬಂದು ನೆಲೆಸಿದ್ದ ಲಕ್ಷಾಂತರ ಭಾರತೀಯರಲ್ಲಿ ಮತ್ತು ಅವರ ಮಕ್ಕಳಲ್ಲಿ ಧರ್ಮ ಜಾಗೃತಿ ಮೂಡಿಸುವುದು, ತಾಯ್ನುಡಿಯ ಜೊತೆಗೆ ತಾಯ್ನಾಡಿನ ಸಂಸ್ಕೃತಿಯನ್ನೂ ಇಲ್ಲಿನ ನೆಲದಲ್ಲೂ ಉಳಿಸಿ ಬೆಳೆಸುವುದು ಶ್ರೀಗಳ ಗುರಿಯಾಗಿತ್ತು. ಅದಕ್ಕೋಸ್ಕರ ವಿದೇಶಗಳಲ್ಲೂ ಧರ್ಮಸಂಸ್ಥೆಗಳ ಸಂಸ್ಥಾಪನೆಯಾಗುವುದು ಅನಿವಾರ್ಯವಾಗಿತ್ತು. ಅದರ ಫಲಶ್ರುತಿಯೇ ಈಗಿನ ಜನಪ್ರಿಯ ಮತ್ತು ವಿಶ್ವವಿಖ್ಯಾತ "ಶ್ರೀಕೃಷ್ಣವೃಂವದಾನ"!

ನ್ಯೂಜೆರ್ಸಿಯಲ್ಲಿ ಶ್ರೀಕೃಷ್ಣ ವೃಂದಾವನ ಚಾಲನೆಗೊಂಡಿದ್ದು 2002ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ. ಆಚಾರ–ಅನುಷ್ಠಾನವಂತ ಭಕ್ತರ ಮನೆಮನೆಗಳಲ್ಲಿ ವಾಸ್ತವ್ಯ ಹೂಡಿ, ಹಬ್ಬ ಹರಿದಿನಗಳ ಪೂಜೆಗಳನ್ನು ಆಚರಿಸಿಕೊಂಡು ಪೂಜ್ಯ ಶ್ರೀಪಾದರು ಎಲ್ಲೆಲ್ಲೋ ಚದುರಿಕೊಂಡಿದ್ದ ಭಾರತೀಯರನ್ನು, ಭಕ್ತರನ್ನು ಒಂದುಗೂಡಿಸಿದರು. ಹಲವೆಡೆ ಪೂಜೆಗಳನ್ನು ಆಚರಿಸಿಕೊಂಡು ಪೂಜ್ಯ ಶ್ರೀಪಾದರು ಎಲ್ಲೆಲ್ಲೋ ಚದುರಿಕೊಂಡಿದ್ದ ಭಾರತೀಯರನ್ನ, ಭಕ್ತರನ್ನು ಒಂದುಗೂಡಿಸಿದರು. ಹಲವೆಡೆ ಪಾಠಪ್ರವಚನಗಳನ್ನು ನಡೆಸಿದರು. ಭಜನೆ, ಹರಿಕತೆ, ಪೂಜೆ, ಹೋಮ ಹವನಗಳು

ಇತ್ಯಾದಿ ಅನೇಕ ವಿಶೇಷ ಕಾರ್ಯಕ್ರಮಗಳಿಂದ ಜನರೂ ಆಕರ್ಷಿತರಾದರು. ಸಂಸ್ಥೆಯ ಇಂತಹ ನಿರಂತರ ಚಟುವಟಿಕೆಗಳಿಗೆ ಆಶ್ರಯತಾಣವಾಗಿ ಒಂದು ಮಂದಿರದ ನಿರ್ಮಾಣವಾಗಬೇಕು ಮತ್ತು ಅದಕ್ಕೆ ಭಾರತೀಯರೇ ಅಧಿಕ ಸಂಖ್ಯೆಯಲ್ಲಿರುವ 'ಎಡಿಸನ್' ನಗರವೇ ಪ್ರಶಸ್ತವಾದ ಸ್ಥಳ ಎಂಬುದಾಗಿ ಎಲ್ಲರೂ ಪ್ರಾರ್ಥಿಸಿದಂತೆ ಪೂಜ್ಯ ಶ್ರೀಪಾದರು ತೀರ್ಮಾನಿಸಿದರು. ಇಲ್ಲಿನ ಸುಪ್ರಸಿದ್ಧ "ಓಕ್ಟ್ರೀ' ರಸ್ತೆಯ ಸಮೀಪದಲ್ಲೇ ಒಂದು ಪುಟ್ಟ ಮನೆಯನ್ನು ಖರೀದಿಸಿ ಅಲ್ಲಿ ಉಡುಪಿ ಕೃಷ್ಣನ ಪಂಚಲೋಹದ ಪುಟ್ಟ ಪ್ರತಿಮೆ, ಪ್ರಾಣದೇವರ ವಿಗ್ರಹ ಮತ್ತು ಬೆಳ್ಳಿಯ ವೃಂದಾವನದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಮೃತ್ತಿಕೆಯನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಲಾಯಿತು. ಆ ಸಂದರ್ಭದಲ್ಲಿ ಅನಿವಾರ್ಯ ಮತ್ತು ಅತ್ಯಗತ್ಯ ಖರ್ಚು ವೆಚ್ಚಗಳನ್ನು ಸರಿದೂಗಿಸಲು ನೂರಾರು ಭಕ್ತರು ತಮ್ಮ ತಮ್ಮ ಕೈಲಾದ ಕಿರು ಕಾಣಿಕೆಯನ್ನು ಸಲ್ಲಿಸುವ ಮೂಲಕ ಸಂಪೂರ್ಣ ಸಹಕಾರ ನೀಡಿದರು. ಅಂದಿನಿಂದ ಆರಂಭಗೊಂಡ ನಿತ್ಯಪೂಜೆ ಮತ್ತು ಬಂದ ಭಕ್ತರಿಗೆ ಪ್ರಸಾದ ರೂಪವಾಗಿ ಸಾಂಪ್ರದಾಯಿಕ ಕ್ರಮದಲ್ಲಿ ಕೂಡ್ರಿಸಿ ಬಡಿಸುವ ರುಚಿಕಟ್ಟಾದ ಉಡುಪಿಯ ಊಟ, ಅನ್ನಸಂತರ್ಪಣೆ ಎಂದೆಂದಿಗೂ ನಿಲ್ಲಬಾರದು ಎಂದು ಸಂಕಲ್ಪಿಸಿದ ಶ್ರೀಗಳು ಈ ಕೈಂಕರ್ಯಕ್ಕೆ ತಮ್ಮ ಶಿಷ್ಯರನ್ನು ನಿಯೋಜಿಸಿ ತಮ್ಮ ಧರ್ಮಪ್ರಚಾರ ವಿಶ್ವಪರ್ಯಟನೆಯನ್ನು ಮುಂದುವರೆಸಿದರು. ಅದರ ಫಲವಾಗಿ ಫೀನಿಕ್ಸ್, ಲಾಸ್ ಏಂಜಲೀಸ್, ಹ್ಯೂಸ್ಟನ್ ಸ್ಯಾನ ಹೋಸೆ, ಟೊರೊಂಟೊ, ಮೆಲ್ಬೋರ್ನ್ ಮತ್ತು ಲಂಡನ್ ನಗರಗಳಲ್ಲೂ ಶ್ರೀಕೃಷ್ಣ ವೃಂದಾವನದ ಶಾಖೆಗಳು ಪ್ರಾರಂಭಗೊಂಡವು.

ಉದ್ಯೋಗವನ್ನರಸಿಕೊಂಡು ತಾಯ್ನೆಲದಿಂದ ಸಾವಿರಾರು ಮೈಲಿ ದೂರಬಂದು, ಸಂಸಾರ ಸಮೇತರಾಗಿ ಇಲ್ಲೇ ನೆಲೆಗೊಂಡ ಭಕ್ತರಿಗೆ ಸ್ವರ್ಗಲೋಕವೇ ಮನೆ ಬಾಗಿಲಿಗೆ ಇಳಿದು ಬಂದಂತಾಯಿತು. ಎಲ್ಲ ಹಬ್ಬಗಳನ್ನು, ಪೂಜೆ ಪ್ರವಚನಗಳನ್ನು, ರುಚಿಕಟ್ಟಾದ ಮನೆಯೂಟವನ್ನು, ಮಾತೃಭಾಷೆಯನ್ನು, ಮನಸಾರೆ ನಂಬಿದ ದೇವರ–ಗುರುಗಳ ಸಾನ್ನಿಧ್ಯವನ್ನು, ಸಾಮೀಪ್ಯವನ್ನು ಕಳೆದುಕೊಂಡು ಪರಿತಪಿಸುತ್ತಿದ್ದ ಭಕ್ತರಿಗೆ ಮತ್ತೆ ಎಲ್ಲವೂ ಕೈಯಳತೆಯಲ್ಲೇ ಸಿಗುವಂತಾಯ್ತು. ಅಂದಿನಿಂದ ಆರಂಭಿಸಿ ಇಂದಿನವರೆಗೂ

ಆ ಕೃಷ್ಣನನ್ನು ನಿರಂತರವಾಗಿ ಪೂಜಿಸಿಕೊಂಡು, ಪಾಠಪ್ರವಚನಗಳನ್ನು ನಡೆಸಿಕೊಂಡು ಬರುವ ಭಾಗ್ಯ ನನ್ನದಾಯಿತು. ಈ ರೀತಿಯಾಗಿ ನಾವೆಲ್ಲರೂ ಪೂಜ್ಯ ಶ್ರೀಪಾದರ ದೃಢಸಂಕಲ್ಪ ಮತ್ತು ಕಠಿಣ ಪರಿಶ್ರಮದ ಶಾಶ್ವತ ಫಲಾನುಭವಿಗಳಾದೆವು.

ಹೀಗೆ ಪೂಜ್ಯ ಶ್ರೀಪಾದರಿಂದ ಚಾಲನೆಗೊಂಡು ಅತ್ಯುತ್ಸಾಹದಿಂದ ನಡೆದುಕೊಂಡು ಬಂದ ಶ್ರೀಕೃಷ್ಣ ವೃಂದಾವನದ ಚಟುವಟಿಕೆಗಳು ಪ್ರತಿನಿತ್ಯ ನೂರಾರು ಜನರನ್ನು ಆಕರ್ಷಿಸತೊಡಗಿದವು. ಬೆಳಗ್ಗಿನ ಮಂಗಳಾಷ್ಟಕದಿಂದ ರಾತ್ರಿಯ ಶಯನೋತ್ಸವ ತನಕದ ನಿತ್ಯಸೇವೆಗಳು, ನಿರಂತರ ಜ್ಞಾನಕಾರ್ಯಗಳು ಜನರನ್ನು ಕೃಷ್ಣಭಕ್ತಿಯಲ್ಲಿ ಮೈಮರೆಯುವಂತೆ ಮಾಡಿದವು. ಸೋಮವಾರದ ರುದ್ರಪಾರಾಯಣ, ಮಂಗಳವಾರದ ಗೀತಾ ಪ್ರವಚನ, ಬುಧವಾರದ ವಿಷ್ಣುಸಹಸ್ರನಾಮ, ಗುರುವಾರದ ರಾಯರ ಸ್ತೋತ್ರ, ಶುಕ್ರವಾರದ ಲಕ್ಷ್ಮೀಪೂಜೆ, ಶನಿವಾರದ ಪಂಚಾಮೃತ ಅಭಿಷೇಕ, ಭಾನುವಾರದ ನಾದೋಪಾಸನೆ, ವಿಶೇಷ ಉಪನ್ಯಾಸ ಇತ್ಯಾದಿ ಭಾವಪೂರ್ಣ ಕಾರ್ಯಕ್ರಮಗಳಲ್ಲಿ ಎಲ್ಲ ಭಾಷೆಯ ಎಲ್ಲ ಪ್ರಾಂತ್ಯಗಳ ಜನರೂ ಬಂದು ತನ್ಮಯತೆಯಿಂದ ಭಾಗವಹಿಸಲಾರಂಭಿಸಿದರು. ಶಿವರಾತ್ರಿ, ನವರಾತ್ರಿ, ಕೃಷ್ಣ ಜನ್ಮಾಷ್ಟಮಿ, ಚೌತಿ, ರಾಯರ ಆರಾಧನೆ ಇತ್ಯಾದಿ ಅನೇಕ ಹಬ್ಬ ಹರಿದಿನಗಳ ಅಚ್ಚುಕಟ್ಟಾದ ಆಚರಣೆಗಳಿಗೆ ನೂರಾರು ಜನರನ್ನು ತುಂಬಿಕೊಳ್ಳಲು ಜಾಗವೇ ಸಾಲದಾಯಿತು. ಇಂತಹ ವಿಶೇಷ ಸಂದರ್ಭಗಳಲ್ಲಿ ಬೇರೆ ಬೇರೆ ಕಡೆ ಬೃಹತ್ ಜಾಗಗಳನ್ನು ಬಾಡಿಗೆಗೆ ಪಡೆದು ಕಾರ್ಯಕ್ರಮಗಳನ್ನು ನಡೆಸಬೇಕಾಗಿ ಬಂತು. ಆದರೂ ಜನಗಳ ಉತ್ಸಾಹ ಪ್ರೋತ್ಸಾಹ ಯಾವತ್ತೂ ಕಡಿಮೆಯಾಗಲಿಲ್ಲ. ಸಾವಿರಾರು ಸಂಖ್ಯೆಗಳಲ್ಲಿ ಪಾಲ್ಗೊಳ್ಳಲಾರಂಭಿಸಿದರು. ಎಲ್ಲರಿಗೂ ಬೇಕಾದ ಪ್ರಸಾದ ವ್ಯವಸ್ಥೆ ಇತ್ಯಾದಿ ಅನುಕೂಲಗಳನ್ನು ಮಾಡಲು ಸಹಕರಿಸಲು ಸ್ವಯಂಸೇವಕರ ಒಂದು ಬೃಹತ್ ಗುಂಪೇ ಸಿದ್ಧವಾಯಿತು. ಎರಡೇ ವರ್ಷದಲ್ಲಿ ಶ್ರೀಕೃಷ್ಣ ವೃಂದಾವನಕ್ಕೆ ದಿನ ನಿತ್ಯ ಬಂದುಹೋಗುವ ಭಕ್ತರ ಸಂಖ್ಯೆಯೇ ಶತಕವನ್ನು ದಾಟಿತು! ಅದರ ಪರಿಣಾಮವೇ ಮುಂದಿನ ಜಾಗದ ಅನ್ವೇಷಣೆ.

ಅಲ್ಲಿಂದ ಸುಮಾರು ಐದು ಮೈಲು ದೂರದಲ್ಲಿ "ಸೌತ್ ಮೈನ್" ಎಂಬ

ರಸ್ತೆಯಲ್ಲಿರುವ ದೊಡ್ಡ ಜಾಗಕ್ಕೆ ಶ್ರೀಕೃಷ್ಣ ವೃಂದಾವನ ಸ್ಥಳಾಂತರಗೊಂಡಿದ್ದು 2005ನೇ ಇಸವಿಯ ಜನವರಿ ತಿಂಗಳಲ್ಲಿ. ಸುಮಾರು ಒಂದು ಮಿಲಿಯನ್ ಡಾಲರ್ ಬೆಲೆಯ ಒಂದೂವರೆ ಎಕರೆ ಜಾಗದಲ್ಲಿ ಎರಡು ಕಟ್ಟಡಗಳಿದ್ದ ಈ ಜಾಗವನ್ನು ಖರೀದಿಸಲು ತೀರ್ಮಾನಿಸಿದ್ದು ಕೂಡ ಒಂದು ಕಠಿಣ ನಿರ್ಣಯವೇ. ಬೃಹತ್ ಮೊತ್ತದ ಬ್ಯಾಂಕ್ ಸಾಲದ ತಿಂಗಳ ಕಂತನ್ನು ಕಟ್ಟಿಕೊಂಡು ಉಳಿದ ಖರ್ಚುವೆಚ್ಚಗಳನ್ನೂ ಎದುರಿಸಿಕೊಂಡು ಈ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ತಿಂಗಳಿಗೆ ಮೂವತ್ತು ಸಾವಿರ ಡಾಲರ್ ಸಂಗ್ರಹಿಸುವುದು ದೊಡ್ಡ ಸವಾಲೇ ಆಯಿತು. ಜೊತೆಗೆ ಇದೇ ಸ್ಥಳದಲ್ಲಿ ಪೂರ್ಣ ವ್ಯವಸ್ಥೆಯ ನೂತನ ಮಂದಿರದ ನಿರ್ಮಾಣ ನಡೆಸುವುದೂ ನಮ್ಮ ಕನಸಾಗಿತ್ತು. ಶ್ರೀಗಳ ಆದೇಶದಂತೆ ಅದಕ್ಕೆ ಬೇಕಾದ ಸರ್ವ ಪ್ರಯತ್ನಗಳೂ ಆರಂಭಗೊಂಡವು. ಸ್ಥಳೀಯ ವಕೀಲರು, ಇಂಜಿನಿಯರ್‌ಗಳನ್ನು ಸೇರಿಸಿಕೊಂಡು ಒಂದು ನಕ್ಷೆಯನ್ನು ತಯಾರಿಸಲಾಯಿತು. ಈ ದೇಶದಲ್ಲಿ ಧಾರ್ಮಿಕ ಮಂದಿರವನ್ನು ನಿರ್ಮಿಸಲು ಸರಕಾರದ ವಿಶೇಷ ಅನುಮತಿಯನ್ನು ಪಡೆಯೇಕು ಮತ್ತು ಅದರ ನಿಯಮಾವಳಿಗಳಂತೂ ಅತ್ಯಂತ ಜಟಿಲ. "ಎಡಿಸನ್" ನಗರಾಡಳಿತಕ್ಕೆ ಆ ಪ್ರಯುಕ್ತ ಅರ್ಜಿಯನ್ನೂ ಸಲ್ಲಿಸಲಾಯಿತು. ಆದರೆ ಅದೇ ಸಂದರ್ಭದಲ್ಲಿ ಸುತ್ತ ಮುತ್ತಲಿನ ಸ್ಥಳೀಯ ಅನ್ಯಮತೀಯ ಜನರಿಂದ ತೀವ್ರವಾದ ವಿರೋಧವನ್ನು ಎದುರಿಸಬೇಕಾಯಿತು. ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸಿದರೂ ಅವರ ಮನವೊಲಿಸುವಲ್ಲಿ ನಮ್ಮ ಶ್ರಮ ಫಲಪ್ರದವಾಗಲಿಲ್ಲ.

ಈ ಸಮಯದಲ್ಲಿ ಇತ್ಯದ ಚಟುವಟಿಕೆಗಳನ್ನು ನಡೆಸುವುದು ಕೂಡ ಸ್ಥಳೀಯ ಅನ್ಯಮತೀಯ ಜನರ ಪ್ರತಿರೋಧದಿಂದಾಗಿ ಬಹಳ ಕಷ್ಟವೆನಿಸಿತು. ಪ್ರತಿವಾರವೂ ಬಾಡಿಗೆಯ ಸ್ಥಳ ಪಡೆದು ಎಲ್ಲ ಸಾಮಾಗ್ರಿಗಳನ್ನೂ ಸಾಗಿಸಿಕೊಂಡು ಪೂಜೆ ಪ್ರಸಾದದ ವ್ಯವಸ್ಥೆಗಳನ್ನು ಮಾಡಬೇಕಾಗಿ ಬಂತು. ಸುಮಾರು ನಾಲ್ಕು ವರ್ಷಗಳ ತನಕ ಶ್ರೀಕೃಷ್ಣ ವೃಂದಾವನದ ಶಾಶ್ವತವಾಗಿ ನೆಲೆನಿಲ್ಲುವ ಈ ಪ್ರಯತ್ನ ಯುದ್ಧದಂತೆಯೇ ನಡೆಯಿತು. ಭಕ್ತರಿಂದ ಸಂಗ್ರಹಿಸಿದ ದೇಣಿಗೆ ಮತ್ತು ಬ್ಯಾಂಕುಗಳಿಂದ ಪಡೆದ ಸಾಲದ ಜೊತೆಗೆ

ಮುಂದಿನ ನಿರ್ಮಾಣದ ಪ್ರಯತ್ನಕ್ಕೆಂದೇ ವ್ಯಯಿಸಲಾದ ಹಣದ ಮೊತ್ತ ಸುಮಾರು ಅರ್ಧ ಮಿಲಿಯನ್ ಡಾಲರ್‌ಗಳು! ಪೋಲೀಸು, ಕೇಸು, ವಕೀಲರು ಇತ್ಯಾದಿ ಅಲೆದಾಟಗಳೂ ಬಹಳವಾಯಿತು. ಆದರೆ ಕೊನೆಗೆ ಎಡಿಸನ್ ನಗರಾಡಳಿತದಿಂದ 'ದೇಗುಲ ನಿರ್ಮಿಸಲು ಅನುಮತಿ ನೀಡಲಾಗದು' ಎಂಬ ಅಂತಿಮ ತೀರ್ಮಾನ ಬಂದಾಗ ಅದೆಲ್ಲವೂ ವ್ಯರ್ಥವೆನಿಸಿತು. ನಮಗೆಲ್ಲರಿಗೂ ಅತೀವ ನಿರಾಸೆಯಾಯಿತು. ಈ ಸ್ಥಳದಲ್ಲಿ ನಿಮ್ಮ ಸಂಸ್ಥೆಗೆ ಕಾರ್ಯನಿರ್ವಹಿಸಲು ಕೊಟ್ಟ ಅನುಮತಿಯನ್ನೂ ರದ್ದುಗೊಳಿಸಲಾಗಿದೆ" ಎಂಬ ಆಜ್ಞೆ ಬಂದಾಗಲಂತೂ ಶ್ರೀಕೃಷ್ಣ ವೃಂದಾವನದ ಕತೆ ಇಲ್ಲಿಗೇ ಅವಸಾನವಾಯಿತು ಎಂದು ಭಾವಿಸಿ ಬಹಳ ದುಃಖ ಪಟ್ಟೆವು.

ಆದರೆ ಶ್ರೀಕೃಷ್ಣನ ಇಚ್ಛೆ ಮತ್ತು ಪೂಜ್ಯ ಶ್ರೀಗಳ ಶುದ್ಧ ಮನಸ್ಸಿನ ಸಂಕಲ್ಪ ಎಂದಾದರೂ ವ್ಯರ್ಥವಾಗುವುದುಂಟೇ ? ಹಾಗೆಯೇ ಮುಂದೆ ನಡೆದದ್ದೆಲ್ಲವೂ ಪವಾಡ ಸದೃಶ. ತೀವ್ರವಾದ ಆರ್ಥಿಕ ಸಂಕಷ್ಟ ಮತ್ತು ನಮ್ಮೆಲ್ಲರ ವ್ಯರ್ಥಪ್ರಯತ್ನದಿಂದ ಕುಸಿದು ಹೋಗಿದ್ದ ಶ್ರೀಕೃಷ್ಣ ವೃಂದಾವನದ ಮುಂದೆ ಇನ್ನೊಂದು ಅವಕಾಶ ಅನಿರೀಕ್ಷಿತವಾಗಿ ಬಂದು ನಿಂತಿತ್ತು! ಇನ್ನೇನು ಇದ್ದ ಜಾಗವನ್ನೂ ಖಾಲಿ ಮಾಡಬೇಕೆಂಬ ಎಡಿಸನ್ ನಗರಾಡಳಿತದ ಆದೇಶದಿಂದ ಆತಂಕಿತರಾಗಿ ಎಲ್ಲಿ ಹೋಗುವುದೆಂಬ ಚಿಂತೆಯಿಂದ ಜರ್ಜರಿತರಾದ ನಮ್ಮ ಮುಂದೆ ಇನ್ನೊಂದು ಸವಾಲು! ಇಲ್ಲಿಂದ ಕೇವಲ ಒಂದೇ ಮೈಲಿ ದೂರದಲ್ಲಿ ಮೂರುವರೆ ಎಕರೆ ಜಾಗದಲ್ಲಿ ದೊಡ್ಡದಾದ, ಸುಂದರವಾದ, ಕೆಲವೇ ವರ್ಷಗಳ ಹಿಂದೆ ನಿರ್ಮಿತವಾದ "ಚರ್ಚ್" ಒಂದು ಮಾರಾಟಕ್ಕಿದೆ ಎಂಬ ಮಾಹಿತಿ ಬಂತು. ಬೆಲೆ ? ಆರೂವರೆ ಮಿಲಿಯನ್ ಡಾಲರ್‌ಗಳು!!!???. ಒಂದು ಕಡೆ ಶ್ರೀಕೃಷ್ಣ ವೃಂದಾವನವನ್ನು ಅತಿ ಶೀಘ್ರದಲ್ಲಿ ಸ್ಥಳಾಂತರಿಸಬೇಕಾದ ಅನಿವಾರ್ಯತೆ. ಇನ್ನೊಂದೆಡೆ ಸಂಸ್ಥೆಯ ಬ್ಯಾಂಕ್ ಖಾತೆಯಲ್ಲಿ ನೂರು ಡಾಲರ್ ಕೂಡ ಇಲ್ಲದಂತಹ ಅತ್ಯಂತ ಶೋಚನೀಯ ಆರ್ಥಿಕ ಸಂಕಷ್ಟ !

ಪೂಜ್ಯ ಶ್ರೀಪಾದರು ಉಡುಪಿಯಲ್ಲಿ ತಮ್ಮ ಮೂರನೇ ಪರ್ಯಾಯಕ್ಕೆ ಸಾಕಷ್ಟು ಪ್ರತಿರೋಧವನ್ನು ಎದುರಿಸಿಕೊಂಡು ನಾನಾ ಸವಾಲುಗಳೊಂದಿಗೆ ಶ್ರೀಕೃಷ್ಣ ಪೂಜೆಗೆ

ಸನ್ನದ್ಧರಾಗುತ್ತಿದ್ದರೆ, ಅದೇ ಸಮಯದಲ್ಲಿ ಇಲ್ಲಿ ನ್ಯೂಜೆರ್ಸಿಯ ಕೃಷ್ಣವೃಂದಾವನಕ್ಕೆ ಅಳಿವು ಉಳಿವಿನ ಸವಾಲು! ಅದೇ ಸಮಯಕ್ಕೆ (2008ನೇ ಇಸವಿ) ವಿಶ್ವದೆಲ್ಲೆಡೆ ತೀವ್ರವಾಗಿ ಕಾಡಿದ ಆರ್ಥಿಕ ಕುಸಿತ (ರಿಸೆಷನ್) ಅಮೇರಿಕವನ್ನೂ ಬಹಳವಾಗಿ ಬಾಧಿಸಿತ್ತು. ನಮ್ಮ ಭಕ್ತವೃಂದದಲ್ಲೇ ಬಹಳಷ್ಟು ಜನರು ಕೆಲಸವನ್ನೇ ಕಳೆದುಕೊಂಡಿದ್ದರು. ಯಾವ ಬ್ಯಾಂಕುಗಳೂ ಸಾಲವನ್ನು ಕೊಡಲು ಮುಂದೆ ಬರಲಿಲ್ಲ. ಆದರೂ ಧೃತಿಗೆಡದೆ ಪೂಜ್ಯ ಶ್ರೀಪಾದರ ಮಾರ್ಗದರ್ಶನದಂತೆ ನಮ್ಮ ಪ್ರಾಮಾಣಿಕ ಪ್ರಯತ್ನಗಳನ್ನು ಮುಂದುವರಿಸಿದೆವು. ಚೌಕಾಶಿ ನಡೆಸಿ ಚರ್ಚ್‌ನ ಬೆಲೆಯನ್ನು ಐದೂವರೆ ಮಿಲಿಯನ್ ಡಾಲರುಗಳಿಗೆ ತಂದು ನಿಲ್ಲಿಸುವಲ್ಲಿ ಯಶಸ್ಸನ್ನು ಕಂಡೆವು. ಆಶ್ಚರ್ಯವೆಂಬಂತೆ ಅಮೇರಿಕಾದ ಪ್ರತಿಷ್ಠಿತ "ಚೇಸ್ ಬ್ಯಾಂಕ್" ಬೃಹತ್ ಮೊತ್ತದ ಸಾಲವನ್ನು ನೀಡಲು ಮುಂದೆ ಬಂತು! ಈ ಸಂಕಷ್ಟಗಳನ್ನು ಕಂಡ ನಾಡಿನ ಭಕ್ತವೃಂದವೂ ಅತಿಶಯವಾಗಿ ಸಹಕರಿಸಿತು. ಅಂತಿಮವಾಗಿ 2009ನೇ ಇಸವಿಯ ಮಾರ್ಚ್ 9ರಂದು ಈ ಸ್ಥಳ (215 May Street) ಶ್ರೀಕೃಷ್ಣ ವೃಂದಾವನದ ಶಾಶ್ವತ ನೆಲೆಯಾಯಿತು!

ಶ್ರೀಕೃಷ್ಣ ವೃಂದಾವನದ ಗಜಗಾಂಭೀರ್ಯದ ಮುಂದಿನ ನಡೆಗೆ ಯಾವ ಅಡ್ಡಿ ಆತಂಕವೂ ಇಲ್ಲದಂತಾಯಿತು. ನೂರಾರು ಕಾರುಗಳು ನಿಲ್ಲಬಹುದಾದ ಪಾರ್ಕಿಂಗ್ ವ್ಯವಸ್ಥೆ, ನಾಲ್ಕೈದು ಸಾವಿರ ಜನಕ್ಕೂ ಭೋಜನ ತಯಾರಿಸುವ ಸೌಕರ್ಯವಿರುವ ವಿಶಾಲವಾದ ಸುವ್ಯವಸ್ಥಿತ ಅಡುಗೆಮನೆ, ಸುಮಾರು ಎಂಟುನೂರು ಜನರು ಏಕಕಾಲದಲ್ಲಿ ಕುಳಿತು ವೀಕ್ಷಿಸಬಹುದಾದ ಬೃಹತ್ ಸಭಾಂಗಣ. ದೊಡ್ಡ ಸಂಖ್ಯೆಯಲ್ಲಿ ಜನರು ಏಕಕಾಲದಲ್ಲಿ ಪೂಜೆ ನೋಡಿ ಆನಂದಿಸುವಷ್ಟು ವಿಶಾಲವಾದ ಪೂಜಾಗೃಹ, ಪೂಜ್ಯ ಶ್ರೀಗಳಿಗೆ ಮತ್ತು ಅರ್ಚಕವರ್ಗದವರಿಗೆ ಉಳಿಯಲು ಬೇಕಾದ ಸುಸಜ್ಜಿತ ಮತ್ತು ಪ್ರತ್ಯೇಕ ವಸತಿ ವ್ಯವಸ್ಥೆ, ಆಫೀಸು, ಪುಸ್ತಕಾಲಯ. ಒಟ್ಟಾರೆ ಎಲ್ಲ ಸೌಕರ್ಯಗಳಿಂದಲೂ ಕೂಡಿದ ಶ್ರೀಕೃಷ್ಣ ವೃಂದಾವನ ಶ್ರೀಗಳು ಕಂಡ ಕನಸಿನಂತೆ ಕಾರ್ಯನಿರ್ವಹಿಸಲು ಮತ್ತೆ ಸಮರ್ಥವಾಯಿತು. ಅದರ ಪ್ರಯೋಜನವನ್ನು ಸಾವಿರಾರು ಜನರು ನಿರಂತರವಾಗಿ ಮತ್ತು ಶಾಶ್ವತವಾಗಿ ಪಡೆಯುವಂತಾಯಿತು. ಮದುವೆ, ಉಪನಯನ ಇತ್ಯಾದಿ ಎಲ್ಲ

ಮಂಗಳಕಾರ್ಯಗಳನ್ನು ದೊಡ್ಡ ಮಟ್ಟಿನಲ್ಲೂ ನಡೆಸಲು ಬೇಕಾದ ಎಲ್ಲ ವ್ಯವಸ್ಥೆಗಳೂ ತಯಾರಾದವು. ಮಧ್ವನವಮಿ, ಶ್ರೀನಿವಾಸ ಕಲ್ಯಾಣ, ಅಯುತಸಂಖ್ಯೆಯ ನರಸಿಂಹ–ಧನ್ವಂತರಿಮಂತ್ರ ಹೋಮ ಇತ್ಯಾದಿ ಅನೇಕ ವಿಶಿಷ್ಟ ಕಾರ್ಯಕ್ರಮಗಳಲ್ಲಿ ಸಹಸ್ರಾರು ಜನರು ಬಂದು ಭಾಗವಹಿಸತೊಡಗಿದರು. ಪೂಜ್ಯ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ನೇತೃತ್ವದಲ್ಲಿ ಅಂತರಾಷ್ಟ್ರೀಯ ಮಟ್ಟದ ಜ್ಞಾನ ಸಮ್ಮೇಳನಗಳು ಸಂಪನ್ನಗೊಂಡವು. ನಿತ್ಯದಲ್ಲಿ ಮತ್ತು ವಿಶೇಷವಾಗಿ ವಾರಾಂತ್ಯದಲ್ಲಿ ನಡೆಯುವ ಧಾರ್ಮಿಕ, ಆಧ್ಯಾತ್ಮಿಕ ತರಗತಿಗಳಲ್ಲಿ ನೂರಾರು ಜನರು ಆಸಕ್ತಿಯಿಂದ ಬಂದು ಭಾಗವಹಿಸಿದರು. ಸಂಪೂರ್ಣ ಭಗವದ್ಗೀತೆ ಕಂಠಪಾಠ ಮಾಡಿದ, ತ್ರಿಕಾಲ ಸಂಧ್ಯಾವಂದನೆ, ದೇವರಪೂಜೆ, ವೈಶ್ವದೇವ, ಏಕಾದಶಿ, ಚಾತುರ್ಮಾಸ್ಯ ವ್ರತ ಇತ್ಯಾದಿಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿರುವ ಮತ್ತು ಸಂಸ್ಕೃತದಲ್ಲಿ ಸಂಭಾಷಣೆ ನಡೆಸಬಲ್ಲ ನೂರಾರು ಜನರನ್ನು ಇಂದು ನ್ಯೂಜೆರ್ಸಿಯಲ್ಲಿ ಕಾಣಬಹುದು ಎನ್ನುವುದು ಇಲ್ಲಿನ ಶ್ರೀಕೃಷ್ಣ ವೃಂದಾವನದ ಸಾಧನೆಯ ಫಲಶ್ರುತಿ.

ಹೀಗೆ ತನ್ನ ಜನಪ್ರಿಯತೆಯನ್ನು ಇನ್ನೂ ವೃದ್ಧಿಸಿಕೊಂಡ ಶ್ರೀಕೃಷ್ಣ ವೃಂದಾವನದಲ್ಲಿ ಉಡುಪಿಯ ಕೃಷ್ಣನನ್ನು ಶಾಶ್ವತವಾಗಿ ನೆಲೆಗೊಳಿಸುವ ಸಂಕಲ್ಪವನ್ನು ಪೂಜ್ಯ ಶ್ರೀಪಾದರು ಕೈಗೊಂಡರು. ಉಡುಪಿಯಂತೆ ನ್ಯೂಜೆರ್ಸಿಯ ಕೃಷ್ಣನೂ ಸಾಲಗ್ರಾಮ ಶಿಲೆಯಲ್ಲಿಯೇ ಮೂಡಿ ಬರಬೇಕೆಂಬುದು ಸ್ವತಃ ಶ್ರೀಕೃಷ್ಣ ಇಚ್ಛೆಯೇ ಇದ್ದಿರಬೇಕು. ಇಲ್ಲವಾದರೆ ಮನುಷ್ಯಸಾಮಾನ್ಯರಿಂದ ಅಸಾಧ್ಯವೇ ಎಂಬಂತಿರುವ ಈ ಸಂಕಲ್ಪ ಸಾಕಾರಗೊಳ್ಳಲು ಸಾಧ್ಯವೇ ಇಲ್ಲ. ನೇಪಾಳದ ಗಂಡಕೀನದಿಯ ನಡೆಯುವುದೂ ಅಸಾಧ್ಯವೆನಿಸಿದಷ್ಟು ಕಡಿದಾದ ದುರ್ಗಮ ಪ್ರದೇಶದಲ್ಲಿ ಅತ್ಯಪೂರ್ವವಾದ ಬೃಹತ್ ಸಾಲಗ್ರಾಮ ಶಿಲೆ ಸಿಗುವುದೆಂದರೆ ಅದೊಂದು ಪವಾಡವೇ ಸರಿ.

ಅಂತೆಯೇ ಸಾಲಗ್ರಾಮ ಶಿಲೆಯಲ್ಲಿ ಮೂಡಿಬಂದ ಗರ್ಭಗುಡಿಯೂ ಅನ್ಯಾದೃಶ್ಯವಾಗಿ, ಅಪೂರ್ವವಾಗಿರಬೇಕೆಂದೂ ಪೂಜ್ಯ ಶ್ರೀಗಳು ಬಯಸಿದರು. ಅದಕ್ಕೆಂದೇ ಬರ್ಮಾದೇಶದಿಂದ ವಿಶಿಷ್ಟವಾದ ಸಾಗುವಾನಿ ಮರಗಳನ್ನು ಭಾರತಕ್ಕೆ

ತರಿಸಲಾಯಿತು. ಮೂಡಬಿದಿರೆಯ ಹರೀಶ ಆಚಾರ್ ನೇತೃತ್ವದ ನೂರಾರು ಕಾಷ್ಠಶಿಲ್ಪಿಗಳ ಕೈಚಳಕ ಮತ್ತು ಒಂದು ವರ್ಷದ ಪರಿಶ್ರಮದಿಂದ ಸುಂದರವಾದ ದಾರುಮಯ ಮಂದಿರ ನಿರ್ಮಾಣಗೊಂಡಿತು. ಪಾದುಕಾ, ಜಗತೀ, ಕುಮುದ ಇತ್ಯಾದಿ ಅಡಿಪಾಯದ ಪ್ರಭೇದಗಳು ಕಾರ್ಕಳದ ಕರಿಶಿಲೆಯಲ್ಲಿ ಮೂಡಿಬಂದವು. ಮತ್ತೆ ಅವೆಲ್ಲವನ್ನೂ ಹಡಗಿನ ಮೂಲಕ ನ್ಯೂಜೆರ್ಸಿಗೆ ತರಲಾಯಿತು. ಸುಮಾರು ಎರಡು ಮಿಲಿಯನ್ ಡಾಲರ್ ವೆಚ್ಚದ ಈ ಬೃಹತ್ಕಾರ್ಯದಲ್ಲಿ ಹಲವಾರು ಸಮಸ್ಯೆಗಳೂ ಎದುರಾದವು. ಅದರೂ ಭಾರತದಿಂದ ಶಿಲ್ಪಿಗಳನ್ನು ಕರೆಸಿಕೊಳ್ಳುವುದರಿಂದ ಹಿಡಿದು ಕೃಷ್ಣ ಪ್ರತಿಷ್ಠೆಗೆ ಬೇಕಾದ ಸಕಲ ಸಿದ್ಧತೆಗಳನ್ನು ನಡೆಸುವ ತನಕದ ಎಲ್ಲ ಹಂತಗಳಲ್ಲೂ ಶ್ರೀ ಕೃಷ್ಣನ ಸರ್ವಾನುಗ್ರಹ ಸಂಪೂರ್ಣ ಯಶಸ್ಸನ್ನು ತಂದುಕೊಟ್ಟಿತು. ಪೂಜ್ಯ ಶ್ರೀಪಾದರು ಸಂಕಲ್ಪಿಸಿದಂತೆಯೇ ಜ್ಯೇಷ್ಠಶುಕ್ಲ ಚತುರ್ದಶೀ, 2017ನೇ ಇಸವಿಯ ಜೂನ್ ತಿಂಗಳ 8ನೇ ತಾರೀಕಿನಂದು, ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಮಾರ್ಗದರ್ಶನದಲ್ಲಿ ಶ್ರೀಕೃಷ್ಣನ ಪ್ರತಿಷ್ಠೆಯು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಸುಮಾರು ಒಂದು ತಿಂಗಳ ಕಾಲ ನಡೆದ ತಂತ್ರಸಾರೋಕ್ತ ರೀತಿಯ ಪ್ರತಿಷ್ಠಾವಿಧಿಗಳಲ್ಲಿ, ಉತ್ಸವ–ಜ್ಞಾನಕಾರ್ಯಗಳಲ್ಲಿ, ಸಾವಿರಾರು ಭಕ್ತರು ಪಾಲ್ಗೊಂಡು ಆ ಐತಿಹಾಸಿಕ ಘಟನೆಯಲ್ಲಿ ಭಾಗಿಗಳಾಗಿ, ಸಾಕ್ಷಿಗಳಾಗಿ ಕೃತಾರ್ಥರೆನಿಸಿಕೊಂಡರು.

ಹೀಗೆ ಪೂಜ್ಯ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ನಿರಂತರ ಪ್ರಯತ್ನದ ಫಲವಾಗಿ ಉಡುಪಿಯ ಕೃಷ್ಣ ನ್ಯೂಜೆರ್ಸಿಗೆ ಬಂದು ಇಲ್ಲಿನ ವೃಂದಾವನದಲ್ಲಿ ಶಾಶ್ವತವಾಗಿ ನೆಲೆಗೊಂಡ.

●



EDISON- NEW JERSEY



EDISON- NEW JERSEY

# ನ್ಯೂಜೆರ್ಸಿಯ ಶಾಲಗ್ರಾಮ ಶಿಲಾಕೃಷ್ಣ !

ಅದು 2007ನೇ ಇಸವಿಯ ವಸಂತಕಾಲ. ಪರಮ ಪೂಜ್ಯ ಪುತ್ತಿಗೆ ಶ್ರೀಪಾದರು ನ್ಯೂಜೆರ್ಸಿಯಲ್ಲಿ ಶ್ರೀಕೃಷ್ಣವೃಂದಾವನವನ್ನು ಸಂಸ್ಥಾಪಿಸಿ ಐದು ವರ್ಷಗಳೇ ಕಳೆದಿದ್ದವು! ಶ್ರೀ ದೇವರ ಶಕ್ತಿಯುತ ಸಾನ್ನಿಧ್ಯ ಮತ್ತು ನಿರೀಕ್ಷೆಗೂ ಮೀರಿ ದೊರೆತ ಸ್ಥಳೀಯ ಭಕ್ತರ ಸಹಕಾರದಿಂದಾಗಿ ಶ್ರೀಮಠದ ನ್ಯೂಜೆರ್ಸಿ ಶಾಖೆಯು ಚೆನ್ನಾಗಿಯೇ ನಡೆಯುತ್ತಿತ್ತು. ಇನ್ನಷ್ಟು ಪ್ರಭಾವಶಾಲಿಯಾಗಿ ಮತ್ತು ಬೃಹತ್ತಾಗಿ ಬೆಳೆಯುವ ಉದ್ದೇಶದೊಂದಿಗೆ 'ಇಸ್ಲಿನ್' ನಿಂದ 'ಮೆಟಚನ್' ಎಂಬಲ್ಲಿನ ದೊಡ್ಡದಾದ ಜಾಗವೊಂದಕ್ಕೆ ಶ್ರೀಮಠವು ಸ್ಥಳಾಂತರಗೊಂಡೂ ಎರಡು ವರ್ಷಗಳಾಗಿದ್ದವು. ಅಲ್ಲಿಯೇ ಸುಂದರವಾದ ಹೊಸ ಮಂದಿರವನ್ನು ನಿರ್ಮಿಸಲು ಮತ್ತು ಅದಕ್ಕೆ ಬೇಕಾದ ಅನುಮತಿಯನ್ನು ಪಡೆಯಲು ನೀಲ ನಕ್ಷೆ, ರೂಪುರೇಷೆಗಳು, ಕಾನೂನು ಪ್ರಕ್ರಿಯೆಗಳು ಮತ್ತು ಧನಸಂಗ್ರಹದ ಪ್ರಯತ್ನಗಳೂ ಒಂದು ಕಡೆಯಿಂದ ನಡೆಯುತ್ತಲೇ ಇದ್ದವು. ನಿತ್ಯ ಪೂಜೆ, ಪಾಠಪ್ರವಚನಗಳು, ವಿಶೇಷ ಸಮಾರಂಭಗಳು ಮತ್ತು ಅನ್ನದಾನಾದಿ ಕೈಂಕರ್ಯಗಳೂ ಆಗಿನ ಕಾಲದ ವ್ಯವಸ್ಥೆಗಳು ಮತ್ತು ಅನುಕೂಲಕ್ಕೆ ತಕ್ಕಂತೆ ವೈಭವದಿಂದ ಸಂಪನ್ನಗೊಳ್ಳುತ್ತಿದ್ದವು.

## ಪೂಜ್ಯ ಶ್ರೀಪಾದರ ತೃತೀಯ ಪರ್ಯಾಯ ಮತ್ತು ವಿಶ್ವಸಂಚಾರ

ಅದೇ ಸಮಯದಲ್ಲಿ ಪೂಜ್ಯ ಶ್ರೀಪಾದರು ತಮ್ಮ ತೃತೀಯ ಪರ್ಯಾಯದ ಪೂರ್ವ ಭಾವಿಯಾಗಿ ವಿಶ್ವ ಸಂಚಾರವನ್ನು ಕೈಗೊಳ್ಳುವ ಸಂಕಲ್ಪಮಾಡಿದ್ದರು. ಪೂಜ್ಯ ಶ್ರೀಗಳಿಗೆ ತಾವು ವಿದೇಶಗಳಲ್ಲಿ ಸಂಚರಿಸಿ ಅನೇಕಕಡೆಗಳಲ್ಲಿ ಧರ್ಮಧ್ವಜವನ್ನು, ಶಾಖಾಮಠಗಳನ್ನು ಯಶಸ್ವಿಯಾಗಿ ಸಂಸ್ಥಾಪಿಸಿದ ಬಳಿಕ ಪ್ರಾಪ್ತವಾದ ಮೊದಲ ಪರ್ಯಾಯವಾಗಿತ್ತದು! ಅದಕ್ಕೋಸ್ಕರ ಅವರ ತಮ್ಮ ಆ ತೃತೀಯ ಪರ್ಯಾಯವನ್ನು ವಿಶ್ವಪರ್ಯಾಯವೆಂದೇ ಘೋಷಿಸಿದ್ದಲ್ಲದೆ, ಕಡೆಗೋಲು ಹಗ್ಗ ಹಿಡಿದು ಅತ್ಯಂತ ಅಪೂರ್ವವೆನಿಸಿದ ಭಂಗಿಯಲ್ಲಿ ಉಡುಪಿಯಲ್ಲಿ ನೆಲೆನಿಂತ ನಮ್ಮ ಶ್ರೀಕೃಷ್ಣನನ್ನು ವಿಶ್ವದಾದ್ಯಂತ ಪರಿಚಯಿಸಬೇಕು ಎನ್ನುವ ಅದ್ಭುತ ಸಂಕಲ್ಪವನ್ನೂ ಕೈಗೆತ್ತಿಕೊಂಡರು.

ಉಡುಪಿಯ ಶ್ರೀ ಕೃಷ್ಣನ ಆ ಕಡೆಗೋಲನ್ನೇ ತಮ್ಮ ತೃತೀಯ ಪರ್ಯಾಯದ ಲಾಂಛನವನ್ನಾಗಿ ಘೋಷಿಸಿದರು. ವಿಶ್ವದಾದ್ಯಂತ ಸಂಚರಿಸುತ್ತಾ ಭಕ್ತರ ಮನೆಗಳಲ್ಲಿ, ಅನೇಕ ದೇವಸ್ಥಾನಗಳಲ್ಲಿ, ಕಾಲೇಜು, ಯೂನಿವರ್ಸಿಟಿಗಳಲ್ಲಿ ಹೀಗೆ ಅವಕಾಶ ಸಿಕ್ಕಿದ ಕಡೆಗಳಲ್ಲೆಲ್ಲ ತಮ್ಮ ಉಪನ್ಯಾಸಗಳಲ್ಲಿ ಶ್ರೀವಾದಿರಾಜರು ಹೇಳಿದ ನಮ್ಮ ಉಡುಪಿಯ ಕಡೆಗೋಲು ಕೃಷ್ಣನ ರೋಚಕ ಕತೆಯನ್ನು ಅತ್ಯಂತ ಸ್ವಾರಸ್ಯಕರವಾಗಿ ವರ್ಣಿಸುತ್ತಿದ್ದರು! ಶ್ರೀಗಳಿಗಿರುವ ವಿದ್ವತ್ತು, ವಾಕ್ಪಟುತ್ವ ಮತ್ತು ಭಾಷಾಪಾಂಡಿತ್ಯದ ಬಗ್ಗೆ ತಮಗೆಲ್ಲ ಗೊತ್ತೇ ಇದೆ. ಎಂತಹ ವಿಷಯಗಳನ್ನೂ ಅತ್ಯಂತ ಸರಳವಾಗಿ ಮತ್ತು ಸ್ವಾರಸ್ಯಕರವಾಗಿ ಕನ್ನಡ, ಇಂಗ್ಲಿಷ್, ಸಂಸ್ಕೃತ ಇತ್ಯಾದಿ ಭಾಷೆಗಳಲ್ಲೂ ವಿವರಿಸಬಲ್ಲ ಸಾಮರ್ಥ್ಯವುಳ್ಳ ಪೂಜ್ಯ ಶ್ರೀಗಳಿಗೆ ತಮಗೆ ಅತ್ಯಂತ ಆಪ್ತನಾದ ಉಡುಪಿಯ ಕೃಷ್ಣನ ಕತೆಯನ್ನು ವರ್ಣಿಸುವಾಗ ಮಾತ್ರ ವಿಶೇಷ ಆಸಕ್ತಿ!

## ಶ್ರೀಗಳ ಪ್ರವಚನದಲ್ಲಿ ಮೂಡಿಬರುತ್ತಿದ್ದ ರೋಚಕ ಕೃಷ್ಣಕತೆ

ಆಗಲೇ ವಿದೇಶಗಳಲ್ಲೂ ಅತ್ಯಂತ ಜನಪ್ರಿಯತೆಯನ್ನು ಸಂಪಾದಿಸಿದ ಪೂಜ್ಯರ ನಿತ್ಯದ ಪಾದ ಪೂಜೆ, ಸಂಸ್ಥಾನ ಪೂಜೆ, ರಾತ್ರಿಪೂಜೆ ಹಾಗೂ ಪ್ರವಚನಾದಿ ಕಾರ್ಯಕ್ರಮಗಳು ಎಲ್ಲ ಊರಿನಲ್ಲೂ ಮುಂಚಿತವಾಗಿಯೇ ನಿಗದಿಯಾಗಿರುತ್ತಿದ್ದವು. ಮುಂಜಾವಿನಿಂದ ರಾತ್ರಿಯ ತನಕದ ವೇಳಾಪಟ್ಟಿಯೂ ಅತ್ಯಂತ ನಿಬಿಡವಾಗಿರುತ್ತಿತ್ತು. ಶ್ರೀಗಳು ಯಾವುದೇ ಪ್ರದೇಶದ ಯಾವುದೇ ಊರಿಗೆ ಹೋಗಲಿ, ಅಲ್ಲಿರುವ ನಮ್ಮ ಜನರಿಗೆ ಅದೊಂದು ಹಬ್ಬದ ವಾತಾವರಣ. ಎಲ್ಲೇ ಪೂಜೆ, ಪ್ರವಚನಾದಿಗಳು ನಡೆಯಲಿ, ಅಲ್ಲಿಗೆ ಹೋಗಲು ನಮ್ಮ ಹಿಂದೂ ಬಾಂಧವರಿಗೆ ಆಮಂತ್ರಣವೇ ಬೇಡ. ಎಲ್ಲ ಕಡೆಗೂ ಮುಕ್ತವಾಗಿ ಬಂದು ಭಾಗವಹಿಸುವ ಮತ್ತು ಶ್ರೀಗಳ ಪ್ರವಚನವನ್ನು ಆಲಿಸುವ ಅದಮ್ಯ ಉತ್ಸಾಹ! ಆ ಸಂಚಾರದಲ್ಲಿ ಪೂಜ್ಯರು ಹೇಳುತ್ತಿದ್ದ ನಮ್ಮ ಉಡುಪಿಯ ಕಡೆಗೋಲಿನ ಕತೆಯಂತೂ ಅದ್ಭುತವಾಗಿರುತ್ತಿತ್ತು. ಎಷ್ಟು ಸಲ ಕೇಳಿದರೂ ಮತ್ತೆ ಮತ್ತೆ ಕೇಳಬೇಕೆಂಬ ತುಡಿತ ಇನ್ನೂ ಹೆಚ್ಚುತ್ತಲಿತ್ತು! ಆಗ ನ್ಯೂಜೆರ್ಸಿ ಸುತ್ತಮುತ್ತಲಿನ ನಮ್ಮೆಲ್ಲ ಭಕ್ತರ ಸ್ಮೃತಿಪಟಲದಲ್ಲಿ ಅಚ್ಚೊತ್ತಿದ್ದೇ ಶ್ರೀಗಳು ಅತ್ಯಂತ ಪರಿಣಾಮಕಾರಿಯಾಗಿ ವರ್ಣಿಸಿದ ಶಾಲಗ್ರಾಮ ಶಿಲೆಯಲ್ಲಿ ವಿಶ್ವಕರ್ಮನಿಂದ ನಿರ್ಮಿತವಾದ ಉಡುಪಿಯ

ಶ್ರೀ ಕೃಷ್ಣನ ಸುಂದರ ವಿಗ್ರಹದ ಕತೆ! ಅಂದಿನಿಂದ 'ಕಡೆವ ಕಡೆಗೋಲು ನೇಣು ಸಹಿತಲಿ ಕಡಲಿನೊಳಗಿಂದ ಬಂದನ, ಒಡನೆ ಭಕ್ತರ ಬಿಡದೆ ಪಾಲಿಪ ರಂಗ ಉಡುಪಿಯ ಕೃಷ್ಣನ' ಎಂಬ ಶ್ರೀ ವಾದಿರಾಜರು ರಚಿಸಿದ ಹಾಡನ್ನು ಸಂಜೆಯ ಪೂಜೆಯ ವೇಳೆಗೆ ನಿತ್ಯ ಹಾಡುವಾಗಲಂತೂ ನಮಗೆ ಶಾಲಗ್ರಾಮ ಶಿಲಾರೂಪಿಯಾದ ಉಡುಪಿಯ ಕೃಷ್ಣನೇ ನಮ್ಮ ನ್ಯೂಜೆರ್ಸಿಯಲ್ಲೂ ಬಂದು ನಿಲ್ಲಬೇಕೆಂಬ ತುಡಿತ ಹೆಚ್ಚಾಗತೊಡಗಿತು.

## ನೂತನ ನಿವೇಶನದಲ್ಲಿ ಶ್ರೀ ಕೃಷ್ಣ ವೃಂದಾವನ

ನಂತರ 2008 ಇಸವಿಯ ಜನವರಿ ತಿಂಗಳಲ್ಲಿ ಪೂಜ್ಯ ಶ್ರೀಪಾದರು ಸರ್ವಜ್ಞಪೀಠವನ್ನೇರಿ ತಮ್ಮ ತೃತೀಯ ಕೃಷ್ಣಪೂಜಾ ಪರ್ಯಾಯವನ್ನು ಅತ್ಯಂತ ವೈಭವದಿಂದ ನೆರವೇರಿಸುತ್ತಿದ್ದರು. ಅದೇ ಸಮಯದಲ್ಲಿ, ಅಷ್ಟು ಕಾಲದ ತನಕ ಅನೇಕ ಸವಾಲುಗಳನ್ನು ಎದುರಿಸಿ ಬೆಳೆದು ಬಂದ ನಮ್ಮ ನ್ಯೂಜೆರ್ಸಿಯ ಶ್ರೀಕೃಷ್ಣವೃಂದಾವನಕ್ಕೂ ಶ್ರೀಗಳ ಸಂಕಲ್ಪ ಮತ್ತು ಶ್ರೀಕೃಷ್ಣನ ಅನುಗ್ರಹದಿಂದ ಅದ್ಭುತವಾದ ಯಶಸ್ಸೊಂದು ಲಭಿಸಿತ್ತು! ಮೆಟಚನ್ ಬಳಿ ಹೊಸದಾಗಿ ದೇಗುಲ ನಿರ್ಮಿಸುವ ನಮ್ಮ ಐದು ವರ್ಷಗಳ ಪ್ರಯತ್ನಕ್ಕೆ ಹಿನ್ನೆಡೆಯಾದರೂ, ನಮಗೆ ಎಡಿಸನ್ ಎಂಬಲ್ಲಿ ಮೂರೂವರೆ ಎಕರೆ ವಿಸ್ತೀರ್ಣದಲ್ಲಿ ಹೊಸತಾಗಿ ನಿರ್ಮಿಸಿದ, ಸುಸಜ್ಜಿತವಾದ ಮತ್ತು ಶ್ರೀಮಠದ ವೈಭವದ ನಿತ್ಯ ನಿರ್ವಹಣೆಗೆ ಹೇಳಿಮಾಡಿಸಿದಂತಿದ್ದ ಬೃಹತ್ ಚರ್ಚ್ ಒಂದನ್ನು ಖರೀದಿಸುವ ಯೋಗ ಬಂದಿತು! ಅದರೊಳಗಿನ ಪೂಜಾಗೃಹವಂತೂ ಅತ್ಯಂತ ವಿಶಾಲವಾಗಿತ್ತು ಮತ್ತು ಒಳಗಿನ ಮೂವತ್ತೈದು ಅಡಿ ಎತ್ತರದ ವಿಶಾಲಾವಕಾಶ ಉಡುಪಿ ಕೃಷ್ಣನ ನೂತನ ಗರ್ಭಗುಡಿಯನ್ನು ತನ್ನೊಡಲಿಗೆ ಸೇರಿಸಿಕೊಳ್ಳಲು ಸರ್ವ ಸಮರ್ಥವಾಗಿತ್ತು!

ಅಲ್ಲಿಯವರೆಗೆ ಅಂದರೆ 2002ನೇ ಇಸವಿಯಿಂದ ಆರಂಬಿಸಿ 2010ನೇ ಇಸವಿಯವರೆಗೂ ಶ್ರೀಮಠದಲ್ಲಿ ಉಡುಪಿ ಕೃಷ್ಣನ ಪುಟ್ಟ ಮತ್ತು ಚಂದದ ಪಂಚಲೋಹದ ಉತ್ಸವಮೂರ್ತಿಗಷ್ಟೇ ನಿತ್ಯ ಪೂಜೆ ನಡೆಯುತ್ತಿತ್ತು. ಶಾಸ್ತ್ರೋಕ್ತ ತ್ರಿಕಾಲಪೂಜೆ, ಸಂಕೀರ್ತನೆ, ವೈವಿಧ್ಯಮಯ ನೈವೇದ್ಯಾದಿಗಳ ಸಮರ್ಪಣೆ, ಸಂಗೀತ–ನೃತ್ಯ–ಪ್ರವಚನ ಇತ್ಯಾದಿ ಅನೇಕ ಪ್ರಕಾರಗಳಿಂದ ಯಾವ ವೈಭವಕ್ಕೂ ಕೊರತೆಯಾಗದಂತೆ ಶ್ರೀಕೃಷ್ಣನ ಸೇವಾಕೈಂಕರ್ಯ

ನಿರಂತರವಾಗಿ ನೆರವೇರುತ್ತಿತ್ತು. ನಂತರ 2010ನೇ ಇಸವಿಯಲ್ಲಿ ತಮ್ಮ ತೃತೀಯ ಪರ್ಯಾಯವನ್ನು ಯಶಸ್ವಿಯಾಗಿ ಪೂರೈಸಿದ ಪೂಜ್ಯ ಶ್ರೀಪಾದರು ಸ್ಥಳೀಯ ಭಕ್ತರ ವಿನಮ್ರ ವಿನಂತಿಯ ಮೇರೆಗೆ ಆ ವರ್ಷದ ತಮ್ಮ ಚಾತುರ್ಮಾಸ್ಯದ ದೀಕ್ಷೆಯನ್ನು ನ್ಯೂಜೆರ್ಸಿಯ ನೂತನ ಶ್ರೀ ಮಠದಲ್ಲೇ ಕೈಗೊಳ್ಳುವ ಸಂಕಲ್ಪಮಾಡಿದರು.

## ನ್ಯೂಜೆರ್ಸಿಗೆ ಶಾಲಗ್ರಾಮ ಶಿಲೆಯ ಕೃಷ್ಣನನ್ನು ಕರೆತರುವ ಸಂಕಲ್ಪ

ಅದೇ ಸಂದರ್ಭದಲ್ಲಿ ಶ್ರೀಗಳ ಪ್ರವಚನದಿಂದ ಪ್ರೇರಿತರಾಗಿದ್ದ ಅತ್ಯುತ್ಸಾಹಿ ಸ್ಥಳೀಯ ಭಕ್ತರಿಗೆ ಶ್ರೀಗಳೊಡನೆ ಮುಕ್ತವಾಗಿ ಮಾತನಾಡುವ, ವಿಮರ್ಶಿಸುವ ಅವಕಾಶವೂ ಲಭಿಸಿತು. ಆಗಲೇ ನ್ಯೂಜೆರ್ಸಿಯ ಶ್ರೀಮಠದಲ್ಲಿ ಅನ್ಯಾದೃಶವಾದ ಸುಂದರ ದಾರುಮಯ ಗರ್ಭಗುಡಿಯ ನಿರ್ಮಾಣ ಮತ್ತು ಅದರಲ್ಲಿ ಉಡುಪಿಯ ಕಡೆಗೋಲು ಕೃಷ್ಣನ ಸುಂದರ ವಿಗ್ರಹವನ್ನು ನೇಪಾಳದ ಶಾಲಗ್ರಾಮ ಶಿಲೆಯಲ್ಲಿಯೇ ನಿರ್ಮಿಸಿ ಸ್ಥಾಪನೆಗೈಯ್ಯುವ ನ್ಯೂಜೆರ್ಸಿಯ ಕೃಷ್ಣಭಕ್ತರ ಕನಸನ್ನು ನನಸಾಗಿಸುವ ಮಹತ್ಕಾರ್ಯಕ್ಕೆ ಬೀಜಾವಾಪವಾಯಿತು. ಪೂಜ್ಯ ಶ್ರೀಪಾದರೂ ಪ್ರಾದೇಶಿಕ ಇಂಜಿನಿಯರ್ ಮತ್ತು ಆರ್ಕಿಟೆಕ್ಟ್‌ಗಳೊಡನೆ ವಿಮರ್ಶಿಸಿ ಉತ್ತಮ ಮಾರ್ಗದರ್ಶನ ಮತ್ತು ಆಶೀರ್ವಾದದೊಂದಿಗೆ ಸ್ಥಳೀಯ ನಿರ್ವಹಣಾಧಿಕಾರಿಗಳನ್ನು ಮತ್ತು ಭಕ್ತವೃಂದನ್ನು ಆ ನಿಟ್ಟಿನಲ್ಲಿ ಮುಂದುವರಿಯುವಂತೆ ಆಜ್ಞಾಪಿಸಿದರು. ಆಗಲೇ ಪ್ರಾರಂಭವಾಗಿದ್ದು ಶಾಲಗ್ರಾಮಶಿಲೆಯ ಶ್ರೀಕೃಷ್ಣನನ್ನು ನ್ಯೂಜೆರ್ಸಿಗೆ ಕರೆತರುವ ನಮ್ಮ ಭಗೀರಥ ಪ್ರಯತ್ನ!

## ಶಾಲಗ್ರಾಮವೆಂದರೆ....

ಶಾಲಗ್ರಾಮವೆಂಬುವುದು ನೇಪಾಳದ ಹಿಮಾಲಯ ಪರ್ವತಶ್ರೇಣಿಯ ಕಣಿವೆಗಳ ನಡುವೆ ಹರಿಯುವ ಗಂಡಕೀನದಿಯ ತಪ್ಪಲಿನಲ್ಲಿರುವ ಒಂದು ಊರು. ಶಾಲವೆಂಬ ಹೆಸರಿನ ವೃಕ್ಷಗಳೇ ಅಲ್ಲಿ ಹೆಚ್ಚಿರುವ ಕಾರಣ ಆ ಪ್ರದೇಶಕ್ಕೆ ಶಾಲಗ್ರಾಮವೆಂಬ ಪುರಾಣ ಪ್ರಸಿದ್ಧ ಹೆಸರು. ಅಲ್ಲಿನ ಆ ಗಂಡಕೀನದಿಯಲ್ಲಿ ಮಾತ್ರ ದೊರಕುವ ಆ ಪವಿತ್ರ ಕಲ್ಲಿಗೆ ಶಾಲಗ್ರಾಮ ಶಿಲೆಯೆಂಬ ವಿಶಿಷ್ಟ ನಾಮಧೇಯ. ಸಾಮಾನ್ಯವಾಗಿ ಅತ್ಯಂತ ಕಠಿಣವಾಗಿರುವ ದಟ್ಟ ಕಪ್ಪು ಬಣ್ಣದಿಂದ ತೇಜೋಮಯವಾಗಿ ಕಂಗೊಳಿಸುವ ಸಣ್ಣಗಾತ್ರದ

ಶಾಲಗ್ರಾಮ ಶಿಲೆಗಳನ್ನು ನಾವೆಲ್ಲರೂ ನೋಡಿರುತ್ತೇವೆ. ಅನೇಕ ನಿಷ್ಠಾವಂತ ಬ್ರಾಹ್ಮಣರ ಮನೆಗಳಲ್ಲಿ ನೂರಾರುವರ್ಷಗಳಿಂದ ಅಂತಹ ಶಿಲೆಗಳನ್ನು ಪೂಜಿಸಿಕೊಂಡು ಬರುತ್ತಿದ್ದಾರೆ. ಅದನ್ನೊಂದು ಈ ಭೂಮಿಯಲ್ಲಿರುವ ದೇವರ ಸೃಷ್ಟಿಯ ಅದ್ಭುತವೆಂದೂ ಹೇಳಬಹುದು. ಕಲ್ಲಿನೊಳಗೆ ಅಚ್ಚುಕಟ್ಟಾಗಿ ನಿರ್ಮಿತವಾಗಿರುವ ಚಕ್ರಗಳೇ ಒಂದು ವಿಚಿತ್ರ. ಆ ಚಕ್ರಗಳ ಸ್ವರೂಪ ಮತ್ತು ಲಕ್ಷಣಗಳಿಗೆ ಅನುಸಾರವಾಗಿ ಆ ಶಿಲೆಗಳನ್ನು ಮಹಾವಿಷ್ಣುವಿನ ದಶಾವತಾರಾದಿ ರೂಪಗಳಿಂದ ಗುರುತಿಸಿ ಆರಾಧಿಸುತ್ತಾರೆ. ಅರ್ವಾಚೀನ ಸಂಶೋಧಕರು ಶಾಲಗ್ರಾಮ ಶಿಲಾಚಕ್ರಗಳನ್ನು ಫಾಸಿಲ್ ಎಂದು ಕರೆದು ಅವುಗಳ ಉತ್ಪತ್ತಿಯಾಗಿ ಹಲವು ಮಿಲಿಯನ್‌ಗಳಷ್ಟು ವರ್ಷಗಳಾಗಿವೆ ಎಂದು ಹೇಳುತ್ತಾರೆ. ನಮ್ಮ ಪ್ರಾಚೀನ ಪುರಾಣ ಗ್ರಂಥಗಳಲ್ಲಿ ಈ ಪವಿತ್ರಶಿಲೆಗಳ ಉಲ್ಲೇಖಗಳಿದ್ದು ಪರಮಾತ್ಮನ ವಿಶೇಷ ಸನ್ನಿಧಾನವಿರುವ ಶಾಲಗ್ರಾಮ ಶಿಲೆಯನ್ನು ಎಲ್ಲ ಭಕ್ತರೂ ತಮ್ಮ ಮನೆಗಳಲ್ಲಿ ನಿತ್ಯವೂ ಪೂಜಿಸಬೇಕು ಎಂಬುವುದಾಗಿ ವರ್ಣಿಸಿದ್ದಾರೆ. ಮತ್ತು ಈ ಪವಿತ್ರಶಿಲೆಯ ಮೇಲೆ ತುಳಸೀದಳವನ್ನಿಟ್ಟು ಶಂಖದ ಮುಖೇನ ಶುದ್ಧನೀರಿನ ಅಭಿಷೇಕವನ್ನು ಸಲ್ಲಿಸಿ ನಿತ್ಯ ತೀರ್ಥಪ್ರಾಶನ ಮಾಡಿದರೆ ನಮ್ಮ ದೇಹಶುದ್ಧಿಯಾಗುತ್ತದೆ ಎಂಬುವುದಾಗಿಯೂ ಸೂಚಿಸಿದ್ದಾರೆ.

## ಪ್ರಥಮ ಪ್ರಯತ್ನ

ಉಡುಪಿ ಕೃಷ್ಣನ ವಿಗ್ರಹವನ್ನು ತಯಾರಿಸಲು ಬೇಕಾದಷ್ಟು ಗಾತ್ರದ ಅಂತಹ ಲಕ್ಷಣೋಪೇತ ಶಾಲಗ್ರಾಮ ಶಿಲೆಯನ್ನು ಸಂಪಾದಿಸುವ ನಮ್ಮ ಮೊದಲ ಪ್ರಯತ್ನವಾಗಿ ಸ್ಥಳೀಯ ಶ್ರದ್ಧಾವಂತ ಭಕ್ತರನ್ನು ಸಂಪರ್ಕಿಸಿ ಸುಮಾರು ಮೂವತ್ತೈದು ಸಾವಿರ ಡಾಲರಿನಷ್ಟು ಹಣವನ್ನು ಸಂಗ್ರಹಿಸಿಸಲಾಯಿತು. ಅದರ ಜೊತೆಗೆ ಶಾಲಗ್ರಾಮಶಿಲೆಯ ಬಗ್ಗೆ ಸ್ಪಷ್ಟ ಮಾಹಿತಿಯುಳ್ಳ ಒಂದಷ್ಟು ಜನರನ್ನು ಸಂಪರ್ಕಿಸಿ ಅವರಿಂದ ಸೂಕ್ತ ಸಲಹೆಗಳನ್ನು ಪಡೆಯುವ ಕಾರ್ಯವಾಯಿತು. ನಂತರ ಉತ್ತರ ಭಾರತದ ಹರಿದ್ವಾರದ ವ್ಯಕ್ತಿಯೊಬ್ಬರ ಮುಖೇನ ನೇಪಾಳದ ದಾಮೋದರ ಕುಂಡದ ಬಳಿಯ ಸ್ಥಳವೊಂದಕ್ಕೆ ಸ್ಥಳೀಯ ಮುಳುಗು ತಜ್ಞರನ್ನು ಕಳುಹಿಸಿ ಶಾಲಗ್ರಾಮ ಶಿಲೆಯನ್ನು ಹುಡುಕುವ ನಮ್ಮ ಪ್ರಯತ್ನ ಫಲವನ್ನು ಕೊಟ್ಟಿತು! ಅನೇಕ ಸುಂದರ ಶಾಲಗ್ರಾಮಗಳ ಜೊತೆಗೆ ಸುಮಾರು

ಹತ್ತೊಂಭತ್ತು ಇಂಚು ಎತ್ತರ ಮತ್ತು ಹನ್ನೆರಡು ಇಂಚು ಅಗಲದ, ಇಪ್ಪತ್ತೈದು ಕೆ.ಜಿ. ತೂಕದ ಒಂದು ಬೃಹತ್ ಶಾಲಗ್ರಾಮ ಶಿಲೆಯೂ ನಮಗೆ ಲಭಿಸಿತು! ನೇಪಾಳದಿಂದ ಭೂಮಾರ್ಗದಲ್ಲಿ ದೆಹಲಿಯ ತನಕ ತಲುಪಿದ ಆ ಪವಿತ್ರ ಶಿಲೆಯನ್ನು ಶ್ರದ್ಧಾಭಕ್ತಿಯೊಂದಿಗೆ ಉಡುಪಿಯವರೆಗೆ ಕರೆತಂದದ್ದು ನಮ್ಮ ಶ್ರೀಮಠದ ಚೆನ್ನೈ ಶಾಖೆಯ ಅರ್ಚಕರು!

## ಶ್ರೀಪುತ್ತಿಗೆ ವಿದ್ಯಾಪೀಠದಲ್ಲಿ ಪ್ರಥಮ ಶಿಲೆ

ಮುಂದೆ ಕಾರ್ಕಳದ ಪ್ರಸಿದ್ಧ ಶಿಲ್ಪಿಯೊಬ್ಬರ ಬಳಿಗೆ ಆ ಕಲ್ಲನ್ನು ಜಾಗರೂಕತೆಯಿಂದ ಸಾಗಿಸಲಾಯಿತು. ಆ ಶಿಲ್ಪಿಗಳೂ ಬಹಳ ಶ್ರದ್ಧಾವಂತರು. ಆದರೇನು ಮಾಡೋಣ? ನಮಗೆ ಶ್ರೀಕೃಷ್ಣನಿತ್ತ ಪರೀಕ್ಷೆಯೋ ಏನೋ ಗೊತ್ತಿಲ್ಲ. ಶಿಲ್ಪಿಗಳ ಉಳಿಯ ಕೆಲವೇ ಪೆಟ್ಟಿಗೆ ಆ ಕಠಿಣ ಶಿಲೆಯಲ್ಲಿ ಅಡ್ಡಲಾಗಿ ಒಂದು ಗೆರೆ ಬಂದುಬಿಟ್ಟಿತು! ಸಹಜವಾಗಿಯೇ ಒಳಗೆ ಟೊಳ್ಳಾಗಿ ಚಕ್ರಗಳನ್ನು ಹೊಂದಿರುವ ಕಾರಣದಿಂದಲೋ ಏನೋ, ಆ ಕಠಿಣ ಶಾಲಗ್ರಾಮ ಶಿಲೆ ಸೂಕ್ಷ್ಮಸಂವೇದಿಯಾಗಿತ್ತು. ಇನ್ನೂ ಪ್ರಯತ್ನಿಸಿದರೆ ಒಡೆದೇ ಹೋಗಬಹುದೇನೋ ಎಂಬ ಭಯದಿಂದ ಆ ಶಿಲ್ಪಿಗಳು ಕೆತ್ತನೆಯ ಕೆಲಸವನ್ನು ಮುಂದುವರಿಸುವ ಧೈರ್ಯಮಾಡಲಿಲ್ಲ. ಮುಂದೆ ಸ್ವಲ್ಪಸಮಯದ ನಂತರ ಯಥಾಸ್ಥಿತಿಯಲ್ಲಿ ಆ ಶಿಲೆಯನ್ನು ಶ್ರೀ ಪುತ್ತಿಗೆ ವಿದ್ಯಪೀಠಕ್ಕೆ ಸಾಗಿಸಿ ಅಲ್ಲಿ ನಿತ್ಯವೂ ಪೂಜಿಸುವಂತೆ ಪೂಜ್ಯ ಶ್ರೀ ಪಾದರು ಆಜ್ಞಾಪಿಸಿದರು. ಆ ಪುಣ್ಯಶಿಲೆಯು ಶ್ರೀಪುತ್ತಿಗೆ ವಿದ್ಯಾಪೀಠದಲ್ಲಿ ಇಂದಿಗೂ ಪೂಜೆಗೊಳ್ಳುತ್ತಿದೆ ಮತ್ತು ದರ್ಶನಕ್ಕೆ ಲಭ್ಯವಿದೆ!

## ವಿನೂತನ ಶೈಲಿಯ ಗರ್ಭಗೃಹದ ನಿರ್ಮಾಣ

ಮಹತ್ಕಾರ್ಯವನ್ನು ಸಾಧಿಸುವ ನಿಟ್ಟಿನಲ್ಲಿ ಸಂದ ನಮ್ಮ ಅವಿರತ ಪ್ರಯತ್ನಗಳು ನಿಷ್ಫಲವಾದಾಗ ನಮಗೆ ನೋವಾಗುವುದು ಸಹಜ. ಮತ್ತು ನಮ್ಮ ಕಳೆದುಹೋದ ಉತ್ಸಾಹವು ಪುನಶ್ಚೇತನಗೊಳ್ಳಲು ನಮಗೆ ಸ್ವಲ್ಪ ಸಮಯವೂ ಬೇಕಾಗುತ್ತದೆ. ಮುಂದೆ 2015ನೇ ಇಸವಿಯಲ್ಲಿ ನೂತನ ಗರ್ಭಗುಡಿಯನ್ನು ನಿರ್ಮಿಸಿ ಶಾಲಗ್ರಾಮ ಶಿಲಾಕೃಷ್ಣನನ್ನು ತಂದು ನಿಲ್ಲಿಸಲೇಬೇಕೆನ್ನುವ ನ್ಯೂಜೆರ್ಸಿಯ ಶ್ರೀಕೃಷ್ಣನ ಭಕ್ತರ ಉತ್ಸಾಹವು ಮತ್ತೆ ಪುಟಿದೆದ್ದಿತು. ಬೆಂಗಳೂರು ಮೂಲದ ಸ್ಥಳೀಯ ಇಂಜಿನಿಯರ್ (ಶ್ರೀ ಸಂಜಯ್

ಗುರುರಾಜ್), ಮತ್ತು ನೇಪಾಳ (ಶ್ರೀಮತಿ ನಿರೂಪಾ ರಾಣಾ) ಮತ್ತು ಗುಜರಾತ್ ಮೂಲದ ಆರ್ಕಿಟೆಕ್ಟ್ (ಶ್ರೀ ಪ್ರಭು ಪಟೇಲ್) ಮತ್ತು ಅನೇಕ ಭಕ್ತರ ಸಹಯೋಗದೊಂದಿಗೆ ಶ್ರೀಪಾದರ ಮಾರ್ಗದರ್ಶನದಂತೆ ಸಾಗುವಾನಿ ಮರ ಮತ್ತು ಕಪ್ಪುಶಿಲೆಯ ಸುಂದರ ಗರ್ಭಗುಡಿಯ ನಿರ್ಮಾಣಕ್ಕೆ ಸ್ಪಷ್ಟವಾದ ಯೋಜನೆಯನ್ನು ನಿರೂಪಿಸಲಾಯಿತು. ಸುಮಾರು ಒಂದು ಮಿಲಿಯನ್ ಡಾಲರ್ ವೆಚ್ಚದ ಈ ಯೋಜನೆಯ ಪ್ರಕಾರ ಭಾರತದಲ್ಲಿ ಕರಿಕಲ್ಲು ಮತ್ತು ಮರದ ಕೆತ್ತನೆಯ ಎಲ್ಲ ಕೆಲಸಗಳನ್ನು ಮಾಡಿಸಿ ಹಡಗಿನ ಮೂಲಕ ನ್ಯೂಜೆರ್ಸಿಗೆ ತರಿಸುವ ಸಂಕಲ್ಪಮಾಡಲಾಯಿತು! ಅದಕ್ಕೋಸ್ಕರ ಬರ್ಮಾದೇಶದಿಂದ ಸಾಗುವಾನಿ ಮರಗಳನ್ನು ಖರೀದಿಸಿ, ಹಡಗಿನ ಮೂಲಕ ಮಂಗಳೂರಿಗೆ ತರಿಸಿ, ನಂತರ ಕೆತ್ತನೆಗೋಸ್ಕರ ಮೂಡಬಿದಿರೆಯ ಹೆಸರಾಂತ ದಾರುಶಿಲ್ಪಿ 'ಶ್ರೀ ಹರೀಶ್ ಆಚಾರ್' ಅವರ ವರ್ಕ್ ಶಾಪ್‌ಗೆ ಆ ಮರಗಳನ್ನ ಸಾಗಿಸಲಾಯಿತು! ಅದರಂತೆಯೇ ಕಾರ್ಕಳದ ಬಳಿಯ ನೆಲ್ಲಿಕಾರು ಎಂಬಲ್ಲಿಂದ ಸಂಗ್ರಹಿಸಿದ ಕರಿಶಿಲೆಯಲ್ಲಿ ತಳಪಾಯದ ಸುಂದರ ಪ್ರಭೇದಗಳನ್ನು ಸುಂದರವಾಗಿ ನಿರ್ಮಿಸಿಕೊಟ್ಟ ಪ್ರಸಿದ್ಧ ಶಿಲ್ಪಿ ಮುರುಡೇಶ್ವರದ 'ಶ್ರೀ ರಾಜು' ಅವರು! ಹೀಗೆ ನಮ್ಮ ನ್ಯೂಜೆರ್ಸಿಯ ಶ್ರೀಕೃಷ್ಣನಿಗೆ ಅತ್ಯಂತ ಅಪೂರ್ವವಾದ ಶೈಲಿಯಲ್ಲಿ ಸುಂದರವಾದ ಗರ್ಭಗೃಹವೊಂದು ನಿರ್ಮಾಣವಾಗುತ್ತಿದ್ದರೆ, ಅದರೊಳಗೆ ಶಾಲಗ್ರಾಮ ಶಿಲೆಯ ಶ್ರೀ ಕೃಷ್ಣನೇ ಸ್ಥಾಪಿತನಾಗಬೇಕೆಂಬ ನಮ್ಮ ಅಷ್ಟು ವರ್ಷಗಳ ಆಸೆಯನ್ನು ಕೈಬಿಡುವುದು ಸಾಧ್ಯವೇ? ಅದಕ್ಕೋಸ್ಕರ ಗುರುಗಳ ಅನುಮತಿ ಮತ್ತು ದೇವರ ಅನುಗ್ರಹವನ್ನು ಪ್ರಾರ್ಥಿಸಿ ಮತ್ತೊಂದು ಸಲ ಪ್ರಯತ್ನಿಸುವ ಸಂಕಲ್ಪಮಾಡಲಾಯಿತು.

## ನೇಪಾಳದಲ್ಲಿ ನಮ್ಮ ದ್ವಿತೀಯ ಪ್ರಯತ್ನ

ಅಮೇರಿಕಾದಲ್ಲಿ ಅನೇಕ ನೇಪಾಳಿಗರೂ ವಲಸೆ ಬಂದು ವಾಸಿಸುತ್ತಿರುವುದು ನಮಗೆ ಮುಂಚಿತವಾಗಿಯೇ ತಿಳಿದಿತ್ತು. ಆ ಸಮಯದಲ್ಲಿ ನೇಪಾಳಿಗರ ಸ್ಥಳೀಯ ಸಂಘಟನೆಯೊಂದರ ಮುಖ್ಯಸ್ಥರಾಗಿದ್ದವರು ಮೆಟಚನ್‌ನಲ್ಲಿ ವಾಸಿಸುತ್ತಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಶ್ರೀಯುತ ಅನಂತ ರಿಸಾಲ್ ಎಂಬುವವರು. ಅವರನ್ನು ಸಂಪರ್ಕಿಸಿ ನಮ್ಮ ಸಂಕಲ್ಪವನ್ನು ವಿವರಿಸಿದಾಗ ಸಂಪೂರ್ಣ ಸಹಕಾರ ನೀಡುವ ಭರವಸೆಯನ್ನಿತ್ತರು.

ನೇಪಾಳದ ಕಾಠ್ಮಂಡು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದ ಅವರ ತಂದೆಯವರ ಮೂಲಕ ಶಾಲಗ್ರಾಮ ಶಿಲಾನ್ವೇಷಣೆಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿಕೊಟ್ಟರು. ಕಾಠ್ಮಂಡುವಿನಿಂದ ನೂರಾರು ಮೈಲಿ ದೂರದ ನಗರ ಪೋಖ್ರ. ಅಲ್ಲಿಂದಲೂ ಬಹುದೂರದ ಪರ್ವತಗಳೆಡೆಯ ಆಳ ಕಂದರದಲ್ಲಿ ಇಳಿದು, ಸುದೀರ್ಘವಾಗಿ ಹರಿಯುವ ಗಂಡಕೀ ನದಿಯಲ್ಲಿ, ಕಲ್ಲುಗಳ ರಾಶಿಯ ನಡುವೆ ನಮಗೆ ಬೇಕಾದ ಶಾಲಗ್ರಾಮ ಶಿಲೆಯನ್ನು ಹುಡುಕಬೇಕು! ಅಂತಹ ಜಾಗಕ್ಕೆ ಹೋಗಲು ಬೇಕಾದ ವಿಶೇಷ ವಾಹನ ಮತ್ತು ಸರಕಾರದ ಅನುಮತಿಯನ್ನೂ ಶ್ರೀಯುತ ಅನಂತ ರಿಸಾಲರು ನಮಗೆ ದೊರಕಿಸಿಕೊಟ್ಟರು. ಆದರೆ ಅಲ್ಲಿಗೆ ಹೋಗಿ ಶಿಲೆಯನ್ನು ಹುಡುಕುವವರು ಯಾರು?

## ಶಿಲ್ಪಿಗಳನ್ನು ನೇಪಾಳಕ್ಕೆ ಕಳಿಸಿದ್ದು

ಆಗ ನಮಗೆ ಮತ್ತೆ ನೆಪಾಗಿದ್ದು ಪೂಜ್ಯ ಶ್ರೀಪಾದರ ಉಡುಪಿಕೃಷ್ಣನ ಸ್ವಾರಸ್ಯಮಯ ಕತೆಯ ಪ್ರವಚನ. ರುಗ್ಮಿಣೀದೇವಿಯ ಅಪೇಕ್ಷೆಯಂತೆ, ಸ್ವತಃ ಶ್ರೀಕೃಷ್ಣನೇ ತನ್ನ ಸುಂದರ ವಿಗ್ರಹವನ್ನು ಕೆತ್ತಿಕೊಡುವಂತೆ ವಿಶ್ವಕರ್ಮನಿಗೆ ಆಜ್ಞಾಪಿಸಿದ್ದು, ಅದನ್ನು ರುಕ್ಮಿಣಿಯು ಪೂಜಿಸಿದ್ದು ನಂತರ ಕಾಲಾನಂತರದಲ್ಲಿ ಅದು ಶ್ರೀ ಮಧ್ವಾಚಾರ್ಯರಿಗೆ ಪ್ರಾಪ್ತಿಯಾಗಿ ತದನಂತರ ಉಡುಪಿಯಲ್ಲಿ ಪ್ರತಿಷ್ಠಾಪನೆಯಾಗಿದ್ದು ಇತ್ಯಾದಿ ಕತೆಗಳು ಮತ್ತೆ ಮತ್ತೆ ನಮಗೆ ನೆನಪಾಗುತ್ತಲೇ ಇದ್ದವು. ಆ ಕಥಾಪ್ರಭಾವದಿಂದಾಗಿ, ವಿಶ್ವಕರ್ಮ ಸಮುದಾಯದವರೇ ನೇಪಾಳಕ್ಕೆ ಹೋಗಿ ನಮ್ಮ ಕೃಷ್ಣನ ವಿಗ್ರಹಕ್ಕೆ ಬೇಕಾದ ಶಾಲಗ್ರಾಮ ಶಿಲೆಯನ್ನು ಹುಡುಕಲಿ ಮತ್ತು ವಿಗ್ರಹವನ್ನು ಕೂಡ ಅವರೇ ನಿರ್ಮಿಸಿ ಕೊಡಲಿ ಎಂಬುವುದು ನಮ್ಮ ಅಪೇಕ್ಷೆಯಾಗಿತ್ತು. ಆಗ ತಾನೇ ನಮ್ಮ ಶ್ರೀಮಂದಿರದ ಅಪೂರ್ವ ಗರ್ಭಗುಡಿಯನ್ನು ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಗೊಂಡು ನಮಗೆ ಆಪ್ತರೆನಿಸಿದ ಪ್ರಸಿದ್ಧ ದಾರುಶಿಲ್ಪಿಗಳಾದ ಶ್ರೀ ಹರೀಶ್ ಆಚಾರ್ ಅವರನ್ನು ಕೇಳಿಕೊಂಡೆವು. ಅವರು ಸೂಚಿಸಿದಂತೆ ಸಾತ್ವಿಕ ಮತ್ತು ಪ್ರತಿಭಾವಂತ ಶಿಲ್ಪಿಗಳಾದ ಸಾಗರದ ಶ್ರೀ ಹರೀಶ್ ಮತ್ತು ಶಿವಮೊಗ್ಗದ ಶ್ರೀ ನಾಗರಾಜ್ ಅವರನ್ನು ಸಂಪರ್ಕಿಸಲಾಯಿತು. ಅವರೂ ಸಂತೋಷದಿಂದ ಒಪ್ಪಿಕೊಂಡರು. ನಂತರ ಅವರನ್ನು ನೇಪಾಳಕ್ಕೆ ಕಳಿಸುವ ವ್ಯವಸ್ಥೆ

ಮಾಡಲಾಯಿತು. ಅವರೀರ್ವರೂ ಮಂಗಳೂರಿನಿಂದ ವಿಮಾನದಲ್ಲಿ ದೆಹಲಿ ಮೂಲಕ ಕಾಠ್ಮಂಡುವಿಗೆ ಕ್ಷೇಮವಾಗಿ ತಲುಪಿದರು.

## ಗಂಡಕೀನದಿಯ ದುರ್ಗಮ ಪ್ರದೇಶದ ಪರಿಸ್ಥಿತಿ

ನಂತರ ಅವರನ್ನು ಶ್ರೀ ಅನಂತ ರಿಸಾಲರು ಮಾಡಿಸಿಕೊಟ್ಟ ವ್ಯವಸ್ಥೆಗಳಿಗನುಗುಣವಾಗಿ ಭೂಮಾರ್ಗದಲ್ಲಿ ಪೋಖ್ರಾ ಪಟ್ಟಣಕ್ಕೆ ಮತ್ತು ಅಲ್ಲಿಂದಲೂ ದೂರದಲ್ಲಿದ್ದ ಹಳ್ಳಿಗಳೆಡೆಗೆ ಕರೆದೊಯ್ಯಲಾಯಿತು. ವಿಚಿತ್ರವೆಂದರೆ ಆ ಇಬ್ಬರು ಶಿಲ್ಪಿಗಳೂ ತಾವು ಶ್ರೀ ಕೃಷ್ಣನ ವಿಗ್ರಹವನ್ನು ನಿರ್ಮಿಸಲು ವಿಶಿಷ್ಟವಾದ ಶಿಲೆಯನ್ನು ಹುಡುಕಲು ದೂರದ ನೇಪಾಳಕ್ಕೆ ಹೊರಟಿದ್ದೇವೆ ಎಂಬ ಉತ್ಸಾಹವನ್ನು ತಲೆಯಲ್ಲಿ ಹೊತ್ತಿದ್ದರೇ ಹೊರತು ಮತ್ಯಾವ ವಿಷಯದ ಬಗ್ಗೆಯೂ ಅವರು ಯೋಚಿಸಿರಲಿಲ್ಲ ! ಅಲ್ಲಿಗೆ ಹೋದಮೇಲೆ ಹೊಸದೇಶ, ಹೊಸ ಜನರು, ಹೊಸ ಭಾಷೆ, ವಾತಾವರಣ ಮತ್ತು ಆಹಾರ ಪದ್ಧತಿ ಅವರನ್ನು ವಿಚಲಿತರನ್ನಾಗಿಸಿತು! ಕೇವಲ ಕನ್ನಡಭಾಷಿಗರಾಗಿದ್ದ ನಮ್ಮ ಶಿಲ್ಪಿಗಳಿಗೆ ಅಲ್ಪ ಸ್ವಲ್ಪ ಹಿಂದಿಯೂ ಗೊತ್ತಿತ್ತು. ಆದರೆ ಹೆಚ್ಚಿನ ಆ ಹಳ್ಳಿಗರು ಮಾತನಾಡುತ್ತಿದ್ದದ್ದು ನೇಪಾಳಿ ಭಾಷೆಯನ್ನು ಮಾತ್ರ! ಭಕ್ತಿಭಾವಕ್ಕೆ ಮತ್ತು ಪ್ರೀತಿಗೆ ಭಾಷೆ ಬೇಕೇ? ಅವರೆಲ್ಲರೂ ಸನಾತನ ಧರ್ಮೀಯರು ಮತ್ತು ಶ್ರೀಕೃಷ್ಣನ ಪರಮ ಭಕ್ತರು. ಕೃಷ್ಣನ ವಿಗ್ರಹಕ್ಕಾಗಿ ನಮ್ಮೂರಿನ ಶಾಲಗ್ರಾಮ ಶಿಲೆಯನ್ನು ಹುಡುಕಲು ಬಂದಿದ್ದಾರೆ ಎಂಬ ಸುದ್ದಿಯಷ್ಟೇ ಸಾಕಾಗಿತ್ತು ಆ ಹಳ್ಳಿಯ ಮುಗ್ಧ ಭಕ್ತರಿಗೆ ಈ ಶಿಲ್ಪಿಗಳನ್ನು ತಮ್ಮ ವಿಶೇಷ ಅತಿಥಿಗಳೆಂಬಂತೆ ಪ್ರೀತಿಯಿಂದ ನೋಡಿಕೊಳ್ಳಲು! ತಮಗೆ ತಿಳಿದಂತೆ ಕೃಷ್ಣನನ್ನು ಹುಡುಕಲು ಬಂದವರಿಗೆಂದು ಭಕ್ತಿ ಮತ್ತು ಗೌರವದಿಂದ ಯಥೋಚಿತ ಊಟ, ಉಪಹಾರ ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಿದ್ದಲ್ಲದೆ ಶಿಲೆಯನ್ನು ಹುಡುಕಲು ನಿಮ್ಮ ಜೊತೆ ನಾವೂ ಬರುತ್ತೇವೆ, ಸಂಪೂರ್ಣ ಸಹಕಾರ ನೀಡುತ್ತೇವೆ ಎಂಬ ಭರವಸೆಯನ್ನೂ ಕೊಟ್ಟರು! ನಮ್ಮ ಶಿಲ್ಪಿಗಳಿಗೆ ಅಲ್ಲಿನ ಚಳಿಯ ವಾತಾವರಣ, ಭಾಷಾಸಮಸ್ಯೆ ಮತ್ತು ಆಹಾರಕ್ಕೆ ಹೊಂದಿಕೊಳ್ಳಲು ಮೊದಲ ಕೆಲ ದಿನಗಳಲ್ಲಿ ತುಂಬಾ ಕಷ್ಟವೆನಿಸಿತು. ಆದರೂ ಕೃಷ್ಣನಿಗೋಸ್ಕರ ಸೂಕ್ತ ಶಿಲೆಯನ್ನು ಹುಡುಕಲು

ಹೊರಟ ತಮ್ಮ ಧ್ಯೇಯಕ್ಕೆ ಬದ್ಧರಾಗಿದ್ದ ಆ ಪುಣ್ಯಾತ್ಮರು ತಾವು ನಿಯೋಜಿಸಲ್ಪಟ್ಟ ಕಾರ್ಯವನ್ನು ಸಾಧಿಸಿಯೇ ಮರಳುವ ನಿರ್ಧಾರಮಾಡಿದರು.

## ನಿರಂತರ ಹುಡುಕಾಟ ಮತ್ತು ಸ್ಥಳೀಯರ ಸಹಕಾರ

ಪ್ರತಿದಿನ ಮುಂಜಾನೆಯ ತಮ್ಮ ನಿತ್ಯ ವಿಧಿಗಳನ್ನು ಮುಗಿಸಿದ ಬಳಿಕ ಚಹಾ ಮತ್ತು ಉಪಾಹಾರವನ್ನು ಸೇವಿಸಿ ನಮ್ಮ ಶಿಲ್ಪಿಗಳು ಹಳ್ಳಿಗರ ಮಾರ್ಗದರ್ಶನದಂತೆ ಅವರಜೊತೆ ಮೈಲಿಗಟ್ಟಲೆ ನಡೆಯಬೇಕಿತ್ತು ! ಕಡಿದಾದ ದಾರಿ. ಕೊರೆಯುವ ಚಳಿ ಮತ್ತು ನೂರಾರು ಅಡಿ ಆಳದ ಕಂದಕದ ಮೂಲಕ ಇಳಿದು ಗಂಡಕೀ ನದಿಯ ಬಳಿಗೆ ಸಾಗಬೇಕಿತ್ತು! ಅಷ್ಟು ಕಷ್ಟಪಟ್ಟು ನದಿಯ ಬಳಿಗೆ ಬಂದಿಳಿದರೆ ಅವರ ಕಣ್ಣಿಗೆ ಕಾಣುತ್ತಿದ್ದದ್ದು ವೇಗವಾಗಿ ಹರಿಯುವ ನದಿ ಮತ್ತು ಸುತ್ತಲೂ ಕೇವಲ ಕಲ್ಲುಗಳ ರಾಶಿ! ಅದರಲ್ಲಿವರು ಕಪ್ಪುಬಣ್ಣದ ಶಾಲಗ್ರಾಮ ಶಿಲೆಯನ್ನು ಹುಡುಕಬೇಕು! ಚಿಕ್ಕ ಗಾತ್ರದ ಕಪ್ಪು ಶಿಲೆಗಳೇನೋ ಅಲ್ಲಲ್ಲಿ ಕಾಣ ಸಿಗುತ್ತಿದ್ದವು. ಅವುಗಳ ನಡುವೆ ನಮಗೆ ಬೇಕಾದ ದೊಡ್ಡ ಶಿಲೆಯನ್ನು ಹುಡುಕುವುದು ಮಾತ್ರ ಬಹಳ ಕಷ್ಟವೆನಿಸಿತು! ನಡೆದು ನಡೆದು ಕಾಲು ನೋವು ಒಂದು ಕಡೆಯಾದರೆ ಬಗ್ಗಿ ಬಗ್ಗಿ ಬೆನ್ನು ಮತ್ತು ಕತ್ತು ನೋವು ಕೂಡ ಅವರನ್ನು ಬಾಧಿಸತೊಡಗಿತು! ಆದರೆ ತಮ್ಮ ಜೊತೆಗೆ ಎಲ್ಲ ಕಡೆ ನಡೆಯುತ್ತಿದ್ದ ಮತ್ತು ಎಲ್ಲ ರೀತಿಯಿಂದಲೂ ಸಹಕರಿಸುತ್ತಿದ್ದ ಆ ಮುಗ್ಧ ಹಳ್ಳಿಜನರ ಕೃಷ್ಣಭಕ್ತಿ, ಪ್ರೀತಿ ಮತ್ತು ಗೌರವ ನಮ್ಮ ಶಿಲ್ಪಿಗಳಿಗೆ ಉತ್ಸಾಹವನ್ನು ತಂದುಕೊಡುತ್ತಿತ್ತು!

ಹೀಗೆ ಒಂದೆರಡು ವಾರಗಳೇ ಕಳೆಯಿತು. ಪ್ರತಿದಿನವೂ ನದೀ ತೀರದ ದಾರಿಯಲ್ಲಿ ಹುಡುಕುತ್ತಾ ನಡೆಯುತ್ತಾ ಬಹಳ ದೂರ ಸಾಗಿದರು. ಆ ಹಳ್ಳಿಗರು ಬೇರೆ ಬೇರೆ ಸ್ಥಳಗಳಲ್ಲಿ ಶಿಲ್ಪಿಗಳಿಗೆ ಊಟೋಪಚಾರ ಮತ್ತು ವಾಸ್ತವ್ಯದ ವ್ಯವಸ್ಥೆಗಳನ್ನು ಮಾಡುತ್ತಲಿದ್ದರು. ಎಲ್ಲಿ ಹೋದರೂ ನಮ್ಮ ಶಿಲ್ಪಿಗಳಿಗೆ ಮಾತ್ರ ಆ ಮುಗ್ಧ ಜನರ ಅದೇ ಗೌರವ ಮತ್ತು ಪ್ರೀತಿಯ ಉಪಚಾರ ಮಾತ್ರ ನಿತ್ಯವೂ ಸಿಗುತ್ತಲಿತ್ತು. ಮತ್ತು ಅವರ ಜೊತೆಗೆ ಶಿಲಾನ್ವೇಷಣೆಗೆಂದು ನಡೆದು ಬರುವ ಹಳ್ಳಿಗರ ಸಂಖ್ಯೆಯೂ ಹೆಚ್ಚುತ್ತಲೇ ಇತ್ತು! ಭಾಷಾಸಮಸ್ಯೆಯ ಹೊರತಾಗಿಯೂ ಅಲ್ಪ ಸ್ವಲ್ಪ ಹಿಂದಿಯೊಂದಿಗೆ ಆ

ನೇಪಾಳಿಗರೊಡನೆಯ ಇವರ ಸಂವಹನವೂ ಸುಲಲಿತವಾಗಿ ನಡೆಯುತ್ತಿತ್ತು! ಆತ್ಮೀಯತೆಯೂ ಬೆಳೆದುಬಿಟ್ಟಿತು. ಆದರೂ ದುರ್ಗಮ ದಾರಿಯಲ್ಲಿ, ನದಿಯ ನೀರಿನಲ್ಲಿ ನಿತ್ಯದ ನಡಿಗೆ ಮತ್ತು ಶಿಲೆಯನ್ನು ಹುಡುಕುವ ಪ್ರಯತ್ನಗಳಿಂದ ನಮ್ಮ ಶಿಲ್ಪಿಗಳು ಸುಸ್ತಾಗಿಬಿಟ್ಟರು. ಮೊಬೈಲ್ ನೆಟ್ ವರ್ಕ್ ಸಿಗುವ ದಿನಗಳಲ್ಲಿ, ಸ್ಥಳಗಳಲ್ಲಿ ಅವರ ಜೊತೆಗೆ ದೂರವಾಣಿಯ ಮೂಲಕ ನಮ್ಮ ಮಾತುಕತೆಯೂ ನಡೆಯುತ್ತಿತ್ತು. ತನ್ಮೂಲಕ ಅವರಿಗೆ ಉತ್ತೇಜನವನ್ನು ಕೊಡುವ ಪ್ರಯತ್ನವನ್ನೂ ನಾವೂ ಮಾಡುತ್ತಿದ್ದೆವು.

## ಗೋಮಾತೆಯೇ ಬಂದು ಶಿಲೆಯನ್ನು ತೋರಿಸಿದ್ದು

ಮತ್ತೂ ಕೆಲವು ದಿನಗಳು ಇದೇ ರೀತಿಯ ಪ್ರಯತ್ನಗಳೊಂದಿಗೆ ಹೀಗೇ ಕಳೆದುಹೋದವು. ಫಲಿತಾಂಶ ಶೂನ್ಯ. ಒಂದು ದಿನ ಮಧ್ಯಾಹ್ನಪರ್ಯಂತ ಇದೇ ರೀತಿಯ ಪ್ರಯತ್ನಗಳನ್ನು ಮುಂದುವರಿಸಿದ ನಮ್ಮ ಶಿಲ್ಪಿಗಳನ್ನು ಹಳ್ಳಿಗರು ಭೋಜನಕ್ಕೋಸ್ಕರ ನದೀತೀರದ ಮನೆಯೊಂದಕ್ಕೆ ಕರೆದುಕೊಂಡು ಹೋದರು. ಊಟದ ಬಳಿಕ ಜೊತೆಗಿದ್ದವರೆಲ್ಲರೂ ವಿಶ್ರಾಂತಿಯನ್ನು ಪಡೆಯುತ್ತಿದ್ದರೆ ನಮ್ಮ ಶಿಲ್ಪಿಗಳು ಮಾತ್ರ ಪರಸ್ಪರ ಮಾತನಾಡುತ್ತಾ ಅಲ್ಲೇ ಸುಮ್ಮನೆ ಸುತ್ತಾಡುತ್ತಿದ್ದರು. ಇಷ್ಟು ದಿನಗಳ ಬಳಿಕವೂ ನಮಗೆ ಶಿಲೆಯನ್ನು ಹುಡುಕಲು ಸಾಧ್ಯವಾಗಲಿಲ್ಲವಲ್ಲ ಎಂಬ ಬೇಸರದೊಂದಿಗೆ ಸುಮ್ಮನೆ ನಡೆಯುತ್ತಿದ್ದವರಿಗೆ ಅಲ್ಲೇ ನದೀತೀರದಲ್ಲಿ ಸ್ವಲ್ಪದೂರದಲ್ಲಿ ಹುಲ್ಲು ಮೇಯುತ್ತಿದ್ದ ಚಂದದ ಹಸುವೊಂದು ಕಣ್ಣಿಗೆ ಬಿತ್ತು. ಅದನ್ನೊಮ್ಮೆ ಮುಟ್ಟಿ ಮುದ್ದಿಸಿ ಬರೋಣವೆಂದು ಅದರ ಬಳಿ ಹೋದರೆ ಆ ಹಸುವು ಮತ್ತೂ ಸ್ವಲ್ಪ ಮುಂದೆ ಓಡಿ ಹೋಗಿ ಇದ್ದಕ್ಕಿದ್ದಂತೆ ಒಂದು ಕಡೆ ನಿಂತು ಬಾಲವನ್ನೆತ್ತಿ ಗೋಮಯವನ್ನು ವಿಸರ್ಜಿಸಿತು. ಮತ್ತು ಈಗ ಬನ್ನಿ ನನ್ನ ಬಳಿಗೆ ಎಂದು ಕರೆಯುವಂತೆ ಇವರನ್ನೇ ನೋಡುತ್ತಾ ಆ ಹಸುವು ಅಲ್ಲಿಯೇ ನಿಂತು ಬಿಟ್ಟಿತು. ಗೋಮಾತೆಯ ಆ ಮುಗ್ಧನೋಟಕ್ಕೆ ಮನಸೋತು ಅವಳನ್ನೊಮ್ಮೆ ಮುಟ್ಟಲೇಬೇಕೆಂದು ಮುನ್ನಡೆದ ನಮ್ಮ ಶಿಲ್ಪಿಗಳು, ಇನ್ನು ನಾವು ಆ ಗೋಮಯವನ್ನು ತುಳಿದು ಕಾಲಿಗೆ ಮೆತ್ತಿಸಿಕೊಳ್ಳುವುದು ಬೇಡವೆಂದು ನೆಲವನ್ನೊಮ್ಮೆ ಬಗ್ಗಿ ನೋಡಿದರೆ ಅವರಿಗೆ ಆಲ್ಲೊಂದು ಆಶ್ಚರ್ಯ ಕಾದಿತ್ತು! ಆ ಗೋಮಯ ಬಿದ್ದ

ಸ್ಥಳದಲ್ಲಿಯೇ ದೊಡ್ಡ ಗಾತ್ರದ ಕಲ್ಲೊಂದು ಕಂಡುಬಂದಿತು! ಕೂಡಲೇ ಅಲ್ಲಿದ್ದವರನ್ನೆಲ್ಲ ಕರೆದು ಜೊತೆಗಿದ್ದ ಹತ್ಯಾರುಗಳನ್ನೆಲ್ಲ ಬಳಸಿ ಬೃಹತ್ ಕಲ್ಲನ್ನು ಎತ್ತಿ ಬದಿಗೆ ಸರಿಸಲಾಯಿತು. ದೊಡ್ಡಗಾತ್ರದ ಆ ಕರಿ ಶಿಲೆಯನ್ನು ಕಂಡ ನಮ್ಮ ಶಿಲ್ಪಿಗಳು ಮತ್ತು ಅಷ್ಟೂ ದಿನಗಳಿಂದ ಈ ಶಿಲೆಯನ್ನು ಹುಡುಕಲೆಂದೇ ಪರಿಶ್ರಮ ಪಟ್ಟ ಆ ಹಳ್ಳಿಗರ ಆನಂದಕ್ಕಂತೂ ಪಾರವೇ ಇರಲಿಲ್ಲ! ದೇವರ ನಾಮ ಸ್ಮರಣೆಯೊಂದಿಗೆ ಆ ಅದ್ಭುತ ಕ್ಷಣವನ್ನು ಅಲ್ಲಿದ್ದವರೆಲ್ಲರೂ ಮನಃಪೂರ್ವಕವಾಗಿ ಸಂಭ್ರಮಿಸಿದರು. ದೂರವಾಣಿ ಮುಖೇನ ಆ ಸಮಾಚಾರ ನಮಗೂ ತಲುಪಿ ನಾವೂ ಸಂತಸಪಟ್ಟೆವು! ಹೀಗೆ ಗೋಪಾಲಕೃಷ್ಣನ ವಿಗ್ರಹಕ್ಕೆ ಬೇಕಾದ ಸೂಕ್ತಶಿಲೆಯನ್ನು ಗೋಮಾತೆಯೇ ನಮಗೆ ತೋರಿಸಿಕೊಟ್ಟಳು!

## ಪೋಖ್ರಾ ನಗರಕ್ಕೆ ಶಿಲೆಯ ರವಾನೆ

ಕಲ್ಲನ್ನೇನೋ ಹುಡುಕಿಯಾಯಿತು. ಆದರೆ ಅದು ಒಳಗೆ ಟೊಳ್ಳಾಗಿರದೆ ವಿಗ್ರಹ ಮಾಡಲು ಸಮರ್ಪಕವಾಗಿದೆಯೇ ಎಂಬುವುದನ್ನು ಕಂಡುಕೊಳ್ಳಬೇಕಲ್ಲ? ಅದಕ್ಕೋಸ್ಕರ ಶಿಲೆಯನ್ನು ಒಂದು ಸೈಜ್‌ಗೆ ಕಟ್ ಮಾಡಿ ಅದರ ಎಲ್ಲ ಭಾಗಗಳನ್ನು ಪರೀಕ್ಷಿಸಿ ನೋಡಬೇಕಿತ್ತು. ಶಿಲಾಪರೀಕ್ಷೆಗೆ ಬೇಕಾದ ಯಂತ್ರವನ್ನು ಬಳಸಲು ಅವರಿಗಾಗ ಸಮರ್ಪಕವಾದ ವಿದ್ಯುಚ್ಛಕ್ತಿಯ ಅವಶ್ಯಕತೆಯಿತ್ತು. ಹೇಳಿ ಕೇಳಿ ಅದೊಂದು ಹಳ್ಳಿ. ಗುಡಿಸಲಿನಂತಹ ಮನೆಗಳು. ತ್ರೀ ಫೇಸ್ ಕರೆಂಟ್ ಅವರಿಗೆ ಅಲ್ಲಿ ಸಿಗುವುದು ಸಾಧ್ಯವೇ? ಅದಕ್ಕಾಗಿ ಅಲ್ಲಿಂದ ಸುಮಾರು ನೂರೈವತ್ತು ಕಿ.ಮೀ. ದೂರದ ಪೋಖ್ರಾ ಪಟ್ಟಣಕ್ಕೆ ಅವರು ಶಿಲೆಯ ಜೊತೆಗೆ ಪ್ರಯಾಣಿಸಬೇಕಿತ್ತು. ಅದಕ್ಕೂ ಮೊದಲು ಆ ಬೃಹತ್ ಗಾತ್ರದ ಕಲ್ಲನ್ನು ಯಥಾವತ್ತಾಗಿ ಎತ್ತಿ ಜಾಗ್ರತೆಯಿಂದ ವಾಹನದ ಬಳಿಗೆ ಸಾಗಿಸಬೇಕಿತ್ತು. ಅಲ್ಲಿ ನೆರೆದಿದ್ದ ಸುಮಾರು ಮೂವತ್ತರಷ್ಟು ಹಳ್ಳಿಗರು ಒಟ್ಟುಸೇರಿ ದೊಡ್ಡಗಾತ್ರದ ಎರಡು ಮರದ ಶಲಾಕೆಗಳಿಗೆ ಆ ದೊಡ್ಡ ಕಲ್ಲನ್ನು ಹಗ್ಗದಿಂದ ಕಟ್ಟಿ ನಿಧಾನಕ್ಕೆ ಎತ್ತಿ ನದೀತೀರದಿಂದ ಮೇಲಕ್ಕೆ ತಂದು ಎತ್ತರದ ಬೆಟ್ಟವನ್ನೂ ಹತ್ತಿ ರಸ್ತೆಯ ತನಕ ಹೊತ್ತುಕೊಂಡು ಬಂದರು. ನಂತರ ವಿಶೇಷ ಸ್ಕಾರ್ಪಿಯೋ ವಾಹನದಲ್ಲಿ ಆ ಶಿಲೆಯನ್ನು ಪೋಖ್ರಾ ಪಟ್ಟಣಕ್ಕೆ

ತರುವಾಗ ಕತ್ತಲಾಯಿತು. ಅಲ್ಲಿಯೂ ನಮ್ಮ ಶಿಲ್ಪಿಗಳಿಗೆ ವಾಸ್ತವ್ಯಾದಿ ಎಲ್ಲ ವ್ಯವಸ್ಥೆಗಳನ್ನು ಮಾಡಲಾಯಿತು. ಅಂದು ರಾತ್ರಿ ಶಿಲ್ಪಿಗಳು ನೆಮ್ಮದಿಯಿಂದ ನಿದ್ದೆಯನ್ನೂ ಮಾಡಿದರು.

**ಶಿಲ್ಪಿಗಳ ಹಿಂಜರಿಕೆ**

ಮರುದಿನ ಮುಂಜಾನೆ ಆ ಶಿಲೆಯನ್ನು ಕತ್ತರಿಸಲು ತಮ್ಮ ಆಯುಧಗಳೊಂದಿಗೆ ಸನ್ನದ್ಧರಾದ ನಮ್ಮ ಶಿಲ್ಪಿಗಳು ತಮ್ಮ ಪರಂಪರಾಗತ ಸಂಪ್ರದಾಯದಂತೆ ಮೊದಲು ಆ ಶಿಲೆಗೆ ಪೂಜೆ ಮಾಡಲು ಉದ್ಯುಕ್ತರಾದರು. ಧೂಪ, ದೀಪಾದಿಗಳ ಜೊತೆಗೆ ಪುಷ್ಪಾರ್ಚನೆಯೊಂದಿಗೆ ದೇವರನ್ನು ಬೇಡಿಕೊಂಡು ಇನ್ನೇನು ಯಂತ್ರವನ್ನು ಬಳಸಿ ಶಿಲೆಯನ್ನು ಕತ್ತರಿಸಬೇಕು ಅನ್ನುವಷ್ಟರಲ್ಲಿ ಅವರೀರ್ವರೂ ಭಾವುಕರಾಗಿ ಬಿಟ್ಟರು! ಮನಸ್ಸಿನೊಳಗೇನೋ ಅವ್ಯಕ್ತವಾದ ಭಯ! ಕೈ ನಡುಗಲಾರಂಭಿಸಿತು! ಮತ್ತೆ ಮುಂದುವರಿಯಲಾಗಲಿಲ್ಲ! ಎಷ್ಟೋ ದಿನಗಳ ಪರಿಶ್ರಮ, ಪ್ರಯತ್ನಗಳ ನಂತರ ಸಿಕ್ಕಿದ ಅಪರೂಪದ ಶಿಲೆಯಿದು! ಒಂದು ವೇಳೆ ಒಡೆದು ನೋಡಿದ ನಂತರ ಈ ಶಿಲೆ ನಿಷ್ಪ್ರಯೋಜಕವೆಂದು ಕಂಡುಬಂದರೇನು ಮಾಡುವುದು? ಅಥವಾ ತಮ್ಮ ಕತ್ತರಿಸುವ ಯಂತ್ರದ ಒತ್ತಡಕ್ಕೆ ಈ ಶಿಲೆಯು ಒಡೆದು ಹೋದರೇನು ಮಾಡೋಣ? ಮತ್ತೆ ಆ ದುರ್ಗಮ ಸ್ಥಳಕ್ಕೆ ಹೋಗಿ ಮೊದಲಿನಿಂದ ಹುಡುಕಾಡುವುದೆಂದರೆ ನಮ್ಮಿಂದ ಸಾಧ್ಯವೇ? ಹೀಗೆ ಏನೇನೋ ಯೋಚನೆಗಳು ಮನಸ್ಸಿಗೆ ಬಂದು ನಮ್ಮ ಶಿಲ್ಪಿಗಳು ಮೌನಕ್ಕೆ ಶರಣಾದರು. ಆ ದಿನವಿಡೀ ದೇವರ ಸ್ಮರಣೆಯೊಂದಿಗೆ ಕಳೆದದ್ದು ಬಿಟ್ಟರೆ ಅವರಿಂದ ಮತ್ತೇನು ಮಾಡಲೂ ಸಾಧ್ಯವಾಗಲಿಲ್ಲ. ಮರುದಿವಸ ದೂರವಾಣಿಯ ಮುಖೇನ ನಾವು ಅವರನ್ನು ಸಂಪರ್ಕಿಸಿ ಧೈರ್ಯ ತುಂಬಿಸುವ ಪ್ರಯತ್ನ ಮಾಡಿದೆವು. ನಾವೂ ನ್ಯೂಜೆರ್ಸಿಯಲ್ಲಿ ಶ್ರೀ ಕೃಷ್ಣನಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸುವುದಾಗಿಯೂ ತಿಳಿಸಿದೆವು. ನಂತರ ಶಿಲ್ಪಿಗಳು ಮತ್ತೊಮ್ಮೆ ಆ ಶಿಲೆಯನ್ನು ಭಕ್ತಿಯಿಂದ ಪೂಜಿಸಿ ನಾಲ್ಕು ಮೂಲೆಗಳನ್ನು ಛೇದಿಸಿ ಪರೀಕ್ಷಿಸಿದಾಗ ಶಿಲಿಯು ಸಮರ್ಪಕವಾಗಿದೆ ಎಂಬುವುದು ಸ್ಪಷ್ಟವಾಗಿ ಬಹಳ ಸಂತಸಪಟ್ಟರು. ಆದರೂ ಅವರಿಗೆ ಅಲ್ಲಿಯೇ ವಾಸ್ತವ್ಯ ಹೂಡಿ ವಿಗ್ರಹವನ್ನು ಕೆತ್ತಲು ಮಾತ್ರ ಧೈರ್ಯ ಸಾಲಲಿಲ್ಲ. ತಾವು ಶಿಲೆಯ ಜೊತೆ ಊರಿಗೇ ಮರಳುವುದಾಗಿ ಪಟ್ಟುಹಿಡಿದರು!

## ಹಳ್ಳಿಗರ ಪ್ರಾರ್ಥನೆಯಂತೆ ಮೂಡಿಬಂದ ನವಿಲುಗರಿ

ನಮ್ಮ ಶಿಲ್ಪಿಗಳ ಅಷ್ಟುದಿನದ ಬವಣೆ ಮತ್ತು ಪರಿಶ್ರಮವನ್ನು ಪರಿಗಣಿಸಿ ನಾವು ಅವರನ್ನು ಕೂಡಲೇ ಊರಿಗೆ ಕರೆತರಲು ವ್ಯವಸ್ಥೆ ಮಾಡುವುದಾಗಿಯೂ ತಿಳಿಸಿದೆವು. ಆದರೆ ಅಷ್ಟೂ ದಿನ ಅವರೊಂದಿಗಿದ್ದು ಕೃಷ್ಣನನ್ನು ಹುಡುಕಲು ಸರ್ವ ರೀತಿಯಿಂದಲೂ ಸಹಾಯ ಮಾಡಿದ ಆ ಮುಗ್ಧ ನೇಪಾಳಿ ಹಳ್ಳಿಗರು ಮಾತ್ರ ಒಪ್ಪಲೇ ಇಲ್ಲ! ಈ ಶಿಲೆಯಲ್ಲಿ ಶ್ರೀಕೃಷ್ಣನ ವಿಗ್ರಹ ಮೂಡಿಬರುವುದನ್ನು ತಾವು ನೋಡಲೇ ಬೇಕೆಂಬುವುದು ಅವರ ಒತ್ತಾಯವಾಗಿತ್ತು! ಮತ್ತೇನು ಮಾಡೋಣ? ಆ ಕಠಿಣ ಶಿಲೆಯಲ್ಲಿ ವಿಗ್ರಹ ರಚನೆ ಸುಲಭವಲ್ಲ ಎಂಬುವುದನ್ನು ಕೊನೆಗೂ ಅವರಿಗೆ ಮನವರಿಕೆ ಮಾಡಲಾಯಿತು. ಅವರಿಗೆ ಅದು ಅರ್ಥವಾಯಿತು. ಆದರೂ ಸಂಪೂರ್ಣ ಸಮಾಧಾನವಾಗಲಿಲ್ಲ. ವಿಗ್ರಹದ ಪೂರ್ಣ ಕೆತ್ತನೆಯನ್ನು ನಿಮಗೆ ಅನುಕೂಲವಾಗುವಂತೆ ನಿಮ್ಮೂರಿನಲ್ಲೇ ಮಾಡಿ, ಆದರೆ ಶ್ರೀ ಕೃಷ್ಣನ ತಲೆಯ ನವಿಲುಗರಿಯನ್ನಾದರೂ ನಾವು ನೋಡಲೇಬೇಕು ಎಂದು ಭಿನ್ನವಿಸಿಕೊಂಡರು. ಉಡುಪಿಯ ಕೃಷ್ಣನ ವಿಗ್ರಹದ ತಲೆಯಲ್ಲಿ ನವಿಲುಗರಿಯಿಲ್ಲ ಎಂಬುವುದನ್ನು ಎಷ್ಟು ವಿವರಿಸಿದರೂ ಅವರು ಕೇಳಲಿಲ್ಲ. ಕೊನೆಗೆ ಭಾವುಕ ಭಕ್ತರಾದ ಆ ಹಳ್ಳಿಗರನ್ನು ಸಮಾಧಾನಿಸಲು ವಿಗ್ರಹ ಭಾಗದ ಸ್ಥೂಲ ಕೆತ್ತನೆ ಮತ್ತು ಶಿರೋಭಾಗದ ನವಿಲುಗರಿಯ ರಚನೆಯನ್ನು ನಮ್ಮ ಶಿಲ್ಪಿಗಳು ಅಲ್ಲೇ ಅವರ ಮುಂದೆಯೇ ಮಾಡಿತೋರಿಸಿದಾಗ ಆ ಮುಗ್ಧಭಕ್ತರು ಮತ್ತೆ ಭಾವುಕರಾದರು! ಅನೇಕ ನಮಸ್ಕಾರಗಳೊಂದಿಗೆ ಕಣ್ಣೀರು ಸುರಿಸಿ ಕೃಷ್ಣವಿಗ್ರಹ ಶಿಲೆಯನ್ನು ಭಕ್ತಿಪೂರ್ವಕವಾಗಿ ಅಲ್ಲಿಂದ ಬೀಳ್ಕೊಟ್ಟರು.

## ಕಾಠ್ಮಂಡುವಿನಲ್ಲಿ ಶ್ರೀಕೃಷ್ಣ

ಮುಂದೆ ಅದೇ ಸ್ಕಾರ್ಪಿಯೋ ವಾಹನದಲ್ಲಿ ಶಿಲೆಯ ಜೊತೆಗೆ ಶಿಲ್ಪಿಗಳು ಪಯಣಿಸಿದ್ದು ನೇಪಾಳದ ರಾಜಧಾನಿ ಕಾಠ್ಮಂಡುವಿಗೆ. ಸುಮಾರು ಮುನ್ನೂರು ಕಿ.ಮೀ. ದೂರದ ಹತ್ತು ಹನ್ನೆರಡು ಗಂಟೆಗಳ ಪ್ರಯಾಣ. ನಂತರ ವಿಮಾನದಲ್ಲಿ ಭಾರತಕ್ಕೆ ಪ್ರಯಾಣಿಸುವ ಮುನ್ನ ಅಲ್ಲಿನ ಸರಕಾರದ ಅನುಮತಿ ಪತ್ರವನ್ನು ಪಡೆಯಬೇಕಿತ್ತು.

ಅಲ್ಲಿನ 'ಆರ್ಕಿಯಾಲಜಿ ಡಿಪಾರ್ಟ್ ಮೆಂಟ್' ವಿಭಾಗದ ಪರವಾನಗಿಯನ್ನು ಪಡೆಯುವ ಪ್ರಕ್ರಿಯೆಗೆ ಮೂರ್ನಾಲ್ಕು ದಿನಗಳ ಅಗತ್ಯವೂ ಇತ್ತು. ಆಗ ಸುಮ್ಮನಿರುವ ಬದಲು ಸ್ವಲ್ಪ ಕೆತ್ತನೆಯ ಕೆಲಸವನ್ನಾದರೂ ಮಾಡೋಣ. ಶಿಲೆಯ ಅನಗತ್ಯ ಭಾಗಗಳನ್ನು ಕೆತ್ತಿ ತೆಗೆದರೆ ಭಾರವೂ ಕಡಿಮೆಯಾಗುತ್ತದೆ ಎಂದು ನಮ್ಮ ಶಿಲ್ಪಿಗಳು ಅಲ್ಲಿಯೇ ತಮ್ಮ ಕೆಲಸವನ್ನು ಮುಂದುವರಿಸಿದರು. ಅವರು ವಾಸ್ತವ್ಯವಿದ್ದ ಆ ಸ್ಥಳ ಅಲ್ಲಿನ ಒಂದು ಸತ್ಸಂಗ ಪರಿವಾರದ ಭಾಗವಾಗಿತ್ತು. ಅನೇಕ ಧರ್ಮನಿಷ್ಠ ಮತ್ತು ಶ್ರದ್ಧಾನ್ವಿತ ಮಹಿಳೆಯರು ಮತ್ತು ಮಹನೀಯರು ಬಂದು ಕುತೂಹಲದಿಂದ ನಿತ್ಯವೂ ಬಂದು ನಮ್ಮ ಶಿಲ್ಪಿಗಳನ್ನು ವಿಚಾರಿಸುತ್ತಿದ್ದರು. ಶಾಲಗ್ರಾಮ ಕೃಷ್ಣಶಿಲಾವಿಗ್ರಹವನ್ನು ಕಂಡು ಭಕ್ತಿಯಿಂದ ನಮಿಸಿಹೋಗುತ್ತಿದ್ದರು. ಅಲ್ಲಿಯೇ ಭಜನೆಗಳನ್ನು ಮಾಡಿ ಪುಷ್ಪಗಳನ್ನು ಅರ್ಪಿಸಿ ತಮ್ಮ ಕೃಷ್ಣ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ನಂತರ ನಾಲ್ಕು ದಿನಗಳ ಬಳಿಕ ಬೇಕಾದ ಎಲ್ಲ ಅನುಮತಿ ಪತ್ರಗಳನ್ನು ಪಡೆದು ನಮ್ಮ ಶಿಲ್ಪಿಗಳು ಹೊರಡುವ ಸಮಯ ಬಂತು! ಆಗ ಆ ಸತ್ಸಂಗ ಪರಿವಾರದ ಎಲ್ಲ ಭಕ್ತರೂ ಒಟ್ಟು ಸೇರಿ ಆ ಶಾಲಗ್ರಾಮ ಶಿಲೆಯನ್ನು ತಮಗೆ ತೋಚಿದಂತೆ ಗಂಧ, ಕುಂಕುಮ, ಪುಷ್ಪ, ಹಣ್ಣುಗಳ ಜೊತೆ ಭಕ್ತಿಯಿಂದ ಪೂಜಿಸಿ ಮತ್ತು ಒಂದಷ್ಟು ನೇಪಾಳಿ ನೋಟು, ನಾಣ್ಯಗಳನ್ನು ಕಾಣಿಕೆಯಾಗಿ ಸಮರ್ಪಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನೂ ಸಲ್ಲಿಸಿ ಭಾವುಕರಾಗಿ ಬೀಳ್ಕೊಟ್ಟರು!

## ನೇಪಾಳಿ ಭಕ್ತರ ನಿಸ್ವಾರ್ಥ ಸೇವೆ

ಅಷ್ಟರ ತನಕದ ನಮ್ಮ ಶಿಲ್ಪಿಗಳ ವಾಸ್ತವ್ಯ, ಪ್ರಯಾಣ ಮತ್ತು ಊಟೋಪಚಾರಾದಿ ಎಲ್ಲ ವ್ಯವಸ್ಥೆಗಳನ್ನು ಶ್ರದ್ಧೆಯಿಂದ ಮಾಡಿಕೊಟ್ಟ ಆ ಹಳ್ಳಿಗರು ಮತ್ತು ಕಾಠ್ಮಂಡು ಪರ್ಯಂತದ ಪ್ರಯಾಣದಲ್ಲಿ ಸಹಭಾಗಿಗಳಾದ ಎಲ್ಲ ಜನರು ವಾಹನ ಚಾಲಕರು, ಮಾಲೀಕರು ಇತ್ಯಾದಿ ಆ ನೇಪಾಳಿಗಳು ಯಾರೂ ತಮ್ಮ ಶ್ರಮಕ್ಕೆ ಪ್ರತಿಯಾಗಿ ಹಣವನ್ನು ಸ್ವೀಕರಿಸಲಿಲ್ಲ! ನಾವೂ ಸನಾತನ ಧರ್ಮೀಯರು, ಶ್ರೀ ಕೃಷ್ಣನ ಭಕ್ತರು. ನಮಗೆ ಈ ಸೇವೆಯನ್ನು ಸಲ್ಲಿಸಲು ಅವಕಾಶ ಸಿಕ್ಕಿದ್ದಕ್ಕಾಗಿ ತಾವು ಸದಾ ಕೃತಜ್ಞರು ಎಂಬುವುದಾಗಿ ತಿಳಿಸಿ ತಮ್ಮ ಮುಗ್ಧತೆ, ಭಕ್ತಿ ಮತ್ತು ಭಾವುಕತೆಯನ್ನಷ್ಟೇ ವ್ಯಕ್ತಪಡಿಸಿದರು. ಮತ್ತು

ಮುಂದೆ ದೇವರು ಅವಕಾಶವನ್ನು ಕರುಣಿಸಿದಲ್ಲಿ ನ್ಯೂಜೆರ್ಸಿಗೆ ಬಂದು ತಮ್ಮ ಶಾಲಗ್ರಾಮ ಶಿಲಾಕೃಷ್ಣನ ದರ್ಶನ ಪಡೆಯುವುದಾಗಿಯೂ ತಿಳಿಸಿದರು.

## ಭಾರತದಲ್ಲಿ ವಿಗ್ರಹ ನಿರ್ಮಾಣ ಮತ್ತು ಹಸ್ತಾಂತರ

ಹೀಗೆ ಕಾರ್ಯಸಾಧನೆಯ ತೃಪ್ತಿ ಮತ್ತು ಭಾವಪೂರ್ಣ ಅನುಭೂತಿಗಳೊಂದಿಗೆ ನೇಪಾಳದಿಂದ ಹೊರಟ ನಮ್ಮ ಶಿಲ್ಪಿಗಳು ಕ್ಷೇಮವಾಗಿ ಮಂಗಳೂರನ್ನು ತಲುಪಿದರು. ನಂತರ ಆ ಶಿಲೆಯನ್ನು ಶಿಲ್ಪಿಗಳೋರ್ವರ ಮನೆಗೆ ಸಾಗಿಸಲಾಯಿತು. ಆ ಕಠಿಣ ಶಿಲೆಯಲ್ಲಿ ಬಹಳ ಪರಿಶ್ರಮ ಪಟ್ಟು ಉಡುಪಿ ಕೃಷ್ಣನ ಸುಂದರ ವಿಗ್ರಹವನ್ನು ಶ್ರದ್ಧೆಯಿಂದ ರಚಿಸಲಾಯಿತು. ನೇಪಾಳಿ ಭಕ್ತರ ಭಾವಪೂರ್ಣ ಅಪೇಕ್ಷೆಯ ದ್ಯೋತಕವಾಗಿ ಆ ಶಿರೋಭಾಗದ ನವಿಲುಗರಿಯನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು! ಮುಂದೆ ಒಂದು ಶುಭದಿನದಲ್ಲಿ ಆ ವಿಗ್ರಹವನ್ನು ಪರಮಪೂಜ್ಯ ಶ್ರೀಪಾದರ ಕೈಗೆ ಹಸ್ತಾಂತರಿಸುವುದಾಗಿ ನಿರ್ಧರಿಸಲಾಯಿತು! ಆ ಸಮಯದಲ್ಲಿ ನನ್ನ ಮೂಲಸ್ಥಾನವಾದ ಮಂಗಳೂರು ಬಳಿಯ ಬಂಟ್ವಾಳ ತಾಲೂಕಿನ 'ಉಳಿ' ಗ್ರಾಮದಲ್ಲಿ ನೂರಾರು ವರ್ಷಗಳ ಹಳೆಯ ಗೋಪಾಲಕೃಷ್ಣ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೋತ್ಸವ ನಡೆಯುತ್ತಿತ್ತು. ಆ ವರ್ಷ ವಿಶೇಷ ಆಶೀರ್ವಚನದ ಅನುಗ್ರಹಕ್ಕೆಂದು ಪೂಜ್ಯ ಶ್ರೀಪಾದರನ್ನೂ ಅಲ್ಲಿಗೆ ಆಹ್ವಾನಿಸಲಾಗಿತ್ತು. ಅದೇ ದಿವಸ ಶಿಲ್ಪಿಗಳು ಆ ವಿಗ್ರಹವನ್ನು ಉಳಿಗೆ ತಂದು ಶ್ರೀ ಗೋಪಾಲಕೃಷ್ಣನ ಕ್ಷೇತ್ರದಲ್ಲಿಯೇ ಶ್ರೀಗಳಿಗೆ ಹಸ್ತಾಂತರಿಸಿದರು. ಆ ಸುಂದರ ವಿಗ್ರಹವನ್ನು ಕೈಯ್ಯಲ್ಲಿ ಹಿಡಿದು ದರ್ಶನ ಪಡೆದು ಪೂಜ್ಯ ಶ್ರೀಗಳೂ ಸಂಭ್ರಮಿಸಿದರು. ನಾವೂ ಸಂತಸಪಟ್ಟೆವು! ಆ ರಾತ್ರಿ ಶಾಲಗ್ರಾಮ ಶಿಲಾಕೃಷ್ಣ ಉಳಿಯಲ್ಲೇ ಉಳಿದುಬಿಟ್ಟ!

## ಉಳಿಯಲ್ಲಿ ಮೊದಲ ಪೂಜೆ

ಮರುದಿವಸ ಉಡುಪಿಯಲ್ಲಿ ಆ ಶಾಲಗ್ರಾಮ ಶಿಲಾಕೃಷ್ಣನನ್ನು ಭವ್ಯ ಮೆರವಣಿಗೆಯೊಂದಿಗೆ ಸ್ವಾಗತಿಸಲು ಪೂಜ್ಯ ಶ್ರೀಪಾದರ ಆಜ್ಞೆಯಂತೆ ಸರ್ವ ವ್ಯವಸ್ಥೆಗಳನ್ನೂ ಮಾಡಿಕೊಳ್ಳಲಾಗಿತ್ತು. ಒಂದು ರಾತ್ರಿ ನನ್ನ ಮನೆಯಲ್ಲಿ ವಾಸ್ತವ್ಯಹೂಡಿದ್ದ ಆ ಶಾಲಗ್ರಾಮ

ಶಿಲಾಕೃಷ್ಣನನ್ನು ನನ್ನ ವಾಹನದಲ್ಲಿಯೇ ಉಡುಪಿಗೆ ಕರೆದೊಯ್ಯುವ ಭಾಗ್ಯ ನನ್ನದಾಗಿತ್ತು. ನಮ್ಮ ಪೂರ್ವಜರು ಪೂಜಿಸಿದ ಉಳಿಯ ಶ್ರೀ ಗೋಪಾಲಕೃಷ್ಣನಿಗೆ ಕ್ಷೀರಾಭಿಷೇಕಪುರಃಸರ ನಿತ್ಯಪೂಜೆಯನ್ನು ಸಲ್ಲಿಸಿದ ಬಳಿಕ ಆ ಗೋಪಾಲಕೃಷ್ಣನ ಸಮ್ಮುಖದಲ್ಲಿಯೇ ನಮ್ಮ ಈ ಶಾಲಗ್ರಾಮ ಶಿಲಾಕೃಷ್ಣನನ್ನು ಪೂಜಿಸೋಣವೆಂದು ನನಗೂ ಶ್ರೀಕೃಷ್ಣನ ಪ್ರೇರಣೆಯಾಯಿತು. ಈ ಕೃಷ್ಣನಿಗೂ ಹಾಲಿನಿಂದ ಅಭಿಷೇಕ ಮಾಡಿದರೆ ಚೆನ್ನಾಗಿರುತ್ತಿತ್ತು, ಆದರೆ ಆ ದಿನದ ಎಲ್ಲ ಹಾಲನ್ನೂ ನಮ್ಮ ಉಳಿಯ ಕೃಷ್ಣನಿಗೆ ಸಮರ್ಪಿಸಿಯಾಯಿತಲ್ಲ! ಎಂದು ನಾನು ಯೋಚಿಸುವಷ್ಟರಲ್ಲಿ ಸ್ಥಳೀಯ ಭಕ್ತರೊಬ್ಬರು ತಮ್ಮ ಮನೆಯ ಶುದ್ಧ ಹಸುವಿನ ಹಾಲನ್ನು ಹಿಡಿದುಕೊಂಡು ದೇವಸ್ಥಾನಕ್ಕೆ ಬರಬೇಕೇ? ಸಂತೋಷದಿಂದ ಆ ಹಾಲನ್ನು ಸ್ವೀಕರಿಸಿ ಶಾಲಗ್ರಾಮ ಶಿಲಾಕೃಷ್ಣನಿಗೆ ಮೊದಲ ಕ್ಷೀರಾಭಿಷೇಕವನ್ನು ಮತ್ತು ಮಂಗಳಾರತಿಯನ್ನು ಭಕ್ತಿಯಿಂದ ಸಮರ್ಪಿಸಲಾಯಿತು. ಇನ್ನೇನು ಆ ಶಾಲಗ್ರಾಮ ಕೃಷ್ಣನನ್ನು ಕೈಯ್ಯಲ್ಲಿ ಹಿಡಿದುಕೊಂಡು ಉಡುಪಿಗೆ ಹೊರಡಬೇಕು, ಕಾರು ಹತ್ತಬೇಕು. ಆ ಸಮಯದಲ್ಲಿ ಈ ಮುದ್ದು ಕೃಷ್ಣನಿಗೊಂದು ಹೂವಿನ ಹಾರವಿದ್ದರೆ ಚೆನ್ನಾಗಿರುತ್ತಿತ್ತು ಎಂದೆನ್ನಿಸಿತು. ಮರುಕ್ಷಣದಲ್ಲಿಯೇ ಭಕ್ತರೊಬ್ಬರು ಮಲ್ಲಿಗೆಯ ಹಾರವನ್ನು ಹಿಡಿದುಕೊಂಡು ಬಂದದ್ದನ್ನು ಕಂಡಾಗಲಂತೂ ನಮಗೆ ಅತ್ಯಾಶ್ಚರ್ಯವೆನಿಸಿತು! ಅದೇ ಹಾರದಿಂದ ಶ್ರೀ ಕೃಷ್ಣನನ್ನು ಅಲಂಕರಿಸಿ ಉಡುಪಿಗೆ ಪ್ರಯಾಣಿಸಿದೆವು!

## ಉಡುಪಿಯಲ್ಲಿ ಶ್ರೀ ಕೃಷ್ಣನ ವೈಭವ ಮತ್ತು ಪೂಜಿಸಿ ಬೀಳ್ಕೊಟ್ಟ ಪೇಜಾವರ ಶ್ರೀಗಳು

ಶಾಲಗ್ರಾಮ ಶಿಲಾರೂಪಿ ಶ್ರೀಕೃಷ್ಣನ ಬರುವಿಕೆಗಾಗಿ ಗೀತಾಮಂದಿರದಲ್ಲಿ ಕಾದುಕುಳಿತಿದ್ದ ಪೂಜ್ಯ ಶ್ರೀಪಾದರು ತಾವೇ ಸ್ವತಃ ಶಾಲಗ್ರಾಮ ಶಿಲಾ ಕೃಷ್ಣನನ್ನು ಕೈಗೆತ್ತಿಕೊಂಡು ಪೀಠವೊಂದರಲ್ಲಿ ಕುಳ್ಳಿರಿಸಿ ಪುಷ್ಪಾರ್ಚನೆಗೈದರು. ನೂತನ ಕೃಷ್ಣನನ್ನು ನೋಡುವ ಕುತೂಹಲದಿಂದ ನೂರಾರು ಭಕ್ತರೂ ಅಲ್ಲಿಗೆ ಬಂದು ಸೇರಿದ್ದರು. ನಂತರ ನಮ್ಮ ಉಡುಪಿ ಶ್ರೀಕೃಷ್ಣನ ಬಂಗಾರದ ಪಲ್ಲಕ್ಕಿಯಲ್ಲಿಯೇ ರಥಬೀದಿಯವರೆಗೆ ನಮ್ಮ ಶಾಲಗ್ರಾಮ ಶಿಲಾಕೃಷ್ಣನನ್ನು ಕರೆದೊಯ್ದು, ಅಲ್ಲಿಂದ ನವರತ್ನ ರಥದಲ್ಲಿ ಕುಳ್ಳಿರಿಸಿ ದ್ವಾದಶಸ್ತೋತ್ರ ಮತ್ತು ವಾದ್ಯಘೋಷಾದಿಗಳೊಂದಿಗೆ, ಭವ್ಯ ಮೆರವಣಿಗೆಯೊಂದಿಗೆ

ರಥಬೀದಿಯನ್ನು ಬಳಸಿಕೊಂಡು ಶ್ರೀಕೃಷ್ಣ ಮಠಕ್ಕೆ ಕರೆತರಲಾಯಿತು. ಪೂಜ್ಯ ಶ್ರೀಪಾದರು ಮಧ್ವಸರೋವರದಲ್ಲಿ ಶಾಲಗ್ರಾಮ ಶಿಲಾಕೃಷ್ಣನಿಗೆ ಸ್ನಾನಮಾಡಿಸಿ ಶ್ರೀಕೃಷ್ಣಮಠದೊಳಗೆ ಕರೆತಂದರು. ಆಗ ಐತಿಹಾಸಿಕವಾಗಿ ಐದನೆ ಬಾರಿಗೆ ಪರ್ಯಾಯ ಪೀಠಾರೂಢರಾಗಿದ್ದ ಪರಮಪೂಜ್ಯ ಪೇಜಾವರ ಶ್ರೀ ವಿಶ್ವೇಶತೀರ್ಥಶ್ರೀಪಾದರು ತಮ್ಮ ಶಿಷ್ಯರಾದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥರೊಡಗೂಡಿ ಶಾಲಗ್ರಾಮ ಶಿಲಾಕೃಷ್ಣನನ್ನು ಗೌರವದೊಂದಿಗೆ ಸ್ವಾಗತಿಸಿ ಉಡುಪಿ ಶ್ರೀ ಕೃಷ್ಣನ ಸಮ್ಮುಖದಲ್ಲಿ ಸ್ವತಃ ಮುಟ್ಟಿ, ಪೂಜೆಗೈದು ವಿಶೇಷ ಆಶೀರ್ವಚನದೊಂದಿಗೆ ನ್ಯೂಜೆರ್ಸಿಯ ಭಕ್ತರನ್ನು ಅಭಿನಂದಿಸಿ ಹರಸಿದರು.

## ಮಂಗಳೂರಿನಲ್ಲಿ ಎದುರಾದ ಸಮಸ್ಯೆ

ಮರುದಿವಸ ನೇಪಾಳದಿಂದ ಉಡುಪಿಯವರೆಗೆ ಬಂದ ನಮ್ಮ ಶಾಲಗ್ರಾಮ ಶಿಲಾಕೃಷ್ಣನ ಅಮೇರಿಕಾ ಪ್ರಯಾಣವು ನಿಗದಿಯಾಗಿತ್ತು. ನಮ್ಮ ಜೊತೆಗೆ ಮಂಗಳೂರು ವಿಮಾನ ನಿಲ್ದಾಣದಿಂದ ಮುಂಬೈ ಮಾರ್ಗವಾಗಿ ನ್ಯೂಜೆರ್ಸಿಗೆ ಶ್ರೀಕೃಷ್ಣನು ಪ್ರಯಾಣಿಸಬೇಕಿತ್ತು! ಆದರೆ ವಿದೇಶ ಪ್ರಯಾಣವಾದದ್ದರಿಂದ ವಿಗ್ರಹವನ್ನು ಸಾಗಿಸಲು ಭಾರತದ 'ಆರ್ಕಿಯೋಲೊಜಿ' ವಿಭಾಗದಿಂದಲೂ ಪರವಾನಗಿ ಪಡೆಯುವುದು ಕಡ್ಡಾಯವೆಂಬುವುದು ನಮಗೆ ತಿಳಿದಿರಲಿಲ್ಲ! ನಾವು ತೋರಿಸಿದ ನೇಪಾಳದ ಅನುಮತಿ ಪತ್ರವನ್ನು ಹಿಂದಿಭಾಷಿಗರಾದ ಆ ಕಸ್ಟಮ್ಸ್ ಅಧಿಕಾರಿಗಳು ಒಪ್ಪಿಕೊಳ್ಳಲಿಲ್ಲ! ನಮ್ಮ ವಿನಂತಿ, ವಿಮರ್ಶೆ, ಚರ್ಚೆಗಳ ನಡುವೆ ವಿಮಾನ ಹೊರಡುವ ಸಮಯವಾಯಿತೇ ಹೊರತು ಆ ಅಧಿಕಾರಿಗಳು ತಮ್ಮ ಪಟ್ಟನ್ನು ಬಿಡಲೊಪ್ಪಲಿಲ್ಲ! ನಮಗಾಗ ಏನು ಮಾಡಬೇಕೆಂಬುದೇ ತಿಳಿಯದಾಯಿತು. ಕೊನೆಗೆ ದೂರವಾಣಿಯ ಮೂಲಕ ಪೂಜ್ಯ ಶ್ರೀಪಾದರನ್ನು ಸಂಪರ್ಕಿಸಿದಾಗ ವಿಗ್ರಹವನ್ನು ಅಲ್ಲಿಯೇ ಯಾರಿಗಾದರೂ ಒಪ್ಪಿಸಿ ನೀವು ಮುಂಬೈಗೆ ಹೊರಡಿ ಎಂದು ಆಜ್ಞಾಪಿಸಿದರು! ಅಂತೆಯೇ ನಾವು ವಿಮಾನ ನಿಲ್ದಾಣದಲ್ಲಿ ನಮಗೆ ಪರಿಚಿತರಾಗಿದ್ದ ಉದ್ಯೋಗಿಯೊಬ್ಬರನ್ನು ಸಂಪರ್ಕಿಸಿ ವಿಗ್ರಹವಿರುವ ಪೆಟ್ಟಿಗೆಯನ್ನು ಅವರ ಕೈಗೊಪ್ಪಿಸಿ ಅತೀವ ಬೇಸರ ಮತ್ತು ಮುಂದೇನಾಗುತ್ತದೋ

ಎಂಬ ಆತಂಕದೊಂದಿಗೆ ವಿಮಾನಹತ್ತಿ ಮುಂಬಯಿಗೆ ಬಂದಿಳಿದೆವು. ಆಗ ಹೊತ್ತು ಮಧ್ಯಾಹ್ನವನ್ನು ದಾಟಿತ್ತು. ಅಂದು ರಾತ್ರಿ ಹನ್ನೊಂದು ಗಂಟೆಗೆ ಮುಂಬೈಯಿಂದ ನ್ಯೂಜೆರ್ಸಿಯ ವಿಮಾನ ಹೊರಡಬೇಕಿತ್ತು. ಅದರೊಳಗೆ ಶಾಲಗ್ರಾಮ ಕೃಷ್ಣ ಮಂಗಳೂರಿನಿಂದ ಮುಂಬಯಿಗೆ ಬಂದು ತಲುಪಲೇಬೇಕಿತ್ತು!

## ಮುಂಬೈಗೆ ಬಂದ ಶ್ರೀಕೃಷ್ಣ

ತನ್ಮಧ್ಯದಲ್ಲಿ ನಮಗೆ ಪರಿಚಯವಿದ್ದ ರಾಜಕಾರಣಿಗಳು ಮತ್ತು ಪ್ರಭಾವಶಾಲಿಗಳನ್ನೆಲ್ಲ ಸಂಪರ್ಕಿಸಿ ಆರ್ಕಿಯಾಲಜಿ ಡಿಪಾರ್ಟ್‌ಮೆಂಟ್‌ನಿಂದ ಅನುಮತಿಪತ್ರವನ್ನು ಪಡೆಯುವ ಪ್ರಯತ್ನವನ್ನು ಮಾಡಿದೆವು. ಆದರೆ ಆ ಪ್ರಕ್ರಿಯೆಗೆ ಕನಿಷ್ಠ ಮೂರು ತಿಂಗಳಾದರೂ ಬೇಕೇ ಬೇಕು ಎಂದು ತಿಳಿದಾಗ ಮತ್ತಷ್ಟು ಭಯಭೀತರಾದೆವು! ಏಕೆಂದರೆ ಮುಂದಿನ ಮೂವತ್ತೇ ದಿನಗಳಲ್ಲಿ ಶ್ರೀ ಕೃಷ್ಣನ ಪ್ರತಿಷ್ಠೆಯ ಮುಹೂರ್ತ ನಿಗದಿಯಾಗಿತ್ತು! ಆಗ ಇದ್ದಕ್ಕಿದ್ದಂತೆ ಶ್ರೀಗಳ ಭಕ್ತರಾಗಿದ್ದ ಉನ್ನತ ಕಸ್ಟಮ್ಸ್ ಅಧಿಕಾರಿಯೊಬ್ಬರು ಕರೆಮಾಡಿ ವಿಶೇಷ ಕಾರ್ಯನಿಮಿತ್ತ ತಾವು ಮಂಗಳೂರಿಗೆ ಬಂದಿರುವುದಾಗಿಯೂ ಮತ್ತು ಈ ವಿಗ್ರಹದ ವಿಚಾರ ತಿಳಿದು ತಾವು ಆ ವಿಗ್ರಹವನ್ನು ಮುಂಬೈಗೆ ಕಳಿಸುವ ಅನುಮತಿಯನ್ನು ಕೊಡಿಸುವುದಾಗಿಯೂ ತಿಳಿಸಿದಾಗ ಪೂಜ್ಯ ಶ್ರೀಗಳಿಗೂ ಆಶ್ಚರ್ಯವಾಯಿತು! ಕೂಡಲೇ ತಮ್ಮ ಕಾರ್ಯದರ್ಶಿ ರತೀಶ್ ತಂತ್ರಿಗಳನ್ನು ಮಂಗಳೂರಿಗೆ ಕಳಿಸಿದರು. ಆ ದಿವಸ ಮುಂಬೈಗೆ ತೆರಳುವ ಕೊನೆಯ ವಿಮಾನ ಜೆಟ್ ಏರ್ವೇಸ್‌ನಲ್ಲಿಯೂ ಒಂದೇ ಒಂದು ಸೀಟು ತಾನೇ ಬಾಕಿ ಉಳಿದಿತ್ತು! ಮುಂಬೈನಲ್ಲಿ ಆತಂಕಿತರಾಗಿ ಕಾದು ಕುಳಿತಿದ್ದ ನಮ್ಮ ಬಳಿಗೆ ಕೊನೆಗೂ ಶಾಲಗ್ರಾಮ ಶಿಲಾಕೃಷ್ಣ ಬಂದೇ ಬಿಟ್ಟ! ಅಲ್ಲಿಯೂ ಅದೇ ಕಸ್ಟಮ್ಸ್ ಅಧಿಕಾರಿಯ ಪ್ರಭಾವದ ಮೂಲಕ ಶ್ರೀಕೃಷ್ಣನ ಮುಂದಿನ ಪ್ರಯಾಣಕ್ಕೂ ತೊಂದರೆಯಾಗದಂತೆ ಎಲ್ಲ ವ್ಯವಸ್ಥೆಗಳನ್ನೂ ಮಾಡಲಾಯಿತು!

## ಅಮೇರಿಕಾದಲ್ಲೂ ತನ್ನ ಕಾರ್ಣಿಕ ಮೆರೆದ ಶ್ರೀಕೃಷ್ಣ

ಮುಂಬೈನಿಂದ ಹದಿನೈದು ಗಂಟೆಗಳ ನೇರ ಪ್ರಯಾಣವನ್ನು ಕ್ಷೇಮವಾಗಿ ಮುಗಿಸಿದ ಬಳಿಕ ಶಾಲಗ್ರಾಮ ಶಿಲಾಕೃಷ್ಣ ನಮ್ಮ ಜೊತೆ ನ್ಯೂಜೆರ್ಸಿಗೆ ಬಂದ! ಅಂದು ವಿಚಿತ್ರವೆಂಬಂತೆ ನ್ಯೂಜೆರ್ಸಿಯ ಕಸ್ಟಮ್ಸ್ ಅಧಿಕಾರಿಗಳು ಪ್ರತಿಯೊಬ್ಬ ಪ್ರಯಾಣಿಕರನ್ನೂ ವಿಶೇಷವಾಗಿ ತಪಾಸಣೆಗೈಯ್ಯುತ್ತಿದ್ದರು! ಆಗ ನಾವೂ ವಿಚಲಿತರಾದೆವು! ಈ ವಿಗ್ರಹವನ್ನು ಈಗ ಏನು ಮಾಡುತ್ತಾರೋ ಎಂಬ ಭಯವೂ ಆಯಿತು. ಇನ್ನು ಇಲ್ಲಿ ಯಾವ ಅನುಮತಿ ಪತ್ರಕ್ಕೋಸ್ಕರ ನಮ್ಮನ್ನು ಕಾಡಲಿದ್ದಾರೋ ಎಂಬ ಚಿಂತೆಯಾಯಿತು. ಆದರೆ ಎಲ್ಲರ ಚಿಕ್ಕ ಪುಟ್ಟ ಬ್ಯಾಗುಗಳನ್ನೂ ಚೆಕ್ ಮಾಡುತ್ತಿದ್ದ ಆ ಅಧಿಕಾರಿಗಳು ನಮ್ಮ ಕೃಷ್ಣನಿದ್ದ ಪೆಟ್ಟಿಗೆಯನ್ನು ಮಾತ್ರ ಮುಟ್ಟಲೇ ಇಲ್ಲ! ಮತ್ತೆ ಆ ದಿನ ಸ್ಕ್ಯಾನಿಂಗ್ ಯಂತ್ರದೊಳಗೆ ಎಲ್ಲರ ಬ್ಯಾಗುಗಳನ್ನೂ ಕಡ್ಡಾಯವಾಗಿ ಹಾಕಬೇಕಿತ್ತು. ಆಗಲೂ ನಮ್ಮ ಕೃಷ್ಣ ಆ ಅಧಿಕಾರಿಗಳ ಗಮನವನ್ನು ಬೇರೆಕಡೆ ಹರಿಸುವಂತೆ ಮಾಡಿದ. ಕೃಷ್ಣನಿದ್ದ ಆ ಪೆಟ್ಟಿಗೆ ಮಾತ್ರ ಯಾವುದೇ ತಪಾಸಣೆಗಳಿಲ್ಲದೆ ಪಾಸಾಯಿತು!

## ನ್ಯೂಜೆರ್ಸಿಯಲ್ಲಿ ಸ್ವಾಗತಂ ಕೃಷ್ಣ

ಹೀಗೆ ನಮ್ಮ ಶಾಲಗ್ರಾಮ ಶಿಲಾ ಕೃಷ್ಣ ಯಾವುದೇ ತೊಂದರೆಗಳಿಲ್ಲದಂತೆ ನಮ್ಮ ನ್ಯೂಜೆರ್ಸಿಯ ವೃಂದಾವನಕ್ಕೆ ಸಂಭ್ರಮದಿಂದ ಬಂದ! ಆಗ ಧಾರಕಾರವಾಗಿ ಸುರಿಯುತ್ತಿದ್ದ ಮಳೆ ಅವನನ್ನು ಅದ್ದೂರಿಯಾಗಿ ಸ್ವಾಗತಿಸಿತ್ತು! ಅದೇ ಸಮಯದಲ್ಲಿ ಅಮೇರಿಕಾ ಪ್ರವಾಸದಲ್ಲಿದ್ದ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಉಪಸ್ಥಿತಿಯಲ್ಲಿ ಮರುದಿವಸ ಶಾಲಗ್ರಾಮ ಶಿಲಾಕೃಷ್ಣನನ್ನು ಸಾರ್ವಜನಿಕವಾಗಿ ವೈಭವದಿಂದ ಸ್ವಾಗತಿಸಲು 'ಸ್ವಾಗತಂ ಕೃಷ್ಣ' ಎಂಬ ವಿಶೇಷ ಸಭೆಯನ್ನು ಏರ್ಪಡಿಸಲಾಗಿತ್ತು. ಸುಮಾರು ಐದುನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಶ್ರೀ ಕೃಷ್ಣನನ್ನು ಭಾವಪೂರ್ಣವಾಗಿ ಸ್ವಾಗತಿಸಿದರು. ಮುಟ್ಟಿ ಪೂಜಿಸಿ ಧನ್ಯರಾದರು.

ಅದೇ ಸಂದರ್ಭದಲ್ಲಿ ಶಿಲ್ಪಿಗಳ ಅಮೇರಿಕಾ ವಿಸಾ, ನೂತನ ಗರ್ಭಗುಡಿಯ

ಮರ ಮತ್ತು ಕಲ್ಲುಗಳ ದೇಶಾಂತರದ ಸಾಗಾಟ, ಕಸ್ಟಮ್ಸ್ ಕ್ಲಿಯರೆನ್ಸ್ ಇತ್ಯಾದಿ ಅನೇಕ ಸವಾಲುಗಳನ್ನು ಎದುರಿಸಿ ನೂತನ ದಾರುಮಯ ಗರ್ಭಗುಡಿಯನ್ನು ನಿರ್ಮಿಸುವ ನಮ್ಮ ಪ್ರಯತ್ನ ಕೊನೆಗೂ ಯಶಸ್ವಿಯಾಗುವ ಹಂತಕ್ಕೆ ಬಂದು ತಲುಪಿತ್ತು. ಮಂಗಳೂರಿನಿಂದ ದೂರದ ಅಮೇರಿಕಾದ ತನಕ ಆ ಎಲ್ಲ ಕೆತ್ತನೆಯ ಮರ ಮತ್ತು ಶಿಲೆಗಳನ್ನು ಉಚಿತವಾಗಿ ಸಾಗಿಸಿಕೊಟ್ಟ ಮುಂಬೈ ಮೂಲದ ಶಿಪ್ಪಿಂಗ್ ಉದ್ಯಮಿ ನ್ಯೂಜೆರ್ಸಿಯ ಶ್ರೀ ಸತೀಶ್ ಅಂಚನ್ ಅವರು ಆ ಸಮಯದಲ್ಲಿ ನಮಗೆ ಬಹಳ ದೊಡ್ಡ ಸಹಾಯ ಮಾಡಿದರು.

## ಕೃಷ್ಣಾನುಗ್ರಹದಿಂದ ಧನ ಸಂಗ್ರಹ

ಆದರೆ ಇನ್ನೊಂದು ಅತಿದೊಡ್ಡ ಸವಾಲು ಮಾತ್ರ ನಮ್ಮನ್ನು ತೀವ್ರ ಚಿಂತೆಗೀಡು ಮಾಡಿತ್ತು! ಭಕ್ತರಿಂದ ಸಂಗೃಹೀತವಾದ ಹಣ ಇಷ್ಟರ ತನಕದ ಕೆಲಸಗಳಿಗೆ ವಿನಿಯೋಗವಾಗಿ ಶ್ರೀಮಠದ ಬ್ಯಾಂಕ್ ಖಾತೆ ಖಾಲಿಯಾಗಿಬಿಟ್ಟಿತ್ತು! ಬಾಕಿ ಉಳಿದ ಕೃಷ್ಣಪ್ರತಿಷ್ಠಾಪರ್ಯಂತದ ಮುಂದಿನ ಕೆಲಸಗಳಿಗೆ ಕನಿಷ್ಠ ಆರು ಲಕ್ಷ ಡಾಲರ್‌ಗಳ ಅಗತ್ಯವಿತ್ತು! ಇಷ್ಟೆಲ್ಲ ಸವಾಲುಗಳನ್ನು ಎದುರಿಸುತ್ತಾ ನಿತ್ರಾಣರಾದ ನಮ್ಮ ಬಳಿ ಸಮಯವೂ ಇರಲಿಲ್ಲ ಶಕ್ತಿಯೂ ಉಳಿದಿರಲಿಲ್ಲ! ಏನು ಮಾಡಬೇಕೆಂಬುವುದೇ ತೋಚಲಿಲ್ಲ! ಕೊನೆಗೆ ನಾವು ಮೊರೆ ಹೋಗಿದ್ದು ಆ ಶಾಲಗ್ರಾಮ ಶಿಲಾ ಕೃಷ್ಣನನ್ನೇ! ನಮಗಿನ್ನು ಬೇರೆ ದಾರಿಯಿಲ್ಲ. ನಿನ್ನನ್ನೇ ಕೈಯಲ್ಲಿ ಹಿಡಿದುಕೊಂಡು ನಾವು ಮನೆಮನೆಗೆ ಹೋಗುತ್ತೇವೆ. ನಿನಗೋಸ್ಕರ ಬೇಡುತ್ತೇವೆ. ಉಳಿದದ್ದೇನಿದ್ದರೂ ನೀನೇ ನೋಡಿಕೊಳ್ಳಬೇಕು ಎಂದು ಪ್ರಾರ್ಥಿಸಿ ಅಂದಿನಿಂದಲೇ ಅವನನ್ನು ಹೊತ್ತುಕೊಂಡು ಸಾಧ್ಯವಾದಷ್ಟು ಮನೆಗಳಿಗೆ ಭೇಟಿಕೊಟ್ಟೆವು. ಆ ಇಪ್ಪತ್ತೊಂದು ದಿನಗಳಲ್ಲಿ ನೂರಾರು ಭಕ್ತರು ಶ್ರೀಕೃಷ್ಣನನ್ನು ಭಕ್ತಿಯಿಂದ ಸ್ವಾಗತಿಸಿ, ಕೈಯ್ಯಾರೆ ಪೂಜೆ ಸಲ್ಲಿಸಿ ಕೃತಾರ್ಥರಾದರು. ತಮ್ಮ ಕೈಲಾದ ಕಾಣಿಕೆಗಳನ್ನು ಶ್ರದ್ಧೆಯಿಂದ ಸಮರ್ಪಿಸಿದರು. ಆಶ್ಚರ್ಯವೆಂದರೆ ನಮ್ಮ ಆ ಸಂಚಾರದ ಕೊನೆಯ ದಿನಕ್ಕಾಗುವಾಗ ನಮ್ಮ ಶಾಲಗ್ರಾಮ ಶಿಲಾಕೃಷ್ಣನ ಮೈತುಂಬ ಚಿನ್ನದ ಆಭರಣಗಳು

ತುಂಬಿಕೊಂಡಿದ್ದವು! ಮತ್ತು ಶ್ರೀ ಮಠದ ಬ್ಯಾಂಕ್ ಖಾತೆಯಲ್ಲಿ ಅಗತ್ಯವಿದ್ದ ಆರು ಲಕ್ಷಡಾಲರ್‌ಗಳೂ ಬಂದು ಕೂತಿದ್ದವು! ಮುಂದಿನ ಎಲ್ಲ ಪ್ರಕ್ರಿಯೆಗಳೂ ಶಾಂತಿಯುತವಾಗಿ, ಸಾಂಗೋಪಾಂಗವಾಗಿ ನೆರವೇರಿದವು.

## ಪ್ರತಿಷ್ಠಾಪಿತನಾದ ಶಾಲಗ್ರಾಮ ಶಿಲಾಕೃಷ್ಣ

ಶತಾವಧಾನಿ ಉಡುಪಿ ಶ್ರೀ ರಾಮನಾಥಚಾರ್ಯರ ಮಾರ್ಗದರ್ಶನದಂತೆ ಮತ್ತು ಬನ್ನಂಜೆ ಗೋವಿಂದಾಚಾರ್ಯರ ಉಪಸ್ಥಿತಿಯಲ್ಲಿ ಮಂಟಪಸ್ಥಾಪನೆ, ಪಂಚಗವ್ಯಾಧಿವಾಸ, ಧಾನ್ಯಾಧಿವಾಸ, ಅಂಕುರಾರ್ಪಣ, ಬಲಿಹರಣ, ಚತುರ್ವೇದ, ಭಗವದ್ಗೀತಾದಿ ಪಾರಾಯಣ, ಜಪ, ಹೋಮ, ಅನ್ನಸಂತರ್ಪಣೆ ಇತ್ಯಾದಿ ತಂತ್ರಸಾರೋಕ್ತ ವಿಧಾನಗಳ ಮೂಲಕ ಪ್ರತಿಷ್ಠಾವಿಧಿಗಳೆಲ್ಲವೂ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡವು. ಜ್ಯೇಷ್ಠ ಶುಕ್ಲ ಚತುರ್ದಶೀ, ಜೂನ್ 08–2017 ಗುರುವಾರದಂದು ಪರಮಪೂಜ್ಯ ಪುತ್ತಿಗೆ ಶ್ರೀಪಾದರ ಅಮೃತಹಸ್ತದಿಂದ ನೂತನ ಗರ್ಭಗುಡಿಯನ್ನು ಶಾಲಗ್ರಾಮ ಶಿಲಾಕೃಷ್ಣನ ಪ್ರತಿಷ್ಠಾಪನೆಯಾಯಿತು. ಶಿಖರಸ್ಥಾಪನೆ, ಸಹಸ್ರಕಲಶಾಭಿಷೇಕಾದಿ ಎಲ್ಲ ವಿಧ್ಯುಕ್ತ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಕೃತಾರ್ಥರಾದರು. ನಂತರ ಶಾಲಗ್ರಾಮಶಿಲಾ ಕೃಷ್ಣನ ಸನ್ನಿಧಾನದಲ್ಲಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಮುಖೇನ ಭಾಗವತ ಸಪ್ತಾಹವೂ ಸಂಪನ್ನಗೊಂಡಿತು.

## ನ್ಯೂಜೆರ್ಸಿಯಲ್ಲಿ ಶ್ರೀಕೃಷ್ಣನ ವಿಶೇಷತೆ

ವಿನೂತನ ಶೈಲಿಯ ಗರ್ಭಗೃಹದಲ್ಲಿ ನೆಲೆಗೊಂಡ ಅಪರೂಪದ ಶಾಲಗ್ರಾಮ ಶಿಲಾಕೃಷ್ಣನ ಪೂಜೆಯೂ ವಿಶೇಷ ರೀತಿಯಲ್ಲಿ ನೆರವೇರಬೇಕೆಂಬುವುದೂ ನ್ಯೂಜೆರ್ಸಿಯ ಭಕ್ತರ ಆಶಯವಾಗಿತ್ತು. ಪಕ್ಕದ ಪೆನ್ಸಿಲ್ವೇನಿಯಾದಲ್ಲಿರುವ ಗೀತಾನಗರಿ ಎಂಬ ಹೆಸರಿನ ಬೃಹತ್ ಗೋಶಾಲೆಯು ಹಾಲಿನಿಂದ ನಿತ್ಯಾಭಿಷೇಕ ಮತ್ತು ನಿತ್ಯವೂ ವಿಭಿನ್ನಶೈಲಿಯಅಲಂಕಾರಗಳೊಂದಿಗೆ ನಮ್ಮ ಕೃಷ್ಣನನ್ನು ಪೂಜಿಸುವ ಸಂಕಲ್ಪ

ಮಾಡಲಾಯಿತು. ಭಕ್ತರು ಸಮರ್ಪಿಸಿದ ಚಿನ್ನಾಭರಣಗಳು, ಬಣ್ಣಬಣ್ಣದ ಬಟ್ಟೆಗಳು, ಹೂಮಾಲೆಗಳು ಮತ್ತು ವಿಶಿಷ್ಟ ಶೈಲಿಯ ಮುಂಡಾಸಿನಿಂದ ಪ್ರತಿದಿನ ವಿಭಿನ್ನ ಶೈಲಿಯಲ್ಲಿ ಕಂಗೊಳಿಸುವ ನಮ್ಮ ನ್ಯೂಜೆರ್ಸಿಯ ಶಾಲಗ್ರಾಮಶಿಲಾಕೃಷ್ಣನಿಗೆ ಈಗ ವಿಶ್ವದಾದ್ಯಂತ ಅಸಂಖ್ಯ ಭಕ್ತರಿದ್ದಾರೆ! ಅಭಿಮಾನಿಗಳಿದ್ದಾರೆ! ದಿನಕ್ಕೊಂದು ಬಣ್ಣದ ಪೋಷಾಕು ಮತ್ತು ಅದಕ್ಕೊಪ್ಪುವ ಹೂಮಾಲೆ ಮತ್ತು ಚಿನ್ನಾಭರಣಗಳಿಂದ ಕಂಗೊಳಿಸುವ ನಮ್ಮ ಶ್ರೀಮಂತ ಶಾಲಗ್ರಾಮ ಕೃಷ್ಣನ ಆನ್ಲೈನ್ ದರ್ಶನಕ್ಕಾಗಿ ನಿತ್ಯವೂ ಕಾಯುತ್ತಿರುತ್ತಾರೆ!

## ಸಂತಾನಪ್ರದ ಶ್ರೀಕೃಷ್ಣ

ಮನೆ, ಉದ್ಯೋಗ, ಆರೋಗ್ಯ, ಮಕ್ಕಳವಿದ್ಯೆ ಇತ್ಯಾದಿ ಅನೇಕ ಇಷ್ಟಾರ್ಥಗಳನ್ನು ಬಯಸಿಬಂದ ಅಸಂಖ್ಯ ಭಕ್ತರ ಬೇಡಿಕೆಯನ್ನು ಅತಿಶೀಘ್ರದಲ್ಲಿ ಈಡೇರಿಸಿ ಅನುಗ್ರಹಿಸುತ್ತಿರುವ ನಮ್ಮ ನ್ಯೂಜೆರ್ಸಿಯ ಶಾಲಗ್ರಾಮ ಶಿಲಾಕೃಷ್ಣ ಇದೀಗ ಈ ಪ್ರದೇಶದಲ್ಲಿ ಸಂತಾನಪ್ರದನೆಂದೇ ಪ್ರಸಿದ್ಧನಾಗಿದ್ದಾನೆ. ನಿತ್ಯ ತ್ರಿಕಾಲಪೂಜೆ, ವೇದ ಮತ್ತು ಭಗವದ್ಗೀತೆಯ ಪಾರಾಯಣ, ಹೋಮ, ಪಾಠಪ್ರವಚನ ಮತ್ತು ಅನ್ನದಾನಾದಿ ನಿರಂತರ ಸೇವೆಗಳಿಂದಾಗಿ ಶ್ರೀ ಕ್ಷೇತ್ರದ ಸಾನ್ನಿಧ್ಯವೂ ದಿನೇ ದಿನೇ ವೃದ್ಧಿಸುತ್ತಿದೆ. ಅವಕಾಶ ಸಿಕ್ಕಿದಾಗಲೆಲ್ಲ ಬಂದು ದರ್ಶನಪಡೆದು ಪುನೀತರಾಗುವ ಸಜ್ಜನರಿಗೆ ಸುಖ, ಶಾಂತಿ ಮತ್ತು ನೆಮ್ಮದಿಯನ್ನು ಕರುಣಿಸುತ್ತಿದೆ.




EDISON- NEW JERSEY



**PROPOSED – YAJNA SHAALA PROJECT**
**EDISON – NEW JERSEY**



# ಸೇವಾ ಹಿ ಪರಮೋ ಧರ್ಮಃ



**ಶ್ರೀ ರಾಘವೇಂದ್ರ ಭಟ್**
ಶ್ರೀಕೃಷ್ಣವೃಂದಾವನ, ನ್ಯೂಜೆರ್ಸಿ USA.

**ಗು**ರುಗಳ ಅನುಗ್ರಹದಿಂದ ನನಗೆ ದೊರಕಿದ ದೊಡ್ಡ ಸೌಭಾಗ್ಯವೆಂದರೆ ಸೇವಾವಕಾಶ. ಫಲವತ್ತಾದ ಮಣ್ಣಿನಲ್ಲಿ ಮಾತ್ರ ಸೊಂಪಾದ ಬೆಳೆಯು ಬೆಳೆಯಲು ಸಾಧ್ಯವಾಗುವಂತೆ, ಸಮರ್ಥ ಗುರುಗಳು, ಅವರ ಮಾರ್ಗದರ್ಶನ ಮತ್ತು ಸೂಕ್ತ ಸತ್ಸಂಗವು ಲಭಿಸಿದರೆ ಮಾತ್ರ ಸೇವಾವಕಾಶವುನಮ್ಮ ಮನಸ್ಸಿಗೆ ತೃಪ್ತಿಯನ್ನು, ಸಮಾಧಾನವನ್ನು ನೀಡಲು ಸಾಧ್ಯ. ಆ ನಿಟ್ಟಿನಲ್ಲಿ ಪೂಜ್ಯ ಶ್ರೀಪಾದರು ಸಂಸ್ಥಾಪಿಸಿದ ಶ್ರೀಮಠದ ನ್ಯೂಜೆರ್ಸಿ ಶಾಖೆಯಲ್ಲಿ ಕಳೆದ ಹನ್ನೆರಡು ವರ್ಷಗಳಿಂದ ಶ್ರೀಮಠದ ನಿರ್ವಹಣೆಯ ಸೇವೆ ಸಲ್ಲಿಸುತ್ತಾ ನಾನು ಕೃತಕೃತ್ಯನಾಗಿದ್ದೇನೆ. ಧನ್ಯನಾಗಿದ್ದೇನೆ.

ಪೂಜ್ಯ ಗುರುಗಳಂತಹ ಅಪ್ರತಿಮ ಪ್ರತಿಭಾವಂತರು, ವಿದ್ಯಾವಂತರು, ಬುದ್ಧಿವಂತರು ಮತ್ತು ಉದಾರ ಹೃದಯಿಗಳು ಪ್ರಪಂಚದಲ್ಲಿ ಕಾಣಿಸಿಕೊಳ್ಳುವುದು ಅಪರೂಪ. ಅವರಂತೆ ಸಮಾಜೋಪಯುಕ್ತ ಮಹತ್ಸಾಧನೆಗಳನ್ನು, ಭಕ್ತಿ ಧರ್ಮಪ್ರಚಾರದಂತಹ ಮಹತ್ಕಾರ್ಯಗಳನ್ನು ನಮ್ಮಂತಹ ಸಾಮಾನ್ಯರಿಂದ ಮಾಡುವುದು ಖಂಡಿತಾ ಸಾಧ್ಯವಿಲ್ಲ. ಆದರೆ ಅವರು ಗೈಯ್ಯುವ ಪುಣ್ಯಕಾರ್ಯಗಳಲ್ಲಿ ಭಾಗಿಗಳಾಗಿ ನಿಷ್ಕಲ್ಮಶ ಮನಸ್ಸಿನೊಂದಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವುದಷ್ಟೇ ನಮ್ಮ ಕರ್ತವ್ಯ ಎನ್ನುವುದು ನನ್ನ ಭಾವನೆ.

ಪೂಜ್ಯ ಗುರುಗಳು ತೀವ್ರ ಪರಿಶ್ರಮವಹಿಸಿ, ಎಲ್ಲೆಡೆ ಸಂಚರಿಸಿ ಆಹಾರ ನಿದ್ರಾದಿಗಳನ್ನು ತ್ಯಜಿಸಿ ಕಷ್ಟಪಟ್ಟು ದುಡಿಯುತ್ತಿರುವುದು ಕೇವಲ ಲೋಕಕಲ್ಯಾಣದ ಉದ್ದೇಶದಿಂದ. ಅದರಿಂದ ವೈಯಕ್ತಿಕವಾಗಿ ಅವರಿಗೆ ಯಾವ ಲಾಭವೂ ಇಲ್ಲ.

ವಿದೇಶಗಳಲ್ಲಿ ಮಠಗಳ ಸ್ಥಾಪನೆಯೆನ್ನುವುದು ಸುಲಭದ ಸಾಧನೆಯೇನೂ ಅಲ್ಲ. ಎಲ್ಲೆಲ್ಲೋ ಸಂಚರಿಸಿ ಭಕ್ತರ ಮನೆಗಳಲ್ಲಿ ದೇವರ ಪೂಜೆಮಾಡಿ, ವಿನಂತಿಸಿ ಕಷ್ಟಪಟ್ಟು ಸಂಗ್ರಹಿದ ಹಣದಿಂದ ಇಂತಹ ಸಂಸ್ಥೆಗಳ ನಿರ್ಮಾಣವಾಗುತ್ತದೆ. ಸದಾ ದೊಡ್ಡ ಮೊತ್ತದ ಸಾಲದ ಹೊರೆಯೂ ಪೂಜ್ಯ ಶ್ರೀಪಾದರ ಹೆಗಲಮೇಲಿರುತ್ತದೆ. ಆದರೂ ಭಕ್ತರಿಗೆ ನಿತ್ಯ ಉಚಿತ ಅನ್ನಪ್ರಸಾದದ ವ್ಯವಸ್ಥೆಯಾಗಬೇಕು ಮತ್ತು ಶ್ರೀಮಠದ ನೌಕರರಿಗೆ ಸಿಗಬೇಕಾದ ಎಲ್ಲ ಸವಲತ್ತುಗಳನ್ನು ಕ್ಲಪ್ತ ಸಮಯದಲ್ಲಿ ಒದಗಿಸಬೇಕು ಎನ್ನುವುದಷ್ಟೇ ನಮ್ಮ ಗುರುಗಳ ಧ್ಯೇಯವಾಗಿರುವುದನ್ನು ನಾನು ಬಹಳ ಹತ್ತಿರದಿಂದ ಗಮನಿಸಿದ್ದೇನೆ. ಅದನ್ನು ನೆರವೇರಿಸಲು ಸಂಪೂರ್ಣ ಸಹಕಾರವನ್ನು ನೀಡುವುದು ಶಿಷ್ಯರಾದ ನಮ್ಮ ಹೊಣೆಗಾರಿಕೆ.

ಹಾಗಾಗಿ ಶ್ರೀಮಠದ ಎಲ್ಲ ಅತ್ಯಮೂಲ್ಯ ವಸ್ತುವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ನೋಡಿಕೊಳ್ಳುವುದು ಮತ್ತು ಭಕ್ತರು ಸಲ್ಲಿಸುವ ಕಾಣಿಕೆ ಮತ್ತು ಎಲ್ಲ ರೀತಿಯ ಕೊಡುಗೆಗಳನ್ನು ಜಾಗ್ರತೆಯಿಂದ ಸಂರಕ್ಷಿಸುವುದೇ ನಮ್ಮ ಮುಖ್ಯ ಸೇವೆಯಾಗಬೇಕು. ಯಾವುದೇ ವಸ್ತುಗಳೇ ಆಗಲಿ, ಅದನ್ನು ಹಾಳಾಗದಂತೆ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಮತ್ತು ಸಮರ್ಪಕವಾಗಿ ಬಳಸಿಕೊಳ್ಳುವುದೇ ದೇವರಪೂಜೆ ಹಾಗೂ ಗುರುಗಳ ಸೇವೆ ಎನ್ನುವುದು ನನ್ನ ಅಭಿಪ್ರಾಯ. ಧರ್ಮ ಸಂರಕ್ಷಣೆಗೋಸ್ಕರ ಹಗಲಿರುಳು ದುಡಿದು ಕಷ್ಟಪಟ್ಟು ಮಹತ್ಕಾರ್ಯಗಳನ್ನು ಮಾಡಿ ನಮ್ಮೆಲ್ಲರನ್ನು ಉದ್ಧರಿಸಿ ಮಹದುಪಕಾರವನ್ನು ಮಾಡಿದ ಗುರುಗಳಿಗೆ ಪ್ರತಿಯಾಗಿ ಶ್ರದ್ಧಾಪೂರ್ವಕವಾದ ನಿಃಸ್ವಾರ್ಥಸೇವೆಯನ್ನಲ್ಲದೆ ನಮ್ಮಿಂದ ಇನ್ನೇನನ್ನು ನೀಡಲು ಸಾಧ್ಯ?



SRI VENKATA KRISHNA TEMPLE, LOS ANGELES, CALIFORNIA. USA

# ಹಾಲಿವುಡ್ಡಿನ ಹೃನ್ಮಂದಿರದಲ್ಲಿ ಶ್ರೀ ಹರಿ!

**ಅ**ದು 1997ನೇ ಇಸವಿಯ ಅಂತ್ಯಭಾಗ. ಆಗ ತಾನೆ ತಮ್ಮ ಪ್ರಥಮ ವಿದೇಶ ಯಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿ ಅಮೇರಿಕಾದಿಂದ ಭಾರತಕ್ಕೆ ಮರಳಿದ ಪರಮ ಪೂಜ್ಯ ಪುತ್ತಿಗೆ ಶ್ರೀಪಾದರನ್ನು ಸಂದರ್ಶನಕಾರರೊಬ್ಬರು ಹೀಗೆ ಪ್ರಶ್ನಿಸಿದರು. 'ಪಾಶ್ಚಾತ್ಯ ದೇಶಗಳಲ್ಲಿ ಧರ್ಮಸಂಸ್ಥಾಪನೆ ಮತ್ತು ಮಧ್ವಮತದ ಪ್ರಚಾರ ಮಾಡಲು ಬಯಸಿದ ತಮ್ಮ ಧ್ಯೇಯ ಅಭಿನಂದನೀಯ. ಆದರೂ ಒಂದು ಕುತೂಹಲ! ಈ ಭೂಮಂಡಲದಲ್ಲಿ ನೂರಾರು ದೇಶಗಳಿರಬೇಕಾದರೆ ಅಷ್ಟು ದೂರದ ಅಮೇರಿಕಾವನ್ನೇ ಏಕೆ ಆಯ್ದುಕೊಂಡಿರಿ?'

ಪೂಜ್ಯ ಶ್ರೀಪಾದರಿತ್ತ ಉತ್ತರ ಮಾತ್ರ ಅತ್ಯಂತ ಮಾರ್ಮಿಕವಾಗಿತ್ತು. 'ನೋಡಿ, ಅಮೇರಿಕ ದೇಶವೀಗ ಜಗತ್ತಿಗೇ ದೊಡ್ಡಣ್ಣ. ವಿದೇಶಗಳಲ್ಲಿ, ಅದರಲ್ಲೂ ಅಮೇರಿಕಾದಂತಹ ಪ್ರಭಾವಶಾಲಿ ದೇಶಗಳಲ್ಲಿ ಏನು ನಡೆದರೂ ಅದನ್ನು ಗಂಭೀರವಾಗಿ ಸ್ವೀಕರಿಸುವ ಸ್ವಭಾವ ನಮ್ಮವರದ್ದು. 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ' ಆಧುನಿಕತೆಯ ಸೋಗಿನಲ್ಲಿ ಪಾಶ್ಚಿಮಾತ್ಯರ ಜೀವನ ಶೈಲಿಯನ್ನು, ವಿಚಾರಧಾರೆಯನ್ನು ನಮ್ಮ ಜನ ಕೊಂಚವೂ ವಿಮರ್ಶಿಸದೆ ಕಣ್ಣುಮುಚ್ಚಿ ಅನುಸರಿಸುತ್ತಿರುವ ಕೆಟ್ಟ ಕಾಲವಿದು. ಹಠಹಿಡಿದು ಪಶ್ಚಿಮದ ಕಡೆಗೇ ದೃಷ್ಟಿ ನೆಟ್ಟು ಕೂತ, ಈಚೆಗೆ ತಿರುಗಿಯೂ ನೋಡದ ನಮ್ಮವರ ಕಾಲಬುಡದಲ್ಲಿ ಒಳ್ಳೆಯದೇನನ್ನು ತಂದಿಟ್ಟರೇನುಪಯೋಗ? ಆದ್ದರಿಂದ ಅಲ್ಲಿಗೇ ಹೋಗಿ ನಮ್ಮ ಸಂಸ್ಕೃತಿಯ, ಆಧ್ಯಾತ್ಮಿಕತೆಯ ಐಸಿರಿಯನ್ನು ಪ್ರಚುರಪಡಿಸಿದರೆ ಅದು ಇಲ್ಲಿನ ನಮ್ಮ ಯುವಜನತೆಯ ದೃಷ್ಟಿಗೂ ಗೌರವಯುತವಾಗಿ ಗೋಚರಿಸಬಹುದು, ಮತ್ತು ಅಲ್ಲಿರುವ ಸಹಸ್ರಾರು ಭಾರತೀಯರಲ್ಲೂ ಸ್ವಾಭಿಮಾನವನ್ನು ಹೆಚ್ಚಿಸಬಹುದು ಎಂಬುವುದು ನಮ್ಮ ಅಭಿಮತ. ನಮ್ಮ ಉಡುಪಿಯ ಕೃಷ್ಣನು ಕೂಡ ಪಶ್ಚಿಮದ ಕಡೆಗೆ ಮುಖಮಾಡಿ ನಿಂತ ಕಾರಣವೂ ಇದೇ ಇರಬಹುದು!'.

ಹಾಗೆ ತಮ್ಮ ಅನಿಸಿಕೆಯನ್ನು, ಲೋಕಕಲ್ಯಾಣಕಾರಕ ಉದಾತ್ತ ಚಿಂತನೆಗಳನ್ನು ಕೇವಲ ಉಪದೇಶಗಳಿಗೆ ಸೀಮಿತಗೊಳಿಸದೆ, ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವ ನಿಟ್ಟಿನಲ್ಲಿ ಅವಿರತವಾಗಿ ಶ್ರಮಿಸಿದ ನಮ್ಮ ದೇಶ ಕಂಡ ಅಪರೂಪದ ಕೆಲವೇ ಕೆಲವು ಧೀಮಂತ ಸಂತರಲ್ಲೊಬ್ಬರು ಪರಮ ಪೂಜ್ಯ ಪುತ್ತಿಗೆ ಶ್ರೀಪಾದರು! ಆ ಸಮಯದಲ್ಲೇ ಪೂಜ್ಯ ಶ್ರೀಪಾದರ ಈ ಅಪೂರ್ವ ಸಾಧನೆಯನ್ನು ಗುರುತಿಸಿ ಸನ್ಮಾನಿಸಿದವರಲ್ಲಿ ಪರಮಪೂಜ್ಯ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು, ಪರಮ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಮೊದಲಿಗರು. ಆಗ ಸರ್ವತ್ರ ಪ್ರಶಂಸಿತರಾದ ಪೂಜ್ಯರನ್ನು ಸಹೃದಯ ಭಕ್ತಾಭಿಮಾನಿಗಳು ಅಭಿನವ ವಿವೇಕಾನಂದರೆಂದೇ ಕೊಂಡಾಡಿದರು.

ಪೂಜ್ಯ ಶ್ರೀಪಾದರ ಅಂತಹ ಅದ್ಭುತ ಚಿಂತನೆಗಳ ಪ್ರತಿಫಲವಾಗಿ ಜಗತ್ತಿನ ಅನೇಕ ಅತ್ಯಂತ ಪ್ರಭಾವಶಾಲಿ ನಗರಗಳಲ್ಲಿ ಈಗ ಉಡುಪಿ ಶ್ರೀ ಕೃಷ್ಣನ ಮಂದಿರಗಳು ಕಂಗೊಳಿಸುತ್ತಿವೆ! ನಮ್ಮ ಉಡುಪಿಯ ಪೂಜಾಪದ್ಧತಿ, ಸಂಸ್ಕೃತಿ, ಆಚಾರ, ಅನುಷ್ಠಾನ, ಅಹಾರ ವೈವಿಧ್ಯ ಮತ್ತು ವೈಚಾರಿಕ ಚಿಂತನೆಗಳಿಗೆ ಪಾಶ್ಚಾತ್ಯ ನೆಲದಲ್ಲಿಯೂ ಉತ್ಕೃಷ್ಟ ವೇದಿಕೆಗಳಾಗಿ, ಅಲ್ಲಿ ನೆಲೆಸಿರುವ ಭಾರತೀಯರಿಗೆ ತಮ್ಮ ಹೆಮ್ಮೆಯ ಪ್ರತೀಕಗಳೆನಿಸಿಕೊಂಡಿವೆ. ಪ್ರತಿದಿನವೂ ಅನೇಕ ಆಕರ್ಷಕ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಅಸಂಖ್ಯ ಜನರನ್ನು ಆಕರ್ಷಿಸುತ್ತಾ ಜನಪ್ರಿಯ ಭಾರತೀಯ ಶ್ರದ್ಧಾ ಕೇಂದ್ರಗಳೆನಿಸಿಕೊಂಡಿವೆ. ವಿಶೇಷ ಸಂದರ್ಭಗಳಲ್ಲಿ ಸ್ಥಳೀಯ ಪ್ರಭಾವಶಾಲಿ ವ್ಯಕ್ತಿಗಳು, ರಾಜಕಾರಣಿಗಳು ಸ್ವತಃ ಅತ್ಯಂತ ಆಸಕ್ತಿಯಿಂದ ಬಂದು ಭಾಗವಹಿಸುವ, ಪ್ರಶಂಸಿಸುವ ಸುದ್ದಿಗಳನ್ನು ನೀವೆಲ್ಲರೂ ಆಗಾಗ ಮಾಧ್ಯಮಗಳಲ್ಲಿ, ಜಾಲತಾಣಗಳಲ್ಲಿ ನೋಡುತ್ತಲೇ ಇದ್ದೀರಿ. ಅಂತಹ ನಮ್ಮ ಹೆಮ್ಮೆಯ ವಿದೇಶೀ ಶಾಖೆಗಳಲ್ಲೊಂದು ಅಮೇರಿಕಾದ 'ಲಾಸ್ ಎಂಜಲೀಸ್'ನಲ್ಲಿರುವ 'ಶ್ರೀ ವೆಂಕಟ ಕೃಷ್ಣ ವೃಂದಾವನ!'

ಅಮೇರಿಕಾದ ಕ್ಯಾಲಿಫೋರ್ನಿಯಾ ಎಂಬ ಬೃಹತ್ ರಾಜ್ಯದಲ್ಲಿರುವ ಅತ್ಯಂತ ಅಧುನಿಕ ವಿಶಾಲ ನಗರಗಳಲ್ಲೊಂದು 'ಲಾಸ್ ಎಂಜಲೀಸ್' ಸುಮಾರು ಹತ್ತೊಂಭತ್ತನೆಯ

ಶತಮಾನದ ಆದಿಭಾಗದಲ್ಲಿ ಆರಂಭಗೊಂಡು ಇದೀಗ ಇಡೀ ಜಗತ್ತನ್ನೇ ವ್ಯಾಪಿಸಿ ಇಂದಿಗೂ ಜನರನ್ನು ಹುಚ್ಚೆಬ್ಬಿಸುತ್ತಿರುವ 'ಸಿನಿಮಾ' ಎಂಬ ಮೋಹ ಮಾಯೆಯ ಮಾತೃಭೂಮಿಯದು ! ಅಮೇರಿಕಾದ ಪಶ್ಚಿಮ ಕರಾವಳಿಗೆ ತಾಗಿ ನಿಂತ 'ಹಾಲಿವುಡ್' ಎಂದೇ ವಿಶ್ವವಿಖ್ಯಾತಿಯನ್ನು ಪಡೆದ ಮಾಯಾನಗರಿಯದು! ಅಲ್ಲಿಂದ ಪೂರ್ವದಲ್ಲಿ ಸುಮಾರು ಇನ್ನೂರ ಎಪ್ಪತ್ತು ಮೈಲಿ ದೂರದಲ್ಲಿರುವ ಇನ್ನೊಂದು ಬೃಹನ್ನಗರ 'ಲಾಸ್ ವೇಗಾಸ್'. ಜೂಜಾಟದಲ್ಲಿ ಜಗತ್ಪ್ರಸಿದ್ಧಿಯನ್ನು ಪಡೆದ ಅದ್ಭುತ ಪಟ್ಟಣ. ಇಂದಿಗೂ ಜಗತ್ತಿನಾದ್ಯಂತದಿಂದ ಜನಗಳನ್ನು ತನ್ನತ್ತ ಸೆಳೆಯುತ್ತಾ ಮನೋರಂಜನೆಯನ್ನು ಕೊಡುತ್ತಾ ಮೆರೆಯುತ್ತಿರುವ ವಿಚಿತ್ರ ಸ್ಥಳ! ಒಂದು ರೀತಿಯಲ್ಲಿ ನಮ್ಮ ದೇಶದ ದೆಹಲಿ ಮತ್ತು ಮುಂಬೈ ಮಹಾನಗರಗಳಿದ್ದಂತೆ ಎನ್ನಬಹುದು.

ತನ್ಮಧ್ಯದಲ್ಲಿ ಅಂತರ್ಜಾಲ, ವೈದ್ಯಕೀಯ, ಹಣಕಾಸು, ಭೂವ್ಯವಹಾರ ಇತ್ಯಾದಿ ಅನೇಕ ವೈವಿಧ್ಯಮಯ ಉದ್ಯೋಗ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಲ್ಲಿನ ಮೋಹಮಾಯೆಗೆ ಬಲಿಯಾಗದೆ, ಕೇವಲ ಉತ್ತಮ ಜೀವನದ ಕನಸು ಹೊತ್ತ ಸುಸಂಸ್ಕೃತ, ವಿದ್ಯಾವಂತ ಭಾರತೀಯರ ಸಹಸ್ರಾರು ಕುಟುಂಬಗಳು! ರಾವಣನ ಪೂರ್ಣ ತಮಃಪ್ರಭಾವಕ್ಕೊಳಗಾದ ಅಸಂಖ್ಯಾತ ಲಂಕಾನಿವಾಸಿಗಳ ನಡುವೆಯೂ ಸ್ಥಿತಪ್ರಜ್ಞನಾಗಿದ್ದುಕೊಂಡು, ಧರ್ಮನಿಷ್ಠ, ನಿಷ್ಕಲ್ಮಷ, ಸಾರ್ಥಕ ಜೀವನದ ಕನಸಿನೊಂದಿಗೆ ತನ್ನ ಪರಿವಾರದೊಡನೆ ಶ್ರೀರಾಮನ ಆಗಮನಕ್ಕಾಗಿ ಕಾದುನಿಂತ ವಿಭೀಷಣನಂತೆ ಅವರೆಲ್ಲರೂ ಪೂಜ್ಯ ಶ್ರೀಪಾದರ ಬರುವಿಕೆಗೋಸ್ಕರ ಕಾತರದಿಂದ ಕಾಯುತ್ತಿದ್ದರು! ಅದಾಗಲೇ ಫೀನಿಕ್ಸ್ ಮತ್ತು ನ್ಯೂಜೆರ್ಸಿ ಮಹಾನಗರಗಳಲ್ಲಿ ತಮ್ಮ ಶಾಖಾಮಠಗಳನ್ನು ಸ್ಥಾಪಿಸಿದ್ದ ಶ್ರೀಪಾದರನ್ನು ಮತ್ತೆ ಮತ್ತೆ ಸಂಪರ್ಕಿಸಿ ತಮ್ಮ ಪ್ರದೇಶಕ್ಕೂ ಚಿತ್ತೈಸಿ ಅನುಗ್ರಹಿಸುವಂತೆ ಪರಿಪರಿಯಾಗಿ ಭಿನ್ನವಿಸಿಕೊಂಡರು. ತತ್ಪರಿಣಾಮ ಪೂಜ್ಯ ಶ್ರೀಪಾದರ ಅಮೃತ ಹಸ್ತದಿಂದ ಸ್ಥಾಪಿತವಾಗಿ ಚಿಕ್ಕ ಮನೆಯೊಂದರಲ್ಲಿ 2004ನೇ ಇಸವಿಯಲ್ಲಿ ಪ್ರಾರಂಭಗೊಂಡದ್ದು ಶ್ರೀ ಮಠದ 'ಲಾಸ್ ಏಂಜಲೀಸ್' ಶಾಖೆ ವೆಂಕಟಕೃಷ್ಣ ವೃಂದಾವನ!

ಮುಂದೆ ಈ ಸಂಸ್ಥೆ ತನ್ನ ವಿಶಿಷ್ಟ ಧಾರ್ಮಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕೊಡುಗೆಗಳ ಮೂಲಕ ಪೂಜ್ಯ ಶ್ರೀಪಾದರ ಸಮರ್ಥ ನಿರ್ದೇಶನದಂತೆ ಕಾರ್ಯ ನಿರ್ವಹಿಸುತ್ತಾ ಅತಿ ಶೀಘ್ರದಲ್ಲಿ ಜನಪ್ರಿಯತೆಯನ್ನು ಗಳಿಸಿ ನಂತರ 2015ನೇ ಇಸವಿಯಲ್ಲಿ ಸುಮಾರು ಐದು ಎಕರೆಗಳಷ್ಟು ವಿಸ್ತಾರವಾದ ಸ್ವಂತ ಮತ್ತು ಶಾಶ್ವತ ನೆಲೆಗೆ ಸ್ಥಳಾಂತರಗೊಂಡಿತು. ಹದಿನೇಳು ಸಾವಿರ ಚದರಡಿಯ ಬೃಹತ್ ಪೂಜಾಸ್ಥಳ, ಸಭಾಂಗಣಗಳಿರುವ ಮೂರು ಮಹಡಿಗಳ ವಿಶಾಲ ಕಟ್ಟಡ, ಅನೇಕ ಕೋಣೆಗಳುಳ್ಳ ಪ್ರತ್ಯೇಕ ಬೃಹತ್ ಮನೆ, ಅತ್ಯುನ್ನತ, ಸುಂದರ, ಬೃಹತ್ಮತ್ತು ಅಕರ್ಷಕ ಬೆಟ್ಟವೊಂದನ್ನೂ ಒಳಗೊಂಡ ಈ ಸ್ಥಳವನ್ನು ಖರೀದಿಸಿದ್ದು ಕೂಡ ಶ್ರೀಗಳ ಧೀಮಂತ ನಿರ್ಧಾರಗಳಲ್ಲೊಂದು!

ಮಾನ್ಯ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಸಮುಪಸ್ಥಿತಿಯಲ್ಲಿ ಪೂಜ್ಯ ಶ್ರೀಪಾದರಿಂದ ಉದ್ಘಾಟಿತವಾಗಿ, ಉಡುಪಿ ಶ್ರೀ ಕೃಷ್ಣ, ಸಪರಿವಾರ ಶ್ರೀನಿವಾಸ, ಶ್ರೀ ಮುಖ್ಯಪ್ರಾಣ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ ಮೃತ್ತಿಕಾವೃಂದಾನದ ಜಾಗ್ರತ ಸಾನ್ನಿಧ್ಯದೊಂದಿಗೆ ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಲಾಸ್ ಏಂಜಲೀಸ್‌ನ ವೆಂಕಟಕೃಷ್ಣ ವೃಂದಾವನವು ಇಂದು ಹೂವಿನ ಅಂತರ್ಗರ್ಭದಲ್ಲಿ ನೆಲೆನಿಂತ ಮಕರಂದದಂತೆ ಸ್ಥಳೀಯ ಭಾವುಕ ಭಕ್ತ ಸಮೂಹವೆಂಬ ದುಂಬಿಗಳಿಂದ ಸದಾ ಸುತ್ತುವರಿದುಕೊಂಡು ಸೇವಿಸಲ್ಪಡುತ್ತಾ ಹಾಲಿವುಡ್ಡಿನ ಹೃದಯ ಭಾಗದಲ್ಲಿ ಶ್ರೀಹರಿಯ ವಿಶೇಷ ಕ್ಷೇತ್ರವಾಗಿ ವಿರಾಜಿಸುತ್ತಿದೆ.

●

# ಸುಗುಣೇಂದ್ರ ತೀರ್ಥಂ ಪರಮಾಶ್ರಿತೋಽಹಂ



**ಶ್ರೀ ವಿರಾಜ್ ಭಟ್**
ವೆಂಕಟಕೃಷ್ಣ ವೃಂದಾವನ,
ಲಾಸ್ ಏಂಜಲೀಸ್, CA, USA

**ಸೂ**ರ್ಯನಿಗೆ ಸೂರ್ಯನೊಬ್ಬನೇ ಸಾಟಿಯಲ್ಲವೇ? ಜಗತ್ತನ್ನೆಲ್ಲಾ ಬೆಳಗುವ, ವಿಶ್ವದೀಪನೆನಿಸಿಳ್ಳುವ ಸಾಮರ್ಥ್ಯ ಮತ್ತಿನ್ಯಾರಿಗಿದೆ ಈ ಲೋಕದಲ್ಲಿ? ಹಾಗೆಯೇ ಅಗಣಿತ ಸುಗುಣಗಳಿಗೆ ಮೂರ್ತಸ್ವರೂಪರೆನಿಸಿದ ನಮ್ಮ ಗುರುಗಳಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರೂ ಅಸದೃಶರು. ತಮ್ಮ ಹದಿಹರೆಯದಲ್ಲೇ ಸನ್ಯಾಸವನ್ನು ಸ್ವೀಕರಿಸಿ, ಪರಿವ್ರಾಜಕ ಧರ್ಮವನ್ನು ನಿಷ್ಠೆಯಿಂದ ಪಾಲಿಸಿಕೊಂಡು, ದೇಶವಿದೇಶಗಳಲ್ಲಿ ಸಂಚರಿಸುತ್ತಾ ವಿಶ್ವದೆಲ್ಲೆಡೆ ಮಧ್ವಮತವನ್ನು ಪ್ರಚುರಪಡಿಸಿದ ನಮ್ಮ ಗುರುಗಳ ಮಹಿಮೆಯ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ.

'ಮುಕುಂದ ಭಕ್ತ್ಯೈ ಗುರುಭಕ್ತಿಜಾಯ್ಯೈ ಸತಾಂ ಪ್ರಸತ್ತ್ಯೈ ಚ ನಿರಂತರಾಯ್ಯೈ' ಎಂದು ಶ್ರೀ ನಾರಾಯಣ ಪಂಡಿತಾಚಾರ್ಯರು ಶ್ರೀ ಮಧ್ವವಿಜಯದಲ್ಲಿ ಉಲ್ಲೇಖಿಸಿದಂತೆ, ಮತ್ತು 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂದು ಶ್ರೀ ಪುರಂದರದಾಸರೂ ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿದಂತೆ, ಗುರುಗಳ ಕಾರುಣ್ಯವಿಲ್ಲದೆ ನಾವು ಶ್ರೀಪ್ರಾಣಾಂತರ್ಗತ ಪರಮಾತ್ಮನ ಅನುಗ್ರಹವನ್ನು ಸಂಪಾದಿಸಲು ಸಾಧ್ಯವೇ ಇಲ್ಲ. ಶ್ರೀಪುತ್ತಿಗೆ ವಿದ್ಯಾಪೀಠದಲ್ಲಿ ನಮಗೆ ವಿದ್ಯಾಬುದ್ಧಿಗಳನ್ನು ಕಲಿಸಿ, ಜ್ಞಾನೋಪದೇಶವನ್ನು ನೀಡಿ ಶ್ರೀಮಧ್ವಗುರುಗಳ, ತತ್ವವಾದದ ಮತ್ತು ಸರ್ವೋತ್ತಮನಾದ ಪರಮಾತ್ಮನ ಪರಿಚಯವನ್ನು ಮಾಡಿಕೊಟ್ಟು ನಮ್ಮನ್ನು ಉದ್ಧರಿಸಿದ ಪೂಜ್ಯ ಶ್ರೀಪಾದರಿಗೆ

ಮೇಲಿನ ಎರಡು ಉಕ್ತಿಗಳ ಅಂತರಾರ್ಥವೂ ಸಮನ್ವಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಈಗಿನ ಕಾಲದಲ್ಲಿ ಎಲ್ಲವೂ ದುಬಾರಿ. ಉಚಿತವಾಗಿ ಯಾವುದೂ ಸಿಗುವುದಿಲ್ಲ. ಅಂತದ್ದರಲ್ಲಿ ದುಡ್ಡು ಮತ್ತು ಹೆಸರನ್ನು ತರುವ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಇತ್ಯಾದಿಗಳನ್ನು ಮಾಡದೆ ಕೇವಲ ಉಚಿತ ವೈದಿಕ ವಿದ್ಯಾಪೀಠಗಳನ್ನು ಮಾತ್ರ ನಿರ್ಮಾಣ ಮಾಡಿರುವ ಗುರುಗಳ ಚಿಂತನೆ ಅದೆಷ್ಟು ದೊಡ್ಡದು? ನಮ್ಮ ಪುರಾತನ ಸಂಸ್ಕೃತಿ, ಪೂಜಾದಿ ಅನುಷ್ಠಾನಗಳು, ವೇದಪುರಾಣಾದಿಗಳ ಜ್ಞಾನವು ಶಿಥಿಲಗೊಳ್ಳಬಾರದು, ಸನಾತನ ಪರಂಪರೆಯು ಉಳಿಯಬೇಕು, ಬೆಳೆಯಬೇಕು ಎಂಬ ಏಕೈಕ ಉದ್ದೇಶದಿಂದ ನಾಲ್ಕು ಕಡೆಗಳಲ್ಲಿ ಉಚಿತ ವೈದಿಕ ವಿದ್ಯಾಪೀಠಗಳನ್ನು ಸ್ಥಾಪಿಸಿದ ಮಹನೀಯರು ನಮ್ಮ ಗುರುಗಳು. ಅದಲ್ಲದೆ ವಿದೇಶದಲ್ಲೂ ಗೀತೆ, ಉಪನಿಷತ್ತು ಮತ್ತು ಮಧ್ವಸಿದ್ಧಾಂತವನ್ನು ಪರಿಚಯಿಸಲು ಮಠಗಳನ್ನು ಸ್ಥಾಪಿಸಿ ತತ್ವಜ್ಞಾನವನ್ನು ವಿಶ್ವವ್ಯಾಪಿಯನ್ನಾಗಿಸಿದವರು. ಇಂತಹ ಗುರುಗಳನ್ನು ಪಡೆದ ನಾವೇ ಧನ್ಯರು. ಅವರ ಅನುಗ್ರಹದಿಂದ ಮತ್ತು ನಿತ್ಯಸ್ಮರಣೆಯಿಂದ ನಮಗೆ ಶ್ರೇಯಸ್ಸಾಗುವುದು ಸುನಿಶ್ಚಿತ.




SHRI KRISHNA VRUNDAVANA , HOUSTON, TEXAS. USA.

# ಶರ್ಕರಾನಗರಿಯ ಶ್ರೀಕೃಷ್ಣ !

**ಅ**ಮೇರಿಕಾ ದೇಶದ ಬೃಹತ್ ರಾಜ್ಯಗಳಲ್ಲೊಂದು ಟೆಕ್ಸಾಸ್. ಅದರಲ್ಲೊಂದು ವಿಶ್ವ ಪ್ರಸಿದ್ಧವಾದ ದೊಡ್ಡ ನಗರ ಹ್ಯೂಸ್ಟನ್. ವರ್ಷವಿಡೀ ಬಹುತೇಕ ಬೆಚ್ಚಗಿನ ವಾತಾವರಣವನ್ನು ಹೊಂದಿರುವ ಈ ಪ್ರದೇಶ ಪ್ರಾಯಶಃ ನಮ್ಮ ದಕ್ಷಿಣ ಭಾರತದ ಒಂದು ಭಾಗದಂತೆ ಭಾಸವಾಗುತ್ತದೆ. ಕಣ್ಣು ಹಾಯಿಸಿದಷ್ಟೂ ಮುಗಿಯದ, ಯಾವ ಕಡೆಯಿಂದ ನೋಡಿದರೂ ಕೊನೆಯೇ ಇರದಂತೆ ಕಾಣುವ ವಿಶಾಲವಾದ ಬಯಲು ಭೂಮಿ. ನೂರಾರು ಎಕರೆಗಳಷ್ಟು ವಿಸ್ತಾರವಾಗಿ ವ್ಯಾಪಿಸಿನಿಂತ ವೈವಿಧ್ಯಮಯ ಕೃಷಿಕರ ಗದ್ದೆಗಳು.

ಇಲ್ಲಿನ ವಸುಂಧರೆ ಸದಾ ಸಮೃದ್ಧವಾದ ನೀರು ಮತ್ತು ಫಲವತ್ತಾದ ಮಣ್ಣನ್ನು ಹೊಂದಿರುವುದು ಮಾತ್ರವಲ್ಲ, ತನ್ನ ಅಂತರ್ಗಭದಲ್ಲೂ ಅತ್ಯಂತ ಶ್ರೀಮಂತಳು! ಸಮಗ್ರ ಅರಬ್ ದೇಶಗಳು ಒಟ್ಟಾರೆಯಾಗಿ ಉತ್ಪಾದಿಸಬಲ್ಲ ಪ್ರಮಾಣಕ್ಕಿಂತಲೂ ಹೆಚ್ಚಿನ 'ಪೆಟ್ರೋಲಿಯಂ' ನಿಕ್ಷೇಪ ಈ ಪ್ರದೇಶದಲ್ಲಿದೆಯಂತೆ! ಜೊತೆಗೆ ಅಪೂರ್ವವಾದ ಅನೇಕ ಖನಿಜಗಳೂ ಕೂಡ. ಹೀಗೆ ಅಮೇರಿಕಾ ದೇಶದ ಸಿರಿವಂತಿಕೆಗೆ ಅಪಾರ ಪ್ರಮಾಣದಲ್ಲಿ ತನ್ನ ಕೊಡುಗೆಯನ್ನೂ ನೀಡಿದ ಹೆಮ್ಮೆಯ ನಗರ ಹ್ಯೂಸ್ಟನ್. ಅಮೇರಿಕಾದ ಪ್ರತಿಷ್ಠಿತ ವಿಜ್ಞಾನ ಸಂಸ್ಥೆ 'ನಾಸಾ' ಕೂಡ ಮುಖ್ಯವಾಗಿ ಕಾರ್ಯನಿರ್ವಹಿಸುವುದು ಇದೇ ಸ್ಥಳದಲ್ಲಿ. ಬಹಳ ಮಂದಿ ಭಾರತೀಯ ವಿಜ್ಞಾನಿಗಳು ಇಲ್ಲಿ ಉನ್ನತ ಸ್ಥಾನಮಾನಗಳೊಂದಿಗೆ, ಪುತ್ತಿಗೆ ಶ್ರೀಗಳ ಶಿಷ್ಯರಾಗಿ, ಧರ್ಮಿಷ್ಠರಾಗಿ ತಮ್ಮ ಕುಟುಂಬದೊಂದಿಗೆ ನೆಲೆಸಿದ್ದಾರೆ. ಇಲ್ಲೇ ಬಳಿಯಲ್ಲಿರುವುದು ನಮ್ಮ ಉಡುಪಿಯ ಕೃಷ್ಣ ಬಂದು ನೆಲೆಗೊಂಡಿರುವ ಪುಣ್ಯಭೂಮಿ 'ಶರ್ಕರಾನಗರಿ' !

'ಶುಗರ್ ಲ್ಯಾಂಡ್' ಎಂಬ ಹೆಸರಿನ ಈ ಊರಿಗೆ ಮಧುರವಾದ ಒಂದು ಸುಂದರ ಇತಿಹಾಸವಿದೆ. ಹತ್ತಾರು ದಶಕಗಳಿಂದ ಇಲ್ಲಿ ಕಬ್ಬಿನ ಮೂಲಕ ಸಕ್ಕರೆಯನ್ನು

ಉತ್ಪಾದಿಸುವ ಪ್ರಕ್ರಿಯೆ ಪರಂಪರಾಗತವಾಗಿ ಬೆಳೆದು ಬಂದಿದೆ. ಇಂದಿಗೂ ಇಲ್ಲಿನ 'ಇಂಪೀರಿಯಲ್' ಎಂಬ ಹೆಸರಿನ ಸಕ್ಕರೆ ಕಾರ್ಖಾನೆ ತನ್ನ ನೈಜತೆ ಮತ್ತು ಗುಣಮಟ್ಟಕ್ಕೆ ವಿಶ್ವದೆಲ್ಲೆಡೆ ಹೆಸರು ಗಳಿಸಿದೆ. ಪ್ರಾಣಿಜನ್ಯವಾದ ಯಾವುದೇ ನಿಶಿದ್ಧ ವಸ್ತುಗಳನ್ನು ಬಳಸದ, ಪರಿಶುದ್ಧವಾದ 'ಮಡಿ'ಯ ಸಕ್ಕರೆ ಬೇಕೆನ್ನುವವರಿಗೆ ಈವತ್ತಿಗೂ ಆಪ್ತವಾದ ಈ 'ಬ್ರಾಂಡ್' ನ ಮೂಲವೇ ನಮ್ಮ ಉಡುಪಿಯ ಶ್ರೀ ಕೃಷ್ಣ ಬಂದು ನೆಲೆನಿಂತ ಶರ್ಕರಾನಗರಿ, 'ಶುಗರ್ ಲ್ಯಾಂಡ್' ! ಯಥಾಪ್ರಕಾರ ಧರ್ಮಪ್ರಚಾರದ ಧ್ಯೇಯದೊಂದಿಗೆ ಸಂಚರಿಸುತ್ತಾ ಟೆಕ್ಸಾಸ್‌ನ ಹ್ಯೂಸ್ಟನ್ ಪ್ರದೇಶಕ್ಕೆ ಬಂದ ಪುತ್ತಿಗೆ ಶ್ರೀಗಳನ್ನು ಇಲ್ಲಿನ ಜನತೆಯೂ ಭಕ್ತಿಯಿಂದ ಸ್ವಾಗತಿಸಿದರು.

ಮೊದಮೊದಲಿಗೆ ಈ ದೇಶದ ಪೂರ್ವಭಾಗದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಇರುತ್ತಿದ್ದವು. ಆದರೆ ಅಲ್ಲಿನ ವಿಪರೀತ ಚಳಿ ಎಲ್ಲರಿಗೂ ಸಹ್ಯವಾಗುತ್ತಿರಲಿಲ್ಲ. ಹಾಗಾಗಿ ಸುಮಾರು ಅರುವತ್ತು, ಎಪ್ಪತ್ತರ ದಶಕದಲ್ಲಿ ಬಂದು ಹತ್ತಾರು ವರ್ಷಗಳ ಕಾಲ ಕೆಲಸ ಮಾಡಿದ ಅನೇಕ ಭಾರತೀಯರು ತಮ್ಮ ನೆಮ್ಮದಿಯ ನಿವೃತ್ತಿಜೀವನಕ್ಕೋಸ್ಕರ ಬೆಚ್ಚಗಿನ ಈ ಟೆಕ್ಸಾಸ್ ಕಡೆಗೆ ವಲಸೆ ಹೋಗುತ್ತಿದ್ದರು. ನಂತರ ಅವರ ಪರಂಪರೆ ಇಲ್ಲಿ ಮುಂದುವರಿಯಿತಲ್ಲದೆ ಅನೇಕ ಹೊಸ ಉದ್ಯೋಗಾವಕಾಶಗಳೂ ಸೃಷ್ಟಿಯಾಗಿ ಮುಂದೆ ಪುತ್ತಿಗೆ ಶ್ರೀಗಳು ಇಲ್ಲಿಗೆ ಪಾದಾರ್ಪಣೆಗೈಯ್ಯುವ ಹೊತ್ತಿಗೆ ಬಹಳಮಂದಿ ಭಾರತೀಯರು ಇಲ್ಲಿ ಬಂದು ಸೇರಿಕೊಂಡಿದ್ದರು. ಅದರಲ್ಲೂ ದಾಕ್ಷಿಣಾತ್ಯರ ಸಂಖ್ಯೆಯೇ ಅಧಿಕವೆನ್ನಬಹುದು.

ಸ್ಥಳೀಯ ಭಕ್ತರ ಆಗ್ರಹ ಪೂರ್ವಕ ಅಪೇಕ್ಷೆಯಂತೆ 2010ನೇ ಇಸವಿಯಲ್ಲಿ ಪೂಜ್ಯ ಶ್ರೀಗಳು 'ಹ್ಯೂಸ್ಟನ್' ಪ್ರದೇಶದ ಸೂಕ್ತ ಜಾಗದಲ್ಲಿ ಒಂದು ಮನೆಯನ್ನು ಖರೀದಿಸುವುದರ ಮೂಲಕ ಶ್ರೀ ಮಠದ ಶಾಖೆ ಶ್ರೀ ಕೃಷ್ಣವೃಂದಾವನದ ಸಂಸ್ಥಾಪನೆಗೆ ಚಾಲನೆಯನ್ನು ಕೊಟ್ಟರು. 'ಮಥುರಾಧಿಪತೇರಖಿಲಂ ಮಧುರಂ' ಎಂದು ಎಲ್ಲರೂ ಕೊಂಡಾಡುವ ನಮ್ಮ ಮುದ್ದುಕೃಷ್ಣನ ಆಯ್ಕೆ ಮಾತ್ರ ಈ ಶರ್ಕರಾನಗರಿ 'ಶುಗರ್ ಲ್ಯಾಂಡ್' ಆಗಿತ್ತು.

ಶ್ರೀಗಳು ಸೇವೆಗೆಂದು ನಿಯೋಜಿಸಿದ, ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಕಲಿತ, ಸಮರ್ಥ ಅರ್ಚಕವೃಂದದ ವೈವಿಧ್ಯಮಯ ಕಾರ್ಯಪ್ರವೃತ್ತಿಗಳಿಂದ ಶ್ರೀ ಕೃಷ್ಣವೃಂದಾವನವು ಅನತಿ ಕಾಲದಲ್ಲಿಯೇ ಜನಪ್ರಿಯವಾಯಿತು. ಆ ಸಮಯದಲ್ಲಿ ಶುಗರ್ ಲ್ಯಾಂಡ್ ವಲಯದ ಪ್ರತಿಷ್ಠಿತ ಮುಖ್ಯರಸ್ತೆ 'ಸೈನಾಟ್'ನ ಪ್ರಮುಖ ಭಾಗದಲ್ಲಿ ಸುಮಾರು ನಾಲ್ಕು ಎಕರೆ ವಿಸ್ತೀರ್ಣದ 'ಚರ್ಚ್' ಒಂದು ಮಾರಾಟಕ್ಕೆ ಸಿದ್ಧವಾಗಿತ್ತು. ತತ್‌ಕ್ಷಣ ಕಾರ್ಯ ಪ್ರವೃತ್ತರಾದ ಶ್ರೀ ಮಠದ ಪ್ರತಿನಿಧಿಗಳು ಮತ್ತು ಸ್ಥಳೀಯ ಭಕ್ತವೃಂದ ಪೂಜ್ಯ ಶ್ರೀಗಳ ಕಟ್ಟುನಿಟ್ಟಿನ ಮಾರ್ಗದರ್ಶನದಂತೆ ಆ ಸ್ಥಳವನ್ನು ಖರೀದಿಸಿ, ಶ್ರೀ ಕೃಷ್ಣನ ವೃಂದಾವನವನ್ನಾಗಿ ಪರಿವರ್ತಿಸುವಲ್ಲಿ ಸಫಲರಾದರು. ಮುಂದೆ ಪರಮಪೂಜ್ಯ ಶ್ರೀಪಾದರು ಸ್ವತಃ ಮತ್ತೊಮ್ಮೆ ಅಲ್ಲಿಗೆ ಆಗಮಿಸಿ ನಮ್ಮ ಕಡೆಗೋಲು ಕೃಷ್ಣನ ಸುಂದರ ಕೃಷ್ಣನನ್ನು, ಮಧ್ವಾಚಾರ್ಯರ ಬೃಹತ್ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು. ಭಕ್ತರ ಅಪೇಕ್ಷೆಯಂತೆಯೇ ಶ್ರೀ ರಾಯರ ಮೃತ್ತಿಕಾ ವೃಂದಾವನವೂ ಸ್ಥಾಪನೆಗೊಂಡಿತು.

ನಿತ್ಯಪೂಜೆ, ಅನ್ನದಾನ, ಪಾಠಪ್ರವಚನಾದಿ ನಿರಂತರ ಚಟುವಟಿಕೆಗಳೊಂದಿಗೆ 'ಶುಗರ್ ಲ್ಯಾಂಡ್' ನ ಈ ಶ್ರೀಕೃಷ್ಣವೃಂದಾವನ ಇದೀಗ ತನ್ನ ಇತರ ಅನೇಕ ಆಕರ್ಷಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳಿಗೂ ಪ್ರಸಿದ್ಧಿಗೊಳ್ಳುತ್ತಿದೆ. ಪ್ರಸ್ತುತ ಅತ್ಯಂತ ಮುತುವರ್ಜಿಯಿಂದ ಕಾರ್ಯನಿರ್ವಹಿಸುತ್ತಿರುವ ಅರ್ಚಕರ ನೇತೃತ್ವದಲ್ಲಿ ಮೂಡಿಬರುತ್ತಿರುವ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರಗೊಂಡು ಭಾರತದಲ್ಲಿರುವವರನ್ನೂ ಹುಬ್ಬೇರಿಸುವಂತೆ ಮಾಡುತ್ತಿವೆ. ನಿರಂತರ ನಾಮ ಸಂಕೀರ್ತನೆ, ಕುಣಿತಭಜನೆ, ಅಖಂಡ ಸಪ್ತಾಹಗಳು, ಬೃಹತೀ ಸಹಸ್ರ ಮೊದಲಾದ ಬೃಹತ್ ಯಾಗಗಳು ಮತ್ತು ಭಾರತದಲ್ಲಿ ನಡೆಯುವಂತೆ ಸಹಸ್ರಾರು ಜನರ ಪಾಲ್ಗೊಳ್ಳುವಿಕೆಯೊಂದಿಗೆ ವಿಜೃಂಭಣೆಯಿಂದ ಆಗಾಗ ನಡೆಯುವ ಯಕ್ಷಗಾನ ಬಯಲಾಟಗಳು ಇಲ್ಲಿನ ಭಾರತೀಯರಿಗೆ ಹೆಮ್ಮೆ ತರಿಸಿವೆ.

ಶ್ರೀಗಳ ತಪೋಬಲದಿಂದಾಗಿ ವಿಶೇಷ ಲೀಲಾಸಾನ್ನಿಧ್ಯವನ್ನು ಹೊಂದಿರುವ

ಈ ಶರ್ಕರಾನಗರಿಯ ಶ್ರೀ ಕೃಷ್ಣ, ಇದೀಗ ಇಲ್ಲಿ ವಿವಾಹ, ಸಂತಾನ, ಮನೆ, ಉದ್ಯೋಗ ಇತ್ಯಾದಿ ಅನೇಕ ಇಷ್ಟಾರ್ಥಗಳನ್ನು ಬಯಸಿಕೊಂಡು ಬರುವ ಸ್ಥಳೀಯ ಭಕ್ತರ ಕಲ್ಪವೃಕ್ಷವಾಗಿ, ಕಾಮಧೇನುವಾಗಿ ಮೆರೆಯುತ್ತಿದ್ದಾನೆ. ಇಲ್ಲಿ ಬಂದು ಹೋಮ, ಪೂಜೆಗಳನ್ನು ನಡೆಸಿ, ಪ್ರಾರ್ಥನೆಗಳನ್ನು ಸಲ್ಲಿಸಿ ಅತಿಶೀಘ್ರದಲ್ಲಿ ಮನಸೋಽಭೀಷ್ಟಗಳನ್ನು ಪಡೆದು ಸಂತುಷ್ಟರಾದ ಅನೇಕ ಭಕ್ತರ ಅನುಭವ ಕಥನಗಳು ಬಹುಶಃ ನಿಮ್ಮ ಕಿವಿಗೂ ಬಿದ್ದಿರಬಹುದು.

●

# ಗುರುಗಳ ಆಜ್ಞೆಯನ್ನು ಅನುಸರಿಸಿದವನಿಗೆ ಅನಂತ ಸುಖಪ್ರಾಪ್ತಿ



**ಶ್ರೀ ರಘುರಾಮ ಕುಂಜತ್ತಾಯ ಮಣಿಕ್ಕಾರ**
ಶ್ರೀಕೃಷ್ಣವೃಂದಾವನ, ಹ್ಯೂಸ್ಟನ್, USA

'ಗೀತಾ ಗಂಗಾ ಚ ಗಾಯತ್ರೀ ಗೋವಿಂದೇತಿ ಹೃದಿಸ್ಥಿತೇ ಚತುರ್ಗಕಾರ ಸಂಯುಕ್ತೇ ಪುನರ್ಜನ್ಮ ನ ವಿದ್ಯತೇ' ಎಂಬ ಪ್ರಸಿದ್ಧವಾದ ಸುಭಾಷಿತವು ನಾಲ್ಕು ಗಕಾರಗಳಿಂದ ಸೂಚಿತವಾದ ಗೀತಾರ್ಥ ಚಿಂತನೆ, ಗಂಗಾಸ್ನಾನ, ಗಾಯತ್ರೀ ಜಪ ಮತ್ತು ಗೋವಿಂದನಾಮಸ್ಮರಣೆಗಳೆಂಬ ನಿತ್ಯ ಸಾಧನೆಗಳಿಂದ ಜನ್ಮಪುನರ್ಜನ್ಮಗಳ ವರ್ತುಲವಾದ ಈ ಸಂಸಾರದಿಂದ ಬಿಡುಗಡೆಯನ್ನು ಹೊಂದಬಹುದು, ನಿತ್ಯ ಸುಖವಾದ ಮೋಕ್ಷವನ್ನು ನಿಶ್ಚಯವಾಗಿ ಸಾಧಿಸಬಹುದು ಎಂದು ತಿಳಿಸುತ್ತದೆ.

ಹಾಗೆಯೇ ಆ ನಾಲ್ಕು ಗಕಾರಗಳ ಜೊತೆಗೆ ಮಹತ್ತರವಾದ ಇನ್ನೊಂದು ಗಕಾರಸೂಚಿತ ವಿಶಿಷ್ಟ ಪದವೆನಿಸಿದ 'ಗುರು'ಗಳನ್ನು ಆಶ್ರಯಿಸಿದರಂತೂ ಪುನರ್ಜನ್ಮವೆಂಬುವುದು ಖಂಡಿತವಾಗಿಯೂ ಇಲ್ಲವಾಗುತ್ತದೆ. 'ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ' 'ಉಪದೇಕ್ಷಂತಿ ತೇ ಜ್ಞಾನಂ ಜ್ಞಾನಿನಃ' ಎಂಬುವುದಾಗಿ ಜಗದ್ಗುರುವಾದ ಸಾಕ್ಷಾತ್ ಶ್ರೀಕೃಷ್ಣನೇ ಸೂಚಿಸಿದಂತೆ ಸದ್ಗುರುವಿನ ಸಮಾಶ್ರಯದಿಂದ ಮಾತ್ರ ಜ್ಞಾನಪ್ರಾಪ್ತಿ ಮತ್ತುಅಂತಹ ಜ್ಞಾನದಿಂದ ಮಾತ್ರ ಭವಬಂಧವಿಮೋಚನೆ ಹಾಗೂ ಮೋಕ್ಷಪ್ರಾಪ್ತಿ.

ನನ್ನ ಸ್ವರೂಪೋದ್ಧಾರಕರಾದ ಪೂಜ್ಯ ಪುತ್ತಿಗೆ ಶ್ರೀಪಾದರು ಮಹಾನ್ ಸಾಧಕರು. ವಿಶ್ವಗುರು ಶ್ರೀಮಧ್ವಕರಾಚಿತ ಸಾಕ್ಷಾತ್ ಶ್ರೀಕೃಷ್ಣನ ಅಡಿದಾವರೆಗಳ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಚತುರ್ಥಬಾರಿಗೆ ಪರ್ಯಾಯ ಸರ್ವಜ್ಞಪೀಠವನ್ನೇರಿದವರು. ವಿಶ್ವವೇ ಮೆಚ್ಚಿದ ನಾಯಕ ಭಾರತದ ಜನಪ್ರಿಯ ಪ್ರಧಾನಿ ಮೋದಿಯವರನ್ನು ಉಡುಪಿಗೆ ಕರೆಸಿ ಹಣೆಗೆ ಊರ್ಧ್ವಪುಂಡ್ರದ ತಿಲಕವನ್ನಿತ್ತು

ಆಶೀರ್ವದಿಸಿದವರು. ಕೋಟಿಜನರ ಕೈಯಿಂದ ಭಗವದ್ಗೀತೆಯನ್ನು ಬರೆಸಿದವರು. ಇಂತಹ ಅಸಾಧಾರಣ ಶಕ್ತಿಯುಳ್ಳ ಮಹಾಗುರುಗಳ ಪದಕಮಲಗಳನ್ನು ಆಶ್ರಯಿಸಿ ಉದ್ಧಾರವಾದ ಹಲವರಲ್ಲಿ ನಾನೂ ಒಬ್ಬ ಎನ್ನುವ ಧನ್ಯತೆ ನನ್ನನು.

'ಆತ್ಮಬುದ್ಧಿಃ ಸುಖಾಯೈವ ಗುರುಬುದ್ಧಿರ್ವಿಶೇಷತಃ' ಎಂಬ ಪ್ರಸಿದ್ಧ ಮಾತಿನಂತೆ ನಮ್ಮ ಸ್ವಂತಚಿಂತನೆಯು ನಮ್ಮ ಸುಖಕ್ಕೆ ಕಾರಣವಾಗುವುದೇನೋ ಹೌದು. ಆದರೆ ಅದು ನಮ್ಮ ಸ್ವಭಾವ, ಯೋಗ್ಯತೆ ಮತ್ತು ಕರ್ಮಗಳಿಗಷ್ಟೇ ಸೀಮಿತವಾಗಿರುತ್ತದೆ. ಗುರುಗಳಿಗೆ ಸಂಪೂರ್ಣವಾಗಿ ಶರಣಾಗಿ ಅವರಿಂದ ಸನ್ಮಾರ್ಗದರ್ಶನವನ್ನು ಪಡೆದವನಿಗೆ, ಅವರ ನಿರ್ದೇಶನದಂತೆ ನಡೆಯುವವನಿಗೆ ಇಹಪರಗಳೆರಡರಲ್ಲೂ ಶ್ರೇಯಸ್ಸು ಪ್ರಾಪ್ತಿಯಾಗುವುದು ಸುನಿಶ್ಚಿತವಂತೆ.

ಗುರುಗಳ ಚರಣಸೇವೆಯೆನ್ನುವುದು ಸೇವೆಗಳಲ್ಲೇ ಪರಮಶ್ರೇಷ್ಠವೆನಿಸಿದ ಸೇವೆ. ಆದರೆ ಗುರುಗಳ ಮನಸ್ಸಿಗೊಪ್ಪುವ ಶಿಷ್ಯನೆನಿಸಿಕೊಳ್ಳುವುದು ಅಷ್ಟು ಸುಲಭಸಾಧ್ಯವಲ್ಲ. ಅದಕ್ಕೆ ಭಗೀರಥಪ್ರಯತ್ನವೇ ಬೇಕು. ಅವರ ಲೋಕಕಲ್ಯಾಣದ ಮಹತ್ಕಾರ್ಯಗಳಲ್ಲಿ ಸಂಪೂರ್ಣ ಭಾಗಿಯಾಗಿ ಅವಿರತ ಪರಿಶ್ರಮಗಳೊಂದಿಗೆ ನಿಃಸ್ವಾರ್ಥ ಸೇವೆ ಸಲ್ಲಿಸುತ್ತಾ ಅವರ ಕೃಪಾದೃಷ್ಟಿಗೆ ಗೋಚರನಾಗಬೇಕು. ಅಂತಹ ಗುರುಚರಣ ಸೇವೆಯನ್ನು ನಿರಂತರ ನಡೆಸುವ ಸನ್ಮತಿಯನ್ನು ಕರುಣಿಸೆಂಬಂತೆ ಶ್ರೀಕೃಷ್ಣನಲ್ಲಿ ಬೇಡಿಕೊಂಬೆನು ಸದಾ.



SHRI KRISHNA BRUNDAVANA, TORONTO, CANADA.

# ಟೊರಾಂಟೋದಲ್ಲಿ ಶ್ರೀಕೃಷ್ಣನ ತುಂಟಾಟ

**ನ**ಮ್ಮ ಕೃಷ್ಣನ ಕತೆಯೇ ಹಾಗೆ. ಹೇಳಿದಷ್ಟೂ ಮುಗಿಯದು. ಕೇಳಿದಷ್ಟೂ ಸಾಕೆನಿಸದು. ಹೇಳಿದವರಿಗೂ, ಕೇಳಿದವರಿಗೂ ನೆಮ್ಮದಿಯನ್ನು ತಂದುಕೊಡುವುದು, ಆಲಿಸಿದಷ್ಟೂ ಆನಂದವನ್ನು ಹೆಚ್ಚಿಸುವುದು ಮತ್ತು ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುವುದು ಇದೇ ಈ ನಮ್ಮ ಮುದ್ದು ಮುಕುಂದನ ಚರಿತಾಮೃತಗಳ ಗುಟ್ಟು. ಅದಕ್ಕೇ ಅವನನ್ನು ಶ್ರೀಮನ್ ಮಧ್ವಾಚಾರ್ಯರು 'ಶುಭತಮಕಥಾಶಯ ಪರಮಸದೋದಿತ' ಎಂದು ಕರೆದದ್ದು. 'ಕರುಣಾಪೂರ್ಣವರಪ್ರದ ಚರಿತಂ ಜ್ಞಾಪಯ ಮೇ ತೇ' 'ನಿನ್ನ ಪುಣ್ಯಕತೆಗಳನ್ನು ನನಗೆ  ನೆನಪಿಸುತ್ತಲೇ ಇರು' ಎಂದು ಬೇಡಿಕೊಂಡದ್ದು.

ಚತುರ್ವೇದಗಳು, ಆಗಮ, ಮಹಾಭಾರತ, ಭಾಗವತ, ಹರಿವಂಶಾದಿ ಮಹಾಪುರಾಣಗಳು, ದಾಸವರೇಣ್ಯರ ಅನುಭಾವದ ಅಸಂಖ್ಯ ಪದ್ಯಗಳು ಹೀಗೆ ವಾಙ್ಮಯ ಪ್ರಪಂಚದ ಎಲ್ಲೆಡೆಯಲ್ಲೂ ಎಡೆಬಿಡದೆ ವರ್ಣಿತವಾದ ಅವನ ಅಪರಿಮಿತ ಲೀಲಾಚರಿತ್ರೆಗಳು, ಪುಣ್ಯಕತೆಗಳು ಭಕ್ತಿಯಿಂದ ಕಣ್ಣುಮುಚ್ಚಿ ಕುಳಿತು ಆಲಿಸುವ ಭಕ್ತರಿಗೆ ಇಂದಿಗೂ ಶ್ರೀ ಕೃಷ್ಣನ ಸುಂದರ ಚಿತ್ರಣವನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತವೆ. ಶ್ರದ್ಧೆಯಿಂದ ನಂಬಿದ ಭಕ್ತಜನತೆಗೆ ಅವರ ಜೀವನದಲ್ಲಿಯೂ ಅಂತಹದ್ದೇ ರೀತಿಯ ಅದ್ಭುತ ಲೀಲೆಗಳ, ಪವಾಡಗಳ ಅನುಭವಗಳನ್ನು ಈ ಕಲಿಕಾಲದಲ್ಲಿಯೂ ಮಾಡಿ ತೋರಿಸುತ್ತವೆ. ಕಷ್ಟಗಳಿಂದ ಕಾಪಾಡುತ್ತವೆ. ಅಂತಹ ನವನವೀನ ರೋಚಕ ಅನುಭೂತಿಗಳಲ್ಲೊಂದು ನಮ್ಮ ಉಡುಪಿಯ ಶ್ರೀಕೃಷ್ಣ ಕೆನಡಾ ದೇಶದ ಟೊರೋಂಟೋ ಮಹಾನಗರದಲ್ಲಿ ತನ್ನ ಭಕ್ತರ ನಂಬಿಕೆಯನ್ನು ಪರೀಕ್ಷಿಸಿದ ಕತೆ.

ತನ್ನ ಅನ್ಯಾದೃಶ ಸೌಂದರ್ಯದಿಂದ ವಿಶ್ವವಿಖ್ಯಾತಿಯನ್ನು ಗಳಿಸಿದ 'ನಯಾಗರ' ಎಂಬ ಅದ್ಭುತ ಜಲಪಾತದ ಹೆಸರನ್ನು ಕೇಳದವರು ಬಹುಶಃ ಯಾರೂ ಇರಲಿಕ್ಕಿಲ್ಲ. ಅಮೇರಿಕಾ ಭೂಪ್ರದೇಶದ  ಎತ್ತರಭಾಗದಲ್ಲಿರುವ ವಿಶಾಲವಾದ 'ಈರಿ' ಸರೋವರವು ಹುಮ್ಮಸ್ಸಿನಿಂದ ಕೆಳಗೆ ಹಾರಿ, ತಗ್ಗಿನಲ್ಲಿರುವ ಕೆನಡಾದ 'ಓಂಟಾರಿಯೋ'

ಮಹಾಸರೋವರವನ್ನು ಸೇರಿ ಆಲಿಂಗಿಸಿಕೊಳ್ಳುವ ಸುಂದರ ಸನ್ನಿವೇಶ. ಪ್ರಕೃತಿಮಾತೆಯು ತನ್ನ ಸೌಂದರ್ಯದ ಪರಾಕಾಷ್ಠೆಯನ್ನು ಮತ್ತು ಸೃಷ್ಟಿಕರ್ತನು ತನ್ನ ಕರ್ತೃತ್ವಶಕ್ತಿಯ ವಿಭೂತಿಯನ್ನು ಎತ್ತಿತೋರಿಸಿದ ಒಂದು ಲೀಲಾಕ್ಷೇತ್ರ. ಅಲ್ಲೇ ಪಕ್ಕದ ಬಫೆಲೋ ನಗರದ ಭಕ್ತರೊಬ್ಬರ ಮನೆಯಲ್ಲಿ ನಿತ್ಯಾನುಷ್ಠಾನ, ಪೂಜೆ, ಭಿಕ್ಷಾದಿಗಳನ್ನು ಮುಗಿಸಿ ಈ ಜಲಪಾತವನ್ನು ಕಾಣುವ ಕುತೂಹಲದೊಂದಿಗೆ ತಮ್ಮ ಶಿಷ್ಯರೊಡನೆ ಮೊದಲ ಬಾರಿಗೆ ಬಿಜಯಂಗೈದ ಪೂಜ್ಯ ಶ್ರೀ ಪುತ್ತಿಗೆ ಶ್ರೀಪಾದರಿಗೆ ಅಲ್ಲಿ ಕಂಡುಬಂದದ್ದು ಶ್ರೀಕೃಷ್ಣನ ಕರಾಮತ್ತು ಮಾತ್ರ.

ಈ ಸೃಷ್ಟಿಯಲ್ಲಿ ಕಾಣುವ ಯಾವುದೇ ವಿಸ್ಮಯವಿರಲಿ, ಅದು ತನ್ನದೇ ಸನ್ನಿಧಾನ ಎಂದು ಘೋಷಿಸಿಕೊಂಡದ್ದು ಶ್ರೀಕೃಷ್ಣನೇ ತಾನೇ ? 'ತತ್ತದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಮ್' ಹಾಗಾಗಿ ಇಲ್ಲೇ ಸನಿಹದಲ್ಲೆಲ್ಲಾದರೂ ನಮ್ಮ ಶ್ರೀ ಕೃಷ್ಣನಿಗೊಂದು ಚಂದದ ಮಂದಿರವಾಗಬೇಕು, ರಭಸದಿಂದ ಧುಮ್ಮಿಕ್ಕುವ ನೀರಿನ ಗಂಭೀರ ಸದ್ದಿನೊಂದಿಗೆ ವೇದನಾದಗಳೂ ಇಲ್ಲಿ ಅನುರಣಿಸಬೇಕು, ದೇವರ ಈ ಅದ್ಭುತ ಸೃಷ್ಟಿಯನ್ನು ನೋಡಲು ಬಂದ ಸನಾತನ ಧರ್ಮೀಯರಿಗೆ ಇಲ್ಲಿಯೂ ದೇವರ ದರ್ಶನವಾಗಬೇಕು, ನಾಮ ಸಂಕೀರ್ತನೆಗಳಾಗಬೇಕು, ಶಾಸ್ತ್ರ ಪ್ರವಚನಗಳು ನಡೆಯಬೇಕು. ತೀರ್ಥಪ್ರಸಾದದ ವ್ಯವಸ್ಥೆಯಾಗಬೇಕು ಎಂಬ ಬಲವಾದ ಸಂಕಲ್ಪ ಪೂಜ್ಯ ಶ್ರೀಪಾದರ ಹೃದಯದಲ್ಲಾಗ ಉಗಮವಾಯಿತು.

ಅದಾಗಿ ಅನತಿಕಾಲದಲ್ಲಿಯೇ, ಅಲ್ಲಿನ ಅನೇಕ ಭಕ್ತರಿಂದ ಪೂಜ್ಯ ಶ್ರೀಪಾದರಿಗೆ ವಿನಂತಿಯ ಮಹಾಪೂರವೇ ಹರಿದುಬಂತು. ಟೊರೊಂಟೋ ಮಹಾನಗರದಲ್ಲಿ ಒಂದು ಶಾಖಾಮಠವನ್ನು ನಿರ್ಮಿಸುವ ಮನಸ್ಸುಮಾಡಬೇಕು, ಅದಕ್ಕೋಸ್ಕರ ತಾವು ಇಲ್ಲಿ ಚಿತ್ತೈಸಲೇ ಬೇಕು ಎಂಬುವುದು ಅಲ್ಲಿನ ನಿವಾಸಿಗಳ ಆಗ್ರಹವಾಗಿತ್ತು. ಅದಕ್ಕೊಪ್ಪಿದ ಪೂಜ್ಯ ಶ್ರೀಪಾದರು ವೀಸಾ ಪಡೆಯುವ ಉದ್ದೇಶದಿಂದ ಶಿಷ್ಯರೊಡನೆ ನ್ಯೂಯಾರ್ಕ್ ನಲ್ಲಿರುವ ಕೆನಡಾದ ರಾಯಭಾರಿ ಕಚೇರಿಗೆ ಆಗಮಿಸಿದರೆ ಅಲ್ಲಿಯೂ ಒಂದು ಆಶ್ಚರ್ಯ ಕಾದಿತ್ತು!

ಅನೇಕ ವೀಸಾಕಾಂಕ್ಷಿ ಪ್ರವಾಸಿಗರಿಂದ ಕಿಕ್ಕಿರಿದು ತುಂಬಿದ್ದ ಆ ಜಾಗದಲ್ಲೂ ಎಲ್ಲರ ಗಮನ ಸೆಳೆದದ್ದು ಪೂಜ್ಯ ಶ್ರೀಪಾದರ ಹಾವಿಗೆಯ ಸದ್ದು! ತೇಜೋಮಯವಾದ ಕಾವಿವಸ್ತ್ರ! ಎಲ್ಲರಂತೆ ಸರತಿಯ ಸಾಲಿನಲ್ಲಿ ನಿಲ್ಲಬಯಸಿದ ಪೂಜ್ಯ ಶ್ರೀಪಾದರನ್ನು ಕಂಡು ಓಡೋಡಿ ಬಂದ ಕೆನಡಾದೇಶದ ರಾಯಭಾರಿ ತಲೆಬಾಗಿ ಗೌರವಿಸಿ, ಸೀದಾ ಒಳಗೆ ಕರೆದುಕೊಂಡು ಹೋಗಿ 'ತಮ್ಮಂತಹ ಪೂಜ್ಯರು ನಮ್ಮ ದೇಶಕ್ಕೆ ಕಾಲಿರಿಸುವುದೇ ಒಂದು ಸೌಭಾಗ್ಯ' ಎಂದು ಯಾವುದೇ ಶುಲ್ಕವನ್ನೂ ತೆಗೆದುಕೊಳ್ಳದೆ ಗೌರವ ಪೂರ್ವಕವಾಗಿ ವೀಸಾ ಕೊಟ್ಟದ್ದೇ ಒಂದು ಇತಿಹಾಸ!

ಅಮೇರಿಕಾದ ನ್ಯೂಜೆರ್ಸಿ, ಫೀನಿಕ್ಸ್, ಹ್ಯೂಸ್ಟನ್, ಲಾಸ್ ಎಂಜಲೀಸ್ ಇತ್ಯಾದಿ ಕಡೆಗಳಲ್ಲಿ ವೈಭವದಿಂದ ನಡೆಯುತ್ತಿದ್ದ ಶ್ರೀಮಠದ ಕಾರ್ಯಕ್ರಮಗಳ ಖ್ಯಾತಿಯನ್ನು ಕೇಳಿದ ಕೆನಡಾ ಭಕ್ತಜನತೆಗೆ, ತಮ್ಮೂರಿನಲ್ಲೂ ಶ್ರೀಮಠವು ಸ್ಥಾಪನೆಗೊಳ್ಳಬೇಕೆಂಬ ಉತ್ಕಟವಾದ ಆಸೆಯಿತ್ತು. ಅದಕ್ಕೋಸ್ಕರವೇ ಪೂಜ್ಯ ಶ್ರೀಪಾದರು ಬರುತ್ತಿದ್ದಾರೆ ಎಂದು ತಿಳಿದಾಕ್ಷಣ ಶ್ರೀ ಕೃಷ್ಣನ ಮತ್ತು ರಾಯರ ಪರಮ ಭಕ್ತೆಯೊಬ್ಬರು ಧನಸಂಗ್ರಹಕ್ಕೆ ತಮ್ಮ ಅಭಿಯಾನವನ್ನು ಆರಂಭಿಸಿದ್ದರು. ಸುಮಾರು ಮೂವತ್ತು ಸಾವಿರ ಡಾಲರುಗಳನ್ನು ಪೂಜ್ಯರಿಗೆ ಸಮರ್ಪಿಸಿ ಮಠನಿರ್ಮಾಣಕ್ಕೆ ಅತ್ಯಗತ್ಯವಾದ ಸ್ಥಳೀಯರ ಆರ್ಥಿಕ ಸಹಕಾರವೆಂಬ ಪ್ರಕ್ರಿಯೆಗೆ ಚಾಲನೆಯನ್ನಿತ್ತರು.

ಮುಂದೆ ಕೆಲವೇ ದಿನಗಳಲ್ಲಿ 'ಸ್ಕಾರ್ಬರೋ' ಎಂಬ ಜಾಗದಲ್ಲಿ ಒಂದು ಸುಂದರ, ವಿಶಾಲವಾದ ಜಾಗವನ್ನು ಗುರುತಿಸಿದ ಶ್ರೀಪಾದರು, ಎಲ್ಲ ವಿಧದ ಸರಕಾರೀ ಅನುಮತಿಗಳನ್ನು ಪಡೆದು ಚಾಂದ್ರ ಯುಗಾದಿಯ ಪುಣ್ಯದಿನದಂದು (2011) ಉಡುಪಿಯ ಶ್ರೀಕೃಷ್ಣನನ್ನು ಶ್ರೀಮುಖ್ಯಪ್ರಾಣ ಮತ್ತು ರಾಯರ ಮೃತ್ತಿಕಾವೃಂದಾವನವನ್ನು ಸ್ಥಾಪಿಸಿ ಮಹಾಪೂಜೆಯನ್ನು ಸಲ್ಲಿಸುವ ಮೂಲಕ ಶ್ರೀ ಮಠದ ನಿರಂತರ ಕಾರ್ಯನಿರ್ವಹಣೆಗೆ ಚಾಲನೆಯನ್ನಿತ್ತರು. ಪೂಜೆ, ಪೌರೋಹಿತ್ಯ, ಪಾಠಪ್ರವಚನ, ಅನ್ನದಾನಾದಿ ಕೈಂಕರ್ಯಗಳಿಗೆ ಯೋಗ್ಯ ಶಿಷ್ಯರನ್ನು ನಿಯೋಜಿಸಿ ಯಥಾಪ್ರಕಾರ ತಮ್ಮ ವಿಶ್ವಸಂಚಾರವನ್ನು ಮುಂದುವರಿಸಿದರು.

ತಮ್ಮ ಮುಂದಿರುವುದು ಮುಳ್ಳಿನ ಹಾದಿ ಎಂದು ಅಲ್ಲಿನ ಶ್ರೀಮಠದ ಪ್ರತಿನಿಧಿಗಳಿಗೆ ಅಗ ಗೊತ್ತಾಗಲಿಲ್ಲ. ಮೊದಮೊದಲಿಗೆ ಎಲ್ಲವೂ ಚೆನ್ನಾಗಿಯೇ ನಡೆಯುತ್ತಿತ್ತು. ಆಗಲೇ ಶುರುವಾಯಿತು ನೋಡಿ ಅಲ್ಲಿ ಶ್ರೀಕೃಷ್ಣನ ಪರೀಕ್ಷೆ. ಆ ಕಟ್ಟಡದಲ್ಲಿ ಅನೇಕ ದೋಷಗಳು, ಸಮಸ್ಯೆಗಳು ಕಾಣಿಸಿಕೊಂಡವು. ವಿಪರೀತವಾದ ಚಳಿಯೇ ಮೊದಲಾದ ಹವಾಮಾನ ವೈಪರೀತ್ಯಗಳನ್ನು ಸಹಿಸಿಕೊಂಡು ದೇವರ, ಗುರುರಾಯರ ಸೇವೆಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು ಬಂದರೂ, ಶ್ರೀ ಮಠದ ನಿರ್ವಹಣೆಗೆ ನಿರೀಕ್ಷೆಯನ್ನೂ ಮೀರಿ ಮೇಲೇರುತ್ತಲೇ ಹೋದ ಆರ್ಥಿಕ ಹೊರೆಯನ್ನು ಹೊತ್ತುಕೊಳ್ಳುವುದು ಮಾತ್ರ ಅತ್ಯಂತ ಕಷ್ಟಸಾಧ್ಯವಾಯಿತು. ಮುಂದೆ ಅನಿವಾರ್ಯವಾಗಿ ಬೇರೆ ಜಾಗವನ್ನು ಹುಡುಕಿಕೊಂಡು ಹೋಗಬೇಕಾಯಿತು.

ಮುಂದೆ ಬ್ರಾಂಟನ್ ಬಳಿಯ ನಾರ್ತ್ ಯಾರ್ಕ್ ಎಂಬಲ್ಲಿಗೆ ಶ್ರೀಮಠವು ಸ್ಥಳಾಂತರಗೊಂಡಿತು. ತನ್ನ ಶಿಸ್ತುಬದ್ಧ ಕಾರ್ಯಕ್ರಮಗಳಿಂದ ಮತ್ತು ಅಪೂರ್ವವಾದ ಸೇವಾಸೌಲಭ್ಯಗಳಿಂದಾಗಿ ಶ್ರೀಮಠಕ್ಕೆ ಜನಪ್ರಿಯತೆಯೇನೂ ಅದಾಗಲೇ ಅಪಾರವಾಗಿತ್ತು. ಆದರೇನು ಮಾಡೋಣ? ಬಹುಶಃ ಆಗ ಇಡೀ ಕೆನಡಾ ದೇಶವೇ ಶಾಪಗ್ರಸ್ತವಾಗಿತ್ತು ಎನ್ನಬಹುದೇನೋ? ಅನೇಕ ಭಕ್ತರಿಗೆ ಮನಸ್ಸಿದ್ದರೂ ಆರ್ಥಿಕವಾಗಿ ಶ್ರೀ ಮಠಕ್ಕೆ ಸಹಕರಿಸುವ ಶಕ್ತಿಯಿರಲಿಲ್ಲ. ಹಾಗಾಗಿ ಸುತ್ತಮುತ್ತಲಿನ ವಾತಾವರಣವು ಅಷ್ಟೊಂದು ಚೆನ್ನಾಗಿರದಿದ್ದರೂ, ಶ್ರೀ ಮಠದ ಒಳಭಾಗವು ಅತ್ಯಂತ ಚಿಕ್ಕದಾಗಿದ್ದರೂ ಅನೇಕ ವರ್ಷಗಳ ಕಾಲ ಅಲ್ಲೇ ಕಾರ್ಯ ನಿರ್ವಸಬೇಕಾದ ಅನಿವಾರ್ಯತೆ ಎದುರಾಯಿತು. ಯುಗಾದಿ, ರಾಯರ ಆರಾಧನೆ, ಶ್ರೀನಿವಾಸ ಕಲ್ಯಾಣ ಇತ್ಯಾದಿ ಪ್ರತಿಯೊಂದು ಕಾರ್ಯಕ್ರಮಕ್ಕೂ ಎಲ್ಲೆಲ್ಲೂ ಬಾಡಿಗೆಯ ಜಾಗಗಳನ್ನು ಪಡೆದು ಹೆಚ್ಚು ಜನರಿಗೆ ಸೇವಾಪ್ರಸಾದದ ವ್ಯವಸ್ಥೆಗಳನ್ನು ಮಾಡಿಕೊಂಡುಬರುವುದು ಅತ್ಯಂತ ತ್ರಾಸದಾಯಕವಾಗಿತ್ತು.

ತನ್ಮಧ್ಯದಲ್ಲಿ ಅಲ್ಲಿ ಕಾರ್ಯನಿರ್ವಸಿಸುತ್ತಿದ್ದ ಅರ್ಚಕ ವರ್ಗಕ್ಕೂ ಅನೇಕ ವಿಧದ ಸಂಕಷ್ಟಗಳ ಸರಮಾಲೆ ಎದುರಾಯಿತು. ಅನಿವಾರ್ಯ ಕಾರಣಗಳಿಂದ ನಾಲ್ಕೈದುಜನ ಶ್ರೀ ಮಠದ ಶಿಷ್ಯರು ಅಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಬೇರೆ ಶಾಖೆಗಳಿಗೆ

ಹೋಗಬೇಕಾಯಿತು. ಕೊನೆಗೊಬ್ಬರು ಅರ್ಚಕರು ನಮ್ಮ ಸಪರಿವಾರ ಶ್ರೀ ಕೃಷ್ಣನಿಗೆ ಸ್ಥಿರವಾದ ಜಾಗವನ್ನು ಹುಡುಕಲೇ ಬೇಕು ಎಂಬ ಶುದ್ಧ ಸಂಕಲ್ಪದೊಂದಿಗೆ ಎಲ್ಲ ಸಂಕಷ್ಟಗಳಿಗೂ ಎದೆಯೊಡ್ಡಿ ನಿಂತೇ ಬಿಟ್ಟರು! ಕೋವಿಡ್ ಮಹಾಮಾರಿ, ವೀಸಾ ಸಮಸ್ಯೆಗಳು ಮೊದಲಾದ ಅಪಸವ್ಯಗಳನ್ನು ಸಂಭಾಳಿಸುತ್ತಾ ಹೇಗೋ ಹೆಣಗಾಡುತ್ತಿದ್ದರೆ, ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಒಂದುದಿವಸ ಅಗ್ನಿದುರಂತವೂ ಸಂಭವಿಸಿಬಿಟ್ಟಿತು! ಯಾರಿಗೂ ಯಾವತೊಂದರೆಯೂ ಆಗದಂತೆ ಶ್ರೀ ಕೃಷ್ಣನೋಡಿಕೊಂಡ. ಆದರೆ ಶ್ರೀ ಮಠವು ಅಲ್ಲಿಂದಲೂ ಜಾಗ ಖಾಲಿ ಮಾಡಬೇಕಾದ  ಪ್ರಸಂಗ ಎದುರಾಯಿತು!

ಇಷ್ಟೆಲ್ಲಾ ಸಂಕಷ್ಟಗಳನ್ನು ಅನುಭವಿಸಿದರೂ ಸಪರಿವಾರ ಶ್ರೀಕೃಷ್ಣನ ನಿತ್ಯಪೂಜಾದಿ ಸೇವಾ ಕೈಂಕರ್ಯಗಳಿಗೆ ಯಾವ ಚ್ಯುತಿಯೂ ಬರದಂತೆ ನೋಡಿಕೊಂಡದ್ದು ಮಾತ್ರ ಶ್ರೀ ಮಠದ ಶಿಷ್ಯವರ್ಗದ ಶ್ರದ್ಧೆ, ಮತ್ತು ಶ್ರೀಕೃಷ್ಣನ ಮೇಲಿರುವ ಅಪಾರ ನಂಬಿಕೆಗೆ ಆದರ್ಶವೆಂಬಂತಿತ್ತು.

ಕಷ್ಟಗಳೆಷ್ಟೇ ಬರಲಿ, ನಮ್ಮ ನಂಬಿಕೆ ಅಚಲವಾಗಿದ್ದರೆ ಪ್ರಯತ್ನಗಳು ಪ್ರಾಮಾಣಿಕವಾಗಿದ್ದರೆ ಮುಂದೆ ಸಮೃದ್ಧ ಸುಖ ಖಂಡಿತವಾಗಿ ಸಿಗುತ್ತದೆ. 'ಯತ್ತದಗ್ರೇ ವಿಷಮಿವ ಪರಿಣಾಮೇ ಅಮೃತೋಪಮಂ'  ಎಂದು ದೇವರೇ ಹೇಳಿದಂತೆ ಶ್ರೀಮಠದ ಸಂಕಷ್ಟಗಳ ಸರಮಾಲೆ ಆ ಅಗ್ನಿದುರಂತದೊಂದಿಗೇ ಕೊನೆಗೊಂಡಿತೆಂದು ಕಾಣುತ್ತದೆ. ಅದೇ ಸಮಯದಲ್ಲಿ (2023) ಶ್ರೀಲಂಕಾಮೂಲದ ರಾಯರ ಅಂತರಂಗದ ಭಕ್ತರೊಬ್ಬರು ತಮ್ಮ ದೊಡ್ಡಮನೆಯೊಂದನ್ನು ಶ್ರೀಮಠಕ್ಕೋಸ್ಕರ ಬಿಟ್ಟುಕೊಟ್ಟರು. ಶ್ರೀ ಮಠದ ಕಾರ್ಯನಿರ್ವಹಣೆಗೆ ಅದು ಅತ್ಯಂತ ಅನುಕೂಲವಾಯಿತು. ವರದಾನವೆನಿಸಿತು.  ಆಗ ಆ ದೇಶದ ದಾರಿದ್ರ್ಯವೂ ಒಂದು ರೀತಿಯಲ್ಲಿ ಕೊನೆಗೊಂಡಿತೆನ್ನಿಸುತ್ತದೆ. ನಮ್ಮ ಭಕ್ತವರ್ಗದ ಆರ್ಥಿಕ ಪರಿಸ್ಥಿಯಲ್ಲಿಯೂ ಔನ್ನತ್ಯ ಕಾಣತೊಡಗಿತು. ಶಾಶ್ವತವಾದ ಸ್ವಂತ ಜಾಗವನ್ನು ಹುಡುಕುವ ಶ್ರೀ ಮಠದ ಪ್ರಯತ್ನಕ್ಕೂ ಮತ್ತೆ ಜೀವಕಳೆಬಂತು!

ಆಗ ದೊರಕಿದ್ದು 'ಜಾರ್ಜ್ ಟೌನ್' ಎಂಬಲ್ಲಿನ ಸುಂದರವಾದೊಂದು ಜಾಗ. ಹಿಂದೆ ಚರ್ಚಾಗಿತ್ತದು. ಸುಮಾರು ಎರಡೂಕಾಲು ಮಿಲಿಯನ್ ಡಾಲರ್ ಗಳಷ್ಟು

ಬೆಲೆಬಾಳುವ ಆ ಮಹಾ ನಿವೇಶನವನ್ನು ಕೊಂಡು ಕೊಳ್ಳುವ ಶ್ರೀ ಮಠದ ಪ್ರಯತ್ನದ ಪ್ರತಿಯೊಂದು ಹೆಜ್ಜೆಯಲ್ಲಿಯೂ ಶ್ರೀ ಕೃಷ್ಣನ ಲೀಲೆ ಮತ್ತು ಪವಾಡಗಳು ಅನುಭವ ಗೋಚರವಾದವು. ಮುಂದೆ ಗಣೇಶಚತುರ್ಥಿಯ ಶುಭದಿನದಂದು (Sept 06 2024) ಎಲ್ಲ ರೀತಿಯ ಸವಾಲುಗಳನ್ನು, ವಿಘ್ನಗಳನ್ನು ಮತ್ತು ಮಹಾಪರೀಕ್ಷೆಗಳನ್ನು ದಾಟಿದ ಶ್ರೀಮಠದ ಶಾಖೆ ತನ್ನ ಸ್ವಂತ, ಶಾಶ್ವತ ಮತ್ತು ಸುಂದರವಾದ ತಾಣದಲ್ಲಿ ನೆಲೆಗೊಂಡಿತು! ಶ್ರೀಗಳ ಸಂಕಲ್ಪದಂತೆ ಸಮರ್ಥವಾಗಿ ಕಾರ್ಯನಿರ್ವಹಿಸಲು ಸರ್ವಸಮರ್ಥವಾಗಿ ತಲೆಯೆತ್ತಿ ನಿಂತಿತು!

●

# ಗುರುಗಳ ಗರಿಮೆ

**ಶ್ರೀ ರಾಘವೇಂದ್ರ ದೇಸಾಯಿ**
ಶ್ರೀಕೃಷ್ಣ ಬೃಂದಾವನ
ಟೊರೋಂಟೋ CANADA



**ಗಾ**ತ್ರದಲ್ಲಿ ಅಮೇರಿಕಾಗಿಂತಲೂ ದೊಡ್ಡ ದೇಶ ನಮ್ಮ ಕೆನಡ. ಆದರೆ ಈ ದೇಶದ ಬಹುತೇಕ ಭಾಗ ವರ್ಷಾವಾಗಲೂ ಅತ್ಯಂತ ಶೀತಲ ಮತ್ತು ಹಿಮಾವೃತವಾಗಿರುತ್ತದೆ. ಹಾಗಾಗಿ ಜನಸಾಂದ್ರತೆ ಮತ್ತು ಆರ್ಥಿಕತೆಯ ದೃಷ್ಟಿಕೋನದಿಂದ ನೋಡಿದರೆ ಕೆನಡ ಅಮೇರಿಕಕ್ಕಿಂದ ಹಿಂದೆ ಉಳಿದಿದೆ ಎನ್ನಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಅಮೇರಿಕಾದ ವೀಸಾ ನಿಯಮಗಳು ಜಟಿಲವಾಗುತ್ತಾ ಬರುತ್ತಿರುವುದರಿಂದ ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಕೆನಡಾದತ್ತ ಮುಖ ಮಾಡುತ್ತಿದ್ದಾರೆ. ಅದರಲ್ಲೂ ಕಳೆದ ಸುಮಾರು ಐದು ವರ್ಷಗಳಲ್ಲಿ ಇಲ್ಲಿ ಬಂದ ಭಾರತೀಯರಂತೂ ಬಹಳ ಮಂದಿ. ಕನ್ನಡಿಗರೇ ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಪ್ರಸ್ತುತ ಕನ್ನಡದವರೇ ಒಬ್ಬರು ಇಲ್ಲಿನ ಲೋಕಸಭೆಯ ಸಂಸದರೂ ಆಗಿದ್ದಾರೆ.

ನಮ್ಮ ಗುರುಗಳು ಸಂಸ್ಥಾಪಿಸಿದ ಶ್ರೀ ಮಠದ ಶಾಖೆ ಶ್ರೀಕೃಷ್ಣ ಬೃಂದಾವನವಿರುವುದು ಟೊರೊಂಟೋ ಮಹಾನಗರದಲ್ಲಿ. ಚಳಿಗಾಲದ ಸುಮಾರು ನಾಲ್ಕೈದು ತಿಂಗಳನ್ನು ಬಿಟ್ಟರೆ ಉಳಿದಂತೆ ಇಲ್ಲಿನ ವಾತಾವರಣ ಬಹುತೇಕ ಬೆಂಗಳೂರಿನಂತೆಯೇ ಇರುತ್ತದೆ. ಮತ್ತು ಈ ನಗರವು ಅಮೇರಿಕಾದ ಗಡಿಪ್ರದೇಶ ಹಾಗೂ ವಿಶ್ವವಿಖ್ಯಾತ ನಯಾಗರ ಜಲಪಾತಕ್ಕೆ ಹತ್ತಿರದಲ್ಲಿರುವುದರಿಂದ ಇದು ಇಡೀ ಕೆನಡ ದೇಶದಲ್ಲೇ ಅತ್ಯಂತ ಪ್ರಮುಖ, ಕ್ರಿಯಾಶೀಲ ಹಾಗೂ ಜನನಿಬಿಡ ನಗರವೆನಿಸಿಕೊಂಡಿದೆ.

ಪುತ್ತಿಗೆ ವಿದ್ಯಾಪೀಠದಲ್ಲಿ ಅಧ್ಯಯನ ನಡೆಸಿದ ನಾನು, ನಮ್ಮ ಗುರುಗಳ ಅನುಗ್ರಹದಿಂದ ಶ್ರೀಮಠದ ಟೊರೊಂಟೋ ಶಾಖೆಯ ಮುಖ್ಯ ಅರ್ಚಕನಾಗಿ ನಿಯುಕ್ತನಾಗಿ ಸುಮಾರು ಏಳು ವರ್ಷಗಳು ಕಳೆದವು. ನಮ್ಮ ಗುರುಗಳ ನಿಜವಾದ

ಗರಿಮೆಯ ಅರಿವು ನನಗಾಗಿದ್ದು ನಾನು ಇಲ್ಲಿಗೆ ಬಂದ ಮೇಲೆಯೇ ಎನ್ನಬಹುದು. ಏಕೆಂದರೆ ಇಲ್ಲಿ ನೆಲೆಸಿದ ಭಾರತೀಯರಿಗೆ ನಮ್ಮ ಗುರುಗಳು ಒದಗಿಸಿಕೊಟ್ಟ ಅತ್ಯಮೂಲ್ಯ ಧಾರ್ಮಿಕ, ಆಧ್ಯಾತ್ಮಿಕ ವ್ಯವಸ್ಥೆಗಳು ಮತ್ತು ಅದರ ಮೂಲಕ ಇಲ್ಲಿನ ನಮ್ಮ ಜನರ ಜೀವನಕ್ರಮದಲ್ಲಿ ಆದ ಮಹತ್ತರವಾದ ಬದಲಾವಣೆಗಳನ್ನು ಕಣ್ಣಾರೆ ಕಂಡವನು ನಾನು. ಮತ್ತು ತೀವ್ರ ಚಳಿಯ ಪ್ರದೇಶವಾದ ಮಾನಿಟೋಬಾ ಇತ್ಯಾದಿ ನಗರಗಳಲ್ಲಿ ಸಂಚರಿಸುವಾಗಲೂ ತಮ್ಮ ವಸ್ತ್ರಸಂಹಿತೆ, ಮಡಿ, ಜಪ ಪೂಜಾದಿ ಅನುಷ್ಠಾನಗಳಲ್ಲಿ ಕೊಂಚವೂ ರಾಜಿ ಮಾಡಿಕೊಳ್ಳದ ಗುರುಗಳ ಕಟ್ಟುನಿಟ್ಟಿನ ಶಿಸ್ತನ್ನು ಕಂಡು ಆಶ್ಚರ್ಯಪಟ್ಟವನೂ ಹೌದು.

ಭಾರತದಿಂದ ಬಹಳ ದೂರದಲ್ಲಿರುವ ಈ ಕೆನಡ ದೇಶದಲ್ಲಿ, ತಮ್ಮ ವಿದ್ಯಾರ್ಹತೆಗೆ ತಕ್ಕ ಉತ್ತಮ ಉದ್ಯೋಗ ಮತ್ತು ಸುರಕ್ಷಿತ ಜೀವನಕ್ಕೆ ಬೇಕಾದ ಎಲ್ಲ ಸವಲತ್ತುಗಳೂ ಇಲ್ಲಿ ಬಂದು ನೆಲೆಸಿರುವ ಭಾರತೀಯರಿಗೆ ಸಿಕ್ಕಿದೆ. ಆದರೆ ನೈಜ ಸಂಸ್ಕಾರ ಮತ್ತು ಧರ್ಮಾಚರಣೆಗೆ ಬೇಕಾದ ಅವಕಾಶಗಳು ಪ್ರಾಪ್ತವಾಗಿದ್ದು ಪೂಜ್ಯ ಶ್ರೀಪಾದರು ಕೆನಡ ದೇಶದಲ್ಲಿ ಸಂಚಾರಗೈದು ಇಲ್ಲೊಂದು ಶ್ರೀಮಠವನ್ನು ಸ್ಥಾಪಿಸಿದ ಮೇಲೆಯೇ. ಸ್ಥಳೀಯ ಕನ್ನಡ ಸಂಘವೇ ಮೊದಲಾದ ಅನೇಕ ಸಂಘಸಂಸ್ಥೆಗಳು ತಮ್ಮ ಭಾಷೆ, ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದರೂ ಧರ್ಮಸಂರಕ್ಷಣೆಗೆ ಪೂಜ್ಯ ಗುರುಗಳ ಆಗಮನ ಅತ್ಯವಶ್ಯಕವಾಗಿ ಆಗಲೇಬೇಕಿತ್ತು ಮತ್ತು ಈಗ ನಾವು ನಿಜವಾಗಿಯೂ ಸಂತೃಪ್ತರಾಗಿದ್ದೇವೆ, ಧನ್ಯರಾಗಿದ್ದೇವೆ ಏಕೆಂದರೆ ನಮ್ಮ ಮಕ್ಕಳು ಇದೀಗ ನಮಗಿಂತ ಹೆಚ್ಚು ಧಾರ್ಮಿಕರಾಗುತ್ತಿದ್ದಾರೆ ಎಂದು ಇಲ್ಲಿನ ಜನರು ಮಾತಾಡಿಕೊಳ್ಳುವುದು ನಿತ್ಯವೂ ನನ್ನ ಕಿವಿಗೆ ಬೀಳುತ್ತಿರುತ್ತದೆ.

ರಾಯರ ಆರಾಧನೆ, ಶ್ರೀಕೃಷ್ಣ ಜನ್ಮಾಷ್ಟಮಿ, ಯುಗಾದಿ, ಕಲ್ಯಾಣೋತ್ಸವ ಇತ್ಯಾದಿ ವಿಶೇಷ ಕಾರ್ಯಕ್ರಮಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದು ಭಾಗವಹಿಸುವ ಜನರ ಧನ್ಯತೆಯನ್ನು ಕಂಡಾಗ ನನಗೂ ಹೃದಯ ತುಂಬಿಬರುತ್ತದೆ. ನಮ್ಮ ಗುರುಗಳ ಬಗ್ಗೆ ಹೆಮ್ಮೆಯೆನಿಸುತ್ತದೆ. ಏಕೆಂದರೆ ಪ್ರಸ್ತುತ ಇಷ್ಟೊಂದು ವಿಶಾಲವಾದ ಈ ಕೆನಡ ದೇಶಕ್ಕಿರುವುದು ಒಂದೇ ಒಂದು ಮಾಧ್ವಮಠ ಅದು ನಮ್ಮ ಪೂಜ್ಯಗುರುಗಳಿಂದ ಪ್ರತಿಷ್ಠಾಪಿತವಾದ್ದ ಶ್ರೀಕೃಷ್ಣ ಬೃಂದಾವನ. ಶ್ರೀ ಗುರುಭ್ಯೋ ನಮಃ.

# ವೀರಪರಂಪರೆಯ ಧೀರ ಯತಿಗಳು ನಮ್ಮ ಗುರುಗಳು



**ಶ್ರೀ ಸಂದೇಶ್ ಮೂಡತ್ತಾಯ**
ಶ್ರೀಕೃಷ್ಣ ಬೃಂದಾವನ
ಟೊರಂಟೋ, CANADA

**ರ**ಜತಪೀಠಪುರದ ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಅಷ್ಟಮಠಗಳಲ್ಲೊಂದಾದ ಶ್ರೀ ಪುತ್ತಿಗೆ ಮಠದ್ದು ಇತಿಹಾಸ ಪ್ರಸಿದ್ಧವಾದ ಧೀರೋದಾತ್ತಪರಂಪರೆ. ಅಂದು ಕಾಡಿನ ದಾರಿಯಲ್ಲಿ ಎದುರಾದ ಕಳ್ಳರನ್ನು ಗುರುಗಳ ಅದೇಶದಂತೆ ರಿಕ್ತಹಸ್ತರಾಗಿ ಎದುರಿಸಿ ಅಟ್ಟಾಡಿಸಿದ ಶ್ರೀಮದುಪೇಂದ್ರತೀರ್ಥರಿಂದ ಹಿಡಿದು, ಪ್ರಸ್ತುತ ಶ್ರೀಮಠದ ಮೂವತ್ತನೇ ಪೀಠಾಧಿಗಳಾಗಿ ಮೆರೆಯುತ್ತಿರುವ ವಿದೇಶಗಳಲ್ಲೂ ಮಧ್ವಮತವನ್ನು ಪ್ರಸರಿಸಿದ ಸುಗುಣೇಂದ್ರತೀರ್ಥರವರೆಗಿನ ಪ್ರತಿಯೋರ್ವ ಯತಿಗಳೂ ಧೀರ ಸನ್ಯಾಸಿಗಳು. ಅಸಾಧ್ಯಸಾಧಕರು. ಅಂತಹ ವಿಶಿಷ್ಟ ಪರಂಪರೆಯಲ್ಲಿ ಉದಯಿಸಿ ಹಲವಾರು ಕಠಿಣ ಸವಾಲುಗಳಿಗೆ ಎದೆಯೊಡ್ಡಿ ಅನೇಕ ಅಸಾಮಾನ್ಯ ಮಹತ್ಕಾರ್ಯಗಳನ್ನು ಸಾಧಿಸುತ್ತಾ ಮೆರೆಯುತ್ತಿರುವ ಮಹಾಯತಿಗಳು ನಮ್ಮಪ್ರೀತಿಯಗುರುಗಳು, ಪರಮಪೂಜ್ಯ ಶ್ರೀ ಶ್ರೀಸುಗುಣೇಂದ್ರತೀರ್ಥ ಶ್ರೀಪಾದರು.

ಪ್ರಸಿದ್ಧ ಕವಿ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ತಮ್ಮ 'ವಿಷ್ಣುಸ್ತುತಿ'ಯಲ್ಲಿ ಉಲ್ಲೇಖಿಸಿದಂತೆ, ಜಗನ್ಮಾತೆ ಶ್ರೀ ಲಕ್ಷ್ಮೀದೇವಿಯು ಅನಾದಿಕಾಲದಿಂದಲೂಅನುಕ್ಷಣವೂ ಶ್ರೀಮನ್ನಾರಾಯಣನ ಜೊತೆಗಿದ್ದವಳಾದರೂ ಅವನಪಾದವನ್ನು ಬಿಡಿ, ಆ ಪಾದದ ಕಿರುಬೆರಳಿನ ಉಗುರಿನ ಮೇಲಿನ ಚಿಕ್ಕ ಕಣವೊಂದರ ಗುಣಗಳನ್ನರಿಯಲೂ ಅಸಮರ್ಥಳಾದಳಂತೆ! ಅಂದು ಆರಂಭಗೊಂಡ ಅವಳ ಆ ಅಗಣಿತಮಹಿಮನ ಗುಣಗಳ ಗಣನೆಯೆನ್ನುವುದು ಇಂದಿಗೂ ಮುಗಿಯಲಿಲ್ಲವಂತೆ! ಆನಂತ್ಯಾನಿ ಸ್ವಭರ್ತುಃ ಪದಕಮಲ ಕನಿಷ್ಠಾಂಗುಲೀ ಸನ್ನಖಸ್ಯ......)

ಹಾಗೆಯೇ ನಮ್ಮ ಗುರುಗಳ ಜೊತೆಗೆ ಒಂದಷ್ಟು ವರ್ಷಗಳನ್ನು ಕಳೆದವರಾದರೂ ನಮಗೆ ನಮ್ಮ ಗುರುಗಳ ವಿಶೇಷ ಗುಣಗಳನ್ನು ಎಣಿಸುವುದು ಸಾಧ್ಯವಾಗಲಿಲ್ಲ. ಅನುದಿನವೂ ನಮಗೆ ನಮ್ಮ ಗುರುಗಳು ಮತ್ತಷ್ಟು ವಿಶಿಷ್ಟರಾಗಿ, ಇನ್ನಷ್ಟು ಉತ್ಕೃಷ್ಟರಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಅತಿ ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸ ದೀಕ್ಷೆಯನ್ನುಪಡೆದು, ಹದಿಹರೆಯದಲ್ಲೇ ತಮ್ಮ ಮೊದಲ ಪರ್ಯಾಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಬಾಲ್ಯದಲ್ಲೇ ಸನಕಾದಿಮುನಿವಂದ್ಯನಾದ, ರುಗ್ಮಿಣೀಕರಾರ್ಚಿತನಾದ ಶ್ರೀಕೃಷ್ಣನ ಪೂಜೆಯನ್ನು ತನ್ಮಯಚಿತ್ತರಾಗಿ ಶ್ರದ್ಧೆಯಿಂದ ಕೈಗೊಂಡ ಸೌಭಾಗ್ಯ ಸಂಪನ್ನರವರು. ಶ್ರೇಷ್ಠಗುರು ಗುರು ಶ್ರೀವಿದ್ಯಾಮಾನ್ಯತೀರ್ಥರ ಅನುಗ್ರಹದಿಂದ ಸಮಗ್ರ ವೇದವೇದಾಂತ ಶಾಸ್ತ್ರತರ್ಕಗಳ ಅಧ್ಯಯನವನ್ನು ಮಾಡಿದರು. 'ದ್ವೇ ವಿದ್ಯೇ ವೇದಿತವ್ಯೇ' ಎಂಬ ಉಕ್ತಿಗೆ ಅನುಗುಣವಾಗಿ ಲೌಕಿಕ ವಿದ್ಯೆಯಲ್ಲೂ ಪಾರಂಗತತ್ವವನ್ನು ಸಂಪಾದಿಸಿದರು.

ಪೂಜ್ಯ ಪುತ್ತಿಗೆ ಶ್ರೀಪಾದರೇ ವಿದೇಶಗಳಲ್ಲಿ ತನ್ನ ಪ್ರತಿಷ್ಠೆಯುನ್ನು ಮಾಡಬೇಕೆಂಬುವುದು ಬಹುಶಃ ಶ್ರೀ ಕೃಷ್ಣನದ್ದೇ ಸಂಕಲ್ಪವಿದ್ದಿರಬೇಕು. ಇಲ್ಲವಾದರೆ ಎಂತೆಂತಹ ಸವಾಲುಗಳ ನಡುವೆಯೂ ಅಮೇರಿಕಾದಂತಹ ದೇಶಗಳಲ್ಲಿ 15 ಮಠಗಳ ಸ್ಥಾಪನೆಯೆನ್ನುವುದು ದೈವೇಚ್ಛೆಯಿಲ್ಲದಿದ್ದರೆ ಅತ್ಯಂತ ಅಸಂಭವ, 'ದೈವಂ ಚೈವಾತ್ರ ಪಂಚಮಂ'

ಸಾಕಷ್ಟು ವಿಮರ್ಶೆ, ದೂರಾಲೋಚನೆಗಳಿಲ್ಲದೆ ಪೂಜ್ಯರು ಯಾವ ಕೆಲಸವನ್ನೂ ಮಾಡುವವರಲ್ಲ. ವಿದೇಶಗಳಲ್ಲಿ ಮಠಮಂದಿರಗಳನ್ನು ಸ್ಥಾಪಿಸುವುದಕ್ಕಿಂತ ಸಾಕಷ್ಟು ಮುಂಚಿತವಾಗಿಯೇ ಪುತ್ತಿಗೆಯ ಮೂಲ ಮಠದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿದರು. ಅಲ್ಲಿ ಸೂಕ್ತ ತರಬೇತಿಯನ್ನು ಪಡೆದ ಶಿಷ್ಯರನ್ನೇ ವಿದೇಶಗಳಲ್ಲಿನ ತಮ್ಮ ಶಾಖೆಗಳಲ್ಲಿ ನಿರಂತರ ಧರ್ಮಪ್ರಚಾರಕ್ಕೋಸ್ಕರ ನೇಮಕ ಮಾಡಿದರು. ಬಿಸಿಲ ಬೇಗೆಯಲ್ಲಿ ಬೆಂದು ಬಸವಳಿದು, ಮೇಘಾದಿಪತಿ ಇಂದ್ರದೇವರು ಸುರಿಸುವ ಮಳೆನೀರಿಗೋಸ್ಕರ

ಹಾತೊರೆಯುತ್ತಿದ್ದ ಚಾತಕಪಕ್ಷಿಗಳಂತೆ, ವಿದೇಶವಾಸಿಗಳಾಗಿದ್ದುಕೊಂಡೂ ಜ್ಞಾನ ಪಿಪಾಸುಗಳಾಗಿದ್ದ ಅನೇಕ ಮಾಧ್ವರಿಗೆ ತತ್ವಜ್ಞಾನದ ಅಮೃತಧಾರೆಯನ್ನೇ ಕರುಣಿಸಿದ ಅಭಿನವ ಇಂದ್ರ ದೇವರೇ ನಮ್ಮ ಗುರುಗಳಾದ ಪೂಜ್ಯ ಶ್ರೀ ಸುಗುಣೇಂದ್ರತೀರ್ಥರು.

ಜಗತ್ತಿನ ಎಲ್ಲದೇಶಗಳೂ ಪ್ರತಿನಿಧಿಸುವ ಉತ್ಕೃಷ್ಟ ವೇದಿಕೆಯೆನಿಸಿದ ವಿಶ್ವಸಂಸ್ಥೆಯಲ್ಲಿ ಆಚಾರ್ಯರ ಸಿದ್ಧಾಂತವನ್ನು ಪ್ರಸ್ತುತ ಪಡಿಸಿದ ಪೂಜ್ಯರು ಲಂಕೆಗೆ ಹಾರಿ ಪರಾಕ್ರಮವನ್ನು ಮೆರೆದ ಹನುಮಂತನಂತೆ ಎಂಟೆದೆಯ ಬಂಟರೇ ಸರಿ. ಅನೇಕ ಕಡೆ ವೈದಿಕವಿದ್ಯಾಪೀಠಗಳನ್ನು ನಿರ್ಮಿಸಿ ನಮ್ಮಂತಹ ಅನೇಕ ವಿದ್ಯಾರ್ಥಿಗಳಿಗೆ ಜೀವನವನ್ನು ರೂಪಿಸಿಕೊಟ್ಟರು. ವಿದೇಶಗಳಲ್ಲಿ ಸಂಸ್ಕೃತಿವಿಹೀನರಾಗಿದ್ದ ಅನೇಕ ಭಾರತೀಯರನ್ನು ಒಂದುಗೂಡಿಸಿ ಗೀತೆಯನ್ನು, ಆಚಾರ್ಯರ ತತ್ವವನ್ನು ಬೋಧನೆ ಮಾಡಿ ಸರಿದಾರಿಗೆ ತಂದರು. ಪೂಜ್ಯರಿಂದ ಪ್ರಭಾವಿತರಾಗಿ ತಮ್ಮ ಜೀವನಕ್ರಮವನ್ನು ಬದಲಿಸಿಕೊಂಡ ಜನರು ಅದೆಷ್ಟೋ ಮಂದಿ. ಪೂಜ್ಯರಿಂದಾಗಿ ವಿದೇಶಗಳಲ್ಲೂ ನಮ್ಮ ಜನರು ದೇವಪಿತೃ ಕಾರ್ಯನಿರತರಾದರು. ಅಂತಹ ಪರಮಪೂಜ್ಯ ಶ್ರೀಗಳ ಯಶೋಗಾಥೆ ದಶದಿಕ್ಕುಗಳಲ್ಲೂ ವಿಸ್ತರಿಸಲಿ, ನಿರಂತರ ಪಸರಿಸಲಿ. ಅವರ ಅನುಗ್ರಹ ನಮ್ಮ ನಿಮ್ಮಂತಹ ಸಹಸ್ರಾರು ಭಕ್ತರ ಮೇಲೆ ಸದಾ ಇರಲಿ ಎಂದು ಆಶಿಸುತ್ತೇನೆ.



**SRI VENKATA KRISHNA BRUNDAVANA, MELBOURNE, AUSTRAILIA.**

# ಮೆಲ್ಬೋರ್ನ್‌ನಲ್ಲಿ ಮೆರೆಯುತ್ತಿರುವ ನಮ್ಮ ಹೆಮ್ಮೆಯ ಶಾಖೆ 'ಶ್ರೀವೆಂಕಟಕೃಷ್ಣ ವೃಂದಾವನ'

**ಜ**ಗದ್ಗುರು ಶ್ರೀಮನ್ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ, ಪುತ್ತಿಗೆ ಮಠದ ಶ್ರೀ ಮದುಪೇಂದ್ರತೀರ್ಥರ ಭವ್ಯ ಪರಂಪರೆಯಲ್ಲಿ ಅನೂಚಾನವಾಗಿ ಏಳು ಶತಮಾನಗಳ ವೈಭವದ ನಿತ್ಯ ಪೂಜೆಯೊಂದಿಗೆ ಭಾರತದಾದ್ಯಂತ ಸಂಚರಿಸಿದ ಶ್ರೀ ವಿಜಯವಿಠ್ಠಲದೇವರು, ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥರ ಕಾಲದಲ್ಲಿ 'ವಿಶ್ವದಿಗ್ವಿಜಯ ಯಾತ್ರೆಯನ್ನು' ಬಯಸಿದರು! ಶ್ರೀಮಠದ ಭವ್ಯ ಪರಂಪರೆಯ ಮೂವತ್ತನೇ ಯತಿಗಳಾದ ಪೂಜ್ಯ ಶ್ರೀಪಾದರಿಗೆ 'ವಿಶ್ವಸಂಚಾರ'ವನ್ನು ಕೈಗೊಳ್ಳುವಂತೆ ಪ್ರೇರಣೆಯನ್ನಿತ್ತರು.

ವಿಶ್ವದಾದ್ಯಂತ ಸಂಚರಿಸಿ ತಮ್ಮ ವೈಭವದ ನಿತ್ಯ ಸಂಸ್ಥಾನ ಪೂಜೆಯನ್ನು ನಾನಾದೇಶಗಳಲ್ಲಿ ನಡೆಸಿ ಅಲ್ಲಿ ನೆಲೆಸಿರುವ ಅಸಂಖ್ಯ ಸದ್ಭಕ್ತರನ್ನು ಅನುಗ್ರಹಿಸುವ ಮಹಾ ಸಂಕಲ್ಪಶಕ್ತಿ ಶ್ರೀ ವಿಜಯವಿಠ್ಠಲ ದೇವರದ್ದೇ ಆಗಿರುವಾಗ ಆ 'ವಿಶ್ವದಿಗ್ವಿಜಯ ಯಾತ್ರೆ' ಅವ್ಯಾಹತವಾಗಿ ನಡೆಯುತ್ತಲೇ ಇರಬೇಕಲ್ಲವೇ? ತಡೆಯಲು, ವಿರೋಧಿಸಲು ಮತ್ಸರಿಗಳೆಷ್ಟು ಪ್ರಯತ್ನಿಸಿದರೂ, ತೊಂದರೆ ಕಿರುಕುಳಗಳನ್ನು ಕೊಟ್ಟರೂ, ಅಪಮಾನಿಸಿದರೂ ಲೆಕ್ಕಿಸದೆ ಶ್ರೀ ವಿಜಯವಿಠ್ಠಲ ದೇವರ ಜೈತ್ರಯಾತ್ರೆಯಂತೂ ಮುಂದುವರಿಯುತ್ತಲೇ ಹೋಯಿತು. ಇದೀಗ ವಿಶ್ವದ ನಾನಾ ದೇಶಗಳಲ್ಲಿ ಹದಿನೈದು ಕಡೆಗಳಲ್ಲಿ ನೆಲೆಗೊಂಡ ಶ್ರೀಮಠದ ಬೃಹತ್ ಶಾಖೆಗಳ ರೂಪದಲ್ಲಿ ಶ್ರೀ ವಿಜಯ ವಿಠ್ಠಲ ದೇವರ ವಿಜಯ ಪತಾಕೆ ವೈಭವದಿಂದ ಮೆರೆಯುತ್ತಿದೆ! ವಿಶ್ವದಾದ್ಯಂತನೂರೆಂಟು ಶಾಖೆಗಳನ್ನು ಸಂಸ್ಥಾಪಿಸಬೇಕೆನ್ನುವ ಪೂಜ್ಯ ಶ್ರೀಗಳ ದೃಢಸಂಕಲ್ಪ ಇನ್ನಷ್ಟು ಕಡೆಗಳಲ್ಲಿ ಅಸಂಖ್ಯ ಸದ್ಭಕ್ತರನ್ನು ಕಾತರದಿಂದ ಕಾಯುವಂತೆ ಮಾಡಿದೆ. ಹಾಗೆ ತಾವೂ ಕಾದು ಕುಳಿತು, ಕನಸುಕಂಡು ನಿತ್ಯವೂ ಪ್ರಾರ್ಥಿಸಿ, ಕೊನೆಗೂ ತಮ್ಮ ಬೇಡಿಕೆಯನ್ನು ಈಡೇರಿಸಿಕೊಂಡು ಸಂತೃಪ್ತರಾಗಿ ಧನ್ಯತೆಯನ್ನು ಮೆರೆಯುತ್ತಿರವ 'ಮೆಲ್ಬೋರ್ನ್' ಭಾರತೀಯರ ಕತೆಯನ್ನೀಗ ಕೇಳೋಣ, ಬನ್ನಿ!

1997ನೇ ಇಸವಿಯಲ್ಲಿ ಅಮೇರಿಕಾದಿಂದ ಆರಂಭಗೊಂಡ ಪೂಜ್ಯ ಶ್ರೀಪಾದರ ವಿಶ್ವಸಂಚಾರ ಕ್ರಮೇಣ ಅನ್ಯದೇಶಗಳಿಗೂ ವ್ಯಾಪಿಸಿದ ಸಂಗತಿ ನಿಮಗೆ ಗೊತ್ತೇ ಇದೆ. ಈ ಸಂಚಾರಗಳ ಹಿನ್ನೆಲೆಯಲ್ಲಿರುವ ರೋಚಕ ವಿಷಯವೇನು ಗೊತ್ತೇ? ಪೂಜ್ಯ ಶ್ರೀಗಳು ತಾವೇ ತಾವಾಗಿ ಎಲ್ಲಿಗೂ ಹೋಗಬಯಸಲಿಲ್ಲ! ಸ್ಥಳೀಯ ಭಕ್ತರ ಒತ್ತಾಯ ಪೂರ್ವಕ ವಿನಂತಿಯ ಮೇರೆಗಷ್ಟೇ ಪೂಜ್ಯ ಶ್ರೀಗಳ ಸಪರಿವಾರ ಸಂಚಾರ ಮತ್ತು ಶಾಖಾಮಠಗಳ ಸಂಸ್ಥಾಪನೆಗಳು ಸಂಪನ್ನಗೊಂಡದ್ದು! ಅಂದರೆ ಅಲ್ಲಲ್ಲಿ ನೆಲೆಸಿದ ಅಷ್ಟೂ ಸಂಖ್ಯೆಯ ನಮ್ಮ ಜನರು ಮತ್ತು ಅವರಿಗೆ ಬೇಕೇಬೇಕು ಎಂದೆನಿಸಿದ ಗುರುಗಳ ಸಾನ್ನಿಧ್ಯ ಮತ್ತು ಅಲ್ಲಿ ಆ ಧಾರ್ಮಿಕ ಕೇಂದ್ರಗಳ ಆವಶ್ಯಕತೆ ಎಷ್ಟಿತ್ತೆಂಬುವುದನ್ನು ನಾವು ಗಮನಿಸಬೇಕು. ನೀರು ಮತ್ತು ಗಾಳಿಗಳಿಲ್ಲದ ಜಾಗದಲ್ಲಿ ಬದುಕಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಮ್ಮ ಸನಾತನ ಧರ್ಮೀಯರಿಗೆ ಗುರುಗಳು ಮತ್ತು ಮಠಮಂದಿರಗಳಿಲ್ಲದ ಜಾಗದಲ್ಲಿ ಜೀವನವೇ ಇಲ್ಲ ಎನ್ನಬಹುದು.

1901ನೇ ಇಸವಿಯಲ್ಲಿ ಬ್ರಿಟಿಷ್ ಆಡಳಿತಗಾರರಿಂದ ಅಧಿಕೃತವಾಗಿ 'ಆಸ್ಟ್ರೇಲಿಯಾ' ದೇಶವೆಂದು ಗುರುತಿಸಿಕೊಂಡ ಆ ಭೂಪ್ರದೇಶದಲ್ಲಿ ಮೊದಲಿದ್ದ ಮೂಲನಿವಾಸಿಗಳು ಕ್ರಮೇಣ ಮೂಲೆಗುಂಪಾದರು. ಆಧುನಿಕ ಆಡಳಿತ ವ್ಯವಸ್ಥೆ ಮತ್ತು ಕ್ರಿಶ್ಚಿಯನ್ ಮಿಷನರಿಗಳ ಆಮಿಷ ಆ ಜನರ ಜೀವನವನ್ನೇ ಬದಲಿಸಿತು. ಸಂಸ್ಕೃತಿಯನ್ನು ನಿರ್ನಾಮಗೊಳಿಸಿತು. ಮುಂದೆ ಅನೇಕ ವರ್ಷಗಳ ಆಂಗ್ಲರ ಆಳ್ವಿಕೆಯ ಬಳಿಕ 1986 ನೇ ಇಸವಿಯ ಮಾರ್ಚ್ 3ರಂದು ಸಂಪೂರ್ಣ ಆಸ್ಟ್ರೇಲಿಯಾ ಸ್ವತಂತ್ರ ದೇಶವಾಗಿ ಪರಿವರ್ತನೆಗೊಂಡಿತು. ತದನಂತರ ಇತರ ಮುಂದುವರಿದ ದೇಶಗಳಂತೆ ಅನ್ಯದೇಶಗಳ ವಲಸೆಗಾರರನ್ನು ತನ್ನೊಡಲಿಗೆ ಸೇರಿಸಿಕೊಂಡು ಸುದೃಢವಾಗಿ ಬೆಳೆಯಲಾರಂಭಿಸಿತು. ಇದೀಗ ಸುಮಾರು ತೊಂಭತ್ತೇಳು ಲಕ್ಷ ಭಾರತೀಯರು ಆಸ್ಟ್ರೇಲಿಯಾದಲ್ಲಿ ಗೌರವಯತವಾಗಿ ನೆಲೆಗೊಂಡು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.

ಸುಮಾರು ಇಪ್ಪತ್ತೊಂಭತ್ತೂವರೆ ಲಕ್ಷ ಚದರ ಮೈಲಿ ವಿಸ್ತಾರವಿರುವ ಈ ಬೃಹತ್ ದೇಶದ ಆಗ್ನೇಯ ಭಾಗದಲ್ಲಿರುವ ಮಹಾ ನಗರವೇ ಮೆಲ್ಬೋರ್ನ್. ಸ್ವಚ್ಛವಾದ

ನೀರಿನಿಂದ ಸದಾತುಂಬಿರುವ 'ಯೆರ್ರಾ' ನದಿಯ ದಂಡೆಯಲ್ಲಿರುವ ಈ ಸುಂದರ ಹಸಿರು ನಗರಿಯಲ್ಲಿ ದಟ್ಟಕಾಡು, ಕೃಷಿಭೂಮಿ, ಹುಲ್ಲುಗಾವಲು, ಪಟ್ಟಣ, ಕ್ರೀಡಾಂಗಣ, ಉದ್ಯಾನ, ಜನವಸತಿ ಎಲ್ಲವೂ ಸುಸಜ್ಜಿತವಾಗಿದೆ. ಗೋದಿ, ಬಾರ್ಲಿ ಮತ್ತು ಅನೇಕ ಬೆಳೆಗಳು ಮತ್ತು ಹಣ್ಣುಗಳನ್ನು ಅವುಗಳ ಋತುಮಾನದಂತೆ ಇಲ್ಲಿ ಸಮೃದ್ಧವಾಗಿ ಬೆಳೆಯುತ್ತಾರೆ. ನಿಮಗೆ ಗೊತ್ತಿರುವಂತೆ ಇಲ್ಲಿ ಕಾಂಗರೂ ಮತ್ತು ಜಿಂಕೆಗಳು ಅಸಂಖ್ಯವಾಗಿವೆ ಮತ್ತು ನಮಗೆ ಅಲ್ಲಲ್ಲಿ ಕಾಣಸಿಗುತ್ತವೆ. ಮೆಲ್ಬೋರ್ನ್ ನಗರವನ್ನು ಇದೀಗ ಆಸ್ಟೇಲಿಯಾದ ಸಾಂಸ್ಕೃತಿಕ ರಾಜಧಾನಿಯೆಂದೇ ಕರೆಯುತ್ತಾರೆ. ಅಷ್ಟರಮಟ್ಟಿಗೆ ಅಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವರ್ಷದಾದ್ಯಂತ ನಡೆಯುತ್ತಿರುತ್ತವೆ. ವಿಶ್ವದ ಎಲ್ಲೆಡೆಯಿಂದ ಪ್ರವಾಸಿಗಲು ಅಲ್ಲಿಗೆ ಬರುತ್ತಾರೆ. ಪ್ರಸ್ತುತ ಅನೇಕ ಆಧುನಿಕ ಬೃಹತ್ ಕಂಪೆನಿಗಳೂ ಅಲ್ಲಿ ಕಾರ್ಯನಿರ್ವಹಿಸುತ್ತಿವೆ. ಅನೇಕ ವಿದ್ಯಾವಂತ ಭಾರತೀಯರು ಉತ್ತಮ ಉದ್ಯೋಗದೊಂದಿಗೆ ಅಲ್ಲಿ ನೆಲೆಸಿದ್ದರೆ ವಿದ್ಯಾರ್ಜನೆಗಾಗಿಯೂ ಅನೇಕರು ಅಲ್ಲಿಗೆ ಬರುತ್ತಲೇ ಇದ್ದಾರೆ. ಕಳೆದ ಮೂರುದಶಕಗಳಲ್ಲಿ ಆಸ್ಟ್ರೇಲಿಯಾ ದೇಶಕ್ಕೆ ವಲಸೆ ಬಂದ ಭಾರತೀಯರ ಸಂಖ್ಯೆ ಅತ್ಯಧಿಕ.

ನಮ್ಮವರೆಲ್ಲಿದ್ದರೂ ತಮ್ಮ ಧರ್ಮ ಸಂಸ್ಕೃತಿಯನ್ನು ಬಿಡುವವರಲ್ಲ. ಈ ಭೂಮಂಡಲದಲ್ಲಿರುವ ಅನೇಕ ದೇಶಗಳಲ್ಲಿದ್ದ ಮೂಲ ಸಂಸ್ಕೃತಿ ಮತ್ತು ಆಚರಣೆಗಳು ವಿದೇಶಿಯರ ಆಕ್ರಮಣ ಮತ್ತು ಆಮಿಷಕ್ಕೆ ಬಲಿಯಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಆದರೆ ನಮ್ಮ ಭಾರತೀಯರದ್ದು ಮಾತ್ರ ಆ ವಿಷಯದಲ್ಲಿ ಗಟ್ಟಿಗುಂಡಿಗೆ. ವಿಶ್ವದಲ್ಲೇ ಅತ್ಯಂತ ಹೆಚ್ಚು ಮತ್ತು ದೀರ್ಘಕಾಲದ ಆಕ್ರಮಣಗಳು, ಲೂಟಿ, ಆಮಿಷಗಳು, ಅಧಿಕಾರ ಪ್ರಯೋಗಗಳು, ಹಿಂಸೆಗಳು ಸಂಭವಿಸಿದರೂ ತನ್ನ ತನವನ್ನು ಬಿಟ್ಟುಕೊಡದ ದೇಶವೆಂದರೆ ಭಾರತಮಾತ್ರ. ಅದು ನಮ್ಮ ಸನಾತನ ಧರ್ಮಕ್ಕಿರುವ ಧಾರ್ಢ್ಯತೆ. ಹಾಗಾಗಿ ನಮ್ಮವರು ಆಸ್ಟ್ರೇಲಿಯಾಕ್ಕೆ ಹೋದರೂ ತಮ್ಮತನವನ್ನು ಬಿಡುವವರಲ್ಲ. ಸುಮಾರು ಎರಡು ಸಾವಿರದ ಹತ್ತನೇ ಇಸವಿಗಾಗುವಾಗ ಕೇವಲ ಮೆಲ್ಬೋರ್ನ್‌ನಲ್ಲಿ ಬಂದು ಸೇರಿದ ಕನ್ನಡಿಗ ಮಾಧ್ವರ ಸಂಖ್ಯೆಯೇ ಸಾವಿರವನ್ನು ದಾಟಿತು. ಪರಸ್ಪರ ಸಂಪರ್ಕಗಳಾಗಿ ಅನೇಕ ಸಂಘಟನೆಗಳ ಮೂಲಕ ತಮ್ಮ ಸಾಂಪ್ರದಾಯಿಕ ಆಚರಣೆಗಳನ್ನು

ದೊಡ್ಡಮಟ್ಟದಲ್ಲಿ ಮಾಡಿಕೊಂಡು ಬರುವ ಪ್ರಯತ್ನವೂ ನಡೆಯಿತು. ರಾಯರ ಆರಾಧನೆ ಇತ್ಯಾದಿಗಳನ್ನು ಬೃಹತ್ತಾಗಿ ಮಾಡಿಕೊಂಡು ಬರುವ ಪ್ರಯತ್ನವೂ ಆಯಿತು.

ಆದರೆ ಪರಸ್ಪರ ಐಕ್ಯತೆಯಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಬೇಕಾದರೆ ಸರಿಯಾದ ನಾಯಕತ್ವ ಬೇಕು. ಜ್ಞಾನ ಮತ್ತು ಅನುಷ್ಠಾನಗಳ ಅನುಭವವುಳ್ಳವರು ಬೇಕು. ಅದರ ಅಭಾವದಿಂದ ಮತ್ತು ಸ್ವಪ್ರತಿಷ್ಠೆ, ಅಹಂಕಾರಗಳ ಕಾರಣದಿಂದ ಅಲ್ಲಿ ಭಿನ್ನಾಭಿಪ್ರಾಯಗಳು ಕಂಡು ಬಂದವು. ಆದರೆ ಅದಕ್ಕೆ ಸರಿಯಾದ ರೂಪುರೇಷೆಗಳು ಸಿಗಬೇಕೆಂದರೆ ಯಾರದರೊಬ್ಬರು ವಿದ್ಯಾನುಷ್ಠಾದಿಗಳಿಂದ ಸರ್ವಸಮರ್ಥರೆನಿಸಿದ ಗುರುಗಳು ಇಲ್ಲಿಗೆ ಬರಲೇಬೇಕು ಎಂದು ಅನೇಕರಿಗನ್ನಿಸಿತು. ಚದುರಿ ಚಲ್ಲಾಪಿಲ್ಲಿಯಾಗಿ ಬಿದ್ದಿರುವ ಕಬ್ಬಿಣದ ಚೂರುಗಳನ್ನು ಎಲ್ಲವನ್ನೂ ಆಕರ್ಷಿಸಿ ಒಂಡೆಡೆ ಸೇರಿಸಲು ದೊಡ್ಡದೊಂದು ಅಯಸ್ಕಾಂತವೇ ಬೇಕು ತಾನೇ?

ಆಗ ಅಮೇರಿಕಾ, ಕೆನಡ ಮತ್ತು ಇಂಗ್ಲೆಂಡ್ ನಲ್ಲಿ ಸಂಚಾರಗೈದು ಹತ್ತು ಮಠಗಳನ್ನು ನಿರ್ಮಿಸಿ ಯಶಸ್ವಿಯಾಗಿ ಎಲ್ಲವನ್ನೂ ನಡೆಸಿಕೊಂಡು ಬಂದ ಪೂಜ್ಯ ಪುತ್ತಿಗೆಶ್ರೀಗಳ ಪುಣ್ಯಕೀರ್ತಿ ಮಾಧ್ಯಮಗಳ ಮೂಲಕ ಆಸ್ಟ್ರೇಲಿಯವನ್ನೂ ವ್ಯಾಪಿಸಿತು. ಅಲ್ಲಿ ನೆಲೆಸಿದ ನಮ್ಮವರನ್ನೂ ಆಕರ್ಷಿಸಿತು. ಮುಂದೆ ಅಲ್ಲಿನ ಅನೇಕ ಭಕ್ತರು ಒಟ್ಟು ಸೇರಿ ಪೂಜ್ಯರನ್ನು ಸಂಪರ್ಕಿಸಿ ಕಾಡಿ ಬೇಡಿ, ಒತ್ತಾಯಪೂರ್ವಕವಾಗಿ ವಿನಂತಿಸಿ ಶ್ರೀವಿಜಯ ವಿಟ್ಠಲ ದೇವರ ದಿಗ್ವಿಜಯ ಯಾತ್ರೆಯನ್ನು ಆಸ್ಟ್ರೇಲಿಯಾ ದೇಶಕ್ಕೂ ವಿಸ್ತರಿಸುವಂತೆ ಮಾಡಿದರು. 2013ನೇ ಇಸವಿಯ ಮಾರ್ಚ್ ತಿಂಗಳಲ್ಲಿ ಪೂಜ್ಯ ಶ್ರೀಪಾದರಿಗೆ ಮೆಲ್ಬೋರ್ನ್ ನಗರದಲ್ಲಿ ಅದ್ದೂರಿಯ ಸ್ವಾಗತ ಮತ್ತು ಅಭಿನಂದನಾ ಕಾರ್ಯಕ್ರಮ ನಡೆಯಿತು. ಅನುಷ್ಠಾನನಿಷ್ಠ ಮಾಧ್ವಯತಿಗಳೊಬ್ಬರು ಆಸ್ಟ್ರೇಲಿಯಾಕ್ಕೆ ಪಾದಾರ್ಪಣೆಗೈದ ಅಭೂತಪೂರ್ವ ಮತ್ತು ಐತಿಹಾಸಿಕ ಸಂದರ್ಭಕ್ಕೆ ಆ ಭಾವುಕ ಭಕ್ತರು ಸಾಕ್ಷಿಯಾದರು.

ಆ ಹದಿನೈದು ದಿನಗಳ ಯಾತ್ರೆ ಊರಿನ ಜಾತ್ರೆಯಂತೆ ನೂರಾರು ಜನರ ಸಹಯೋಗ ನಿತ್ಯ ಪೂಜೆ, ಪ್ರವಚನ, ಅನ್ನದಾನ, ಹೋಮ, ಹವನ, ಮುದ್ರಾಧಾರಣೆ

ಇತ್ಯಾದಿಗಳೊಂದಿಗೆ ಅತ್ಯದ್ಭುತವಾಗಿ ಸಂಪನ್ನಗೊಂಡಿತು. ಮೆಲ್ಬೋರ್ನ್ ವಾಸಿಗಳ ಆ ಸಂಭ್ರಮ ಆಸ್ಟ್ರೇಲಿಯಾದ ಬ್ರಿಸ್ಬೇನ್, ಪರ್ತ್, ಸಿಡ್ನಿ ಮುಂತಾದಕಡೆ ವಾಸವಿದ್ದ ಭಾರತೀಯರನ್ನೂ ಆಕರ್ಷಿಸಿತು. ಮುಂದಿನ ವರ್ಷ ಅಂದರೆ 2014ನೇ ಇಸವಿಯಲ್ಲಿ ಮತ್ತೊಮ್ಮೆ ಸಂಪನ್ನಗೊಂಡ ಸಪರಿವಾರ ಶ್ರೀಪಾದರ ಜೈತ್ರಯಾತ್ರೆ ಆಸ್ಟ್ರೇಲಿಯಾದ್ಯಂತ ವಿಸ್ತರಿಸಿತು. ಆಗ ಇನ್ನಷ್ಟು ಚುರುಕುಗೊಂಡ ಆ ಭಕ್ತವೃಂದ ಶ್ರೀ ಮಠದ ಸ್ಥಾಪನೆಗೆ ಶ್ರೀಗಳನ್ನು ಒತ್ತಾಯಿಸತೊಡಗಿತು. ಮುಂದೆ ಭಗವತ್ಸಂಕಲ್ಪದಂತೆ ಆಸ್ಟ್ರೇಲಿಯಾ ದೇಶದಲ್ಲೇ ಮೊಟ್ಟ ಮೊದಲ ಶ್ರೀ ಮಾಧ್ವಮಠ "ಶ್ರೀ ವೆಂಕಟಕೃಷ್ಣ ವೃಂದಾವನ" ಎಂಬ ಹೆಸರಿನೊಂದಿಗೆ ಮೆಲ್ಬೋರ್ನ್ ನ 'ಹ್ಯಾಂಪ್ಟನ್ ಪಾರ್ಕ್' ಎಂಬಲ್ಲಿ ತಾ. 20.05.2015ರಂದು ಪೂಜ್ಯ ಶ್ರೀಪಾದರ ಅಮೃತ ಹಸ್ತದಿಂದ ಚಾಲನೆಗೊಂಡಿತು. ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಸಾಂಗೋಪಾಂಗವಾಗಿ ವಿದ್ಯಾರ್ಜನೆ ಮಾಡಿದ ಶಿಷ್ಯರನ್ನು ನಿತ್ಯ ಕೈಂಕರ್ಯಕ್ಕೆ ನಿಯೋಜಿಸಿದ ಪೂಜ್ಯ ಶ್ರೀಪಾದರು ತಮ್ಮ ನಿತ್ಯ ಸಂಚಾರವನ್ನು ಮುಂದುವರಿಸಿದರು.

ಚಿಕ್ಕ ಮನೆಯೊಂದರಲ್ಲಿ ಆರಂಭಗೊಂಡ 'ಶ್ರೀ ವೆಂಕಟಕೃಷ್ಣ ವೃಂದಾವನ'ದಲ್ಲಿ ನಿತ್ಯವೂ ಬಂದು ಪೂಜಾದಿಗಳಲ್ಲಿ ಭಾಗವಹಿಸಿ ಧನ್ಯರಾಗುವ ಭಕ್ತರ ಸಂಖ್ಯೆ ದಿನೇ ದಿನೇ ವೃದ್ಧಿಸತೊಡಗಿತು. ಸದ್ಯದ ವ್ಯವಸ್ಥೆಯಲ್ಲಿ ಬರುವ ಅತ್ಯಧಿಕ ಭಕ್ತರನ್ನು ನಿಯಂತ್ರಿಸುವುದೇ ದೊಡ್ಡ ಸವಾಲೆನಿಸಿತು. ಜನನಿಬಿಡತೆ, ಪಾರ್ಕಿಂಗ್ ಇತ್ಯಾದಿಗಳ ಅಭಾವ ಸ್ಥಳೀಯ ಜನರನ್ನೂ ಕೆರಳಿಸಿತು. ಸರಕಾರಕ್ಕೆ ದೂರನ್ನೂ ಸಲ್ಲಿಸಿದರು. ಆಗ ವಿಚಾರಣೆ ಮಾಡಿ ನಮಗೆ ಎಚ್ಚರಿಕೆಯ ನೋಟೀಸು ಕೊಡಲೆಂದು ವ್ಯಗ್ರರಾಗಿ ಬಂದ ಸ್ಥಳೀಯ ಮೇಯರ್ ಶ್ರೀಯುತ 'ಮಿಕ್ ಮೋಲ್ಯಾಂಡ್' ಎಂಬುವವರು ಮಠದೊಳಗೆ ಬಂದು ದೇವರ ದರ್ಶನ ಮಾಡುತ್ತಿದ್ದಂತೆ ಶಾಂತರಾದರು. ಬೇರೆ ಉತ್ತಮ ಜಾಗಕ್ಕೆ ಶ್ರೀ ಮಠವನ್ನು ಆದಷ್ಟು ಬೇಗ ಸ್ಥಳಾಂತರ ಮಾಡಲೇಬೇಕು ಅದಕ್ಕೆ ತಾವು ತಮ್ಮಿಂದ ಸಾಧ್ಯವಾದಷ್ಟು ಸಹಕಾರನೀಡುವುದಾಗಿ ತಿಳಿಸಿದರು. ಮತ್ತು ತತ್‌ಕ್ಷಣವೇ ಕಾರ್ಯ ಪ್ರವೃತ್ತರಾದರು. ಸ್ಥಳಿಯ ವ್ಯವಸ್ಥಾಪಕರ ಜೊತೆಗ ನಿತ್ಯ ಸಂಪರ್ಕದಲ್ಲಿದ್ದು ಹತ್ತಾರು ಜಾಗಗಳನ್ನು ಸ್ವತಃ ತೋರಿಸಿಕೊಟ್ಟರು.

ಮುಂದೆ ಅನೇಕ ಜಾಗಗಳನ್ನು ವಿಚಾರಿಸುವ ಮೂಲಕ ಶ್ರೀ ಮಠಕ್ಕೆ ಸುಗಮವಾಗಿ

ಕಾರ್ಯನಿರ್ವಹಿಸಲು ಸರ್ವವಿಧದಲ್ಲೂ ಪ್ರಶಸ್ತವೆನಿಸಿದ ಸ್ಥಳವನ್ನು ಹುಡುಕುವ ಸರ್ವ ಪ್ರಯತ್ನ ನಡೆಯಿತು. ಸುಮಾರು 165ಕ್ಕೂ ಹೆಚ್ಚು ಜಾಗಗಳನ್ನು ನೋಡಿಯಾಯಿತು. ಮುಂದೆ ಪೂಜ್ಯ ಶ್ರೀಗಳು ಮತ್ತೆ ಮೆಲ್ಬೋರ್ನಿಗೆ ಬಂದಾಗ ಅಂದರೆ 2017ನೇ ಇಸವಿಯಲ್ಲಿ ಕಾಲಕೂಡಿಬಂತು ಎನ್ನಬಹುದು. ಮೆಲ್ಬೋರ್ನ್ ನಗರದ ಹೃದಯಭಾಗವೆನಿದ 'ಮುರುರ್ಂಬೀನಾ' ಎಂಬ ಸುಂದರ ಸ್ಥಳದಲ್ಲಿ ಪ್ರಶಸ್ತ ಅಂದರೆ ಕ್ರಿಸ್ಚಿಯನ್ನರ ಸಮಾಧಿಗಳೇನೂ ಇಲ್ಲದೆ, ಸ್ವಚ್ಛವಾಗಿ ಸಾತ್ವಿಕ ವಾತಾವರಣದಲ್ಲಿದ್ದ ಚರ್ಚ್ ಒಂದು ಮಾರಾಟಕ್ಕಿರುವುದಾಗಿ ತಿಳಿಯಿತು. ಅದನ್ನು ಕಂಡಾಕ್ಷಣ ಪೂಜ್ಯಶ್ರೀಗಳು ಸ್ಥಳಿಯ ವ್ಯವಸ್ಥಾಪಕರಿಗೆ ಇದೇ ನಮ್ಮ ಮಠವಾಗಬೇಕು ಎಂಬುವುದಾಗಿ ಆಜ್ಞಾಪಿಸಿಯೇ ಬಿಟ್ಟರು! ಆದರೇನು ಮಾಡೋಣ? ಅದರ ಬೆಲೆ ಮಾತ್ರ ಸುಮಾರು ಎರಡು ಮಿಲಿಯನ್ ಡಾಲರುಗಳು! ಅಂದರೆ ತತ್ಕಾಲದಲ್ಲಿ ಕಲ್ಪನಾತೀತ ಮೊತ್ತವಾಗಿತ್ತದು! ಅದಲ್ಲದೆ ನಗರದ ಅತ್ಯಂತ ಪ್ರಶಸ್ತ ಮತ್ತು ಪ್ರಮುಖ ಭಾಗದಲ್ಲಿದ್ದ ಆ ಜಾಗವನ್ನು ಖರೀದಿಸಿ ವಾಣಿಜ್ಯ ಕಟ್ಟಡವನ್ನಾಗಿಸಲು ಅನೇಕ ಉದ್ಯಮಿಗಳು ಅಲ್ಲಿ ಮುಗಿಬಿದ್ದಿದ್ದರು. ಒಬ್ಬನಂತೂ ಅತಿ ಹೆಚ್ಚು ಬೆಲೆಯನ್ನು ಕೊಟ್ಟು ಖರೀದಿಸಿಯೇ ಬಿಟ್ಟ!

ಬೇಸರಗೊಂಡ ಸ್ಥಳೀಯ ವ್ಯವಸ್ಥಾಪಕರು ಅದು ಕೈತಪ್ಪಿತೆಂದು ಪೂಜ್ಯ ಶ್ರೀಪಾದರಿಗೆ ತಿಳಿಸಿದಾಗ ಶ್ರೀಗಳು ವಿಚಲಿತರಾಗಲಿಲ್ಲ. ನಸುನಗುತ್ತಾ, 'ನೋಡಿ, ವಿಟ್ಠಲದೇವರ ಇಚ್ಛೆ. ಅದು ನಮ್ಮ  ಮಠಕ್ಕೇ ಸಲ್ಲಬೇಕಾದ ಜಾಗ. ನಾವು ಹೇಳಿದಂತೆ ನೀವು ಮಾಡಿ. ನಮಗದು ಸಿಕ್ಕಿಯೇ ಸಿಗುತ್ತದೆ' ಎಂದು ಬಿಟ್ಟರು! ಆಗ ಆ ವ್ಯವಸ್ಥಾಪಕರಿಗೆ ಅದನ್ನು ನಂಬಲಸಾಧ್ಯವೆನಿಸಿದರೂ ಪೂಜ್ಯರ ತಪಃಪ್ರಭಾವದಿಂದ ಏನಾದರೂ ಪವಾಡ ಸಂಭವಿಸಬಹುದು ಎಂದನ್ನಿಸಿತು. ಶ್ರೀಗಳ ನಿರ್ದೇಶನದಂತೆ ಅ ಚರ್ಚನ್ನು ಖರೀದಿಸಿದ ವ್ಯಕ್ತಿಯನ್ನು ಸಂಪರ್ಕಿಸಿದರೆ ಆತ ಅದನ್ನು ಕೊಡಲೊಪ್ಪಲಿಲ್ಲ. ಮುಂದೆ ಕೆಲವು ಸಮಯ ಕಳೆದ ಬಳಿಕ ಆತನೇ ಸ್ವತಃ ಶ್ರೀಮಠದ ವ್ಯವಸ್ಥಾಪಕರನ್ನು ಸಂಪರ್ಕಿಸಿ ಶ್ರೀಮಠಕ್ಕೆ ಕಿಂಚಿತ್ತು ಬಾಡಿಗೆಗೆ ಆ ಜಾಗವನ್ನು ಕೊಡಲು ತಯಾರಾಗಿರುವುದಾಗಿ ತಿಳಿಸಿದ! ಏಕೆಂದರೆ ಆ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟಲು ಬೇಕಾದ ಅನುಮತಿ ಪಡೆಯಲು ಒಂದೆರಡು ವರ್ಷ ಬೇಕಾಗಬಹುದು ಎನ್ನುವ ಸಂಗತಿ ಅವನಿಗೆ ವೇದ್ಯವಾಯಿತು.

ದೇವರ ಅನುಗ್ರಹದಿಂದ ತನ್ನ ಕೆಲಸ ನಿರ್ವಿಘ್ನವಾಗಿ ಮತ್ತು ಶೀಘ್ರವಾಗಿ ನಡೆಯಲಿ ಎಂಬ ಉದ್ದೇಶದಿಂದ ಅದನ್ನು ಶ್ರೀಮಠದ ನಿರ್ವಹಣೆಗೆ ಬಿಟ್ಟುಕೊಟ್ಟ!

2017ನೇ ಮಾರ್ಚ್ 19ರಂದು ಶ್ರೀ ಮಠವು ಅಲ್ಲಿಗೆ ಸ್ಥಳಾಂತರಗೊಂಡಿತು. ಶ್ರೀನಿವಾಸ ದೇವರು, ಮುಖ್ಯಪ್ರಾಣದೇವರ ಜೊತೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಮೃತ್ತಿಕಾವೃಂದಾವನವನ್ನು ಶ್ರೀಗಳು ಅಲ್ಲಿ ವಿಧ್ಯುಕ್ತವಾಗಿ ಸ್ಥಾಪಿಸಿಯೇ ಬಿಟ್ಟರು! ಸ್ವಾಮಿಗಳೇ ಅದು ಬಾಡಿಗೆಯ ಜಾಗವಲ್ಲವೇ? ತಾತ್ಕಾಲಿಕ ವ್ಯವಸ್ಥೆಯಲ್ಲವೇ? ದೇವರನ್ನು, ಗುರುಗಳನ್ನು ಪ್ರತಿಷ್ಠಾಪಿಸಿಬಿಟ್ಟರೆ ಮುಂದಿನ ವ್ಯವಸ್ಥೆ ಹೇಗೆ? ಎಂದು ಸ್ಥಳೀಯ ವ್ಯವಸ್ಥಾಪಕರು ಆತಂಕವನ್ನು ವ್ಯಕ್ತಪಡಿಸಿದರೂ ಪೂಜ್ಯ ಶ್ರೀಗಳು ತಮ್ಮ ಸಂಕಲ್ಪದಿಂದ ಹಿಂದೆ ಸರಿಯಲಿಲ್ಲ. ಅದೇ ಸ್ಥಳದಲ್ಲಿ ದೇವರ, ರಾಯರ ಪ್ರತಿಷ್ಠೆ ನಡೆದೇ ಹೋಯಿತು! ಮುಂದೆ ನಡೆದದ್ದು ಮತ್ತೊಂದು ಪವಾಡ! ಕೆಲವೇ ತಿಂಗಳಲ್ಲಿ ಆ ಚರ್ಚನ್ನು ಖರೀದಿಸಿದ ವ್ಯಕ್ತಿಗೆ ತನ್ನ ಕೆಲಸಕ್ಕೆ ತಕ್ಕುದಾದ ಮತ್ತೊಂದು ಚಂದದ ಜಾಗ ಸಿಕ್ಕಿಬಿಟ್ಟಿತು! ಮತ್ತು ಆ ಜಾಗವನ್ನು ಖರೀದಿಸಲು ಬೇಕಾದ ಹಣದ ಅವಶ್ಯಕತೆಯೂ ಅವನಿಗೆ ಎದುರಾಯಿತು! ಆತ ಶ್ರೀಮಠಕ್ಕೆ ಬಂದು ಈಗ ನೀವೇ ಈ ಜಾಗವನ್ನು ಖರೀದಿಸಬಹುದು ಎಂದು ಬಿಟ್ಟ! ಆದರೆ ಒಂದು ತಿಂಗಳೊಳಗೆ ನನಗೆ ಎರಡು ಮಿಲಿಯನ್ ಡಾಲರ್ ಬೇಕೇ ಬೇಕು ಎಂಬುವುದು ಅವನ ಕಂಡೀಷನ್! ಅಷ್ಟೊಂದು ಹಣಕ್ಕೆ ಎಲ್ಲಿ ಹೋಗೋಣ?

ಸ್ಥಳೀಯ ಭಕ್ತರ ಸಹಕಾರ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಆ ಮೇಯರ್ ಶ್ರೀಯುತ 'ಮಿಕ್ ಮೋಲಾರ್ಂಡ್' ರವರ ಸಂಪೂರ್ಣ ಪ್ರಭಾವದೊಂದಿಗೆ ಬೇಕಾದ ಎಲ್ಲ ಅನುಮತಿ ಪತ್ರಗಳು ಮತ್ತು ಆಸ್ಟ್ರೇಲಿಯಾದ ಪ್ರತಿಷ್ಠಿತ 'ವೆಸ್ಟ್ ಬ್ಯಾಂಕ್' ನಿಂದ ಬೃಹತ್ ಮೊತ್ತದ ಸಾಲ ಇತ್ಯಾದಿ ಎಲ್ಲ ವ್ಯವಸ್ಥೆಗಳೊಂದಿಗೆ ಆ ಜಾಗದ ಖರೀದಿ ನಿರ್ದಿಷ್ಟ ಸಮಯದಲ್ಲಿ ನಿರ್ವಿಘ್ನವಾಗಿ ಸಂಪನ್ನಗೊಂಡಿತು. ಪೂಜ್ಯ ಶ್ರೀಗಳ ಅದ್ಭುತ ಸಂಕಲ್ಪ ಸಾಕಾರಗೊಂಡಿತು. ಮುಂದೆ ಶ್ರೀಮಠವು ವೈಭವದಿಂದ ಕಾರ್ಯ ನಿರ್ವಹಿಸುತ್ತಾ ಶ್ರೀಹರಿಗುರುಗಳ ಸಾನ್ನಿಧ್ಯ ಮತ್ತು ನಿತ್ಯ ಸೇವಾದಿ ಸೌಕರ್ಯಗಳೊಂದಿಗೆ ಆ ವಲಯದಲ್ಲಿ ಅತ್ಯಂತ ಜನಪ್ರಿಯವಾಗಿ ಮೆರೆಯಲಾರಂಭಿಸಿತು.

# ಗುರುಗಳ ಗುರುತ್ವ



**ಶ್ರೀ ವಿಶ್ವನಾಥ ಭಟ್**
ಶ್ರೀ ಕೃಷ್ಣ ಬೃಂದಾವನ
ಮೆಲ್ಬರ್ನ್, AUSTRALIA

**ನ**ಮ್ಮ ಗುರುಗಳು ಎಷ್ಟು ದೊಡ್ಡವರು, ಸಾಧಕರು ಎನ್ನುವುದನ್ನು ನಾನು ಚೆನ್ನಾಗಿ ಬಲ್ಲೆ. ಏಕೆಂದರೆ ಅಮೇರಿಕಾದಲ್ಲಿ ಗುರುಗಳ ಜೊತೆಗೆ ಅವರ ಸೇವಕನಾಗಿ ಎಲ್ಲರಿಗಿಂತಲೂ ಹೆಚ್ಚು ಸಂಚಾರ ಮಾಡಿದ ಅನುಭವ ನನ್ನದು. ಸುಮಾರು ಏಳೆಂಟು ವರ್ಷಗಳ ತನಕದ ನನ್ನ ಅಮೇರಿಕಾವಾಸದಲ್ಲಿ ನನಗೆ ಹೆಚ್ಚು ತೃಪ್ತಿಯನ್ನು ಮತ್ತು ಸಮಾಧಾನವನ್ನು ಕೊಟ್ಟ ಕೆಲಸವೆಂದರೆ ಗುರುಗಳ ಸೇವೆ. ಆಗ ಅಲ್ಲಿನ ನ್ಯೂಜೆರ್ಸಿ ಮೊದಲಾದ ಶಾಖಾಮಠಗಳಲ್ಲಿ ಅರ್ಚಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಗುರುಗಳು ಬರುತ್ತಿದ್ದಾರೆ, ಸಂಚಾರ ನಿಗದಿಯಾಗಿ ಎಂಬುವುದು ತಿಳಿದಾಗ ಸೇವೆಗೆ ನಾನೇ ಮೊದಲು ತಯಾರಾಗಿ ನಿಲ್ಲುತ್ತಿದ್ದೆ.

ಈಗ ಕೆಲವು ವರ್ಷಗಳಿಂದ ಆಸ್ಟ್ರೇಲಿಯಾದ ಮೆಲ್ಬರ್ನ್ ಶಾಖೆಯನ್ನು ನಿರ್ವಹಿಸುವ ಸೇವಾ ಜವಾಬ್ದಾರಿಯನ್ನು ಪೂಜ್ಯ ಗುರುಗಳು ನನಗೆ ಕೊಟ್ಟಿದ್ದಾರೆ. ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ವಿದ್ಯಾರ್ಥಿಯಾಗಿ ಸೇರುವಾಗ ಇಷ್ಟೊಂದು ರೀತಿಯ ಉನ್ನತಿಯನ್ನು ನಾನು ನನ್ನ ಜೀವನದಲ್ಲಿ ಅನುಭವಿಸಲಿದ್ದೇನೆ ಎಂಬ ಕಲ್ಪನೆಯೂ ನನಗಿರಲಿಲ್ಲ. ಗುರುಗಳ ಸೇವೆಯನ್ನು ಶ್ರದ್ಧೆಯಿಂದ ಮಾಡಿದರೆ ನಮ್ಮ ಜೀವನವೂ ಪಾವನವಾಗುತ್ತದೆ ಎನ್ನುವುದಕ್ಕೆ ನನ್ನ ಜೀವನಾನುಭವವೇ ಒಂದು ಉತ್ತಮ ಉದಾಹರಣೆ.

ನನ್ನ ಗುರುಗಳು ಬಹಳಷ್ಟು ದೊಡ್ಡವರು ಎಂದು ನನಗನ್ನಿಸುತ್ತಿದ್ದದ್ದು ನಿತ್ಯವೂ ಪೂಜಾನಂತರ ಅವರ ಪಾಂಡಿತ್ಯ ಪೂರ್ಣ ಪ್ರವಚನಗಳನ್ನು ಕೇಳುವಾಗ ಮಾತ್ರವಲ್ಲ. ಅವರು ವಿದೇಶಗಳಲ್ಲಿ ಅಲ್ಲಲ್ಲಿ ನಿರ್ಮಿಸುತ್ತಿದ್ದ ಮಠಮಂದಿರಗಳನ್ನು ಕಂಡಾಗ ಮಾತ್ರವಲ್ಲ.

ಅವರ ಪ್ರತಿಕ್ಷಣದ ಜೀವನಕ್ರಮ, ಮಾತುಕತೆ, ಎಲ್ಲರೊಡನೆ ವ್ಯವಹರಿಸುವ ರೀತಿ, ಕಟ್ಟುನಿಟ್ಟಿನ ಜಪ ಪೂಜಾದಿ ಅನುಷ್ಠಾನಗಳು ಇವೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದಾಗಲೆಲ್ಲ ನನ್ನೊಳಗೆ ಅವರ ಮೇಲಿನ ಗೌರವವು ಹೆಚ್ಚುತ್ತಲೇ ಹೋಗುತ್ತಿತ್ತು.

ಪ್ರಯಾಣಕಾಲದಲ್ಲಿ ಗುರುಗಳು ಸಂಪೂರ್ಣವಾಗಿ ಉಪವಾಸದಲ್ಲಿರುತ್ತಿದ್ದರು. ನಿರಂತರ ಧ್ಯಾನ ಅಧ್ಯಯನದಲ್ಲಿ ಮಗ್ನರಾಗಿರುತ್ತಿದ್ದರು. ಜೊತೆಗೆ ನಮ್ಮ ಯೋಗಕ್ಷೇಮವನ್ನೂ ವಿಚಾರಿಸಿಕೊಳ್ಳುತ್ತಿದ್ದರು. ಪ್ರಯಾಣ ಮಧ್ಯೆ ವಿಳಂಬ, ಒತ್ತಡ ಇತ್ಯಾದಿ ಏನೇ ಸವಾಲುಗಳು ಬರಲಿ, ಗುರುಗಳು ಯಾವತ್ತೂ ವಿಲಲಿತರಾಗುತ್ತಿರಲಿಲ್ಲ. ತಮ್ಮ ಸಂಯಮವನ್ನು ಕಳೆದುಕೊಳ್ಳದೆ ಪರ್ಯಾಯ ವ್ಯವಸ್ಥೆಗಳ ಬಗ್ಗೆ ವಿಮರ್ಶಿಸಿ ಸರಿಯಾದ ನಿರ್ಣಯಗಳನ್ನು ತೆಗೆದುಕೊಂಡು ಅನಿರೀಕ್ಷಿತವಾಗಿ ಎದುರಾಗುವ ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಸ್ವತಃ ಕಂಡು ಹಿಡಿಯುತ್ತಿದ್ದರು. ಆ ದಿನಗಳನ್ನು ಈವತ್ತಿಗೂ ನೆನಪಿಸಿಕೊಳ್ಳುತ್ತೇನೆ. ಈಗಲೂ ಅಷ್ಟೆ. ಇಲ್ಲಿ ನಮ್ಮ ಮೆಲ್ಬರ್ನ್ ನಲ್ಲಿರುವ ಶ್ರೀ ಮಠಕ್ಕೆ ಬರುವ ಪ್ರತಿಯೊಬ್ಬ ಭಕ್ತರೂ ದೇವತಾ ಕಾರ್ಯವನ್ನೋ ಪಿತೃಕಾರ್ಯವನ್ನೋ ಶ್ರದ್ಧೆಯಿಂದ ನಡೆಸಿ ಪ್ರಸಾದ ಸ್ವೀಕರಿಸಿ ಭಾವುಕರಾಗಿ ಪೂಜ್ಯ ಶ್ರೀಪಾದರಿಗೆ ತಮ್ಮ ಧನ್ಯವಾದಗಳನ್ನು ಸಮರ್ಪಿಸುವಾಗ ನನಗೆ ನಮ್ಮ ಗುರುಗಳ ಬಗ್ಗೆ ಹೆಮ್ಮೆಯೆನಿಸುತ್ತದೆ. ಅವರಿಂದಾಗಿ ವಿಶ್ವದಾದ್ಯಂತ ಎಷ್ಟೊಂದು ಜನರಿಗೆ ಹೀಗೆ ಅನುಕೂಲವಾಗುತ್ತಿದೆ, ನೆಮ್ಮದಿ ಸಿಗುತ್ತಿದೆ ಎಂಬ ವಿಚಾರ ನೆನಪಾದಾಗಲೆಲ್ಲ ಗುರುಗಳನ್ನು ಮನಸಾರೆ ಸ್ಮರಿಸಿ ನಮಿಸುತ್ತೇನೆ.

ಅಂತಹ ಉದಾರ ಗುಣಗಳುಳ್ಳ ಗುರುಗಳ ಶಿಷ್ಯರಾಗುವ ಮತ್ತು ಅವರ ಸೇವೆಯನ್ನು ಮಾಡುವ ಅವಕಾಶ ಸಿಕ್ಕಿದ್ದು ನಮ್ಮ ಸೌಭಾಗ್ಯ. ಅಂತಹ ಮಹಾಗುರುಗಳಿಂದ ನನ್ನಂತಹ ಇನ್ನಷ್ಟು ಮಂದಿ ಶಿಷ್ಯರಿಗೆ ಅನುಗ್ರಹವಾಗಲಿ. ಅವರ ಜೀವನವೂ ಪಾವನವಾಗಲಿ ಎಂದು ಆಶಿಸುತ್ತೇನೆ. ಶ್ರೀಗುರುಭ್ಯೋ ನಮಃ




**VENKATAKRUSHNA VRUNDAVANA, LONDON, UNITED KINGDOM.**

# ಇಂಗ್ಲೆಂಡ್‌ನಲ್ಲಿ ಶ್ರೀ ಕೃಷ್ಣನನ್ನು ನೆಲೆಗೊಳಿಸಿದ ಶ್ರೀ ಗುರುರಾಯರು!

**ಪೂ**ಜ್ಯ ಪುತ್ತಿಗೆ ಶ್ರೀಪಾದರು ಯಾವಾಗಲೂ ಹೇಳುವುದುಂಟು! 'ಮೊಟ್ಟಮೊದಲು ವಿದೇಶ ಪ್ರಯಾಣ ಮಾಡಿದ ಮಾಧ್ವಯತಿಗಳೆಂದರೆ ಮಂತ್ರಾಲಯದ ಶ್ರೀ ಗುರುರಾಘವೇಂದ್ರ ಸ್ವಾಮಿಗಳು' ಎಂದು! ಅದಕ್ಕೆ ಬಲವಾದ ಕಾರಣವೂ ಇದೆ. ಸುಮಾರು ಮೂರೂವರೆ ಶತಮಾನಗಳ ಹಿಂದೆ ಸಶರೀರ ವೃಂದಾನವ ಪ್ರವೇಶ ಮಾಡಿದ ಶ್ರೀ ಗುರುರಾಯರು ಮುಂದಿನ ಏಳುನೂರು ವರ್ಷಗಳ ಕಾಲ ಮೃತ್ತಿಕಾ ವೃಂದಾವನಗಳಲ್ಲಿ ತಮ್ಮ ಸಾನ್ನಿಧ್ಯವನ್ನು ಮೆರೆಯುತ್ತಾರೆ, ಭಕ್ತರಿಗೆ ಅನುಗ್ರಹ ಮಾಡುತ್ತಾರೆ ಎಂಬುವುದು ಪ್ರತೀತಿ. ತತ್ಕಾರಣದಿಂದಾಗಿ ಇಂದಿಗೆ ದೇಶವಿದೇಶದಾದ್ಯಂತ ನೂರಾರು ಕಡೆಗಳಲ್ಲಿ ಶ್ರೀ ರಾಯರ ಮೂಲಮೃತ್ತಿಕಾ ವೃಂದಾವನವು ಸ್ಥಾಪಿತವಾಗಿದೆ ಮತ್ತು ಪೂಜೆಗೊಳ್ಳುತ್ತಿದೆ. ಮಾತ್ರವಲ್ಲದೆ ರಾಯರ ಅನುಗ್ರಹದ ಪವಾಡ ಪ್ರತ್ಯಕ್ಷವಾಗಿ ಭಕ್ತಜನರ ಅನುಭವಕ್ಕೆ ಗೋಚರವಾಗುತ್ತಿದೆ.

ಪೂಜ್ಯ ಪುತ್ತಿಗೆ ಶ್ರೀಗಳು ಮೊದಲ ಬಾರಿಗೆ ವಿದೇಶ ಪ್ರಯಾಣವನ್ನು (1997) ಮಾಡುವುದಕ್ಕಿಂತ ಹತ್ತಾರು ವರ್ಷಗಳ ಮುಂಚೆಯೇ ಶ್ರೀ ರಾಯರ ಸುಂದರ ಪ್ರತೀಕವೊಂದು ಅಮೇರಿಕಾದ ನ್ಯೂಯಾರ್ಕ್ ನಗರದಲ್ಲಿ ಸ್ಥಾಪಿತವಾಗಿ ಭಕ್ತರಿಂದ ಪೂಜೆಗೊಳ್ಳುತ್ತಿತ್ತು! ಅಂದರೆ ಅದಾಗಲೇ ಶ್ರೀ ರಾಯರು ಪ್ರತೀಕರೂಪದಲ್ಲಿ ವಿದೇಶಕ್ಕೆ ಬಂದು ಭಕ್ತರನ್ನು ಅನುಗ್ರಹಿಸುತ್ತಿದ್ದರು! ಸುಮಾರು ಐವತ್ತು ವರ್ಷಗಳ ಹಿಂದೆ (1970) ಸ್ಥಾಪಿತವಾದ 'ಫ್ಲಶಿಂಗ್' ಗಣಪತಿ ದೇವಸ್ಥಾನದ ಪ್ರಾಂಗಣದಲ್ಲಿ ಸ್ಥಳೀಯ ಭಕ್ತರಾದ ಶ್ರೀ ಗುರುರಾಜ ರಾವ್ ಎಂಬವರ ನೇತೃತ್ವದಲ್ಲಿ ಮುಂದೆ ಶ್ರೀ ರಾಯರ ಶಿಲಾವೃಂದಾವನವೂ ಪ್ರತಿಷ್ಠಾಪನೆಗೊಂಡಿತ್ತು. ಸ್ವತಃ ಶ್ರೀ ಗುರುರಾಜ ರಾಯರೇ ಅಭಿಷೇಕ, ನೈವೇದ್ಯಾದಿ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಜೊತೆಗೆ ಶ್ರೀ ರಾಯರ ಆರಾಧನೆಯೂ ವರ್ಷಂಪ್ರತಿ ವಿಜೃಂಭಣೆಯಿಂದ ನಡೆಯುತ್ತಿತ್ತು! (ಮುಂದೆ

ಕಾಲಾನಂತರದಲ್ಲಿ ಶ್ರೀ ಗುರುರಾಜರಾಯರು ತಮ್ಮ ಬಳಿಯಿದ್ದ ವಿಗ್ರಹ, ಸಾಲಗ್ರಾಮಾದಿಗಳನ್ನು ಶ್ರೀಪುತ್ತಿಗೆ ಮಠದ ನ್ಯೂಜೆರ್ಸಿ ಶಾಖೆಗೆ ಸಮರ್ಪಿಸಿ ಶ್ರೀ ರಾಯರ ನಿರಂತರ ಸೇವೆ ಶ್ರೀ ಮಠದ ನೇತೃತ್ವದಲ್ಲಿ ಶಾಸ್ತ್ರೀಯವಾಗಿ ಮುಂದುವರಿಸಿಕೊಂಡು ಬರುವಂತೆ ಭಿನ್ನವಿಸಿಕೊಂಡರು.)

1893ರಲ್ಲಿ ಶ್ರೀ ವಿವೇಕಾನಂದರು ಚಿಕಾಗೋದಲ್ಲಿ ನಡೆದ ವಿಶ್ವಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದು ಒಂದು ಅದ್ಭುತ ಇತಿಹಾಸ. ತದನಂತರ ನಮ್ಮ ಸನಾತನ ಪರಂಪರೆಯು ವಿದೇಶಗಳಲ್ಲಿಯೂ ಗೌರವಾನ್ವಿತವಾಗಿ ಗುರುತಿಸಿಕೊಳ್ಳಲಾರಂಭಿಸಿತು. ಆಗ ಅಷ್ಟರಲ್ಲೇ ಅಲ್ಲಿಗೆ ಬಂದು ನೆಲೆಸಿದ್ದ ಭಾರತೀಯರಿಗೂ ತಮ್ಮ ಧರ್ಮಾಚರಣೆ ಮತ್ತು ಸಂಸ್ಕೃತಿಯನ್ನು ಹೆಮ್ಮೆಯಿಂದ ಮುಕ್ತವಾಗಿ ಅನುಷ್ಠಾನಿಸಿಕೊಂಡು ಬರುವ ಧೈರ್ಯ ಬಂತು. ತತ್ಪರಿಣಾಮವಾಗಿ 1906ರಲ್ಲಿ ವೇದಾಂತ ಸೊಸೈಟಿಯ ನೇತೃತ್ವದಲ್ಲಿ ಅಮೇರಿಕಾದ ಮೊದಲ ಹಿಂದೂ ದೇವಸ್ಥಾನ ಕ್ಯಾಲಿಫೋರ್ನಿಯಾದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸ್ಥಾಪಿತವಾಯಿತು. ಅದೇ ರೀತಿ ಅಮೇರಿಕಾದ ನೆಲದಲ್ಲಿ ಮಾಧ್ವಪ್ರಜ್ಞೆಯನ್ನು ನೆಲೆಗೊಳಿಸಿ, ಅನೇಕ ಮಠಮಂದಿರಗಳನ್ನು ಸ್ಥಾಪಿಸಿ, ಶಾಸ್ತ್ರೀಯ ಧರ್ಮಾನುಷ್ಠಾನದ ಮತ್ತು ತತ್ವಜ್ಞಾನದ ಪ್ರಸಾರವನ್ನು ವಿಪುಲವಾಗಿ ಪ್ರಚುರಪಡಿಸಿದ ಪುಣ್ಯಕೀರ್ತಿ ಪರಮಪೂಜ್ಯ ಶ್ರೀ ಪುತ್ತಿಗೆ ಶ್ರೀಪಾದರದ್ದು!

2015ನೇ ಇಸವಿಯ ಮಾರ್ಚ್ ತಿಂಗಳಲ್ಲಿ ಪೂಜ್ಯ ಶ್ರೀಪಾದರಿಗೆ ಇಂಗ್ಲೆಂಡ್‌ನ ಲಂಡನ್ ಪ್ರದೇಶಕ್ಕೆ ಬಂದು ಅನುಗ್ರಹಿಸುವಂತೆ ಸ್ಥಳೀಯ ಭಕ್ತರಿಂದ ಭಾವಪೂರ್ಣವಾದ ಆಹ್ವಾನ ಬಂತು. ಅವರಲ್ಲಿ ಹೆಚ್ಚಿನವರು ಶ್ರೀ ಗುರುರಾಯರ ಭಕ್ತರು. ಅವರ ಈ ವಿನಂತಿಯ ಮುಖ್ಯ ಉದ್ದೇಶ ಪೂಜ್ಯ ಶ್ರೀಪಾದರು ಇಂಗ್ಲೆಂಡ್ ದೇಶದಲ್ಲಿ ಕೂಡ ತಮ್ಮ ಶ್ರೀ ಮಠದ ಶಾಖೆಯನ್ನು ಆರಂಭಿಸಿ ಶ್ರೀ ಕೃಷ್ಣಮುಖ್ಯಪ್ರಾಣರ ಮತ್ತು ಶ್ರೀ ರಾಯರ ನಿರಂತರ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕೆಂಬುವುದೊಂದೇ ಆಗಿತ್ತು. ಅದರಂತೆಯೇ ದೈವಪ್ರೇರಣೆಯಿಂದ ಪೂಜ್ಯ ಶ್ರೀಗಳು ತಮ್ಮ ಪರಿವಾರದೊಡನೆ ಇಂಗ್ಲೆಂಡ್ ದೇಶದಲ್ಲೂ ಎಲ್ಲೆಡೆ ಸಂಚರಿಸಿ ಭಕ್ತರಿಗೆ ಮಾರ್ಗದರ್ಶನ ನೀಡುವ ಮನಸ್ಸು ಮಾಡಿದರು.

ಅಪೂರ್ವವಾದ ಆ ಹದಿನೈದು ದಿನಗಳ ಇಂಗ್ಲೆಂಡ್ ಸಂಚಾರದಲ್ಲಿ ಒಂದಿನಿತೂ ಬಿಡುವಿಲ್ಲದಂತೆ ಪೂಜೆ, ಪ್ರವಚನ, ಭಜನೆ ಮತ್ತು ಅನ್ನಸಂತರ್ಪಣೆಗಳು ಸಂಪನ್ನಗೊಂಡವು. ನೂರಾರು ಭಕ್ತರನ್ನು ಸೂಜಿಕಲ್ಲಿನಂತೆ ಶ್ರೀಗಳೆಡೆಗೆ ಸೆಳೆದವು. 'ಐಲ್ ಫೋರ್ಡ್' ನ ಹಿಂದೂ ದೇಗುಲವೊಂದರಲ್ಲಿ ನಡೆದ ಕಾರ್ಯಕ್ರಮದಲ್ಲಂತೂ ಸುಮಾರು ಸಾವಿರದಷ್ಟು ಭಕ್ತರು ಬಂದು ಭಾಗವಹಿಸಿ ಪುನೀತರಾದರು. ತನ್ಮಧ್ಯದಲ್ಲಿ ಪೂಜ್ಯ ಶ್ರೀಪಾದರ ಸಂಸ್ಥಾನ ಪೂಜೆಯನ್ನು ಪ್ರಥಮ ಬಾರಿಗೆ ಕಂಡು ಪುಳಕಿತರಾದ ಮತ್ತು ಶ್ರೀಗಳ ಪ್ರವಚನವನ್ನು ಆಲಿಸಿ ಭಾವುಕರಾದ ಗುಜರಾತೀ ಜೈನಭಕ್ತರೊಬ್ಬರು ತಮ್ಮ ಶ್ರೀ ಮಠದ ಸ್ಥಾಪನೆ ಇಂಗ್ಲೆಂಡ್‌ನಲ್ಲಿ ಅತಿ ಶೀಘ್ರವಾಗಿ ಆಗಲೇ ಬೇಕೆಂದು ಪಟ್ಟುಹಿಡಿದರು! ಅದಕ್ಕೋಸ್ಕರ ಶ್ರೀಗಳ ನಿಗದಿತ ಇಂಗ್ಲೆಂಡ್ ಪ್ರವಾಸವನ್ನು ಮತ್ತಷ್ಟು ದಿನಗಳವರೆಗೆ ಮುಂದೂಡಬೇಕೆಂದು ಒತ್ತಾಯಿಸಿದರು ಮಾತ್ರವಲ್ಲದೆ, ಆಗ ತಾನೆ ನಿರ್ಮಾಣಗೊಂಡ ತಮ್ಮ ಹೊಚ್ಚ ಹೊಸ ಮನೆಗೆ ತಾವು ಪ್ರವೇಶಿಸದೆ ಅದನ್ನು ಪೂಜ್ಯ ಶ್ರೀಪಾದರಿಗೆ ಒಪ್ಪಿಸಿ ಶ್ರೀ ಮಠವು ಇಲ್ಲೇ ಸ್ಥಾಪಿತವಾಗಲಿ ಎಂದು ಆಗ್ರಹಿಸಿದರು! ಅವರ ಪ್ರೀತಿಪೂರ್ವಕ ಒತ್ತಾಸೆಗೆ ಮಣಿದ ಶ್ರೀಪಾದರು ಶ್ರೀ ಮಠವನ್ನು ಅದೇ ಮನೆಯಲ್ಲಿ ಆರಂಭಿಸಿದ್ದು 2015ನೇ ಇಸವಿಯ ಎಪ್ರಿಲ್ ತಿಂಗಳಲ್ಲಿ.

ಜನರಿಗೆ ಬಂದು ಹೋಗಲು ಹೆಚ್ಚು ಅನುಕೂಲವಾಗಲೆಂಬ ಉದ್ದೇಶದೊಂದಿಗೆ ಮುಂದೆ ಶ್ರೀ ಮಠವನ್ನು 'ವೆಂಬ್ಲಿ' ಎಂಬ ಬಹುಸಂಖ್ಯಾತ ಭಾರತೀಯರಿರುವ ಜನನಿಬಿಡ ಪ್ರದೇಶದಲ್ಲಿರುವ ಬಾಡಿಗೆಯ ಜಾಗವೊಂದಕ್ಕೆ ಸ್ಥಳಾಂತರಗೊಳಿಸಬೇಕಾಯಿತು. ಆದರೆ ಯಾವುದೇ ಪೂರ್ವಸಿದ್ಧತೆಯಿಲ್ಲದೆ ಕೇವಲ ದೈವಪ್ರೇರಣೆಯೊಂದಿಗೆ ಇದ್ದಕ್ಕಿದ್ದಂತೆ ಆರಂಭಗೊಂಡ ಶ್ರೀ ಮಠದ ಲಂಡನ್ ಶಾಖೆಗೆ ಮುಂದೆ ಕೆಲವು ಸಂಕಷ್ಟಗಳು ಸಹಜವಾಗಿಯೇ ಎದುರಾದವು.

ಇಂಗ್ಲೆಂಡ್ ದೇಶದ ಕಾನೂನು ಪ್ರಕ್ರಿಯೆಯಂತೆ ಸಂಸ್ಥೆಯ ಸ್ಥಾಪನೆ, ವೀಸಾ ಇತ್ಯಾದಿ ಪ್ರಕ್ರಿಯೆಗಳಿಗೆ ಸುದೀರ್ಘ ಸಮಯಬೇಕಾಗುತ್ತದೆ. ತನ್ಮಧ್ಯದಲ್ಲಿ ಪೂಜೆಗೆ ಜನರ ವ್ಯವಸ್ಥೆ, ಧಾರ್ಮಿಕ ಅನುಷ್ಠಾನಾದಿಗಳನ್ನು ನಿರ್ವಹಿಸಲು ಪಾಠ ಪ್ರವಚನಾದಿಗಳನ್ನು

ನಡೆಸಿಕೊಂಡು ಬರಲು ವಿದ್ವಾಂಸರನ್ನು ಮತ್ತು ಅಡುಗೆಯವರನ್ನು ನೇಮಿಸುವುದು ಸುಲಭದ ಕೆಲಸವೇನೂ ಅಲ್ಲ. ಆದರೂ ಶ್ರೀಗಳ ಸಂಕಲ್ಪವಂತೂ ಸುದೃಢವಾಗಿತ್ತು. ಏನೇ ಆಗಲಿ, ಮುಂದೆ ಶ್ರೀ ರಾಯರೇ ಎಲ್ಲವನ್ನೂ ನಡೆಸಿಕೊಂಡು ಹೋಗುತ್ತಾರೆ ಎಂದ ಪೂಜ್ಯ ಶ್ರೀಗಳು ತಮಗೆ ಮಂತ್ರಾಲಯದ ಶ್ರೀ ಸುಶಮೀಂದ್ರ ತೀರ್ಥರು ನೀಡಿದ್ದ ಶ್ರೀ ರಾಯರ ಮೂಲಮೃತ್ತಿಕೆಯನ್ನು ಬೆಳ್ಳಿಯ ಪುಟ್ಟ ವೃಂದಾವನದಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿ, ಸಾನ್ನಿಧ್ಯ ವೃದ್ಧಿಗೆ ಒಂದಷ್ಟು ದಿನಗಳ ಕಾಲ ತಮ್ಮ ಜಪಾನುಷ್ಠಾನಗಳನ್ನು ನಡೆಸಿ ತಮ್ಮ ಪ್ರಯಾಣವನ್ನು ಮುಂದುವರಿಸಿದರು. ನಿತ್ಯಪೂಜಾದಿ ಕೈಂಕರ್ಯಗಳಿಗೆ ಶಿಷ್ಯರ ನಿಯೋಜನೆಯೂ ಆಯಿತು.

ಮುಂದೆ ನಡೆದದ್ದು ಶ್ರೀ ರಾಯರ ಪವಾಡವೆಂದೇ ಹೇಳಬಹುದು. ಪೂಜ್ಯ ಶ್ರೀ ಪಾದರ ಕರಕಮಲದಿಂದ ಪ್ರತಿಷ್ಠಾಪಿತವಾದ ವೃಂದಾವನದಲ್ಲಿ ಶ್ರೀ ರಾಯರು ವಿಶೇಷ ಸನ್ನಿಧಾನದೊಂದಿಗೆ ನೆಲೆಗೊಂಡಿದ್ದರು. ರಾಯರಿದ್ದಲ್ಲಿ ಮುಖ್ಯಪ್ರಾಣದೇವರೂ ಇರುತ್ತಾರೆ. ಶ್ರೀ ಕೃಷ್ಣನೂ ಬರುತ್ತಾನೆ. 2015ನೇ ಇಸವಿಯಲ್ಲಿ 'ಹ್ಯಾರೋ' ಎಂಬಲ್ಲಿ ನಡೆದ ಶ್ರೀ ರಾಯರ ಪ್ರಥಮ ಆರಾಧನೆಯಂತೂ ಐತಿಹಾಸಿಕ. ಇಂಗ್ಲೆಂಡ್ ದೇಶದಲ್ಲಿ ಪ್ರಥಮಬಾರಿಗೆ ಶಾಸ್ತ್ರೀಯವಾಗಿ ಸಂಪನ್ನಗೊಂಡ ಅದ್ಭುತ ಮಹೋತ್ಸವವಾಗಿತ್ತದು. ಅನತಿಕಾಲದಲ್ಲಿಯೇ ಶ್ರೀ ಮಠದಲ್ಲಿ ರಜತಾಚ್ಛಾದಿತ ಬೃಹತ್ ದಾರುಮಯ ಬೃಂದಾವನದ ಪ್ರತಿಷ್ಠಾಪನೆಯಾಯಿತು. ಶ್ರೀ ಭೂಸಹಿತ ಶ್ರೀನಿವಾಸನ ವಿಗ್ರಹವೂ ಸ್ಥಾಪಿತಗೊಂಡಿತು. ಅನೇಕ ವೈವಿಧ್ಯಮಯ ಧಾರ್ಮಿಕ ಕಾರ್ಯಕ್ರಮಗಳ ಅಚರಣೆ ಲಂಡನ್, ಮ್ಯಾಂಚೆಸ್ಟರ್, ಲೆಸ್ಟರ್, ಲೀಡ್ಸ್ ಇತ್ಯಾದಿ ಅನೇಕ ಮಹಾನಗರಗಳಲ್ಲಿ ಅನೇಕ ಬಾರಿ ಸಂಪನ್ನಗೊಂಡಿತು. ಶ್ರೀನಿವಾಸ ಕಲ್ಯಾಣಾದಿ ಕೆಲವೊಂದು ವಿಶಿಷ್ಟ ಕಾರ್ಯಕ್ರಮಗಳು ಸ್ವಿಜರ್ಲ್ಯಾಂಡ್, ನೆದರ್ಲ್ಯಾಂಡ್ ಇತ್ಯಾದಿ ಸುತ್ತಮುತ್ತಲಿನ ದೇಶಗಳನ್ನೂ ವ್ಯಾಪಿಸಿತು. ಇಂಗ್ಲೆಂಡ್‌ನ ಶ್ರೀ ಮಠವು ಜನಪ್ರಿಯವಾಯಿತು.

ನಂತರ ಹಿಂತಿರುಗಿ ನೋಡಲೇ ಇಲ್ಲ. ಕಾನೂನಿನ ತೊಡಕುಗಳು, ವೀಸಾ ಅಭಾವ, ಆರ್ಥಿಕ ಸಮಸ್ಯೆ ಮತ್ತು ಕೋವಿಡ್ ಇತ್ಯಾದಿ ಅನೇಕ ಸಂಕಷ್ಟಗಳು

ಎದುರಾದರೂ ಶ್ರೀ ರಾಯರು ನಂಬಿದ ಭಕ್ತರ ಕೈಬಿಡಲಿಲ್ಲ! ಶ್ರೀ ಕೃಷ್ಣನ ಸಂಪೂರ್ಣ ಕೃಪೆ ಶ್ರೀ ಮಠದ ಮತ್ತು ಭಕ್ತರ ಮೇಲೆ ನಿರಂತರ ಇರುವಂತೆ ಶ್ರೀ ರಾಯರೇ ನೋಡಿಕೊಂಡು ಬಂದರು. ಇಂದಿಗೂ ಅನೇಕ ಜನ ಭಕ್ತರು ಶ್ರೀ ಮಠಕ್ಕೆ ಭೇಟಿ ಕೊಟ್ಟು ರಾಯರ ವೃಂದಾವನದ ಮುಂದೆ ಪ್ರಾರ್ಥಿಸಿ ಇಷ್ಟಾರ್ಥಗಳನ್ನು ಪಡೆದು ಸಂಕಷ್ಟಗಳಿಂದ ಪಾರಾದ  ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಶ್ರೀ ಮಠಕ್ಕೆ ಸ್ವಂತ ಮತ್ತು ಬೃಹತ್ತಾದ ನೆಲೆಯೊಂದು ಬೇಕೆಂಬುದು ಪೂಜ್ಯ ಪುತ್ತಿಗೆ ಶ್ರೀಪಾದರ ಸಂಕಲ್ಪವಾಗಿತ್ತು. ಆದರೆ ಲಂಡನ್ ಪ್ರದೇಶದಲ್ಲಿ ಜಾಗ ಸಿಗುವುದೆಂದರೆ ಸುಲಭದ ಮಾತಲ್ಲ. ಅದರಲ್ಲೂ ನಮಗೆ ಬೇಕಾದ ಎಲ್ಲ ವ್ಯವಸ್ಥೆಗಳೂ ಇರುವ ಜಾಗವೊಂದನ್ನು ನಮ್ಮ ಕೈಗೆಟಕುವ ಬೆಲೆಗೆ ತೋರಿಸಿಕೊಟ್ಟದ್ದು ಕೂಡ ಶ್ರೀ ರಾಯರ ಪವಾಡವೆಂದೇ ಹೇಳಬಹುದು.

ಪರ್ಯಾಯ ಪೂರ್ವಭಾವಿಯಾಗಿ ವಿಶ್ವದಾದ್ಯಂತ ಸಂಚರಿಸುತ್ತಾ ಅತ್ಯಂತ ಅಲ್ಪ ಮತ್ತು ಜಟಿಲ ಸಮಯಾವಕಾಶದೊಂದಿಗೆ ಪೂಜ್ಯ ಶ್ರೀಗಳು ಲಂಡನ್ ಗೆ ಭೇಟಿ ಕೊಟ್ಟದ್ದು ಕೇವಲ ಎರಡು ದಿನಗಳಿಗೆ ಮಾತ್ರ. ತನ್ಮಧ್ಯದಲ್ಲಿ  ಅನಿರೀಕ್ಷಿತವಾಗಿ 'ಸೈಂಟ್ ಆಲ್ಬನ್ಸ್' ಎಂಬ ಪ್ರದೇಶದಲ್ಲಿ ಮಾರಾಟಕ್ಕಿದೆ ಎಂದು ಘೋಷಿತವಾದ ಅತ್ಯಂತ ಪ್ರಶಸ್ತ ಚರ್ಚ್ ಒಂದನ್ನು ನೋಡಲು ಶ್ರೀಗಳ ಬಳಿಯಿದ್ದದ್ದು ಕೇವಲ ಹತ್ತು ನಿಮಿಷಗಳ ಸಮಯ! ಅದರ ಬೆಲೆ ಮೂರು ಮಿಲಿಯನ್ ಪೌಂಡ್‌ಗಳು!


ಇದು ನಮಗೆ ಬೇಕೇ ಬೇಕು, ನಿಮ್ಮ ಪ್ರಯತ್ನ ಮುಂದುವರಿಸಿ ಎಂದು ಸ್ಥಳೀಯ ವ್ಯವಸ್ಥಾಪಕರಿಗೆ ಆದೇಶಿಸಿದ ಪೂಜ್ಯ ಶ್ರೀಗಳಿಗೆ ಶ್ರೀ ರಾಯರು ತಮ್ಮ ಅಪೇಕ್ಷೆಯನ್ನು ನೆರವೇರಿಸಿಕೊಡುತ್ತಾರೆಂಬ ನಂಬಿಕೆ ಅಚಲವಾಗಿತ್ತು. ಮುಂದೆ ಸುಮಾರು ಒಂದು ವರ್ಷಗಳ ಕಾಲ ನಡೆದ ನಿರಂತರ ಪ್ರಯತ್ನದ ಬಳಿಕ ಅದೇ ಜಾಗವನ್ನು ಖರೀದಿಸುವ ಪ್ರಕ್ರಿಯೆ ಪವಾಡಸದೃಶವಾಗಿ ಸಂಪನ್ನಗೊಂಡಿತು! ಅತ್ಯಂತ ಅಸಂಭವವೆನಿಸಿದ್ದ ಬೆಲೆಗೆ ಆ ಜಾಗದ ಕ್ರಯ ನಿಗದಿಯಾಯಿತು. ಪ್ರಾದೇಶಿಕವಾಗಿ ಪ್ರಸಿದ್ಧವಾದ 'ಚಾರಿಟಿ ಬ್ಯಾಂಕ್' ಬೃಹತ್ ಮೊತ್ತದ ಸಾಲ ನೀಡಲು ಮುಂದೆ ಬಂತು.

ಸ್ಥಳೀಯ ಭಕ್ತರ ಉದಾರ ದೇಣಿಗೆಯ ಸಹಕಾರದೊಂದಿಗೆ ಪೂಜ್ಯ ಶ್ರೀಪಾದರ ಸಂಕಲ್ಪದಂತೆ ಶ್ರೀ ರಾಯರ ಅನುಗ್ರಹದೊಂದಿಗೆ ಶ್ರೀಮಠವು ಇದೀಗ ತನ್ನ ಸ್ವಂತ ಮತ್ತು ಶಾಶ್ವತ ನೆಲೆಗೆ ಸ್ಥಳಾಂತರಗೊಂಡಿದೆ. ಜನವರಿ 25, 2025ರಂದು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯ ಶ್ರೀನಿವಾಸ ಕಲ್ಯಾಣದೊಂದಿಗೆ ಶ್ರೀ ಮಠದ ನೂತನ ಶಾಖೆಯು ಉದ್ಘಾಟನೆಗೊಂಡಿತು.

ಹೀಗೆ ಪೂಜ್ಯ ಪುತ್ತಿಗೆ ಶ್ರೀಪಾದರ ಪ್ರಾರ್ಥನೆಗೊಲಿದ ಶ್ರೀಗುರುರಾಯರು ಸಪರಿವಾರ ಉಡುಪಿ ಶ್ರೀ ಕೃಷ್ಣನನ್ನು ಇಂಗ್ಲೆಂಡ್‌ನಲ್ಲಿ ಶಾಶ್ವತವಾಗಿ ನೆಲೆನಿಲ್ಲುವಂತೆ ಮಾಡಿದ್ದು ಮಾತ್ರವಲ್ಲದೆ ತಮ್ಮ ವಿಶೇಷ ಸಾನ್ನಿಧ್ಯದೊಂದಿಗೆ ಭಕ್ತರನ್ನು ನಿರಂತರ ಅನುಗ್ರಹಿಸುತ್ತಿದ್ದಾರೆ.

●

# ಗುರುಗಳ ಕಾರುಣ್ಯ



**ಶ್ರೀ ಗಣೇಶ್ ಭಟ್**
ಶ್ರೀ ವೇಂಕಟಕೃಷ್ಣ ವೃಂದಾವನ
ಲಂಡನ್, UK

**ಜ**ಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀಮದುಪೇಂದ್ರತೀರ್ಥ ಪರಂಪರೆ ಉಡುಪಿಯ ಶ್ರೀ ಪುತ್ತಿಗೆ ಮಠದ ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಬಗ್ಗೆ ಇದೀಗ ತಿಳಿಯದವರು ಯಾರೂ ಇಲ್ಲವೆನ್ನಬಹುದು. ಅಂತಹ ಲೋಕಮಾನ್ಯರೆನಿಸಿದ ಪೂಜ್ಯ ಗುರುಗಳ ಕಾರುಣ್ಯವನ್ನು ಹತ್ತಿರದಿಂದ ಕಂಡ ಹಲವಾರು ಭಾಗ್ಯವಂತರಲ್ಲಿ ನಾನೂ ಒಬ್ಬ.

ಶಿಷ್ಯರಲ್ಲಿ ಅಪಾರವಾದ ಕಾರುಣ್ಯ, ಗೋವುಗಳಲ್ಲಿ ಪ್ರೀತಿ, ಜಪತಪಾದಿಗಳಲ್ಲಿ ನಿಷ್ಠೆ, ಭೇಟಿಗೆಂದು ಬಂದ ಯಾರನ್ನೇ ಆದರೂ ಹತ್ತಿರಕ್ಕೆ ಕರೆದು ಪ್ರೀತಿಯಿಂದ ಮಾತನಾಡಿಸುವ ವಾತ್ಸಲ್ಯ, ತಾಳ್ಮೆ, ಅಗಾಧವಾದ ಸ್ಮರಣಶಕ್ತಿ, ಶಾಸ್ತ್ರಗಳ ನಿರಂತರ ಅಧ್ಯಯನ ಅಧ್ಯಾಪನ... ಹೀಗೆ ಹೇಳುತ್ತಾ ಹೋದರೆ ಮುಗಿಯದಷ್ಟು ಸುಗುಣಗಳ ಸುದೀರ್ಘಪಟ್ಟಿ ನನ್ನ ಗುರುಗಳದ್ದು.

ತಮ್ಮ ಆರಾಧ್ಯ ದೇವರು ಸಪರಿವಾರ ವೀರವಿಠ್ಠಲನ ಉಂಬಳಿಯ ಊರು ಹಿರಿಯಡಕ ಬಳಿಯ ಪುತ್ತಿಗೆಯ ಮೂಲಮಠದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವರ ವೈಭವದ ಪೂಜೆಯನ್ನು ಪೂಜ್ಯ ಶ್ರೀಪಾದರು ಪರಮಶ್ರದ್ಧೆಯಿಂದ ಮಾಡುವುದನ್ನು ನೋಡುವುದೇ ಒಂದು ಭಾಗ್ಯ. ಕಣ್ಣಿಗೆ ಹಬ್ಬ. ಅಂತಹ ಆ ಪುಣ್ಯಭೂಮಿಯಲ್ಲಿ ಪೂಜ್ಯರು ಸ್ವತಃ ಸಂಸ್ಥಾಪಿಸಿರುವ 'ಶ್ರೀಪುತ್ತಿಗೆ ವಿದ್ಯಾಪೀಠ'ವು ಸ್ವರೂಪೋದ್ಧಾರದ

ದಾರಿಯನ್ನು, ಅಧ್ಯಾತ್ಮವಿದ್ಯೆಯನ್ನು ಅರಸಿಕೊಂಡು ಬರುವ ಯೋಗ್ಯ ವಿದ್ಯಾರ್ಥಿಗಳಿಗೆ ವಿದ್ಯೆ, ಅಶನ, ವಸನ ಜೊತೆಗೆ ಉತ್ತಮ ಭವಿಷ್ಯವನ್ನು ಕಲ್ಪಿಸಿಕೊಡುತ್ತಿರುವ ಕಾಮಧೇನು.

ತಮ್ಮ ಶ್ರೀಮಠದ ಆಡಳಿತಕ್ಕೆ ಒಳಪಟ್ಟ ಉಡುಪಿಯ ಐತಿಹಾಸಿಕ ಅನಂತಾಸನ, ಚಂದ್ರೇಶ್ವರ ದೇವಾಲಯಗಳ ಜೀರ್ಣೋದ್ಧಾರ, ಆಸ್ತಿಕರ ಉದ್ಧಾರಕ್ಕೆ ವಿಶ್ವದ ಉದ್ದಗಲಕ್ಕೂ ಸಂಚಾರ, ಅನ್ಯದೇಶಗಳಲ್ಲೂ ಧರ್ಮಪ್ರಚಾರ, ಮಠಗಳ ಸ್ಥಾಪನೆ, ಚತುರ್ಥ ಬಾರಿಗೆ ಪರ್ಯಾಯ ಪೀಠಾರೋಹಣ, ಶ್ರೀಕೃಷ್ಣ ಮುಖ್ಯಪ್ರಾಣರ ಅನನ್ಯ ಸೇವೆ, ಕೋಟಿ ಗೀತಾಲೇಖನ ಯಜ್ಞವೇ ಮೊದಲಾದ ಅತ್ಯಪೂರ್ವ ಕಾರ್ಯಕ್ರಮಗಳ ಸಂಯೋಜನೆ, ಉತ್ಸವಬ್ರಹ್ಮ ಶ್ರೀಕೃಷ್ಣನ ನಿತ್ಯೋತ್ಸವಕ್ಕೆ ಸಮರ್ಪಿಸಿದ ಸುವರ್ಣ ಗೀತೋಪದೇಶ ರಥ, ದೇಶದ ಹೆಮ್ಮೆಯ ಪ್ರಧಾನಮಂತ್ರಿಯನ್ನು ಉಡುಪಿಯ ಮಣ್ಣಿಗೆ ಕರೆಸಿಕೊಂಡ ಹೆಗ್ಗಳಿಕೆ ಹೀಗೆ ನಮ್ಮ ಗುರುಗಳು ದೇಶವಿದೇಶಗಳಲ್ಲಿ ಒಂದರ ನಂತರ ಒಂದೆಂಬಂತೆ ಯಶಸ್ವಿಯಾಗಿ ನೆರವೇರಿಸಿದ ಮತ್ತು ಸಂಕಲ್ಪಿಸಿರುವ ಅಭೂತಪೂರ್ವ, ಐತಿಹಾಸಿಕ ಮತ್ತು ಅವಿಸ್ಮರಣೀಯ ಸಾಧನೆಗಳ ಪಟ್ಟಿ ಇನ್ನೂ ಬೆಳೆಯುತ್ತಲೇ ಇದೆ.

ತಮ್ಮ ಕರಕಮಲ ಸಂಜಾತರಾದ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರಿಗೆ ಪ್ರೇರಣಾ ಶಕ್ತಿಯಾಗಿ, ಭವಿಷ್ಯದ ಪೀಳಿಗೆಗೆ ಒಬ್ಬ ಸಮರ್ಥ ಗುರುವನ್ನೂ ರೂಪಿಸುತ್ತಿರುವ ವಿಶ್ವಗುರು ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಪಾದಸೇವೆಯ ಭಾಗ್ಯ ನಮಗೆ ನಿರಂತರ ದೊರೆಯಲಿ. ಮತ್ತು ಗುರುಕಾರುಣ್ಯವು ನಮಗೆಲ್ಲರಿಗೂ ಶ್ರೀರಕ್ಷೆಯಾಗಲೆಂದು ಪೂಜ್ಯರ ಪೀಠಾರೋಹಣ ಸ್ವರ್ಣಮಹೋತ್ಸವದ ಈ ಪರ್ವಕಾಲದಲ್ಲಿ ನನ್ನ ವಿನಮ್ರ ಪ್ರಾರ್ಥನೆ.

ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ

●




SHRI KRISHNA VRUNDAVANA, DALLAS, TEXAS,  USA.

# ಡಾಲಸ್‌ನಲ್ಲೂ ನೆಲೆಗೊಂಡ ಶ್ರೀಕೃಷ್ಣವೃಂದಾವನ

**ಉ**ತ್ತರ ಅಮೇರಿಕಾ ದೇಶದ ದಕ್ಷಿಣ ದಿಕ್ಕಿನಲ್ಲಿ ಮೆಕ್ಸಿಕೋ ಗಡಿಭಾಗಕ್ಕೆ ತಾಗಿಕೊಂಡಿರುವ ಬೃಹತ್ ರಾಜ್ಯ 'ಟೆಕ್ಸಾಸ್'. ಅದರ ಈಶಾನ್ಯ ದಿಗ್ಭಾಗದಲ್ಲಿ ಹೆಬ್ಬಾಗಿಲಿನಂತಿದ್ದು ಅನೇಕ ಆಕರ್ಷಣೆಗಳೊಂದಿಗೆ ವಲಸಿಗರನ್ನು ಸ್ವಾಗತಿಸುತ್ತಿರುವ ಮಹಾನಗರವೇ 'ಡಾಲಸ್'. ವರ್ಷದಾದ್ಯಂತ ಬಹುತೇಕ ಬೆಚ್ಚಗಿನ ವಾತಾವರಣವನ್ನು ಹೊಂದಿರುವ ಡಾಲಸ್ ಮಹಾನಗರವೆಂದರೆ ಒಳ್ಳೆಯ ಉದ್ಯೋಗ ಮತ್ತು ವಸತಿಯನ್ನು ಹುಡುಕಿಕೊಂಡು ಬಂದ ವಲಸಿಗರಿಗೆ ಬಲು ಇಷ್ಟ. ಆದರೆ ಕೆಲವೊಮ್ಮೆ ಬಾಧಿಸುವ ಉರಿಬಿಸಿಲು, ಜೋರುಮಳೆ ಮತ್ತು ಸುಂಟರ ಸುಂಟರಗಾಳಿ ಇತ್ಯಾದಿ ಪ್ರಕೃತಿಯ ಕೋಪತಾಪಗಳು ಈ ಪ್ರದೇಶಕ್ಕೆ ಸ್ವಲ್ಪ ಕಿರುಕುಳ ಕೊಡುವುದುಂಟು. ಆದರೂ ವಾಸಯೋಗ್ಯವೆನಿಸಿ ಪ್ರಸಿದ್ಧವಾಗಿರುವ ಅಮೇರಿಕಾದ ಮಹಾನಗರಗಳಲ್ಲಿ ಒಂದಾದ ಈ ಡಾಲಸ್‌ನಲ್ಲಿ ಪ್ರಸಕ್ತ ನೆಲೆಸಿರುವ ಕೇವಲ ಭಾರತೀಯರ ಸಂಖ್ಯೆಯೇ ಸುಮಾರು ಎರಡೂವರೆ ಲಕ್ಷದಷ್ಟು! ಇದೀಗ ಈ ವಲಯದಲ್ಲಿ ವಸತಿ ಪ್ರದೇಶಗಳು ಇನ್ನಷ್ಟು ವಿಸ್ತಾರಗೊಳ್ಳುತ್ತಿವೆ ಮತ್ತು ಬಂದು ಸೇರಿಕೊಳ್ಳುತ್ತಿರುವ ವಲಸಿಗರ ಸಂಖ್ಯೆಯೂ ಬೆಳೆಯುತ್ತಲೇ ಇದೆ.

ಕ್ರಿ.ಶ. ಹದಿನೆಂಟನೆಯ ಶತಮಾನದಲ್ಲಿ ಈ ಪ್ರದೇಶಕ್ಕೆ ಬಂದು ಇಲ್ಲಿನ 'ಟ್ರಿನಿಟಿ' ನದಿಯ ತೀರದಲ್ಲಿ ಮೊತ್ತ ಮೊದಲ ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿದವನು 'ಜಾನ್ ನೀಲಿ ಬ್ರ್ಯಾನ್' ಎಂಬ ವಲಸಿಗ. ನಂತರ ಸುಮಾರು ಒಂದು ಶತಮಾನ ಪರ್ಯಂತ ನಡೆದ ರಸ್ತೆ ಮತ್ತು ರೈಲು ಮಾರ್ಗ ನಿರ್ಮಾಣವೇ ಮೊದಲಾದ ದೇಶದ ಅಭಿವೃದ್ಧಿ ಕಾರ್ಯಗಳು ಈ ಪ್ರದೇಶದ ವ್ಯಾಪಾರ ವಹಿವಾಟುಗಳನ್ನು ಮತ್ತಷ್ಟು ಹೆಚ್ಚಿಸಿ ಮಹಾನಗರವನ್ನಾಗಿಸಿದವು. ಬಹುಶಃ ತತ್ಕಾಲೀನ ಪ್ರಸಿದ್ಧ ರಾಜಕಾರಣಿ ಮತ್ತು ದೇಶದ ಉಪಾಧ್ಯಕ್ಷನಾಗಿದ್ದ 'ಜಾರ್ಜ್ ಮಿಫ್ಲಿನ್ ಡಾಲಸ್'ನ ಪ್ರಭಾವದಿಂದ ಈ ಪ್ರದೇಶಕ್ಕೆ 'ಡಾಲಸ್' ಎಂಬ ನಾಮಕರಣವಾಯಿತು. ನಂತರ ಸುಮಾರು ಇಪ್ಪತ್ತನೆಯ ಶತಮಾನದಲ್ಲಿ ಇಲ್ಲಿ ಕಂಡುಬಂದ ತೈಲ ನಿಕ್ಷೇಪಗಳು ಮತ್ತು ತದನಂತರ ಬಿರುಸುಗೊಂಡ ತೈಲ

ವಹಿವಾಟುಗಳು ಡಾಲಸ್ ಮಹಾನಗರವನ್ನು ಆರ್ಥಿಕವಾಗಿ ಮತ್ತಷ್ಟು ಶ್ರೀಮಂತಗೊಳಿಸಿದವು. ಆದೇ ಸಮಯದಲ್ಲಿ ಶುರುವಾದ ನಮ್ಮ ವಿದ್ಯಾವಂತ ಭಾರತೀಯರ ವಲಸೆಯನ್ನು ಈ ಪ್ರದೇಶವೂ ಆತ್ಮೀಯವಾಗಿ, ಗೌರವಾನ್ವಿತವಾಗಿ ಸ್ವಾಗತಿಸಿತು.

ಪರಮಪೂಜ್ಯ ಶ್ರೀ ಪುತ್ತಿಗೆ ಶ್ರೀಪಾದರು ಮೊದಲ ಬಾರಿಗೆ ವಿದೇಶಯಾತ್ರೆ ಕೈಗೊಂಡು ಅಮೇರಿಕಾ ದೇಶದಾದ್ಯಂತ ಸಂಚರಿಸಿದಾಗ ಪೂಜ್ಯರನ್ನು ಆದ್ದೂರಿಯಿಂದ ಸ್ವಾಗತಿಸಿದ ಅನೇಕ ನಗರಗಳಲ್ಲಿ ಈ ಡಾಲಸ್ ಮಹಾನಗರವೂ ಕೂಡ ಸೇರಿತ್ತು. ಅಂದರೆ 1997ನೇ ಇಸವಿಗಾಗುವಾಗಲೇ ಇಲ್ಲಿಗೆ ಅನೇಕ ಮಂದಿ ಭಾರತೀಯರು ಬಂದು ಸೇರಿಕೊಂಡು ಸುದೃಢವಾಗಿ ಸೆಟಲ್ ಆಗಿ ಬಿಟ್ಟಿದ್ದರು! ಅನೇಕ ಹಿಂದೂ ಧಾರ್ಮಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳೂ ಸ್ಥಾಪನೆಗೊಂಡಿದ್ದವು. ಪೂಜ್ಯ ಶ್ರೀಪಾದರನ್ನು ಒತ್ತಾಯ ಪೂರ್ವಕವಾಗಿ ವಿನಂತಿಸಿ ಕರೆಸಿಕೊಂಡ ಅಂದಿನ 'ಸೈಬರ್ ಮಾಧ್ವಸಂಘ'ದ ಅನೇಕ ಪ್ರತಿನಿಧಿಗಳು ಈ ಪ್ರದೇಶದಲ್ಲಿಯೂ ನೆಲೆಸಿದ್ದರು. ಹಾಗಾಗಿ ಶ್ರೀಗಳ ನಿತ್ಯದ ಸಂಸ್ಥಾನ ಪೂಜೆ, ಪ್ರವಚನ, ಅನ್ನಸಂತರ್ಪಣೆ ಇತ್ಯಾದಿ ಚಟುವಟಿಕೆಗಳೂ ಅಂದು ಅತ್ಯಂತ ವೈಭವದಿಂದ ಸಂಪನ್ನಗೊಂಡಿದ್ದವು.

ಕಾಲಾನಂತರದಲ್ಲಿ ಫೀನಿಕ್ಸ್, ನ್ಯೂಜೆರ್ಸಿ, ಲಾಸ್ ಎಂಜಲೀಸ್ ಇತ್ಯಾದಿ ಕಡೆಗಳಲ್ಲಿ ಶ್ರೀಮಠದ ಶಾಖೆಗಳು ಪ್ರಾರಂಭಗೊಳ್ಳುತಿದ್ದಂತೆ ದೇಶದ ದಕ್ಷಿಣ ಭಾಗವಾದ ಟೆಕ್ಸಾಸ್ ರಾಜ್ಯದಲ್ಲೂ ಶ್ರೀಕೃಷ್ಣವೃಂದಾವನದ ಸ್ಥಾಪನೆಯಾಗಬೇಕು ಎಂಬ ಬೇಡಿಕೆ ಮೊಳಕೆಯೊಡೆದಿದ್ದೇ ಈ ಡಾಲಸ್ ನಲ್ಲಿ ಎನ್ನಬಹುದು. ಏಕೆಂದರೆ ಪೂಜ್ಯ ಶ್ರೀಪಾದರು ಕಾರ್ಯ ನಿಮಿತ್ತ ದೇಶದ ಪೂರ್ವಭಾಗದಿಂದ ಪಶ್ಚಿಮಕ್ಕೆ ಪ್ರಯಾಣಿಸುವಾಗ ಶ್ರೀಗಳಿಗೆ ಆತ್ಮೀಯರಾದ ಸ್ಥಳೀಯ ಭಕ್ತರು ಪ್ರತಿಸಲವೂ ಪೂಜ್ಯರನ್ನು ತಮ್ಮಲ್ಲಿಗೆ ಅಹ್ವಾನಿಸುತ್ತಿದ್ದರು. ಏನಾದರೊಂದು ಕಾರ್ಯಕ್ರಮಗಳನ್ನು ಆಯೋಜಿಸಿ ಪೂಜ್ಯ ಶ್ರೀಪಾದರು ಡಾಲಸ್ ನಗರಕ್ಕೆ ಆಗಾಗ ಬಂದು ಭೇಟಿ ನೀಡುವಂತೆ, ತಮ್ಮನ್ನು ಅನುಗ್ರಹಿಸುವಂತೆ ಬೇಡಿಕೊಳ್ಳುತ್ತಿದ್ದರು. ಅದರಂತೆ ಪ್ರತಿಸಲದ ಭೇಟಿಯಲ್ಲಿಯೂ ಡಾಲಸ್ ಪ್ರದೇಶದಲ್ಲಿ ಶ್ರೀಮಠದ ಸ್ಥಾಪನೆಯಾಗಬೇಕು ಎಂಬ ತಮ್ಮ ವಿನಮ್ರ ವಿನಂತಿಯನ್ನೂ ಪೂಜ್ಯರ

ಸಮ್ಮುಖದಲ್ಲಿ ಒತ್ತಾಯಪೂರ್ವಕವಾಗಿ ಸಲ್ಲಿಸುತ್ತಿದ್ದರು. ತಮ್ಮ ಪ್ರಯತ್ನವನ್ನು ಅಷ್ಟಕ್ಕೇ ನಿಲ್ಲಿಸದೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾರಟಕ್ಕೆ ಸಿದ್ಧವಾಗಿರುವ ಯಾವುದಾದರೊಂದು ನಿವೇಶನವನ್ನು ಗುರುತಿಸಿ ಶ್ರೀಗಳಿಗೆ ತೋರಿಸುತ್ತಲೂ ಇದ್ದರು. ಒಂದು ಹಂತದಲ್ಲಿ ಆ ಪುಣ್ಯಕಾರ್ಯಕ್ಕೋಸ್ಕರ ಧನಸಂಗ್ರಹವನ್ನೂ ಪ್ರಾರಂಭಿಸಿ ಶ್ರೀಗಳ ಸಮ್ಮುಖದಲ್ಲಿ ಸಮರ್ಪಿಸಿ ತಮ್ಮ ಬೇಡಿಕೆಯನ್ನು ಅತಿಶೀಘ್ರದಲ್ಲಿ ನೆರವೇರಿಸುವ ಅನುಗ್ರಹ ಮಾಡಬೇಕು ಎಂದು ಒತ್ತಾಯಿಸತೊಡಗಿದರು!

ಆದರೆ ಭಗವಂತನ ಇಚ್ಛೆ ಮಾತ್ರ ಬೇರೆಯೇ ಇತ್ತು. ಡಾಲಸ್‌ನಲ್ಲಿ ಸೂಕ್ತ ಸ್ಥಳವನ್ನು ಅನ್ವೇಷಿಸುವ ಪ್ರಯತ್ನ ನಡೆಯುತ್ತಿದ್ದಾಗಲೇ ಅತ್ತ ಕಡೆ ಹ್ಯೂಸ್ಟನ್ ಮಹಾನಗರದಲ್ಲಿ ಪ್ರಶಸ್ತವಾದ ಜಾಗವೊಂದು ಸಿಕ್ಕಿಯೇ ಬಿಟ್ಟಿತು. ಮತ್ತು ಅಲ್ಲಿ ಶ್ರೀಕೃಷ್ಣವೃಂದಾವನದ ಸ್ಥಾಪನೆಗೆ ಬೇಕಾದ ಎಲ್ಲ ವ್ಯವಸ್ಥೆ ಮತ್ತು ವಾತಾವರಣವೂ ಆತಿಶೀಘ್ರದಲ್ಲಿ ಸಿದ್ಧಗೊಂಡಿತು. ಕಾಲನಿಯಾಮಕನಾದ ಶ್ರೀಕೃಷ್ಣನ ಇಚ್ಛೆಯನ್ನು ಬಲ್ಲವರಾರು? ಶ್ರೀಮಠದ ಟೆಕ್ಸಾಸ್ ರಾಜ್ಯದ ಮೊದಲ ಶಾಖೆ ಹ್ಯೂಸ್ಟನ್ ನಲ್ಲೇ ಆರಂಭಗೊಳ್ಳಬೇಕೆಂಬ ಶ್ರೀಕೃಷ್ಣನ ಇಚ್ಛೆಗೇ ಗೆಲುವಾಯಿತು. ಪೂಜ್ಯಶ್ರೀಪಾದರ ತತ್ಕಾಲೀನ ಸಮಯೋಚಿತ ನಿರ್ಧಾರವನ್ನು ಡಲ್ಲಾಸ್‌ನ ಭಕ್ತರೂ ನಿರ್ವ್ಯಾಜವಾಗಿ ಬೆಂಬಲಿಸಿದರು. ಕಿಂಚಿತ್ತೂ ಬೇಸರಿಸಿಕೊಳ್ಳದೆ ಯಥಾಶಕ್ತಿ ದೇಣಿಗೆಗಳನ್ನೂ ಸಮರ್ಪಿಸಿ ಶ್ರೀಮಠದ ಹ್ಯೂಸ್ಟನ್ ಶಾಖೆಯ ಸಂಸ್ಥಾಪನೆಯ ಪುಣ್ಯಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಡಾಲಸ್‌ನಿಂದ ಹ್ಯೂಸ್ಟನ್‌ಗೆ ಪ್ರಯಾಣಿಸಲು ಸುಮಾರು ನಾಲ್ಕು ಗಂಟೆಗಳಿಗೂ ಅಧಿಕ ಸಮಯ ಬೇಕು. ಶ್ರೀ ಮಠದ ಪ್ರತಿಯೊಂದು ವಿಶೇಷ ಕಾರ್ಯಗಳಲ್ಲೂ ತಾವು ಭಾಗವಹಿಸಲೇಬೇಕೆನ್ನುವ ಡಾಲಸ್ ಭಕ್ತರ ಉತ್ಸಾಹಕ್ಕೆ ಆ ಸುಮಾರು ಇನ್ನೂರೈವತ್ತು ಮೈಲಿ ದೂರವೂ ದೊಡ್ಡ ಸಂಗತಿಯೆನಿಸಲಿಲ್ಲ. ಆದರೆ ತಮ್ಮ ಊರಿನಲ್ಲೂ ಶ್ರೀಮಠದ ಶಾಖೆ ಸ್ಥಾಪನೆಗೊಳ್ಳಲಿದೆ ಎಂಬ ಭರವಸೆ ಅವರೆಲ್ಲರ ಮನಸ್ಸಿನಲ್ಲಿ ಸ್ಪಷ್ಟವಾಗಿತ್ತು. ಮತ್ತು ಆ ಪ್ರಯುಕ್ತವಾದ ತಮ್ಮ ಪ್ರಾಮಾಣಿಕ ಪ್ರಯತ್ನಗಳನ್ನು ಹಾಗೂ ಕಾಲಕಾಲದಲ್ಲಿ ಪೂಜ್ಯ ಶ್ರೀಪಾದರಿಗೆ ತಮ್ಮ ಮನವಿಯ ಸಲ್ಲಿಕೆಯನ್ನು ಕೂಡ ಶ್ರದ್ಧೆಯಿಂದ ಮಾಡಿಕೊಂಡು ಬಂದರು.

ಕಾಲ ಕೂಡಿಬಂದಾಗ ಎಲ್ಲವೂ ಸಾಕಾರಗೊಳ್ಳುತ್ತದೆ. ಸದ್ಭಕ್ತರ ಸಾತ್ವಿಕ ಇಚ್ಛಾಶಕ್ತಿಯು ಜಾಗ್ರತವಾದಾಗ ಜನಶಕ್ತಿ ಮತ್ತು ಧನಶಕ್ತಿಗಳೂ ಜೊತೆಗೂಡುತ್ತವೆ. ಭಗವಂತನ ಮತ್ತು ಗುರುಗಳ ಸಾನ್ನಿಧ್ಯವೂ ಅಲ್ಲಿ ಗೋಚರಿಸುತ್ತದೆ. ಅದರಂತೆಯೇ ಡಾಲಸ್ ವಾಸಿಗಳಾದ ಅನೇಕ ಸದ್ಭಕ್ತರ ಬಹುಕಾಲದ ಸಂಕಲ್ಪ ಸಾಕಾರಗೊಂಡದ್ದು 2018ನೇ ಇಸವಿಯಲ್ಲಿ! ಆ ವರ್ಷದ ಚಾತುರ್ಮಾಸ್ಯವನ್ನು ಸ್ಥಳೀಯ ಭಕ್ತರ ಒತ್ತಾಯದ ಮೇರೆಗೆ ಡಾಲಸ್‌ನಲ್ಲಿ ಕೈಗೊಳ್ಳುವ ಸಂಕಲ್ಪ ಮಾಡಿದ ಪೂಜ್ಯ ಶ್ರೀಗಳ ಚಿತ್ತದಲ್ಲಿ ಅಲ್ಲೊಂದು ಶಾಖೆಯನ್ನು ಆರಂಭಿಸಲೇಬೇಕು ಎಂಬ ಇಚ್ಛೆಯೂ ಜಾಗ್ರತವಾಯಿತು!

ಸದಾ ಬಿಡುವಿಲ್ಲದ ಕಾರ್ಯಕ್ರಮಗಳು ಮತ್ತು ತತ್ತ್ವಯುಕ್ತ ನಿರಂತರ ಸಂಚಾರನಿರತರಾಗಿರುವ ಶ್ರೀಗಳಿಗೆ ಒಂದು ಪ್ರದೇಶದಲ್ಲಿ ಹೆಚ್ಚಿನ ಸಮಯವನ್ನು ವಿನಿಯೋಗಿಸುವ ಅವಕಾಶ ಸಿಗುವುದು ಚಾತುರ್ಮಾಸ್ಯದಲ್ಲಿ ಮಾತ್ರ. ಅದರಲ್ಲೂ ಸೂಕ್ತ ಜಾಗವನ್ನು ಗುರುತಿಸಿ ಶ್ರೀಮಠದ ಶಾಖೆಯನ್ನು ಪ್ರಾರಂಭಿಸಬೇಕೆಂದರೆ ಸಮಯ ಸ್ವಲ್ಪ ಹೆಚ್ಚೇ ಬೇಕಾಗುತ್ತದೆ. ಶ್ರೀಮಠದ ಶಾಖಾ ಸ್ಥಾಪನೆಯೆಂಬುವುದೂ ಸಾಮಾನ್ಯವಾದ ಕೆಲಸವೇನಲ್ಲ! ಸೂಕ್ತವಾದ ಜಾಗ, ಜನರು ಮತ್ತು ಸಮಯವನ್ನು ಗುರುತಿಸಿ ಆ ಮಹತ್ಕಾರ್ಯಕ್ಕೆ ಬೀಜಾವಾಪ ಮಾಡುವ ದೈವೀಶಕ್ತಿ ಮತ್ತು ಸಾಮರ್ಥ್ಯವಿರುವುದೂ ಪೂಜ್ಯರಿಗೆ ಮಾತ್ರ. ಏಕೆಂದರೆ ಒಂದು ಸಲ ಸ್ಥಾಪಿತವಾದ ಸಂಸ್ಥೆ ಯಾವ ಅಡೆತಡೆಗಳೂ ಇಲ್ಲದೆ ನಿತ್ಯಪೂಜಾದಿ ಕೈಂಕರ್ಯಗಳೊಂದಿಗೆ ಆಚಂದ್ರಾರ್ಕವಾಗಿ ಕಾರ್ಯನಿರ್ವಹಿಸಬೇಕೆಂದರೆ ಪೂಜ್ಯ ಶ್ರೀಪಾದರಂತಹ ಮಹನೀಯರ ತಪಃಶಕ್ತಿಯೇ ಮೂಲಕಾರಣ!

ತನ್ಮಧ್ಯದಲ್ಲಿ ಡಾಲಸ್ ವಲಯದಲ್ಲಿ ಶ್ರೀಮಠದ ಶಾಖೆಯನ್ನು ಆರಂಭಿಸುವ ಶ್ರೀಗಳ ಇಚ್ಛಾಶಕ್ತಿಗೆ ಪೂರಕವೆಂಬಂತಹ ಪವಾಡ ಸದೃಶ ಘಟನೆಯೊಂದು ನಡೆಯಿತು! ಶ್ರೀಗಳ ಚಾತುರ್ಮಾಸ್ಯ ನಿಮಿತ್ತದ ಎಲ್ಲ ವ್ಯವಸ್ಥೆಗಳ ಮುತುವರ್ಜಿ ವಹಿಸಿಕೊಂಡಿದ್ದ ಶ್ರೀಗಳ ಅಂತರಂಗದ ಭಕ್ತರೊಬ್ಬರು ಗುರುಗಳ ಅಣತಿಯಂತೆ ಸೂಕ್ತ ಸ್ಥಳದ ಅನ್ವೇಷಣೆಗೆ ಸರ್ವಪ್ರಯತ್ನ ಮಾಡುತ್ತಿದ್ದರು. ಮಾರಾಟಕ್ಕಿರುವ ಅನೇಕ ಜಾಗಗಳನ್ನು ಹುಡುಕಿ

ಅಲ್ಲಿಗೆ ಸ್ವತಃ ಹೋಗಿ ಪರೀಕ್ಷಿಸುತ್ತಿದ್ದರು. ಆಗ ಅವರ ದೃಷ್ಟಿಗೆ ಬಿದ್ದು ಚೆನ್ನಾಗಿದೆ ಎಂದೆನಿಸಿದ ಮನೆಯೊಂದಕ್ಕೆ ಪೂಜ್ಯ ಶ್ರೀಪಾದರನ್ನೂ ಕರೆದೊಯ್ದರು. ಮನೆಯೇನೋ ಚೆನ್ನಾಗಿತ್ತು. ಆದರೆ ನಾನಾ ಕಾರಣಗಳಿಂದಾಗಿ ಆ ಮನೆಯು ಮಠವಾಗಿ ಪರಿವರ್ತಿತವಾಗಲು ಸೂಕ್ತವಾಗಿರಲಿಲ್ಲ. ಆದರೂ ತನ್ನಿಮಿತ್ತ ನಾಲ್ಕಾರು ತಿಂಗಳಿನಿಂದ ಆ ಮನೆಯನ್ನು ಮಾರಲು ಪ್ರಯತ್ನಿಸುತ್ತಿದ್ದ ಅದರ ಮಾಲೀಕನಿಗೆ ಪೂಜ್ಯ ಶ್ರೀಪಾದರನ್ನು ಭೇಟಿಯಾಗುವ ಅಪೂರ್ವ ಸಂದರ್ಭವೊಂದು ಒದಗಿ ಬಂತು! ಆತ ಮೂಲತಃ ಗುರುವಾಯೂರಿನವ, ಮಲಯಾಳಿ. ಅವನಿಗೆ ಉಡುಪಿಯ ಬಗ್ಗೆಯಾಗಲೀ, ಶ್ರೀಮಠದ ಬಗ್ಗೆಯಾಗಲೀ ಯಾವ ಮಾಹಿತಿಯೂ ಇರಲಿಲ್ಲ. ಸ್ವಭಾವತಃ ದೈವ ಭಕ್ತನಾಗಿದ್ದ ಆತನಿಗೆ ಶ್ರೀಗಳನ್ನು ಕಂಡಾಕ್ಷಣ ಯಾವ ರೀತಿಯಲ್ಲಾದರೂ ಪೂಜ್ಯರಿಗೆ ತನ್ನ ಸೇವೆ ಸಲ್ಲಿಸಬೇಕು ಎಂಬ ಪ್ರೇರಣೆಯಾಯಿತಂತೆ!

ಪೂಜ್ಯ ಶ್ರೀಪಾದರ ಬಗ್ಗೆ ಮತ್ತು ಡಾಲಸ್‌ನಲ್ಲಿ ಶ್ರೀಮಠವನ್ನು ಸ್ಥಾಪಿಸುವ ಶ್ರೀಗಳ ಸಂಕಲ್ಪದ ಬಗ್ಗೆ ಸವಿವರವಾಗಿ ಕೇಳಿ ತಿಳಿದುಕೊಂಡ ಆ ಮನುಷ್ಯ ಅಂದೇ ಸಂಜೆ ಪೂಜ್ಯ ಶ್ರೀಪಾದರ ಸಾಯಂಪೂಜೆ ಮತ್ತು ಪ್ರವಚನಕ್ಕೆ ಪರಿವಾರಸಹಿತನಾಗಿ ಬಂದು ಭಾಗವಹಿಸಿ ಪೂಜ್ಯರ ಬಳಿ ವಿನಮ್ರನಾಗಿ ಒಂದು ವಿನಂತಿಯನ್ನು ಸಲ್ಲಿಸಿದ್ದು ಅಲ್ಲಿ ನೆರೆದಿದ್ದ ಎಲ್ಲರನ್ನೂ ಅಚ್ಚರಿಗೊಳಿಸಿತು! ಮಾರಾಟಕ್ಕಿಟ್ಟಿದ್ದ ತನ್ನ ಮನೆಯನ್ನು ಶ್ರೀಗಳು ತತ್‌ಕ್ಷಣದಲ್ಲೇ ಸ್ವೀಕರಿಸಬೇಕು, ಮತ್ತು ಅಲ್ಲಿಯೇ ಶ್ರೀಮಠವನ್ನು ಪ್ರಾರಂಭಿಸಬೇಕು ಎಂಬುವುದು ಆತನ ಪ್ರಾರ್ಥನೆಯಾಗಿತ್ತು! ಮುಂದೆ ಸೂಕ್ತ ಸ್ಥಳ ದೊರಕುವವರೆಗೂ ಶ್ರೀಮಠವು ಆ ಮನೆಯಲ್ಲಿಯೇ ಕಾರ್ಯನಿರ್ವಹಿಸಬೇಕು ಮತ್ತು ಅಲ್ಲಿಯ ವರೆಗೆ ಆ ಮನೆಯನ್ನು ಉಚಿತವಾಗಿಯೇ ಬಿಟ್ಟುಕೊಡುವುದಲ್ಲದೆ ಪೂಜ್ಯ ಶ್ರೀಗಳ ಮತ್ತು ಶಿಷ್ಯವರ್ಗದ ವಾಸ್ತವ್ಯಕ್ಕೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿಕೊಡುವುದೂ ಅವನ ಆ ಕ್ಷಣದ ವಾಗ್ದಾನವಾಗಿತ್ತು! ಮುಂದೆ ಗಣೇಶ ಚತುರ್ಥಿಯ ಸಂಭ್ರಮಯುಕ್ತ ಆ ಪುಣ್ಯಪ್ರದ ಭಾದ್ರಪದ ಮಾಸದಲ್ಲಿಯೇ ಆ ಮನೆಗೆ ಸಪರಿವಾರ ಶ್ರೀ ವಿಠ್ಠಲದೇವರ ಪ್ರವೇಶವಾಯಿತು. ಶ್ರೀ ಮಠದ ಡಾಲಸ್ ಶಾಖೆಯು ಅಧಿಕೃತವಾಗಿ ಆರಂಭಗೊಂಡಿತು! ಅದೇ ಸಂದರ್ಭದಲ್ಲಿ ಶ್ರೀಗಳ ಜನ್ಮನಕ್ಷತ್ರ ಪ್ರಯುಕ್ತ ಗುರುವಂದನಾ ಕಾರ್ಯಕ್ರಮವೂ

ವಿಜೃಂಭಣೆಯಿಂದ ಸಂಪನ್ನಗೊಂಡಿತು. ಮತ್ತು ಶ್ರೀಗಳ ಚಾತುರ್ಮಾಸ್ಯನಿಮಿತ್ತ ಪೂರ್ವನಿಗದಿತವಾದ ವಿವಿಧ ಕಾರ್ಯಕ್ರಮಗಳ ಜೊತೆಗೆ ಶ್ರೀ ಮಠಕ್ಕೆ ಶಾಶ್ವತ ಸ್ಥಳವನ್ನು ಹುಡುಕುವ ಪ್ರಯತ್ನವೂ ಅದೇ ಶ್ರದ್ಧೆಯೊಂದಿಗೆ ಬಿರುಸಿನಿಂದ ಮುಂದುವರಿಯಿತು.

ತತ್ಸಮಯದಲ್ಲಿ ಸ್ಥಳೀಯ ಭಕ್ತರೊಬ್ಬರ ನೇರ ಸಹಕಾರ ಮತ್ತು ಅನೇಕರ ಸಹಭಾಗಿತ್ವದಲ್ಲಿ 'ಪ್ಲೇನೋ' ಎಂಬ ಪ್ರದೇಶದಲ್ಲಿ ಸುವ್ಯವಸ್ಥಿತವಾಗಿದ್ದ ಒಂದು ಮನೆಯನ್ನು ಖರೀದಿಸುವ ಪ್ರಸ್ತಾಪ ಶ್ರೀಗಳ ಸಮ್ಮುಖದಲ್ಲಿ ಸಮರ್ಪಿತವಾಯಿತು. ಅಲ್ಲಿಗೆ ಭೇಟಿ ನೀಡಿದ ಪೂಜ್ಯ ಶ್ರೀಪಾದರಿಗೂ ಆ ನಿವೇಶನವು ಶ್ರೀ ಮಠದ ಚಟುವಟಿಕೆಗಳಿಗೆ ಸೂಕ್ತವಾಗಿದೆ ಎಂದನ್ನಿಸಿತು. ತನ್ನಿಮಿತ್ತ ಸರ್ವ ಪ್ರಯತ್ನವನ್ನು ಮಾಡಿ ಆ ಮನೆಯನ್ನು ಖರೀದಿಸಿ ಅಲ್ಲಿ ಶ್ರೀಮಠವನ್ನು ಸಂಪೂರ್ಣ ವ್ಯವಸ್ಥೆಗಳೊಂದಿಗೆ ಪ್ರಾರಂಭಿಸುವ ಸಂಕಲ್ಪವನ್ನೂ ಮಾಡಲಾಯಿತು!

ಆ ಚಾತುರ್ಮಾಸ್ಯದ ಬಹುತೇಕ ಭಾಗವನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ, ಭಕ್ತರ ಮನೆಮನೆಗಳಿಗೆ ಭೇಟಿ, ಪ್ರವಚನ ಇತ್ಯಾದಿ ಅನೇಕ ಕಾರ್ಯಕ್ರಮಗಳೊಂದಿಗೆ ವರ್ಣಮಯವಾಗಿ ಕಳೆದ ಆ ಅವಿಸ್ಮರಣೀಯ ಕ್ಷಣಗಳಲ್ಲಿ ಸುತ್ತಮುತ್ತಲಿನ ಎಲ್ಲ ಭಕ್ತರು, ಸ್ವಯಂಸೇವಕರು ಸಾಕ್ಷಿಗಳಾದರು. ಅತ್ಯುತ್ಸಾಹದಿಂದ ಭಾಗವಹಿಸಿದರು. ತನ್ಮಧ್ಯದಲ್ಲಿ ಶ್ರೀಮಠದ ಸ್ಥಾಪನೆಯ ಮಹತ್ಕಾರ್ಯಕ್ಕೆ ಧನಸಂಗ್ರಹ ಮಾಡುವ ಪ್ರಯತ್ನವೂ ನಿರಂತರ ನಡೆಯಿತು. ಮುಂದಿನ ಕೆಲವೇ ತಿಂಗಳಲ್ಲಿ ಖರೀದಿಯ ಎಲ್ಲ ಪ್ರಕ್ರಿಯೆಗಳೂ ಸುಲಲಿತವಾಗಿ ಸಂಪನ್ನಗೊಂಡು ಆ ಮನೆಯನ್ನು ಖರೀದಿಸಿ ಬೇಕಾದ ಆಂತರಿಕ ಪರಿವರ್ತನೆಗಳು ಮತ್ತು ಶುದ್ಧೀಕರಣಾದಿ ಪ್ರಕ್ರಿಯೆಗಳನ್ನು ನೆರವೇರಿಸಲಾಯಿತು.

ನಂತರ ಜನವರಿ 19, 2019, ಪೌಷಯುಕ್ತ ಮಕರಮಾಸದ ಶುಕ್ಲ ಚತುರ್ದಶೀ ಸ್ಥಿರವಾಸರದಂದು ಶುಭಮುಹೂರ್ತದಲ್ಲಿ ಶ್ರೀ ಮಠದ ಡಾಲಸ್ ಶಾಖೆಯನ್ನು ಆದ್ದೂರಿಯಿಂದ ಉದ್ಘಾಟಿಸಲಾಯಿತು. ಪೂಜ್ಯ ಶ್ರೀಪಾದರ ಅಮೃತ ಹಸ್ತದಿಂದ

ಸಂಪನ್ನವಾದ ಉಡುಪಿ ಶ್ರೀಕೃಷ್ಣ, ಮುಖ್ಯಪ್ರಾಣ ಮತ್ತು ಶ್ರೀ ರಾಯರ ಸನ್ನಿಧಾನದ ಪ್ರಾಣಪ್ರತಿಷ್ಠಾಪನಾದಿ ವಿಧ್ಯುಕ್ತ ಕಾರ್ಯಗಳನ್ನು ಕಣ್ಣಾರೆ ಕಾಣುವ ಸೌಭಾಗ್ಯ ಡಾಲಸ್ ಮಹಾನಗರದ ಭಕ್ತರನ್ನು ಧನ್ಯರನ್ನಾಗಿಸಿತು. ತದನಂತರ ನಿರಂತರ ನಡೆದುಕೊಂಡು ಬರುತ್ತಿರುವ ನಿತ್ಯ ತ್ರಿಕಾಲ ಪೂಜೆ, ಭಜನೆ, ಪಾಠಪ್ರವಚನಗಳು, ಅನ್ನಸಂತರ್ಪಣೆ ಇತ್ಯಾದಿ ಅನೇಕ ಪುಣ್ಯಕಾರ್ಯಗಳಲ್ಲಿ ಸ್ಥಳೀಯ ಭಕ್ತರು ಶ್ರದ್ಧೆಯಿಂದ ಪಾಲ್ಗೊಂಡು ಕೃತಕೃತ್ಯರಾಗುತ್ತಿದ್ದಾರೆ. ತನ್ಮೂಲಕ ತಮ್ಮ ಮಕ್ಕಳಿಗೂ ದೊರಕಿದ ಸನಾತನ ಧರ್ಮ ಹಾಗೂ ಸಂಸ್ಕೃತಿಯ ಪ್ರಾತ್ಯಕ್ಷತೆಗಳಿಂದ ಸಂತೃಪ್ತರಾಗಿ ಇದೀಗ ನೆಮ್ಮದಿಯಿಂದ್ದಾರೆ. ಮತ್ತು ಈ ಸೌಭಾಗ್ಯವನ್ನು ತಮಗೆ ಕರುಣಿಸಿದ ಪೂಜ್ಯ ಶ್ರೀಪಾದರನ್ನು ನಿತ್ಯವೂ ಸ್ಮರಿಸಿ ಕೃತಜ್ಞತೆಗಳನ್ನು ಸಮರ್ಪಿಸುತ್ತಿದ್ದಾರೆ.

# ಗುರುದೃಷ್ಟಿ ಸುವರ್ಣವೃಷ್ಟಿ



**ಶ್ರೀ ವಾದಿರಾಜ ಭಟ್**
ಶ್ರೀ ಕೃಷ್ಣವೃಂದಾವನ, ಡಾಲಸ್, USA

**ಮಂ**ತ್ರಾಲಯ ಮಹಾಪ್ರಭುಗಳಾದ ಶ್ರೀ ರಾಘವೇಂದ್ರ ಗುರುಸಾರ್ವಭೌಮರನ್ನು ಸ್ತುತಿಸುವಾಗ ನಮಗೆ 'ಮೂಕೋऽಪಿ ಯತ್ಪ್ರಸಾದೇನ ಮುಕುಂದ ಶಯನಾಯತೇ ರಾಜರಾಜಾಯತೇ ರಿಕ್ತೋ ರಾಘವೇಂದ್ರಂ ತಮಾಶ್ರಯೇ' ಎಂಬ ಪ್ರಸಿದ್ಧ ಶ್ಲೋಕದ ನೆನಪಾಗುತ್ತದೆ. ಅದರಲ್ಲಿ 'ಶ್ರೀ ಗುರು ರಾಯರ ಅನುಗ್ರಹದಿಂದ ಮೂಕರೂ ವಾಚಾಳಿಗಳಾಗಿ ಬಿಡಬಹುದು ಭಿಕ್ಷುಕರೂ ರಾಜಾಧಿರಾಗಬಹುದು, ಹೀಗೆ ಅದ್ಭುತವಾದ ಪವಾಡಗಳೇ ಸಂಭವಿಸಬಹುದು, ಗುರ್ವನುಗ್ರಹದ ಮಹಿಮೆಯೇ ಹಾಗೆ' ಎನ್ನುತ್ತಾರೆ, ರಾಯರನ್ನು ಪ್ರತ್ಯಕ್ಷವಾಗಿ ಕಂಡ ಶ್ರೀ ಅಪ್ಪಣಾಚಾರ್ಯರು.

ಅದರಂತೆಯೇ ನಮ್ಮ ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರನ್ನು ಆಶ್ರಯಿಸಿದ ಮತ್ತು ಅವರಲ್ಲಿ ಪಾಠ ಕೇಳಿ ಅವರ ಉಪದೇಶಗಳನ್ನು ಶ್ರದ್ಧೆಯಿಂದ ಅನುಸರಿಸಿ ನಿತ್ಯ ದೇವರ ಸೇವೆ, ಧರ್ಮಾಚರಣೆಗಳನ್ನು ನಿಷ್ಠೆಯಿಂದ ಮಾಡಿ ಉದ್ಧಾರವಾದವರು ನನ್ನಂತವರು ಅದೆಷ್ಟೋ ಮಂದಿ. ಏನೂ ಗೊತ್ತಿಲ್ಲದವರು ವಿದ್ಯಾವಂತರಾದೆವು. ಸಾಮಾನ್ಯರಂತಿದ್ದವರು ಅನುಕೂಲಸ್ಥರೆನಿಸಿಕೊಂಡೆವು. ಹೀಗೆ ನಮ್ಮ ಗುರುಗಳ ಕೃಪಾದೃಷಿಗೆ ಪಾತ್ರರಾದ ಮೇಲೆ ನಮ್ಮ ಜೀವನದಲ್ಲೂ ಪವಾಡಸದೃಶ ಬದಲಾವಣೆಗಳಾದವು. ಹೀಗೆ ಶ್ರೀ ಸುಗುಣೇಂದ್ರರನ್ನು ಆಶ್ರಯಿಸಿದರೆ ಶ್ರೀರಾಘವೇಂದ್ರರ ಅನುಗ್ರಹವೂ ಆಗುತ್ತದೆ ಎನ್ನಬಹುದು.

ಅದಕ್ಕೆ ಪ್ರಬಲವಾದ ಕಾರಣವೂ ಇದೆ. ನಮ್ಮ ಗುರುಗಳು ಜಗದ್ಗುರು ಮಧ್ವಾಚಾರಾಯರ ಸಾಕ್ಷಾತ್ ಪರಂಪರೆಯಲ್ಲಿ ಬಂದ ಕಠಿಣ ಅನುಷ್ಠಾನವಂತ ಮಹಾತಪಸ್ವಿಗಳು, ಉಡುಪಿಯ ಕೃಷ್ಣನನ್ನು ಮುಟ್ಟಿ ಪೂಜೆ ಮಾಡಿದವರು ಮಾತ್ರವಲ್ಲ. ಮಹಾಮಹಿಮರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಅಂತರಂಗ ಭಕ್ತರೂ ಹೌದು.

ತಮ್ಮ ನಿತ್ಯದ ಸಂಸ್ಥಾನ ವೀರವಿಠ್ಠಲದೇವರ ಪೂಜೆಯ ಬಳಿಕ ಶ್ರೀ ರಾಯರ ಪ್ರತೀಕಕ್ಕೂ ತೀರ್ಥ, ಹಸ್ತೋದಕಾದಿಗಳನ್ನು ಸಮರ್ಪಿಸಿ ರಾಯರನ್ನು ಒಲಿಸಿಕೊಂಡವರು ಅವರು. ಮತ್ತು ದೇಶವಿದೇಶಗಲ್ಲಿ ವಿದೇಶಗಳಲ್ಲಿ ಶ್ರೀ ರಾಯರ ಮೃತ್ತಿಕಾ ವೃಂದಾವನಗಳನ್ನು ಪ್ರತಿಷ್ಠಾಪಿಸಿ ಎಲ್ಲೆಡೆ ಮಧ್ವ ಸಿದ್ಧಾಂತದ ಮತ್ತು ರಾಯರ ಗ್ರಂಥಗಳ ಪಾಠಪ್ರವಚನಾದಿಗಳು ನಡೆಯುವಂತೆ ವ್ಯವಸ್ಥೆ ಮಾಡಿದವರು. ಆದ್ದರಿಂದ ನಮ್ಮ ಗುರುಗಳಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರನ್ನು ಆಶ್ರಯಿಸಿದವರಿಗೆ, ಅನುಸರಿಸಿದವರಿಗೆ ಶ್ರೀರಾಘವೇಂದ್ರ ಸ್ವಾಮಿಗಳ ಅನುಗ್ರಹವೂ ಆಗಿರುವುದರಲ್ಲಿ ಯಾವ ಸಂಶಯವೂ ಇಲ್ಲ.

ಸುಮಾರು ಹದಿನೆಂಟು ವರ್ಷಗಳಿಂದ ನಾನು ಅಮೇರಿಕಾದಲ್ಲಿ ಗುರುಗಳ ಸೇವೆ ಮಾಡುತ್ತಿದ್ದೇನೆ. ಪ್ರಸ್ತುತ ಶ್ರೀಮಠದ ಡಾಲಸ್ ಶಾಖೆಯಲ್ಲಿ ಪ್ರಧಾನ ಅರ್ಚಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಗುರುಗಳ ಪ್ರೇರಣೆಯಿಂದ ಇಲ್ಲಿಯ ಜನರೂ ಧರ್ಮ ನಿಷ್ಠರಾಗಿ ಜಿಜ್ಞಾಸುಗಳಾಗಿ ಪರಿವರ್ತಿತರಾಗುವುದನ್ನು ಕಾಣಲು ಸಂತೋಷವಾಗುತ್ತದೆ. ನಿತ್ಯ ಪೂಜೆ, ಭಜನೆ, ಗೀತಾಪಾರಾಯಣಾದಿಗಳು ಇಲ್ಲಿಯೂ ನಡೆಯುತ್ತವೆ. ಇಂತಹ ಅನುಷ್ಠಾನಗಳಿಂದ ಜನರ ಇಷ್ಟಾರ್ಥಗಳೂ ನೆರವೇರಿ ಅವರ ಭಕ್ತಿ ಶ್ರದ್ಧೆಗಳು ಮತ್ತಷ್ಟು ಹೆಚ್ಚಾಗುತ್ತಿರುವುದನ್ನು ಗಮನಿಸುವಾಗ ನನಗೆ ಇನ್ನಷ್ಟು ಸಂತೋಷವಾಗುತ್ತದೆ. ನಮ್ಮ ಗುರುಗಳ ಬಗ್ಗೆ ಹೆಮ್ಮೆಯೆನಿಸುತ್ತದೆ.

ನಮ್ಮ ಗುರುಗಳ ಅನುಗ್ರಹವೆಂದರೇ ಹಾಗೆಯೇ. ತಮ್ಮ ನಡೆ, ನುಡಿ, ಮಾರ್ಗದರ್ಶನ ಮತ್ತು ಉಪದೇಶಗಳ ಮೂಲಕ ನಮ್ಮೊಳಗಿರುವ ಅಜ್ಞಾನದ ಕೊಳೆಯನ್ನು ಕಳೆಯುತ್ತಾರೆ. ಸುಜ್ಞಾನದ ಮೂಲಕ ಸನ್ಮಾರ್ಗವನ್ನು ತೋರಿಸಿಕೊಡುತ್ತಾರೆ. ಹಾಗೆ ನಮ್ಮ ಪಾಪಗಳು ಕಳೆದು ಪುಣ್ಯದ ಸಂಪಾದನೆಯಾಗುತ್ತದೆ. ದೇವರ ಅನುಗ್ರಹವಾಗುತ್ತದೆ. ಅದರಿಂದಾಗಿ ನಮ್ಮ ಕಷ್ಟಕಾರ್ಪಣ್ಯಗಳೆಲ್ಲವೂ ದೂರ ಸರಿದು ಸುಖ ಸಂಪತ್ತು ಪ್ರಾಪ್ತಿಯಾಗುತ್ತದೆ. ಹೀಗೆ ನಮ್ಮ ಗುರುಗಳ ಕೃಪಾದೃಷ್ಟಿಯಿಂದ ಶಿಷ್ಯರ ಮನೆಮನಗಳಲ್ಲಿ ಸುವರ್ಣ ವೃಷ್ಟಿಯಾಗುತ್ತದೆ. ಅಂತಹ ಶ್ರೇಷ್ಠ ಗುರುಗಳಾದ, ವಿಶ್ವವಂದ್ಯರಾದ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಸೇವೆಯನ್ನು ನಿತ್ಯ ನಿರಂತರ ಮಾಡುವ ಭಾಗ್ಯ ನಮ್ಮದಾಗಲಿ.



SRI KRISHNA VRUNDAVANA, SAN JOSE, CALIFORNIA. USA.

# ಸ್ಯಾನ್ ಹೋಸೆಯ ಶ್ರೀಕೃಷ್ಣ! ಅಮೇರಿಕಾದ ಅನ್ನಬ್ರಹ್ಮ!

**ಬ**ಹುಶಃ ನೀವೂ ಗಮನಿಸಿರಬಹುದು. ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ಹಂಚಿಕೆಯಾದ ವೀಡಿಯೋ ತುಣುಕೊಂದು ಬಹಳ ವೈರಲ್ ಆಗಿ ಎಲ್ಲರನ್ನೂ ನಿಬ್ಬೆರಗಾಗಿಸಿತ್ತು! ಮೊದಲು ನೋಡಿದವರಿಗೆ ಅದು ಅಮೇರಿಕಾದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರ ವೀಡಿಯೋ, ಭಾರತದ್ದಲ್ಲ ಎಂಬುವುದನ್ನು ನಂಬಲಸಾಧ್ಯವಾಗಿತ್ತು!

ಇಕ್ಕೆಲಗಳಲ್ಲಿ ಹಸಿರುಹುಲ್ಲು ಮತ್ತು ಹೂಗಿಡಗಳಿಂದ ಅಲಂಕೃತವಾದ ಸ್ವಚ್ಛವಾದ ಸುಂದರ ರಸ್ತೆ. ಬದಿಯಲ್ಲಿ ಶಿಸ್ತುಬದ್ಧವಾಗಿ ನಿಂತಿರುವ ಸುದೀರ್ಘವಾದ ಸರತಿಯ ಸಾಲು. ಸೀರೆ, ಪಂಚೆ ಮತ್ತು ಲಂಗಧಾವಣಿ ಇತ್ಯಾದಿಗಳನ್ನುಟ್ಟುಕೊಂಡ, ಹಣೆಯಲ್ಲಿ ಕುಂಕುಮ, ಗೋಪೀಚಂದನ, ತಿಲಕಾದಿಗಳಿಂದ ಭೂಷಿತರಾದ ನೂರಾರು ಮಂದಿ ಸಪರಿವಾರ ಸಂಪ್ರದಾಯಸ್ಥ ಸಜ್ಜನರು. ಅವರಲ್ಲಿ ಬಹಳ ಮಂದಿ ಪರಸ್ಪರ ಕನ್ನಡದಲ್ಲೇ ಮಾತನಾಡುತ್ತಿದ್ದಾರೆ. ಮಠದೊಳಗೆ ಪ್ರವೇಶಿಸಲು ತಮ್ಮ ಸರದಿಗಾಗಿ ತಾಳ್ಮೆಯಿಂದ ಕಾಯುತ್ತಿದ್ದಾರೆ.

ಒಳಗೆ ನೋಡಿದರೆ, ನಿಧಾನವಾಗಿ ಸಾಗುವ ಸರತಿಯ ಸಾಲು ನೇರ ಮಂದಿರದೊಳಗೆ ಹೋಗಿ, ದೇವರ ದರ್ಶನ ಮಾಡಿ, ನಮಸ್ಕರಿಸಿ, ತೀರ್ಥ ಮಂತ್ರಾಕ್ಷತೆಯನ್ನು ಸ್ವೀಕರಿಸಿ ವಿಶಾಲವಾದ ಭೋಜನಶಾಲೆಯತ್ತ ಸಾಗುತ್ತದೆ. ಅಲ್ಲಿ ಚುರುಕಿನಿಂದ ಓಡಾಡುತ್ತಿರುವ ಅನೇಕಮಂದಿ ಕಾರ್ಯಕರ್ತರಲ್ಲಿ ಕೆಲವರುಆಗ ತಾನೇ ಪ್ರಸಾದ ಸ್ವೀಕರಿಸಿ ಕೈತೊಳೆಯಲು ಹೊರಟ ಭಕ್ತಜನರಿಗೆ ಮಾರ್ಗದರ್ಶನ ಮಾಡಿಸುತ್ತಿದ್ದರೆ, ಮತ್ತೆ ಕೆಲವರು ಶ್ರದ್ಧೆಯಿಂದ ಎಂಜಲೆಲೆಯನ್ನೆತ್ತಿ ಮುಂದಿನ ಪಂಕ್ತಿಗಾಗಿ ನೆಲವನ್ನು ಸ್ವಚ್ಛಗೊಳಿಸುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಒಂದಷ್ಟು ಸ್ವಯಂಸೇವಕರು ಮುಂದಿನ ಪಂಕ್ತಿಗೆ ಭೋಜನ ಪ್ರಸಾದವನ್ನು ಬಡಿಸಲು ಮುತ್ತುಗದ ಹೊಸ ಪತ್ರಾವಳಿಗಳನ್ನು ನೆಲದಲ್ಲಿ ಹರಡಿ, ನಾನಾಪಾತ್ರೆ, ಸೌಟು, ಸಟ್ಟುಗಗಳ ಜೊತೆಗೆ ಅನ್ನ, ಹುಳಿ, ಸಾರು,

ಪಾಯಸಾದಿ ಹತ್ತಾರು ಬಗೆಯ ಭಕ್ಷ್ಯಗಳನ್ನು ಬಡಿಸಲು ಉತ್ಸುಕರಾಗಿ ನಿಂತಿದ್ದಾರೆ. ಹೀಗೆ ನೆರೆದ ಸಾವಿರಾರು ಮಂದಿಗೆ ನಾಲ್ಕೈದು ಪಂಕ್ತಿಗಳಲ್ಲಿ ಭೋಜನದ ವ್ಯವಸ್ಥೆ ಅಚ್ಚುಕಟ್ಟಾಗಿ ಮುಂದುವರಿಯುತ್ತದೆ. ಶಾಸ್ತ್ರೀಯವಾದ ದೇವರ ದರ್ಶನ ಮತ್ತು ಪ್ರಸಾದದಿಂದ ಸಂತೃಪ್ತರಾದ ಜನರು, ಧನ್ಯತಾಭಾವದಿಂದ ದೇವರ ಸಾನ್ನಿಧ್ಯದಲ್ಲಿ ಸ್ವಲ್ಪಹೊತ್ತು ನಿರಾಳವಾಗಿ ಕುಳಿತು, ಮತ್ತೆ ಮತ್ತೆ ನಮಸ್ಕರಿಸಿ, ತಮ್ಮ ವಾಹನದ ಬಳಿಗೆ ಸಾಗಿ ಮುಂದೆ ನೆಮ್ಮದಿಯಿಂದ ಮನೆಯ ಕಡೆ ಹೊರಡುತ್ತಾರೆ.

ಈ ದೃಶ್ಯ ಅಮೇರಿಕಾದ ಪಶ್ಚಿಮ ಕರಾವಳಿಯಲ್ಲಿರುವ ಕ್ಯಾಲಿಫೋರ್ನಿಯಾ ರಾಜ್ಯದ 'ಬೇ ಏರಿಯಾ' ಎಂದೇ ಪ್ರಸಿದ್ಧವಾದ ಕೊಲ್ಲಿ ಪ್ರದೇಶ 'ಸ್ಯಾನ್ ಹೋಸೆ'ಯಲ್ಲಿರುವ ಶ್ರೀಪುತ್ತಿಗೆ ಮಠದ ಶಾಖೆ 'ಶ್ರೀ ಕೃಷ್ಣವೃಂದಾವನ'ದಲ್ಲಿ ಕಂಡುಬಂದದ್ದು! ಯುಗಾದಿ, ಸಂಕ್ರಾಂತಿ, ರಾಮನವಮಿ, ರಾಯರ ಆರಾಧನೆ, ಕೃಷ್ಣಲೀಲೋತ್ಸವ, ಗಣೇಶ ಚತುರ್ಥಿ, ನವರಾತ್ರಿ ಇತ್ಯಾದಿ ಎಲ್ಲಹಬ್ಬಗಳ ಸಮಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವಂತದ್ದು. ಅಲ್ಲಿನ ನೆಲದಲ್ಲೂ ನಮ್ಮ ಸಮಸ್ತ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ವಿಜೃಂಭಣೆಯ ಸಂಭ್ರಮಾಚರಣೆಗೆ ಬೆಲೆ ಕಟ್ಟಲಾಗದ ನೆಲೆ ಕಲ್ಪಿಸಿಕೊಟ್ಟವರು ಪರಮಪೂಜ್ಯ ಪುತ್ತಿಗೆ ಶ್ರೀಪಾದರು!

'ಸಿಲಿಕಾನ್ ವ್ಯಾಲಿ' ಎಂದೇ ಕರೆಯಲ್ಪಡುವ ಈ ಸುಂದರ ಪ್ರದೇಶದ ವಾತಾವರಣ ಬಹುತೇಕ ನಮ್ಮ ಬೆಂಗಳೂರನ್ನೇ ಹೋಲುತ್ತದೆ. ಮಾಹಿತಿ ತಂತ್ರಜ್ಞಾನದ ರಾಜಧಾನಿಯೆನಿಸಿ ವಿಶ್ವಪ್ರಸಿದ್ಧವಾದ ಫೆಸಿಫಿಕ್ ಕರಾವಳಿಯ ಈ ಮುಖ್ಯ ಪ್ರದೇಶದಲ್ಲಿ ಜಗತ್ತಿನಾದ್ಯಂತದ ಅನೇಕ ಐಟಿ ಕಂಪೆನಿಗಳ ಪ್ರಧಾನ ಕಛೇರಿಗಳಿವೆ. ಐಟಿ ಕ್ಷೇತ್ರದ ಸರಾಸರಿ ಸುಮಾರು ನಾಲ್ಕು ಲಕ್ಷಕ್ಕೂ ಅಧಿಕ ಪ್ರಮುಖ ಉದ್ಯೋಗಗಳು ಉದ್ಭವವಾಗುವುದೇ ಈ 'ಸಿಲಿಕಾನ್ ವ್ಯಾಲಿಯಿಂದ' ಎಂದು ಹೇಳುತ್ತಾರೆ. ಅನೇಕ ಮಂದಿ ಭಾರತೀಯರು, ತಂತ್ರಜ್ಞಾನ ನಿಪುಣರು ಕೆಲವು ದಶಕಗಳ ಹಿಂದೆಯೇ ಇಲ್ಲಿ ಬಂದು ನೆಲೆಸಿದ್ದಾರೆ. ಇನ್ನೂ ಬರುತ್ತಲೇ ಇದ್ದಾರೆ. ಅದರಲ್ಲೂ ಕನ್ನಡಿಗರು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬರುವ ಈ ಪ್ರದೇಶವನ್ನುಅಮೇರಿಕಾದ ಬೆಂಗಳೂರು ಎಂದೇ

ಕರೆಯುತ್ತಾರೆ.ಅದೇರೀತಿಯ ಪರಿಸರ, ಐಟಿ ಕ್ಷೇತ್ರದಲ್ಲಾಗುತ್ತಿರುವ ಅಭಿವೃದ್ಧಿ ಇತ್ಯಾದಿ ಪರಸ್ಪರ ಸಾಮ್ಯತೆಯ ಅನೇಕ ಕಾರಣಗಳಿಂದಾಗಿ ಇದೀಗ ನಮ್ಮ ಬೆಂಗಳೂರು ಕೂಡ ಪೌರಾತ್ಯ ದೇಶಗಳ ಐಟಿ ರಾಜದಾನಿಯೆಸಿನಿಕೊಂಡು, ಏಷ್ಯಾದ ಸಿಲಿಕಾನ್ ವ್ಯಾಲಿ ಎಂಬ ಹೆಸರನ್ನು ಗಳಿಸಿಕೊಂಡಿರುವುದು ಸಮಗ್ರ ಕನ್ನಡಿಗರಿಗೆ ಹೆಮ್ಮೆಯ ಸಂಗತಿ!

ನಿಮಗೆ ಗೊತ್ತಿರುವಂತೆ 'ಸಿಲಿಕಾನ್' ಎನ್ನುವ ಈ ಭೌತಿಕವಸ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಅತ್ಯಂತ ಅಗತ್ಯವೆನಿಸಿದ ಮೂಲ ಧಾತು. ಜಗತ್ತಿನ ವಿಜ್ಞಾನ ಈವತ್ತಿಗೆ ಇಷ್ಟು ಮುಂದುವರಿಯಬೇಕಿದ್ದರೆ ಅದರಲ್ಲಿ ಈ ಸಿಲಿಕಾನ್‌ನ ಕೊಡುಗೆ ಮಹತ್ತರವಾದದ್ದು. ಆದರೆ ಈ ಸಿಲಿಕಾನ್ ಮಾತ್ರ ನಮಗೆ ಪ್ರಕೃತಿಯಿಂದಲೇ ಲಭಿಸಬೇಕು. ಮಹಾ ಬುದ್ಧಿಶಾಲಿಗಳೆನಿಸಿದ ಪ್ರಖ್ಯಾತ ವಿಜ್ಞಾನಿಗಳ ಎಂತಹ ಪರಿಶ್ರಮ, ಸಂಶೋಧನೆಗಳಿದ್ದರೂ ಭಗವನ್ನಿರ್ಮಿತವಾದ ಇಂತಹ ಮೂಲಸೌಕರ್ಯಗಳ ಮೇಲೆಯೇ ನಡೆಯಬೇಕಲ್ಲದೆ, ಈ ಭೂಮಿಯಲ್ಲಿರುವ ಇಂತಹ ಅನೇಕ ವೈವಿಧ್ಯಮಯ ಧಾತುಗಳ ಒಂದು ಸಣ್ಣ ತುಣುಕನ್ನು ಸೃಷ್ಟಿಸುವ ಯೋಗ್ಯತೆಯೂ ನಮಗಿಲ್ಲ ಎನ್ನುವುದು ಪರಮಸತ್ಯ. ಇದನ್ನರಿತ ಆಧುನಿಕ ವೈಜ್ಞಾನಿಕಯುಗದ ಅನೇಕ ವಿದ್ಯಾವಂತರು, ಬುದ್ಧಿವಂತರು ಭಗವಂತನ ಕರ್ತೃತ್ವ ಶಕ್ತಿಗೆ ಶರಣಾಗಿ ಆಸ್ತಿಕರಾಗಿದ್ದಾರೆ. ಅನುಷ್ಠಾನನಿಷ್ಠರಾಗಿ ವೈದಿಕ ವಿಜ್ಞಾನದ, ತತ್ವಜ್ಞಾನದ ಅಧ್ಯಯನಾವಕಾಶಕ್ಕೆ ಆಸಕ್ತರಾಗಿದ್ದಾರೆ.

ಬೇ ಏರಿಯಾ ನಿವಾಸಿಗಳಾದ ಇಂತಹ ನೂರಾರು ವಿದ್ಯಾವಂತ ಮತ್ತು ಶ್ರದ್ಧಾನುಷ್ಠಾನವಂತ ಭಕ್ತಜನತೆಯ ಒತ್ತಾಯಪೂರ್ವಕ ನಿರಂತರ ಪ್ರಾರ್ಥನೆ ಪೂಜ್ಯ ಪುತ್ತಿಗೆ ಶ್ರೀಪಾದರ ಚಿತ್ತವನ್ನು ಅತ್ತ ಸೆಳೆಯಿತು. ಅದು 2013ನೇ ಇಸವಿಯ ಮಧ್ಯಭಾಗ. ಫೀನಿಕ್ಸ್, ನ್ಯೂಜೆರ್ಸಿ, ಲಾಸ್ ಏಂಜಲೀಸ್ ಮತ್ತು ಹ್ಯೂಸ್ಟನ್ ನಗರಗಳಲ್ಲಿ ತಮ್ಮ ಶ್ರೀ ಮಠದ ಶಾಖೆಗಳನ್ನು ಸ್ಥಾಪಿಸಿ,ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದ ಪೂಜ್ಯರನ್ನು ಇದೀಗ ಈ ಸುಂದರವಾದ ಸಿಲಿಕಾನ್ ವ್ಯಾಲಿಯೇ ಸ್ವತಃ ಕೈಮುಗಿದು ಉಡುಪಿಯ ಶ್ರೀ ಕೃಷ್ಣನನ್ನು ತನ್ನೊಡಲಿನಲ್ಲಿ ನೆಲೆನಿಲ್ಲಿಸುವ ಮನಸ್ಸು ಮಾಡಬೇಕು ಎಂದು

ಬೇಡಿಕೊಂಡತ್ತಿತ್ತು. ಅಷ್ಟರಲ್ಲೇ ಅಲ್ಲಿನ ಭಕ್ತ ಜನತೆ ಶ್ರೀ ಮಠದ ಪ್ರತಿಷ್ಠಾಪನೆಗೋಸ್ಕರ ಒಂದೆರಡು ಸೂಕ್ತ ನಿವೇಶನಗಳನ್ನುನೋಡಿಟ್ಟಿದ್ದರಿಂದ ಶ್ರೀಗಳ ಕಾರ್ಯ ಸುಗಮವಾಯಿತು. ನಗರದ ಮುಖ್ಯಭಾಗದಲ್ಲಿರುವ ಪ್ರಾಚೀನ ಚರ್ಚ್ ಒಂದು ಮಾರಾಟಕ್ಕೆ ನಿದ್ಧವಾಗಿತ್ತು. ಸುನೋಲ್ ಸ್ಟ್ರೀಟ್ ಎಂಬ ಮುಖ್ಯರಸ್ತೆಗೆ ತಾಗಿಕೊಂಡಿರುವ ಈ ಜಾಗವನ್ನು ಖರೀದಿಸಿ, ಬೇಕಾದ ಮಾರ್ಪಾಟುಗಳನ್ನು ಮಾಡಿ, ಶುದ್ಧೀಕರಸಿ ಶ್ರೀ ಮಠವನ್ನಾಗಿ ಪರಿವರ್ತಿಸುವ ಪುಣ್ಯಕಾರ್ಯ ಅನತಿ ಕಾಲದಲ್ಲಿಯೇ ಸಂಪನ್ನಗೊಂಡಿತು.

ಯಾವ ಸ್ಥಳದಲ್ಲಿ ನಿತ್ಯಪೂಜೆ, ಹೋಮ, ಹರಿನಾಮ ಸಂಕೀರ್ತನೆ, ವೇದಘೋಷ, ನೂರಾರು ಜನರಿಗೆ ಅನ್ನ ದಾನ, ವಿದ್ಯಾದಾನಾದಿಗಳು ನಿರಂತರ ನಡೆಯುತ್ತವೋ ಅದು ಕ್ಷೇತ್ರವೆನಿಸಿಕೊಳ್ಳುತ್ತದೆ. ಭಗವತ್ಸಾನ್ನಿಧ್ಯ ಜಾಗ್ರತವಾಗಿ ಅಲ್ಲಿ ಬಂದು ಪ್ರಾರ್ಥನೆ ಸಲ್ಲಿಸುವ ಭಕ್ತರಿಗೆ ಅತಿಶೀಘ್ರದಲ್ಲಿ ಮನೋಽಭೀಷ್ಟಪ್ರಾಪ್ತಿಯ ಅನುಗ್ರಹವಾಗುತ್ತದೆ. ಅರ್ಚಕವೃಂದದ ಶ್ರದ್ಧಾಪೂರ್ವಕ ನಿಃಸ್ವಾರ್ಥ ಸೇವಾಪರಿಶ್ರಮ ಮತ್ತು ಸ್ವಯಂಸೇವಕರ ನಿಸ್ವಾರ್ಥ ಸೇವೆಯ ಪರಿಣಾಮವಾಗಿ ಸ್ಯಾನ್ ಹೋಸೆಯ ಶ್ರೀ ಕೃಷ್ಣವೃಂದಾವನವೂ ಇಂತಹ ಅನೇಕ ಅಪೂರ್ವ ಪವಾಡಗಳಿಗೆ ಸಾಕ್ಷಿಯಾಗಿದೆ. ಸ್ವರ್ಣಕವಚ, ಕಿರೀಟ ಮತ್ತು ಅನೇಕ ರತ್ನಾಭರಣಗಳಿಂದ ಶೋಭಿತನಾದ ಪುಟ್ಟ ವಿಗ್ರಹರೂಪದಅನ್ನ ಬ್ರಹ್ಮ ಉಡುಪಿಯ ಶ್ರೀಕೃಷ್ಣ, ತನ್ನನ್ನು ಸಂಪೂರ್ಣವಾಗಿ ನಂಬಿ ಶರಣಾಗತರಾದ ಸದ್ಭಕ್ತರಿಗೆ ಕನಸಿನಲ್ಲೂ ಕಾಣಿಸಿಕೊಂಡು ಮಾರ್ಗದರ್ಶನ ನೀಡಿದ ಅನೇಕ ಅದ್ಭುತ ಅನುಭವಗಳೂ ಇದೀಗ ದಾಖಲಾಗುತ್ತಿವೆ.

# ಗುರುಗಳ ಸರಳತೆ



**ಶ್ರೀ ಶಂಕರನಾರಾಯಣ ಭಟ್**
ಶ್ರೀಕೃಷ್ಣವೃಂದಾವನ, ಸ್ಯಾನ್ ಹೋಸೆ, USA

**ನಾ**ನು ನನ್ನ ಜೀವಮಾನದಲ್ಲಿ ಹತ್ತಿರದಿಂದ ಕಂಡ ಎಷ್ಟೋ ಮಹನೀಯರಲ್ಲಿ ನಿಃಸಂದೇಹವಾಗಿ ನನಗೆ ಸರ್ವಶ್ರೇಷ್ಠರೆಂದೆನಿಸಿವರು ನನ್ನ ಗುರುಗಳು, ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. ಅದಕ್ಕೆ ಕಾರಣಗಳು ಹಲವು. ನನ್ನನ್ನು ಬಹಳವಾಗಿ ಸೆಳೆದದ್ದು ಅವರ ಸರಳತೆ. ಜ್ಞಾನದಲ್ಲಿ, ಅನುಷ್ಠಾನದಲ್ಲಿ, ಸಾಧನೆಯಲ್ಲಿ, ಬುದ್ಧಿವಂತಿಕೆಯಲ್ಲಿ, ಲೋಕವ್ಯವಹಾರಗಳಲ್ಲಿ ಮತ್ತು ಔದಾರ್ಯ, ವೈರಾಗ್ಯಾದಿ ಅನೇಕ ಸದ್ಗುಣಗಳಲ್ಲಿ ಅವರನ್ನು ಮೀರಿಸುವ ಇನ್ನೊಬ್ಬರು ಗುರುಗಳು ಪ್ರಸ್ತುತ ಕಾಲಮಾನದಲ್ಲಿ ನಮಗೆ ಇನ್ನೊಬ್ಬರು ಸಿಗಲಿಕ್ಕಿಲ್ಲ. ಅವರ ನಿತ್ಯದ ಕಾರ್ಯಬಾಹುಳ್ಯ, ಸಮಯಾಭಾವ ಇತ್ಯಾದಿ ಅನೇಕ ಸವಾಲುಗಳ ನಡುವೆಯೂ ಒಬ್ಬ ಸರ್ವಸಾಮಾನ್ಯ ಶಿಷ್ಯನನ್ನು ಕಂಡಾಕ್ಷಣ ಬಳಿಕರೆದು ಅತ್ಯಂತ ಆತ್ಮೀಯವಾಗಿ ಮಾತನಾಡಿಸುವ ಅವರ ಆ ಮೃದುತ್ವ ಮತ್ತು ಸರಳತೆಗೆ ಯಾರಾದರೂ ಮನಸೋಲಲೇಬೇಕು. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ"

ಕಳೆದ ಸುಮಾರು ಇಪ್ಪತ್ತೊಂದು ವರ್ಷಗಳಿಂದ ಶ್ರೀ ಮಠದ ಮತ್ತು ಶ್ರೀಗಳ ಯಥಾಶಕ್ತಿ ಸೇವೆಯನ್ನು ಅಮೇರಿಕ, ಆಸ್ಟ್ರೇಲಿಯಾ ಮತ್ತು ಕೆನಡ ದೇಶಗಳಲ್ಲಿ ಸಲ್ಲಿಸುವ ಭಾಗ್ಯವನ್ನು ಪಡೆದವನು ನಾನು. ಜೊತೆಗೆ ವಿದೇಶಗಳಲ್ಲಿ ಶ್ರೀಕೃಷ್ಣ ಮಂದಿರಗಳನ್ನು ಪ್ರತಿಷ್ಠಾಪಿಸುವ ಪ್ರಯತ್ನಗಳಲ್ಲಿ ಪೂಜ್ಯ ಶ್ರೀಪಾದರು ಎದುರಿಸಿದ ಚಿತ್ರ ವಿಚಿತ್ರ ಸವಾಲುಗಳನ್ನು ಕಣ್ಣಾರೆ ಕಂಡವನು. ಎಂತಹ ಸಮಸ್ಯೆಗಳೇ ಎದುರಾದರೂ ತಾಳ್ಮೆ ತಪ್ಪದೆ ಜಾಣ್ಮೆಯಿಂದ ಅವುಗಳನ್ನು ಬಗೆಹರಿಸಿಕೊಂಡು, ಎಲ್ಲರನ್ನೂ

ಜೊತೆಗೂಡಿಸಿಕೊಂಡು ಯಶಸ್ಸನ್ನು ಗಳಿಸುವ ಶ್ರೀಗಳ ಚಾಕಚಕ್ಯತೆಯನ್ನು ಕಂಡು ನಿಬ್ಬೆರಗಾದವನು.

ಪೂಜ್ಯರು ತೀರಾ ಸಣ್ಣ ಸಣ್ಣ ವಿಷಯಗಳಿಂದ ಹಿಡಿದು ದೊಡ್ಡ ದೊಡ್ಡ ವ್ಯವಹಾರಗಳ ಪರ್ಯಂತ ಯಾವುದನ್ನೂ ನಿರ್ಲಕ್ಷಿಸಿದವರಲ್ಲ. ಯಾರನ್ನೂ ಕಡೆಗಣಿಸಿದವರಲ್ಲ. ಎಂತಹ ಸಂದರ್ಭವೇ ಇರಲಿ, ತಮ್ಮ ದೃಢ ನಿಲುವು ಮತ್ತು ಸರ್ವಪ್ರಯತ್ನಗಳಲ್ಲಿ ಯಾವತ್ತೂ ರಾಜಿಮಾಡಿಕೊಳ್ಳದ ಪೂಜ್ಯ ಶ್ರೀಪಾದರನ್ನು ಒಂದು ಕ್ಷಣದ ಔದಾಸೀನ್ಯವಾಗಲೀ, ಉಪೇಕ್ಷೆಯಾಗಲೀ ಬಾಧಿಸಿದ್ದನ್ನು ಕಂಡವರಿಲ್ಲ. ವಿಶ್ವದಾದ್ಯಂತ ಮಠಗಳ ಸ್ಥಾಪನೆ, ವೈದಿಕ ವಿದ್ಯಾಸಂಸ್ಥೆಗಳ ನಿರ್ವಹಣೆ, ವಿಶ್ವಸಂಸ್ಥೆಯಲ್ಲಿ ಭಾಷಣ, ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪಾಲ್ಗೊಳ್ಳುವಿಕೆ ಇತ್ಯಾದಿ ಎಷ್ಟೆಷ್ಟು ದೊಡ್ಡ ಸಾಧನೆಗಳನ್ನು ಮಾಡಿದವರಾದರೂ ಎಲ್ಲಿಯೂ ತನ್ನಿಂದ ಇದು ಸಾಧ್ಯವಾಯಿತು ಎಂಬ ಹಮ್ಮನ್ನು ತೋರಿಸಿದವರಲ್ಲ. ಹಾಗೆಯೇ ಭಕ್ತವೃಂದಕ್ಕೆ, ಶಿಷ್ಯವರ್ಗಕ್ಕೆ ಸನ್ಮಾರ್ಗದರ್ಶನ ನೀಡಲು ಸದಾ ಲಭ್ಯವಿರುವ ಪೂಜ್ಯ ಶ್ರೀಪಾದರನ್ನು ಅವರೆಲ್ಲಿದ್ದರೂ ಭೇಟಿಮಾಡುವುದು, ಮಾತನಾಡಿಸುವುದು ಯಾರಿಗೂ ಕಷ್ಟವಲ್ಲ.

ಅಂತಹ ಪರಮ ಕರುಣಾಸಂಪನ್ನ ಗುರುಗಳನ್ನು ಮತ್ತು ಅವರ ಸಂಪೂರ್ಣ ಅನುಗ್ರಹವನ್ನು ಪಡೆದ ನಾವೇ ಧನ್ಯರು. ಅವರ ಆ ಸರಳತೆಯೇ ಮೊದಲಾದ ಅನೇಕ ಸದ್ಗುಣಗಳ ಪೈಕಿ ಯತ್ಕಿಂಚಿತ್ತಾದ್ದರೂ ನಮಗೆ ಸಿದ್ಧಿಸಲಿ ಮತ್ತು ತನ್ಮೂಲಕ ನಾವೂ ದೇವರ ಕೃಪೆಗೆ ಪಾತ್ರರಾಗುವಂತಾಗಲಿ ಎಂಬುವುದಾಗಿ ಪೂಜ್ಯ ಶ್ರೀಪಾದರ ಅಂತರ್ಯಾಮಿಯಾದ ಶ್ರೀವೇದವ್ಯಾಸರೂಪಿ ಪರಮಾತ್ಮನಲ್ಲಿ ಸರ್ವದಾ ನನ್ನ ಪ್ರಾರ್ಥನೆ.

●




SHRI KRISHNA VRUNDAVANA, ATLANTA, GEORGIA. USA

# ಅಟ್ಲಾಂಟಕ್ಕೆ ಉಡುಪಿ ಕೃಷ್ಣನ ಆಗಮನ ಮತ್ತು ಗುರುರಾಯರ ವೃಂದಾವನ

**ಅ**ಮೇರಿಕ ದೇಶದಲ್ಲಿರುವ ಸುಂದರ ರಾಜ್ಯಗಳಲ್ಲೊಂದು ಜಾರ್ಜಿಯಾ. ರುಚಿಕರವಾದ 'ಪೀಚ್' ಹಣ್ಣುಗಳನ್ನು ಇಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ಈ ರಾಜ್ಯಕ್ಕೆ 'ಪೀಚ್ ಸ್ಟೇಟ್' ಎಂಬ ವಿಶಿಷ್ಟವಾದ ಹೆಸರು. ಇಕ್ಕೆಲಗಳಲ್ಲಿಯೂ ನಯನ ಮನೋಹರ ರಸಭರಿತ ಸ್ವಾದಿಷ್ಟ ಪೀಚ್ ಹಣ್ಣುಗಳಿಂದ ತುಂಬಿ ತುಳುಕುತ್ತಾ, ತಂಗಾಳಿಯ ತೂಗುವಿಕೆಗೆ ನವಿರಾಗಿ ಬಳುಕುತ್ತಿರುವ ಸುಂದರ ವೃಕ್ಷಗಳುಳ್ಳ ಅನೇಕ ಸುದೀರ್ಘ ರಸ್ತೆಗಳು ಕಾಣಸಿಗುವುದು ಈ 'ಜಾರ್ಜಿಯಾ' ರಾಜ್ಯದ ವೈಶಿಷ್ಯಗಳಲ್ಲೊಂದು. ಆ ಹಣ್ಣುಗಳನ್ನು ತಿನ್ನಲು ಬರುವ ಅಳಿಲುಗಳು, ಮೊಲಗಳು ಮತ್ತು ಬಣ್ಣ ಬಣ್ಣದ ಹಕ್ಕಿಗಳ ಮತ್ತು ಸ್ಥಳೀಯ ಅನೇಕ ಸಣ್ಣಪುಟ್ಟ ಆಕರ್ಷಕ ವನ್ಯ ಜೀವಿಗಳ ಗುಂಪು ಇದೇ ಜಾರ್ಜಿಯಾದ ಮತ್ತೊಂದು ಆಕರ್ಷಣೆ.

ಅಲ್ಲಿನ ಪ್ರಮುಖ ನಗರಗಳಲ್ಲಿ ಪ್ರಖ್ಯಾತವಾದದ್ದು ಅಟ್ಲಾಂಟ. ಅಮೇರಿಕಾ ದೇಶದ ಪ್ರಸಕ್ತ ಅತ್ಯಂತ ದೊಡ್ಡ ಮತ್ತು ಜನನಿಬಿಡ ವಿಮಾನ ನಿಲ್ದಾಣವಿರುವುದು ಇದೇ ಅಟ್ಲಾಂಟ ಮಹಾನಗರದಲ್ಲಿ. ಬಹುತೇಕ ದಟ್ಟಾರಣ್ಯದಿಂದ ಕೂಡಿದ ಈ ಭೂಪ್ರದೇಶದ ಪ್ರಾಕೃತಿಕ ಸಹಜ ಸೌಂದರ್ಯವೂ ಅತ್ಯಾಕರ್ಷಕ. ಇಲ್ಲಿರುವ 'ಸ್ಟೋನ್ ಮೌಂಟೈನ್ ಪಾರ್ಕ್' ಎಂಬ ಪ್ರವಾಸಿ ಸ್ಥಳವಂತೂ ವಿಶ್ವ ವಿಖ್ಯಾತ. ಮಧ್ಯದಲ್ಲಿ ಪರ್ವತ ಸದೃಶವಾದ ಬೃಹದಾಕಾರದ, ಸುಮಾರು ಎಂಟು ಮೈಲು ವಿಸ್ತೀರ್ಣದ ಏಕೈಕ ಬಂಡೆಕಲ್ಲು ಮತ್ತು ಸುತ್ತಲಿನ ಹರಿದ್ವರ್ಣದ 'ಜಾರ್ಜಿಯಾ ಮೌಂಟೈನ್' ಎಂಬ ಬೆಟ್ಟಸಮೂಹಗಳಿಂದ ಕೂಡಿದ ಈ ಪ್ರದೇಶ ಸಮುದ್ರ ಮಟ್ಟಕ್ಕಿಂತ ಸುಮಾರು ಸಾವಿರದ ಏಳುನೂರು ಅಡಿಗಳಷ್ಟು ಎತ್ತರದಲ್ಲಿದೆ. ಸಾಕಷ್ಟು ಉತ್ತಮ ವ್ಯವಸ್ಥೆಗಳೊಂದಿಗೆ ಈ ಕಲ್ಲುಬೆಟ್ಟವನ್ನು ಅಭಿವೃದ್ಧಿ ಪಡಿಸಿ ಜನಾಕರ್ಷಕ ತಾಣವನ್ನಾಗಿಸಿದ್ದು ಮತ್ತು ಕಟ್ಟುನಿಟ್ಟಿನ ಅನೇಕ ವಿಶಿಷ್ಟ ನಿಯಮಗಳೊಂದಿಗೆ ಪರಿಶುದ್ಧ ಪರಿಸರ ರಕ್ಷಣೆಗೆ ಮಹತ್ವ ನೀಡಿದ್ದು ಸ್ಥಳೀಯ ಆಡಳಿತ ವ್ಯವಸ್ಥೆಯ ಸಾತ್ವಿಕ ಮುತುವರ್ಜಿಯನ್ನು ಎತ್ತಿತೋರಿಸುತ್ತದೆ.

ಭಗವನ್ನಿರ್ಮಿತವಾದ ಆ ಬೃಹತ್ ಬಂಡೆಯ ಮೇಲೆ ನೂರು ವರ್ಷಗಳ ಹಿಂದೆಯೇ ಕಲಾವಿದರು ರಚಿಸಿದ ಸುಂದರ ಚಿತ್ತಾರಗಳು ಇಂದಿಗೂ ಪ್ರವಾಸಿಗರ ಗಮನ ಸೆಳೆಯುತ್ತವೆ.

ಹೆಚ್ಚೇನೂ ಸೆಖೆಯಿಲ್ಲದ ಮತ್ತು ಹಿಮ ಬೀಳುವಷ್ಟು ವಿಪರೀತ ಚಳಿಯೂ ಇಲ್ಲದ ಈ ಪ್ರದೇಶ ಇದೀಗ ಜನರ ವಾಸ್ತವ್ಯಕ್ಕೆ ಅತ್ಯಂತ ಪ್ರಶಸ್ತವೆನಿಸಿ ಜನಪ್ರಿಯವಾಗಿದೆ. ಕಳೆದೆರಡು ದಶಕಗಳಲ್ಲಿ ಕೋಟ್ಯಂತರ ವಲಸಿಗರು ಇಲ್ಲಿ ಬಂದು ಮನೆ ಮಾಡಿಕೊಂಡು ನೆಲೆಸಿ ಬಿಟ್ಟಿದ್ದಾರೆ. ಇಲ್ಲಿ ಬರುತ್ತಿರುವ ಭಾರತೀಯರ ಸಂಖ್ಯೆಯಂತೂ ಇನ್ನೂ ಹೆಚ್ಚುತ್ತಲೇ ಇದೆ. ಅದರಲ್ಲಿಯೂ ಗುಜರಾತಿ ಮತ್ತು ತೆಲುಗು ಭಾಷಿಗರ ಸಹಸ್ರಾರು ಕುಟುಂಬಗಳು ಇಲ್ಲಿ ಬಂದು ನೆಲೆನಿಂತಿವೆ. ಕನ್ನಡಿಗರೂ ಸಾವಿರಾರು ಮಂದಿಯಿದ್ದಾರೆ. ಹತ್ತಾರು ಬೃಹತ್ ಹಿಂದೂ ದೇಗುಲಗಳು, ದೇಸೀ ಉಪಾಹಾರ ಮಂದಿರಗಳು, ಕಲ್ಯಾಣ ಮಂಟಪಗಳು ಮತ್ತು ಅನೇಕ ಭಾರತೀಯ ದಿನಸಿ ಅಂಗಡಿಗಳನ್ನೂ ಇಲ್ಲಿ ನೋಡಬಹುದು.

ಅಮೇರಿಕಾದ ಉದ್ದಗಲಕ್ಕೆ ಅನೇಕ ಬಾರಿ ಸಂಚರಿಸಿದ ಪರಮ ಪೂಜ್ಯ ಪುತ್ತಿಗೆ ಶ್ರೀಪಾದರನ್ನು 1997 ರಿಂದ 2017 ರ ನಡುವಿನ ಎರಡು ದಶಕಗಳ ಅವಧಿಯಲ್ಲಿ ನಾಲ್ಕೈದು ಸಲ ಜಾರ್ಜಿಯಾದ ಭಕ್ತರೂ ಭವ್ಯವಾಗಿ ಸ್ವಾಗತಿಸಿದ್ದರು. ಪಕ್ಕದ ಸೌತ್ ಕೆರೋಲಿನ, ಫ್ಲೋರಿಡಾ, ಅಲಬಾಮ ಇತ್ಯಾದಿ ರಾಜ್ಯಗಳಿಗೆ ಕೇಂದ್ರದಂತಿರುವ ಈ ಅಟ್ಲಾಂಟ ಮಹಾನಗರದಲ್ಲಿ ಶ್ರೀ ಮಠದ ಶಾಖೆಯನ್ನು ಆರಂಭಿಸಬೇಕೆಂಬುದು ಅವರ ಪ್ರತಿಸಲದ ವಿನಮ್ರ ವಿನಂತಿಯಾಗಿತ್ತು. ಅಟ್ಲಾಂಟ ನಿವಾಸಿ ಭಕ್ತರ ಹತ್ತಾರು ವರ್ಷಗಳ ಈ ಮನವಿಯನ್ನು ಪೂಜ್ಯ ಶ್ರೀಗಳು ಪುರಸ್ಕರಿಸಿದಂತೆ ಕಾಣಲಿಲ್ಲ. ಆದರೆ ದೇಶದ ಬೇರೆ ಬೇರೆ ಮಹಾನಗರಗಳಲ್ಲಿ ಶ್ರೀಮಠದ ಶಾಖೆಗಳು ಆರಂಭಗೊಳ್ಳುವಾಗ ಅಟ್ಲಾಂಟ ನಿವಾಸಿಗಳಿಗೆ ನಿರಾಶೆಯಾಗುತ್ತಿತ್ತು. ಆದರೂ ಮುಂದಿನ ಸರದಿ ನಮ್ಮೂರಿನದ್ದು ಎಂಬ ನಿರೀಕ್ಷೆಯಂತೂ ಹಸಿರಾಗಿಯೇ ಇತ್ತು. ಎಲ್ಲದಕ್ಕೂ ಕಾಲ ಕೂಡಿಬರಬೇಕಲ್ಲವೇ?

ತನ್ಮಧ್ಯ ಕಾಲದಲ್ಲಿ ಭಾರತೀಯ ವಲಸಿಗರ ಸಂಖ್ಯೆಯಂತೂ ಆ ಪ್ರದೇಶದಲ್ಲಿ ಹೆಚ್ಚುತ್ತಲೇ ಹೋಯಿತು. ಅನೇಕ ಪ್ರಸಿದ್ಧ ಕಂಪೆನಿಗಳನ್ನು ಅಲ್ಲಿನ ಸರಕಾರ ಸ್ವಾಗತಿಸಿದ್ದರಿಂದ ಉದ್ಯೋಗವಾಕಾಶಗಳೂ ಹೆಚ್ಚಿದವು. ಹೆಚ್ಚಿನ ಸಂಖ್ಯೆಯ ವಲಸಿಗರಿಂದಾಗಿ ಇಲ್ಲಿನ ಮನೆ ಮತ್ತು ನಿವೇಶನಗಳ ಮೌಲ್ಯವೂ ವೃದ್ಧಿಸಿತು. ಅಲ್ಲಿಂದ ಸುಮಾರು ಎರಡುಗಂಟೆ ದೂರದಲ್ಲಿರುವ ಸೌತ್ ಕೆರೋಲಿನಾದ ಪುಟ್ಟನಗರ 'ಗ್ರೀನ್ ವಿಲ್ಲೆಯಲ್ಲೇ' ಒಂದೈವತ್ತು ಕನ್ನಡಿಗರ ಮನೆಗಳಿವೆಯೆಂದರೆ ಅಲ್ಲಿ ನೆಲೆಸಿದ ಭಾರತೀಯರ ಸಂಖ್ಯೆ ಎಷ್ಟಿರಬಹುದೆಂಬುದನ್ನು ನೀವೇ ಊಹಿಸಿ!

2016–18ರ ಸಮಯದಲ್ಲಿ ಸುತ್ತಮುತ್ತಲಿನ ಮಾಧ್ವ ಭಕ್ತರ ಸಮೂಹವೊಂದು ಸಂಘಟಿತವಾಗಿ ಶ್ರೀ ಮಧ್ವ ನವಮಿ ಮತ್ತು ಶ್ರೀ ಗುರುರಾಯರ ಆರಾಧನೆ ಇತ್ಯಾದಿ ಚಟುವಟಿಕೆಗಳನ್ನು ಮಾಡುವ ಪ್ರಯತ್ನವನ್ನು ಆರಂಭಿಸಿತು. ಆದರೆ ಅವರಿಗೆ ಸರಿಯಾದ ಮಾರ್ಗದರ್ಶನವಿರಲಿಲ್ಲ. ಕೇವಲ ಲೌಕಿಕ ವಿದ್ಯೆಯಲ್ಲಷ್ಟೇ ಪರಿಣತರಾದ, ಕಿಂಚಿತ್ತೂ ಶಾಸ್ತ್ರ ಜ್ಞಾನವಿಲ್ಲದ ಆ ಮುಗ್ಧ ಭಕ್ತರಿಗೆ ಮುಂದೇನು ಮಾಡಬೇಕೆಂಬ ಸ್ಪಷ್ಟತೆಯೂ ಇರಲಿಲ್ಲ. ಆದರೆ ಹಲವಾರು ವರ್ಷಗಳಿಂದ ಅಲ್ಲೇ ನೆಲೆಸಿ ಸಂಸಾರವನ್ನು ನಡೆಸಿಕೊಂಡು ಬಂದ ಆ ಭಕ್ತ ಜನರಿಗೆ ತಮ್ಮ ಮಕ್ಕಳು ಬೆಳೆಯುತ್ತಿದ್ದಂತೇ ನಮ್ಮ ಸಂಪ್ರದಾಯ, ಸಂಸ್ಕೃತಿಗಳನ್ನು ಹೇಗಾದರೂ ಪ್ರಯತ್ನ ಮಾಡಿ ಉಳಿಸಿ ಕೊಳ್ಳಬೇಕೆಂಬ ತುಡಿತ ಮಾತ್ರ ಹೆಚ್ಚಾಗತೊಡಗಿತು. ಅವಕಾಶ ಸಿಕ್ಕಿದಾಗಲೆಲ್ಲಾ ಸುಮಾರು ಹತ್ತು ಗಂಟೆಗಳಷ್ಟು ದೂರದ ನ್ಯೂಜೆರ್ಸಿಯ ಶ್ರೀ ಕೃಷ್ಣವೃಂದಾವನಕ್ಕೆ ವಾಹನ ಚಲಾಯಿಸಿಕೊಂಡು ಬಂದು ಅಲ್ಲಿನ ಶ್ರೀ ಮಠದ ಪ್ರತಿನಿಧಿಗಳ ಬಳಿ ತಮ್ಮ ಮನದಿಂಗಿತವನ್ನು ತೋಡಿಕೊಳ್ಳುತ್ತಿದ್ದರು. ಅತಿ ಶ್ರೀಘ್ರದಲ್ಲಿ ಅಟ್ಲಾಂಟಕ್ಕೂ ಬಂದು ನೆಲೆಸಬೇಕೆಂದು ನ್ಯೂಜೆರ್ಸಿಯ ಶ್ರೀ ಕೃಷ್ಣ, ಶ್ರೀಮುಖ್ಯಪ್ರಾಣ ಮತ್ತು ಗುರುರಾಯರ ಬಳಿ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದರು.

ತನ್ಮಧ್ಯದಲ್ಲಿ 2018ರ ಆರಂಭದ ಸಮಯದಲ್ಲಿ ಭಕ್ತ ಸಮೂಹವೊಂದು ಶ್ರೀಗಳನ್ನು ಮತ್ತೆ ಸಂಪರ್ಕಿಸಿ ಅಟ್ಲಾಂಟದಲ್ಲಿ ಶ್ರೀ ಮಠದ ಶಾಖೆಯನ್ನು ತೆರೆಯಲೇ

ಬೇಕು ಎಂದು ಭಕ್ತಿಪೂರ್ವಕವಾಗಿ ಒತ್ತಾಯಿಸಿತು. ಆಗ ಅದಕ್ಕೆ ಪ್ರಶಸ್ತ ಕಾಲವೂ ಕೂಡಿಬಂದಿತ್ತೆನ್ನಬಹುದು. ಪೂಜ್ಯ ಶ್ರೀಗಳು ಅಂದು ಅವರ ಮನವಿಗೆ ಸ್ಪಂದಿಸಿ ತಮ್ಮ ಪರಿವಾರದ ಜೊತೆಗೆ ಅನತಿಕಾಲದಲ್ಲೇ ಆ ಪ್ರದೇಶದಲ್ಲಿ ಸಂಚಾರ ಮಾಡುವುದಾಗಿ ನಿರ್ಧರಿಸಿದರು. ಅಟ್ಲಾಂಟದಲ್ಲಿ ಸ್ಥಾಪಿಸಲೆಂದು ಉಡುಪಿಯಿಂದ ಶ್ರೀ ಕೃಷ್ಣನ ಪುಟ್ಟ ವಿಗ್ರಹವನ್ನು ಜೊತೆಗೇ ತಂದರು. ಹಾಗೆಯೇ ಮುಖ್ಯ ಪ್ರಾಣದೇವರು ಮತ್ತು ತಮಗೆ ಮಂತ್ರಾಲಯದ ಶ್ರೀ ಸುಶಮೀಂದ್ರ ತೀರ್ಥರು ಕೊಟ್ಟಿದ್ದ ರಾಯರ ಮೂಲ ಮೃತ್ತಿಕೆಯನ್ನು ಕೂಡ ವಿಧ್ಯುಕ್ತವಾಗಿ ಸಂಸ್ಥಾಪಿಸುವ ಉದ್ದೇಶದಿಂದ ಸಂಪೂರ್ಣ ಸಿದ್ಧತೆಯೊಡನೆ ಆ ಪ್ರದೇಶಕ್ಕೆ ಪಾದಾರ್ಪಣೆಗೈದರು.

ಆಗ ಅಲ್ಲಿಯ ತನಕ ಸ್ಥಳೀಯ ಭಕ್ತ ಸಮುದಾಯದ ಸಂತೋಷಕ್ಕೆ ಪಾರವೇ ಇರಲಿಲ್ಲ. ಭವ್ಯವಾಗಿ ಉಡುಪಿಯ ಶ್ರೀ ಕೃಷ್ಣನನ್ನು ಸ್ವಾಗತಿಸಲಾಯಿತು, ಮನೆ ಮನೆಗಳಲ್ಲಿ ಪೂಜೆ, ಪ್ರಸಾದ ವಿನಿಯೋಗ ಮತ್ತು ಪ್ರವಚನಗಳೂ ನಡೆದವು. ಮೊದಲಿಗೆ ಭಕ್ತರೊಬ್ಬರ 'ಕಮಿಂಗ್' ಪ್ರದೇಶದಲ್ಲಿದ್ದ ಮನೆಯಲ್ಲೇ ಶ್ರೀ ಮಠದ ಮೊದಲ ಚಟುವಟಿಕೆಗಳು ಆರಂಭಗೊಂಡವು. ಮುಂದೆ ಶ್ರೀ ಮಠದ ಕಾರ್ಯಪ್ರವೃತ್ತಿಗೆ ಸೂಕ್ತವಾದ ಬಾಡಿಗೆಯ ಸ್ಥಳವೊಂದನ್ನು ಗುರುತಿಸಿ ಮತ್ತು ನಿತ್ಯದ ಸೇವಾ ನಿರ್ವಹಣೆಗೆ ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಕಲಿತ ಯೋಗ್ಯ ಆಚಾರ್ಯರನ್ನು ನೇಮಿಸಿ ಪೂಜ್ಯ ಶ್ರೀಪಾದರು ಮತ್ತೊಂದು ಐತಿಹಾಸಿಕ ಕಾರ್ಯಸಾಧನೆಯ ಸಂತೃಪ್ತಿಯೊಂದಿಗೆ ಯಥಾಪ್ರಕಾರದ ತಮ್ಮ ವಿಶ್ವಸಂಚಾರ, ಧರ್ಮಪ್ರಚಾರವನ್ನು ಮುಂದುವರಿಸಿದರು.

2018ರ ಮೇ ತಿಂಗಳಲ್ಲಿ ಸ್ಥಳೀಯ ಹಿಂದೂ ಮಂದಿರದ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ನಡೆದ ಶ್ರೀನಿವಾಸ ಕಲ್ಯಾಣದಲ್ಲಿ ಸಾವಿರಕ್ಕೂ ಮಿಕ್ಕಿದ ಭಕ್ತರ ಪಾಲ್ಗೊಳ್ಳುವಿಕೆಯೊಂದಿಗೆ ಅರಂಭಗೊಂಡ ಶೀ ಮಠದ ಅಟ್ಲಾಂಟ ಶಾಖೆಯ ನಿತ್ಯ ತ್ರಿಕಾಲಪೂಜೆ, ಅನ್ನದಾನ, ಪಾಠ ಪ್ರವಚನ. ಪೌರೋಹಿತ್ಯ ಮತ್ತು ಜ್ಯೌತಿಷ ಸೇವೆಗಳು ಅತಿ ಶೀಘ್ರದಲ್ಲಿಯೇ ಜನಪ್ರಿಯಗೊಂಡವು. ಪ್ರಸ್ತುತ ಶ್ರೀ ಮಠದ ಜಾಗದಲ್ಲಿ ಹೆಚ್ಚಿನ ಭಕ್ತರನ್ನು ಸೇರಿಸಿಕೊಳ್ಳಲು ಜಾಗದ ಕೊರತೆಯಿರುವ ಕಾರಣ ವರ್ಷದಲ್ಲಿ ಅನೇಕಸಲ

ಬೇರೆ ಬೇರೆ ಬೃಹತ್ ಜಾಗಗಳನ್ನು ಬಾಡಿಗೆಗೆ ಪಡೆದು ಕಾರ್ಯಕ್ರಮಗಳನ್ನು ಆಯೋಜಿಸಬೇಕಾದ ಅನಿವಾರ್ಯತೆ ಎದುರಾಯಿತು. ತನ್ಮಧ್ಯದಲ್ಲಿ, ಶಾಶ್ವತವಾದ ಸ್ವಂತ ಸ್ಥಳದಲ್ಲಿ ಶ್ರೀ ಕೃಷ್ಣವೃಂದಾವನದ ಸ್ಥಾಪನೆಯಾಗಬೇಕೆಂಬ ಹಂಬಲದೊಂದಿಗೆ ಸೂಕ್ತ ಜಾಗವನ್ನು ಅನ್ವೇಷಿಸುವ ಪ್ರಯತ್ನವಂತೂ ನಡೆಯುತ್ತಲೇ ಇತ್ತು.

ಪೂಜ್ಯ ಶ್ರೀ ಪಾದರು ತಮ್ಮ ಚತುರ್ಥಪರ್ಯಾಯ ನಿಮಿತ್ತ ವಿಶ್ವಸಂಚಾರವನ್ನು ಮಾಡುತ್ತಾ ಅಟ್ಲಾಂಟಕ್ಕೆ ಆಗಮಿಸುವ ಸಂದರ್ಭದಲ್ಲಿ 'ಕಮಿಂಗ್' ಪ್ರದೇಶದಲ್ಲೇ ಆರು ಎಕರೆ ವಿಸ್ತೀರ್ಣದ ಸೂಕ್ತ ಸುಂದರ ನಿವೇಶನವೊಂದು ಲಭ್ಯವಿರುವುದಾಗಿ ತಿಳಿದುಬಂತು. ತತ್ ಕ್ಷಣ ಕಾರ್ಯ ಪ್ರವೃತ್ತರಾದ ಸ್ಥಳೀಯ ಆಚಾರ್ಯರು ಮತ್ತು ಶ್ರೀ ಮಠದಶಿಷ್ಯವರ್ಗ ಪೂಜ್ಯ ಶ್ರೀಗಳಿಗೆ ಆ ಜಾಗವನ್ನು ತೋರಿಸಿ ಅವರ ಅನುಮತಿಯ ಆಶೀರ್ವಾದವನ್ನು ಪಡೆದರು. ಪೂಜ್ಯ ಶ್ರೀಗಳು ಯಾವ ರೀತಿಯಲ್ಲಿ ಶ್ರೀ ಮಠದ ನಿರ್ಮಾಣವಾಗ ಬೇಕೆಂಬುದನ್ನು ನಿರ್ಣಯಿಸಿ ಸ್ಥಳೀಯ ಇಂಜಿನಿಯರ್ ಗಳಿಗೆ ಮಾರ್ಗದರ್ಶನವನ್ನಿತ್ತರು. ಮುಂದೆ ಅದಕ್ಕೆ ಬೇಕಾದ ಅನುಮತಿಯನ್ನು ಪಡೆದು ಶಿಲಾನ್ಯಾಸವನ್ನು ನಡೆಸುವವರೆಗಿನ ಎಲ್ಲ ಕಾರ್ಯಗಳೂ ನಿರ್ವಿಘ್ನವಾಗಿ ಸಂಪನ್ನಗೊಂಡವು.

ಇದೀಗ ಬೃಹದಾಕಾರದ ಸುಂದರ ಮಂದಿರ ನಿರ್ಮಾಣಕ್ಕೆ ಸುಮಾರು ಹದಿನೈದು ಮಿಲಿಯನ್ ಡಾಲರ್‌ಗಳ ಬೃಹದ್ ಯೋಜನೆಯೊಂದಿಗೆ ಸನ್ನದ್ಧವಾದ ಅಟ್ಲಾಂಟದ ಶ್ರೀ ಕೃಷ್ಣವೃಂದಾವನವು, ಪೂಜ್ಯ ಶ್ರೀಪಾದರು ತಮ್ಮ ಚತುರ್ಥ ಪರ್ಯಾಯವನ್ನು ಯಶಸ್ವಿಯಾಗಿ ಮುಗಿಸಿ ಬರುವುದನ್ನು ಕಾತರದಿಂದ ಕಾಯುತ್ತಿದೆ. ಮೊದಲ ಹಂತದ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸಲು ಬೇಕಾದ ಧನಸಂಗ್ರಹ ಮತ್ತು ಯಥೋಕ್ತ ಕೆಲಸ ಕಾರ್ಯಗಳ ಸರ್ವ ಪ್ರಯತ್ನ ಇದೀಗ ಭರದಿಂದ ಸಾಗುತ್ತಿದೆ.

# ಏನು ಧನ್ಯರೋ ನಾವು ಸುಗುಣಶಿಷ್ಯರು !



**ಶ್ರೀ ಜಯಪ್ರಸಾದ ಅಮ್ಮಣ್ಣಾಯ**
ಶ್ರೀ ಕೃಷ್ಣ ವೃಂದಾವನ, ಅಟ್ಲಾಂಟ, USA

**ಶ್ರೀ** ಸುಗುಣೇಂದ್ರ ತೀರ್ಥರೆಂಬ ಮಹಾನುಭಾವರು ಗುರುಗಳಾಗಿ ದೊರೆತದ್ದು ನನ್ನ ಈ ಜನ್ಮದ ಮಹಾಭಾಗ್ಯ. ಗುರುಗಳು ಹೆಸರಿಗೆ ತಕ್ಕಂತೆ ಸುಗುಣಗಳಿಗೆ ಇಂದ್ರರೇ ಹೌದು. ವಿದ್ಯಾಪೀಠದಲ್ಲಿ ಅಧ್ಯಯನ ಮಾಡುತ್ತಿರುವಾಗ ಗುರುಗಳು ತೋರಿಸಿದ ಶಿಷ್ಯವಾತ್ಸಲ್ಯ, ಆಪ್ಯಾಯಮಾನವಾದ ಹಿತನುಡಿಗಳನ್ನು ನಾವು ಯಾವತ್ತೂ ಮರೆಯುವಂತಿಲ್ಲ. ಜೀವನದಲ್ಲಿ ಮುಖ್ಯವಾಗಿ ಬೇಕಾದ ಸನ್ನಡತೆ, ಸದಾಚಾರ ಇತ್ಯಾದಿ ಅನೇಕ ಸದ್ಗುಣಗಳನ್ನು ಕಲಿಸಿ ಉತ್ತಮ ವಿಚಾರಧಾರೆಗಳನ್ನು ನಮ್ಮ ಮನಸ್ಸಿಗೆ ತುಂಬಿಸಿದ ಮಹನೀಯರು ಪೂಜ್ಯ ಗುರುಗಳು.

ವಸುಧೈವ ಕುಟುಂಬಕಂ ಎಂಬ ನುಡಿಯ ಆಶಯದಂತೆ ಬೇರೆ ಬೇರೆ ಚಿಂತನೆಗಳುಳ್ಳ ಮತ್ತು ಅಭಿಪ್ರಾಯ ಭೇದಗಳುಳ್ಳ ಜನರೆ ಲ್ಲರನ್ನೂ ಜೊತೆ ಸೇರಿಸಿಕೊಂಡು ಸರಿದೂಗಿಸಿಕೊಂಡು ಮುನ್ನಡೆಯುವ ಚಾಕಚಕ್ಯತೆ ನಮ್ಮ ಗುರುಗಳದ್ದು.

ನಮ್ಮ ಗುರುಗಳ ಮತ್ತೊಂದು ಅದ್ಭುತವಾದ ಗುಣವೆಂದರೆ ನಾಯಕರನ್ನು ತಯಾರಿಸುವುದು. ಶಿಷ್ಯರನ್ನು ಮುನ್ನೆಲೆಗೆ ತಂದು ಹಿಂದೆ ತಾನೇ ಅವರ ಬೆನ್ನೆಲುಬಾಗಿ, ನೆರಳಾಗಿ ನಿಂತು ಅವರಿಂದ ಒಳ್ಳೆಯ ಕಾರ್ಯಗಳನ್ನು ಮಾಡಿಸಿ, ಅವರು ಲೋಕಪ್ರಸಿದ್ಧರಾಗುವುದನ್ನು ಕಂಡು ಸಂತೋಷಪಡುವ ಮಾತೃಹೃದಯ ನಮ್ಮ ಗುರುಗಳದ್ದು.

'ಪ್ರವರ್ಧತಾಂ ಭಕ್ತಿರಲಂ ದಿನೇ ದಿನೇ ' ಎಂಬ ಪ್ರಾರ್ಥನೆಯ ನುಡಿಯಂತೆ ಯಾವಾಗಲೂ ಭಗವಂತನನ್ನು ಸ್ಮರಿಸುತ್ತಾ ತಾನು ಸನ್ಮಾರ್ಗದಲ್ಲಿ, ಸಾಧನಾಪಥದಲ್ಲಿ ನಡೆಯುತ್ತಾ, ನಮ್ಮನ್ನೂ ಕರೆದೊಯ್ಯುವ ಉದಾತ್ತಗುಣ ನಮ್ಮ ಗುರುಗಳದ್ದು.

'ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ' ಎಂಬ ಜಗದ್ಗುರು ಶ್ರೀ ಮಧ್ವರ ವಾಕ್ಯದಲ್ಲಿ ದೃಢವಾದ ನಂಬಿಕೆಯನ್ನಿಟ್ಟು ಅದನ್ನು ತಮ್ಮ ಜೀವನದಲ್ಲಿ ಪರಿಪೂರ್ಣವಾಗಿ ಅಳವಡಿಸಿಕೊಂಡವರು ನಮ್ಮ ಗುರುಗಳು. ನಮ್ಮ ಗುರುಗಳು ವೈಚಾರಿಕ ಚಿಂತನೆಯಲ್ಲೂ ಬಲು ಪ್ರಸಿದ್ಧರು. ಅವರ ಬರವಣಿಗೆಯ ಶೈಲಿ, ಆಧುನಿಕ ಚಿಂತನೆ, ಹೊಸತನ ಅನನ್ಯವಾದದ್ದು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಂ ಸಮಾಃ ಎಂಬ ಉಪನಿಷತ್ತಿನ ಪ್ರಸಿದ್ಧ ಮಾತಿನ ಅಂತರಾರ್ಥವನ್ನು ಬಲು ಸ್ಪಷ್ಟವಾಗಿ, ನಿಖರವಾಗಿ ನಮಗೆ ಉಪದೇಶಿಸುತ್ತಾ, ಭಗವಂತನ ಪ್ರೀತ್ಯರ್ಥವಾಗಿ ಕರ್ತವ್ಯ ಕರ್ಮಗಳನ್ನು ಮಾಡಿಕೊಂಡು ನಮ್ಮ ಬದುಕನ್ನು ಸಾರ್ಥಕಗೊಳಿಸಬೇಕು ಎಂಬುವುದನ್ನು ತಮ್ಮ ಜೀವನಮುಖೇನ ತೋರಿಸಿಕೊಟ್ಟ ಗುರುಗಳನ್ನು ಪಡೆದ ನಾವೇ ಧನ್ಯರು.

●




SHRI KRISHNA VRUNDAVANA, RALEIGH, NORTH CAROLINA, USA.

# ನಾರ್ತ್ ಕೆರೋಲಿನಾದ 'ರಾಲೇ'ಯಲ್ಲಿ ಶ್ರೀ ಕೃಷ್ಣವೃಂದಾವನ

**ಸು**ಮಾರು ಹದಿನಾರನೆಯ ಶತಮಾನದಲ್ಲಿ ಪ್ರಸಿದ್ಧನೆನಿಸಿದ ಆಂಗ್ಲ ಅನ್ವೇಷಕ 'ಸರ್ ವಾಲ್ಟರ್ ರಾಲೇ' ಆಗಿನ ಬ್ರಿಟಿಷ್ ರಾಣಿ 'ಎಲಿಜಬೆತ್'ಗೆ ಅತ್ಯಂತ ಆಪ್ತನಾಗಿದ್ದ. ಉತ್ತರ ಅಮೇರಿಕಾದಲ್ಲಿ ಬ್ರಿಟಿಷ್ ಕಾಲೋನಿಯನ್ನು ಸೃಷ್ಟಿಮಾಡುವ ಕಾರ್ಯದಲ್ಲಿ ಈತನ ಪ್ರಯತ್ನ ಬಹಳ ದೊಡ್ಡದಾಗಿತ್ತು. 1792ನೇ ಇಸವಿಯಲ್ಲಿ ಈತನಿಂದ ಅನ್ವೇಷಿತವಾದ ಅಮೇರಿಕಾದ ಪೂರ್ವಕರಾವಳಿಯ ಭಾಗವಾದ 'ನಾರ್ತ್ ಕೆರೋಲಿನಾ' ರಾಜ್ಯದ ರಾಜಧಾನಿಯೆಸಿದ ಸುಂದರ ನಗರವೊಂದಕ್ಕೆ 'ರಾಲೇ' ಎಂಬುವುದಾಗಿ ಈತನ ಕುಲಹೆಸರನ್ನೇ ನಾಮಕರಣ ಮಾಡಲಾಯಿತು. ಇದೀಗ ಈ ನಗರಿಯು ಅತಿಶೀಘ್ರವಾಗಿ ಅಭಿವೃದ್ಧಿಗೊಂಡ ಅಮೇರಿಕಾದ ಪ್ರಸಿದ್ಧ ಪಟ್ಟಣಗಳಲ್ಲಿ ಒಂದಾಗಿ ಮೆರೆಯುತ್ತಿದೆ.

ಇಲ್ಲಿನ ಭೌಗೋಳಿಕ ವೈಶಿಷ್ಟ್ಯವೇ 'ರಾಲೇ'ಯ ಈಗಿನ ವೈಭವಕ್ಕೆ ಪ್ರಮುಖ ಕಾರಣವೆನ್ನಬಹುದು. ಮುಖ್ಯವಾಗಿ ಇಲ್ಲಿನ ವಾತಾವರಣ ಸದಾ ಶಾಂತವಾಗಿರುತ್ತದೆ. ಅತಿ ಹೆಚ್ಚಿನ ಚಳಿ, ವಿಪರೀತ ಸೆಖೆ, ಭೀಕರ ಮಳೆ, ಭೂಕಂಪ, ಚಂಡಮಾರುತ ಇತ್ಯಾದಿ ಯಾವುದೇ ವೈಪರೀತ್ಯಗಳಿಲ್ಲದೆ ನೆಮ್ಮದಿಯಿಂದ ಬದುಕಬಹುದಾದ ಎಲ್ಲ ನೈಸರ್ಗಿಕ ವ್ಯವಸ್ಥೆಗಳೂ ಇಲ್ಲಿ ವಿಪುಲವಾಗಿವೆ. ಲೆಕ್ಕವಿಲ್ಲದಷ್ಟು ಸಂಖ್ಯೆಯ ಬೃಹತ್ ಓಕ್ ಮರಗಳ ದಟ್ಟ ಕಾಡುಗಳು ಇಲ್ಲಿನ ಇನ್ನೊಂದು ವೈಶಿಷ್ಟ್ಯ. ಯಥೇಚ್ಛವಾಗಿ ದೊರಕುವ 'ಓಕ್' ಬೀಜಗಳನ್ನು ತಿಂದು ಬದುಕುವ ಅಳಿಲು, ರಕೂನ್, ಪೋಸಮ್ ಇತ್ಯಾದಿ ಅನೇಕ ವನ್ಯಜೀವಿಗಳ ಜೊತೆಗೆ ಗಿಡ್ಡ ಬಿಳಿಬಾಲದ ಸುಂದರ ಜಿಂಕೆಗಳನ್ನೂ ಇಲ್ಲಿ ಎಲ್ಲೆಡೆ ಕಾಣಬಹುದು. ಅನೇಕ ವರ್ಣಮಯ ಪಕ್ಷಿ ಸಂಕುಲಗಳ ಸಹಿತ ಬಾವಲಿ ಮತ್ತು ಹಾರುವ ಅಳಿಲು ಇಲ್ಲಿನ ಮತ್ತೊಂದು ಆಕರ್ಷಣೆ.

ಕಳೆದ ಮೂರು ದಶಕಗಳಿಂದ ಹಲವಾರು ಉದ್ಯಮಗಳು ಮತ್ತು ಕಂಪೆನಿಗಳನ್ನು ಒಡಲಿಗೆ ಸೇರಿಸಿಕೊಂಡು ತನ್ನ ಸಿರಿವಂತಿಕೆಯನ್ನು ವೃದ್ಧಿಸಿಕೊಂಡ ಈ ಸುಂದರ ನಗರವು ಅನೇಕ ವಿದ್ಯಾವಂತ, ಬುದ್ಧಿವಂತ ಭಾರತೀಯರನ್ನೂ ತನ್ನೆಡೆಗೆ ಆಕರ್ಷಿಸಿತು. ಪ್ರಸ್ತುತ ಇಲ್ಲಿನ ಜನಸಂಖ್ಯೆಯ ಸುಮಾರು ಮೂರು ಪ್ರತಿಶತ ಅಂದರೆ ಅರುವತ್ತು

ಸಾವಿರದಷ್ಟು ಮಂದಿ ನಮ್ಮವರು ಇಲ್ಲಿ ಬಂದು ಸುಖವಾಗಿ ನೆಲೆಸಿದ್ದಾರೆ. ಅನೇಕ ಬೃಹತ್ ಮತ್ತು ಆಕರ್ಷಕ ಹಿಂದೂ ದೇಗುಲಗಳೂ ಇಲ್ಲಿ ತಲೆಯೆತ್ತಿ ನಿಂತಿವೆ. ಪರಮಪೂಜ್ಯ ಶ್ರೀ ಪುತ್ತಿಗೆ ಶ್ರೀಪಾದರನ್ನು ಇಲ್ಲಿಯ ಜನತೆ ಅವಕಾಶ ಸಿಕ್ಕಿದಾಗಲೆಲ್ಲ ಭಕ್ತಿಯಿಂದ ಆಹ್ವಾನಿಸಿ ಸಂಸ್ಥಾನ ಪೂಜೆ, ಪ್ರವಚನ, ಹೋಮ, ಅನ್ನದಾನಾದಿಗಳನ್ನು ಏರ್ಪಡಿಸಿ ಧನ್ಯರಾಗುತ್ತಿದ್ದರು. 2018ರಲ್ಲಿ ಇಲ್ಲಿಂದ ನಾಲ್ಕು ನೂರು ಮೈಲಿಗಳಷ್ಟು ಅಂದರೆ ಸುಮಾರು ಆರೇಳು ಗಂಟೆಗಳಲ್ಲಿ ತಲುಪಬಹುದಾದ 'ಜಾರ್ಜಿಯಾ' ರಾಜ್ಯದ 'ಅಟ್ಲಾಂಟ' ಮಹಾನಗರದಲ್ಲಿ ಶ್ರೀ ಮಠದ ಶಾಖೆಯು ಆರಂಭಗೊಂಡಿತು. ಆ ಬಳಿಕ ಇಲ್ಲಿನ ಸಂಘಟಿತ ಭಕ್ತ ಸಮೂಹದಲ್ಲಿ ತಮ್ಮೂರಿನಲ್ಲೂ 'ಶ್ರೀಕೃಷ್ಣವೃಂದಾವನ'ದ ಸ್ಥಾಪನೆಯಾಗಬೇಕೆಂಬ ಇಚ್ಛೆ ಜಾಗ್ರತವಾಯಿತು.

ರಾಲೇಯಲ್ಲಿ ಉಡುಪಿ ಕೃಷ್ಣ, ಮುಖ್ಯಪ್ರಾಣ ಮತ್ತು ರಾಯರ ವೃಂದಾವನವನ್ನು ಸ್ಥಾಪಿಸಬೇಕೆಂಬುವುದು ಸ್ಥಳೀಯ ಭಕ್ತರೊಬ್ಬರ ಜೀವಮಾನದ ಅದಮ್ಯ ಆಸೆಯಾಗಿತ್ತು. ಅದಕ್ಕಾಗಿ ಅವರು ಎಂತಹ ತ್ಯಾಗಕ್ಕೂ ಸನ್ನದ್ಧರಾಗಿದ್ದರು. ಬ್ರಹ್ಮಚಾರಿಯಾಗಿದ್ದುಕೊಂಡು ತನ್ನ ಲೌಕಿಕ ಉದ್ಯೋಗದ ಜೊತೆಗೆ ನಿರಂತರ ಧಾರ್ಮಿಕ ಚಟುವಟಿಕೆಗಳಲ್ಲೂ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಆ ವ್ಯಕ್ತಿ ತಮ್ಮ ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳನ್ನೂ ಮಾಡಿಕೊಂಡು ಬಂದರು. ಸ್ಥಳೀಯ ಭಕ್ತರ ಸಹಯೋಗದೊಂದಿಗೆ ಸಂಗೀತ ಕಚೇರಿಗಳು, ರಾಯರ ಆರಾಧನೆ ಇತ್ಯಾದಿ ಕಾರ್ಯಕ್ರಮಗಳನ್ನು ನೆರವೇರಿಸಿಕೊಂಡು ಬರುವ ಪ್ರಯತ್ನವನ್ನು ಅನೇಕ ಬಾರಿ ಮಾಡಿದರು.

ಇವರ ಮುಖೇನ 2019ನೇ ಇಸವಿಯ ಶ್ರೀ ರಾಯರ ಆರಾಧನೆಯನ್ನು ಶ್ರೀ ಪುತ್ತಿಗೆ ಮಠದ ವಿದ್ವಾಂಸರೊಬ್ಬರ ನೇತೃತ್ವದಲ್ಲಿ ಅಭೂತಪೂರ್ವವಾಗಿ ಆಯೋಜಿಸಲಾಯಿತು. ರಾಲೇ ನಗರದ ಮುಖ್ಯ ಭಾಗದಲ್ಲಿದ್ದ ಉತ್ತರಭಾರತೀಯ ಹಿಂದೂ ಮಂದಿರದಲ್ಲಿ ಈ ಕಾರ್ಯಕ್ರಮ ಶಾಸ್ತ್ರೀಯವಾಗಿ ಮತ್ತು ಅದ್ದೂರಿಯಿಂದ ನೆರವೇರಿತು. ನಿರೀಕ್ಷೆಯನ್ನೂ ಮೀರಿ ಸೇರಿದ ಭಕ್ತರ ಸಂಖ್ಯೆ ಸಾವಿರವನ್ನು ದಾಟಿತ್ತು! ಅಂದು ನಡೆದ ಪೂಜೆ, ಪ್ರವಚನ ಮತ್ತು ಶಿಸ್ತುಬದ್ಧ ಅನ್ನದಾನಾದಿ ಶ್ರೀಮಠದ

ವೈಶಿಷ್ಟ್ಯಪೂರ್ಣ ಕಾರ್ಯವೈಖರಿ ಭಕ್ತಜನರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಭಾವುಕರನಾಗಿಸಿತ್ತು. ಆಗ ಯರ್ಾಲಿಯಲ್ಲಿ ಶ್ರೀ ಮಠವನ್ನು ಸ್ಥಾಪಿಸುವ ಕನಸುಹೊತ್ತ ಈ ವ್ಯಕ್ತಿಯೂ ಭಗವತ್ಪ್ರೇರಿತರಾಗಿ ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬಂದುಬಿಟ್ಟರು. ಶ್ರೀ ಮಠದ ಸ್ಥಾಪನೆಯು ಶ್ರೀ ಪುತ್ತಿಗೆ ಮಠಾಧೀಶರ ಮೂಲಕ ನಡೆದರೆ ಮಾತ್ರ ಸಾರ್ಥಕ ಮತ್ತು ಸಮರ್ಪಕವಾಗಿರುತ್ತದೆ ಎಂಬುವುದನ್ನು ಅವರು ಮನಗಂಡರು. ಅದಕ್ಕೋಸ್ಕರ ಇತರ ಸಮಾನಮನಸ್ಕ ಭಕ್ತರ ನೇತೃತ್ವದಲ್ಲಿ ಪೂಜ್ಯ ಪುತ್ತಿಗೆ ಶ್ರೀಪಾದರನ್ನು ಸಂಪರ್ಕಿಸಲಾಯಿತು. ಭಕ್ತಿಪೂರ್ವಕವಾದ ವಿನಂತಿಯೊಂದಿಗೆ ಶ್ರೀಗಳ ಮನವೊಲಿಸಿ ಮುಂದುವರಿಯಲು ಪೂಜ್ಯರ ಅಪ್ಪಣೆ ಮತ್ತು ಆಶೀರ್ವಾದವನ್ನು ಪಡೆಯಲಾಯಿತು. ಅದಕ್ಕೆ ಬೇಕಾದ ಧನಸಂಗ್ರಹಕ್ಕೆ ಅನೇಕ ಪ್ರಯತ್ನಗಳನ್ನು ಪ್ರಾರಂಭಿಸಲಾಯಿತು.

2020ರ ಮಾರ್ಚ್ ತಿಂಗಳಲ್ಲಿ ಶ್ರೀ ಪುತ್ತಿಗೆ ಮಠದ ಅದೇ ವಿದ್ವಾಂಸರ ನೇತೃತ್ವದಲ್ಲಿ ಇನ್ನೊಂದು ಬೃಹತ್ ಕಾರ್ಯಕ್ರಮ ಶ್ರೀನಿವಾಸ ಕಲ್ಯಾಣವನ್ನು ಆಯೋಜಿಸಲಾಯಿತು. ಅದೂ ಅಭೂತಪೂರ್ವಕವಾಗಿ ನಡೆದು ರಾಲೇಯಲ್ಲಿ ಶ್ರೀ ಕೃಷ್ಣವೃಂದಾವನದ ಸಂಸ್ಥಾಪನೆಯ ಕನಸುಹೊತ್ತ ಭಕ್ತವೃಂದಕ್ಕೆ ಇನ್ನಷ್ಟು ಸ್ಪಷ್ಟವಾದ ಭರವಸೆಯನ್ನು ಕೊಟ್ಟಿತು. ಆದರೆ ಆಗ ತಾನೆ ಬಂದು ವಕ್ಕರಿಸಿದ ಮಹಾಮಾರಿ 'ಕೋವಿಡ್' ಇಡೀ ವಿಶ್ವವನ್ನೇ ತಲ್ಲಣಗೊಳಿಸಿತು. ಎಲ್ಲರನ್ನೂ ಸ್ತಬ್ದರನ್ನಾಗಿಸಿತು. ಯರ್ಾಲಿಯಲ್ಲಿ ಅತಿಶೀಘ್ರದಲ್ಲಿ ಶ್ರೀ ಕೃಷ್ಣವೃಂದಾವನವನ್ನು ಕಾಣುವ ಕನಸುಹೊತ್ತ ಅನೇಕ ಭಕ್ತರಿಗೆ ಮುಂದೇನು ಮಾಡುವುದೆಂದೇ ತೋಚದಾಯಿತು. ಆಗ ಶ್ರೀಮಠದ ಸಂಸ್ಥಾಪನೆಯ ಕನಸನ್ನು ಹೊತ್ತಿದ್ದ ಆ ಬ್ರಹ್ಮಚಾರಿ ಭಕ್ತರು ಶ್ರೀ ಕೃಷ್ಣನ ಪ್ರೇರಣೆಯಂತೆ ಇನ್ನೊಂದು ಮಹತ್ವಪೂರ್ಣ ನಿರ್ಧಾರವನ್ನು ಕೈಗೊಂಡರು! ಸೂಕ್ತ ಪ್ರದೇಶದಲ್ಲಿ ವಿಶಾಲವಾಗಿದ್ದ ತಮ್ಮ ಬೆಲೆಬಾಳುವ ಮನೆಯನ್ನೇ ಶ್ರೀ ಮಠಕ್ಕೆ ಬಿಟ್ಟುಕೊಡುವ ಮನಸ್ಸು ಮಾಡಿದರು! ಶ್ರೀ ಮಠದ ಪ್ರತಿನಿಧಿಗಳನ್ನು ಕರೆದು ತಮ್ಮ ಮನೆಯನ್ನು ತೋರಿಸಿ ಸುಸ್ಪಷ್ಟವಾದ ತಮ್ಮ ಮನದಿಂಗಿತವನ್ನು ಅರುಹಿದರು. ಮುಂದೆ ಪೂಜ್ಯ ಶ್ರೀಗಳ ಒಪ್ಪಿಗೆಯ ಅನುಗ್ರಹವನ್ನು ಪಡೆದಬಳಿಕ ಆ ಮನೆಯನ್ನು ಮಠವಾಗಿ ಪರಿವರ್ತಿಸಲು ಬೇಕಾದ ಎಲ್ಲ ಖರ್ಚುಗಳನ್ನೂ ತಾವೇ ನೋಡಿಕೊಂಡರು!

ಭಗವಂತನ ಇಚ್ಛೆಯ ಮುಂದೆ ಯಾವ ದೊಡ್ಡ ಋಣಾತ್ಮಕ ಶಕ್ತಿಯೂ ನಿಸ್ತೇಜವಾಗಿ ಬಿಡುತ್ತದೆ. ಸತ್ಕಾರ್ಯಗಳು ಸಂಭವಿಸುವ ಕಾಲ ಬಂದಾಗ ಏನಾಗಬೇಕೋ ಅದು ನಡೆದೇ ನಡೆಯುತ್ತದೆ. ಮುಂದೆ ಆಶ್ಚರ್ಯವೆಂಬಂತೆ ಕೋವಿಡ್ ಮಹಾಮಾರಿಯು ವಿಶ್ವದಾದ್ಯಂತ ಆರ್ಭಟಿಸುತ್ತಿದ್ದ ಸಮಯದಲ್ಲಿ ಮತ್ತು ಜನರು ತಮ್ಮ ಪಕ್ಕದ ಮನೆಗೂ ಹೋಗಲು ಹೆದರುತ್ತಿದ್ದ ಕಾಲದಲ್ಲಿ ಪೂಜ್ಯ ಪುತ್ತಿಗೆ ಶ್ರೀಪಾದರು ದೂರದ ಅಮೇರಿಕಾ ದೇಶಕ್ಕೆ ಪ್ರಯಾಣಿಸಲು ಹಿಂದೆ ಮುಂದೆ ನೋಡಲಿಲ್ಲ! ಅಲ್ಲಿ ಧರ್ಮ ಸಂಸ್ಥಾಪನೆಯಾಗಬೇಕು, ಅಲ್ಲಿನ ಭಕ್ತರಿಗೆ ಅನುಗ್ರಹಿಸಬೇಕು, ಮತ್ತು ಅದಕ್ಕೋಸ್ಕರ ಶ್ರೀ ಕೃಷ್ಣನ ಪ್ರತಿಷ್ಠಾಪನೆಯಾಗಬೇಕು ಎಂಬುವುದಾಗಿ ಭಗವಂತನಿಂದ ಪ್ರೇರಣೆಗೊಂಡ ಪೂಜ್ಯ ಶ್ರೀಪಾದರು ತಮ್ಮ ಪರಿವಾರದೊಡನೆ 'ರಾಲೇಗೆ' ಆಗಮಿಸಿದರು. 2020ನೇ ಇಸವಿಯ ವಿಜಯದಶಮಿಯಂದು, 25–10–2020 ಭಾನುವಾರದಂದು ಶ್ರೀ ಮಠವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿ ಉಡುಪಿಯ ಕಡೆಗೋಲು ಶ್ರೀಕೃಷ್ಣ, ಮುಖ್ಯಪ್ರಾಣ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ವೃಂದಾವನವನ್ನು ಪ್ರತಿಷ್ಠಾಪಿಸಿದರು. ನಿತ್ಯಪೂಜೆ, ಪಾಠಪ್ರವಚನ ಮತ್ತು ಅನ್ನದಾನಾದಿ ಕೈಂಕರ್ಯಗಳಿಗೆ ಶ್ರೀಪುತ್ತಿಗೆ ವಿದ್ಯಾಪೀಠದಲ್ಲಿ ಕಲಿತ ತಮ್ಮ ಶಿಷ್ಯರಾದ ಯೋಗ್ಯ ವಿದ್ವಾಂಸರನ್ನು ನೇಮಿಸಿದರು.

ಇದೀಗ ರಾಲೇ'ಯ ಶ್ರೀಕೃಷ್ಣವೃಂದಾವನವು ತನ್ನ ವೈಶಿಷ್ಟ್ಯಪೂರ್ಣ ಕಾರ್ಯವೈಖರಿಯೊಂದಿಗೆ ಪ್ರಸ್ತುತ ಬೆಳೆಯುತ್ತಲೇ ಇರುವ ಭಕ್ತವೃಂದವನ್ನು ನಿತ್ಯವೂ ತನ್ನೆಡೆಗೆ ಆಕರ್ಷಿಸುತ್ತಿದೆ. ಶಾಸ್ತ್ರೋಕ್ತವಾದ ರೀತಿಯಲ್ಲಿ ಎಲ್ಲ ಧಾರ್ಮಿಕ ಕಾರ್ಯಗಳನ್ನು ನಡೆಸಲು ಸರ್ವ ವ್ಯವಸ್ಥೆಗಳನ್ನೂ ಹೊಂದಿರುವ ಶ್ರೀಮಠವು ತನ್ನ ಸಂಸ್ಥಾಪನೆಯ ಕನಸು ಹೊತ್ತು ಶ್ರಮವಹಿಸಿದ ಸ್ಥಳೀಯ ಭಕ್ತಜನರನ್ನು ನಿತ್ಯವೂ ಭಕ್ತಿಪ್ರವಾಹದಲ್ಲಿ ಮುಳುಗೇಳಿಸುತ್ತಿದೆ. ಭಾವುಕ ಭಕ್ತವೃಂದವನ್ನು ಕೃತಕೃತ್ಯರನ್ನಾಗಿಸಿದೆ. ಧನ್ಯರನ್ನಾಗಿಸಿದೆ. ವೈದಿಕ ವಿದ್ವಾಂಸರಾದ ಸ್ಥಳೀಯ ಅರ್ಚಕರಶ್ರದ್ಧಾಪೂರ್ವಕವಾದ ನಿರಂತರ ಪೂಜಾನುಷ್ಠಾಗಳಿಂದಾಗಿ ಶ್ರೀ ಮಠದಲ್ಲಿ ದೇವರ ಮತ್ತು ಗುರುಗಳ ಸಾನ್ನಿಧ್ಯವೂ ಜಾಗ್ರತಗೊಂಡಿದೆ. ಭಕ್ತಿಯಿಂದ ಬಂದು ಸೇವೆ ಸಲ್ಲಿಸುವ, ಪ್ರಾರ್ಥಿಸುವ ಭಗವದ್ಭಕ್ತರ ಮನದಿಚ್ಛೆಯನ್ನು ಅತಿ ಶೀಘ್ರದಲ್ಲಿ ಕರುಣಿಸುವ ಪುಣ್ಯಕ್ಷೇತ್ರವಾಗಿ ಮೆರೆಯುತ್ತಿದೆ.

●

# ಸುಗುಣಾರ್ಣವ
# ಶ್ರೀ ಸುಗುಣೇಂದ್ರತೀರ್ಥರು



**ಶ್ರೀ ನಾಗೇಂದ್ರ ಉಡುಪ**
ರಾಲೇ, ನಾರ್ತ್ ಕೆರೊಲಿನಾ, USA

**ಕ**ಡಲು ಮತ್ತು ಆಗಸಕ್ಕೆ ಕೊನೆಮೊದಲೆಂಬುವುದುಂಟೇ? ಅವುಗಳ ಆಳ ಅಗಲಗಳನ್ನು ಇದಮಿತ್ಥಂ ಎಂದು ಎಣಿಸಿ ಹೇಳಿದವರುಂಟೇ? ನಮ್ಮ ಗುರುಗಳ ಗುಣವರ್ಣನೆಗೆಂದು ತೊಡಗಿದಾಗ ನನಗೆದುರಾಗಿದ್ದೂ ಅದೇ ಗೊಂದಲ! ನಾನು ಹತ್ತಿರದಿಂದ ಕಾಣುತ್ತಾ ಆಗಾಗ ಬೆರಗಿನಿಂದ ಗಮನಿಸುತ್ತಿದ್ದ ನನ್ನ ಗುರುಗಳ ಅನೇಕ ಮತ್ತು ಅಪೂರ್ವ ಸದ್ಗುಣಗಳ, ಮಹಿಮೆಗಳ ಬಗ್ಗೆ ಬರೆಯಲೆಂದು ಹೊರಟರೆ, ಎಲ್ಲಿಂದ ಪ್ರಾರಂಭಿಸಲಿ? ಯಾವ ವಿಚಾರಗಳನ್ನು ಹಂಚಿಕೊಳ್ಳಲಿ? ಎಂಬುವುದನ್ನು ನಿರ್ಣಯಿಸಲಾಗದೆ ಒಂದಷ್ಟುಕ್ಷಣ ಸ್ತಬ್ದನಾಗಿಬಿಟ್ಟೆ! ತಟಸ್ಥನಾಗಿಬಿಟ್ಟೆ!

ಒಂದಿಷ್ಟು ವಾಕ್ಯದಲ್ಲೋ, ಅಲ್ಪ ಸಮಯದಲ್ಲೋ ಹೇಳಿ ಮುಗಿಸಲಾಗದ ವ್ಯಕ್ತಿತ್ವ, ಸಾಧನೆ, ಕಾರುಣ್ಯ ನಮ್ಮ ಗುರುಗಳದ್ದು. ಹಾಗಾಗಿ ಈ ಅಲ್ಪಮತಿಯು ಬರೆಯುವ ನಾಕುಸಾಲೆನ್ನುವುದು ಅಗಾಧ ಸಿಂಧುವಿನಿಂದೆತ್ತಿದ ಒಂದೆರಡು ಬಿಂದುವಿನಂತೆ. ಆದರೂ "ಮನೋವಿಶುದ್ಧ್ಯೈಚರಿತಾನುವಾದಃ" ಎಂದಂತೆ ದೊಡ್ಡವರ ಗುಣಚಿಂತನೆಯೂ ಮನಃಶುದ್ಧಿಗೆ ಹೇತುವಷ್ಟೇ?!

ಪಂಡಿತ- ಪಾಮರರಿರಲಿ, ಆಬಾಲ-ವೃದ್ಧರಿರಲಿ ಎಲ್ಲರನ್ನೂ ಅವರವರ ಮನಃಸ್ಥಿತಿಗೆ ಅನುಸಾರಿಯಾಗಿ ಮಾತನಾಡಿಸಿ ಅನುಗ್ರಹಿಸುವ ನಮ್ಮ ಗುರುಗಳ ವಿಶೇಷ ಗುಣವೇ ಅವರಿಗೆ ಶ್ರೀ ಸುಗುಣೇಂದ್ರತೀರ್ಥರು ಎನ್ನುವ ನಾಮಕ್ಕೆ ಅನ್ವರ್ಥವನ್ನು ತಂದುಕೊಟ್ಟಿದೆಯೆಂದರೆ ಅತಿಶಯವಾಗದು. ಭಕ್ತರು ಭೇಟಿಯಾಗಿ ಒಂದಿಷ್ಟು ವರ್ಷಗಳು

ಕಳೆದರೂ ಮತ್ತೆ ಸಿಕ್ಕಾಗ ಅವರ ಹೆಸರು ಹೇಳಿ ಕರೆದು ಮಾತನಾಡಿಸುವಾಗ ಗುರುಗಳ ಅಸದೃಶ ಸ್ಮರಣಶಕ್ತಿಯನ್ನು ಹತ್ತಿರದಿಂದ ಕಂಡನಾನು ಅದೆಷ್ಟೋ ಸಲ ಮೂಕವಿಸ್ಮಿತನಾಗಿದ್ದೆ!

ಇನ್ನು ಜಪತಪ ಅನುಷ್ಠಾನ ವಿಚಾರಕ್ಕೆ ಬಂದರೆ ರಾಜಿಯ ಮಾತೇಇಲ್ಲ. ಎಷ್ಟೇ ಸಮಯವಾಗಿರಲಿ, ಪ್ರಯಾಣದ ಆಯಾಸವಿರಲಿ, ಗಂಟೆಕಟ್ಟಲೆಯ ತಮ್ಮ ಅನುಷ್ಠಾನಗಳನ್ನು ಸಂಪೂರ್ಣವಾಗಿ ಮುಗಿಸದೆ ಭಿಕ್ಷೆ ಸ್ವೀಕರಿಸಿದವರಲ್ಲ.

ಶ್ರೀಗಳ ಪಾಠಪ್ರವಚನಗಳ ವೈಖರಿ ಮತ್ತು ಸುಧಾಸುವಚನಾದಿ ಬರವಣಿಗೆಯ ಶೈಲಿಗೆ ಮನಸೋಲದವರೇ ಇಲ್ಲ. ವೈಚಾರಿಕವಾಗಿ ಭಿನ್ನಮತೀಯರೆನಿಸಿಕೊಂಡ ಕೆಲ ಪಂಡಿತವರ್ಗವೂ ಗುಪ್ತವಾಗಿ ನಮ್ಮ ಗುರುಗಳನ್ನು ಅನುಸರಿಸುತ್ತಾರೆ ಎನ್ನುವ ಮಾತನ್ನೂ ನಾನು ಅನೇಕ ಬಾರಿ ಕೇಳಿದ್ದೇನೆ.

ಶ್ರೀಗಳ ಸಾಮಾಜಿಕ ಕಳಕಳಿಯ ಬಗ್ಗೆ ಹೇಳಬೇಕೆಂದರೆ ಸಜ್ಜನರ ಅನುಕೂಲಕ್ಕಾಗಿ ಭಾರತದಲ್ಲಲ್ಲದೆ ವಿದೇಶಗಳಲ್ಲೂ ಅನೇಕ ಮಠಮಂದಿರಗಳನ್ನು ಸ್ಥಾಪಿಸಿದ್ದಾರೆ. ಉದ್ಯೋಗವನ್ನರಸಿಕೊಂಡು ವಿದೇಶಕ್ಕೆ ಬಂದು ತೀರಾ ಲೌಕಿಕರಾಗಿ ಜೀವನ ನಡೆಸುತ್ತಿದ್ದ ಲಕ್ಷಾಂತರ ಮಂದಿ ಇಂದು ತಮ್ಮನ್ನು ಪಾಠಪ್ರವಚನ, ಹಬ್ಬಹರಿದಿನ, ಏಕಾದಶ್ಯಾದಿವ್ರತಗಳಲ್ಲಿ ತೊಡಗಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುತ್ತಾ ಸಾರ್ಥಕ ಜೀವನವನ್ನು ನಡೆಸುತ್ತಾ ಇದ್ದಾರೆಂದರೆ ಅದು ಗುರುಗಳ ಕಾರುಣ್ಯವಲ್ಲದೆ ಮತ್ತೇನು? ಪಿತೃಕಾರ್ಯಗಳನ್ನು ಮಾಡಲು ಅನನುಕೂಲವಾಗಬಹುದು ಎಂಬ ನಿಟ್ಟಿನಲ್ಲಿ ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ನೋಡಲು ವಿದೇಶಕ್ಕೆ ಬರಲು ಒಪ್ಪದ ತಂದೆತಾಯಿಗಳು ಇದೀಗ ಶ್ರಾದ್ಧದ ಸಮಯದಲ್ಲೇ ಇಲ್ಲಿಗೆ ಬಂದು ಸಕುಟುಂಬರಾಗಿ ವಿದೇಶದಲ್ಲಿಯೇ ದೇವಪಿತೃಕಾರ್ಯಗಳನ್ನು ನಡೆಸುತ್ತಿದ್ದಾರೆ. ಇನ್ನು ಇಲ್ಲೇ ಹುಟ್ಟಿ ಬೆಳೆದ ಮಕ್ಕಳ ಬಾಯಲ್ಲಿ ಮಂತ್ರ, ಸ್ತೋತ್ರ, ದೇವರನಾಮ, ಗೀತೆಯ ಶ್ಲೋಕಗಳ ಸ್ಫುಟವಾದ ಉಚ್ಚಾರಣೆ ಇವೆಲ್ಲಾ ಕೇಳಿದರಂತೂ ಅಚ್ಚರಿಯೇ ಸರಿ! ನಾವು ಮಾತ್ರವಲ್ಲ ಮುಂದಿನ ಪೀಳಿಗೆಯೂ ಕೂಡ ಧರ್ಮ, ಸಂಸ್ಕೃತಿ, ಅಚಾರ-ವಿಚಾರಗಳನ್ನು ಬಿಟ್ಟು ಬದುಕಬಾರದು

ಎಂಬ ಉದ್ದೇಶಕ್ಕೆ ದೂರದರ್ಶಿತ್ವವುಳ್ಳ ಶ್ರೀಗಳು ಮಾಡಿದ ಈ ಎಲ್ಲಾ ಪ್ರಯತ್ನವೂ ಇಂದು ಸಾಕಾರಗೊಂಡಿದೆ. ಅಮೇರಿಕಾದಂತಹ ಆಧುನಿಕ ದೇಶಗಳಲ್ಲಿಯೂ ಇಂದು ಧರ್ಮಧ್ವಜದ ಪ್ರತಿಷ್ಠಾಪನೆಯಾಗಿದೆ.

ಆಚಾರ್ಯರ ಸಂದೇಶವನ್ನು, ಕೃಷ್ಣಪ್ರಜ್ಞೆಯನ್ನು ಜಗದುದ್ದಗಲಕ್ಕೂ ಸಾರುತ್ತಾ, ನಿಜ ಅರ್ಥದಲ್ಲಿ ವಿಶ್ವಗುರುಗಳಾಗಿರುವ ಸುಗುಣಾರ್ಣವ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರಿಗೆ ಭೂಯೋ ಭೂಯೋ ನಮೋ ನಮಃ.



VENKATA KRISHNA VRUNDAVANA, SYDNEY, AUSTRAILIA.

# ಸಿಡ್ನಿಯಲ್ಲಿ ಸದ್ಯದಲ್ಲೇ ತಲೆಯೆತ್ತಲಿದೆ ಶ್ರೀಮಠದ ವಿನೂತನ ಮಂದಿರ !

**ಆ**ಸ್ಟ್ರೇಲಿಯಾ ಎಂದ ತತ್ ಕ್ಷಣ ಪ್ರವಾಸಿಗರ ಮನಸ್ಸಿಗೆ ಬರುವ ಮೊದಲ ಚಿತ್ರಣ ವಿಶ್ವಪ್ರಸಿದ್ಧ ಮಹಾನಗರ 'ಸಿಡ್ನಿ'ಯಲ್ಲಿರುವ ಐತಿಹಾಸಿಕ ಮತ್ತು ಮನಮೋಹಕ 'ಹಾರ್ಬರ್ ಬ್ರಿಡ್ಜ್' ಹಾಗೂ 'ಒಪೇರಾ ಹೌಸ್'! ಜೊತೆಗೆ ಸ್ವಚ್ಛ ಹಾಗೂ ಸುಂದರವಾಗಿ ಕಂಗೊಳಿಸುವ ಅಲ್ಲಿನ ನೀಲಿ ಬಣ್ಣದ ಕಡಲತೀರಗಳು! ಹೀಗೆ ಆಸ್ಟ್ರೇಲಿಯಾದ ಪ್ರಭಾವಶಾಲಿ ನಗರವಾಗಿ ಮೆರೆಯುತ್ತಿರುವ 'ಸಿಡ್ನಿ'ಯು ಅಲ್ಲಿನ 'ನ್ಯೂಸೌತ್ ವೇಲ್ಸ್' ರಾಜ್ಯದ ರಾಜಧಾನಿಯೂ ಹೌದು.ಆ ದೇಶದಲ್ಲಿ 'ಮೆಲ್ ಬೋರ್ನ್' ನಂತರ ಅನೇಕ ಮಂದಿ ಭಾರತೀಯ ಮತ್ತು ಶ್ರೀಲಂಕನ್ ಹಿಂದೂಗಳಿಗೆ ಉನ್ನತ ವಿದ್ಯೆ ಮತ್ತು ಉತ್ತಮ ಉದ್ಯೋಗಗಳ ಜೊತೆಗೆ ಸುಖಮಯ ಜೀವನಕ್ಕೆ ಬೇಕಾದ ವ್ಯವಸ್ಥೆಗಳುಳ್ಳ ಜನಪ್ರಿಯ ನಗರವೂ ಈ 'ಸಿಡ್ನಿ'ಯೇ. ಪ್ರಸ್ತುತ ಇಲ್ಲಿ ವಾಸವಾಗಿರುವ ಭಾರತೀಯರ ಸಂಖ್ಯೆಯೇ ಸುಮಾರು ಒಂದೂ ಮುಕ್ಕಾಲು ಲಕ್ಷ!

ಹಿತವಾದ ವಾತಾವರಣ, ಹಸಿರುಮಯಸುಂದರ ಪರಿಸರ, ಉತ್ತಮ ಆಡಳಿತ ಮತ್ತು ಸುರಕ್ಷತಾ ವ್ಯವಸ್ಥೆಗಳು ಹಾಗೂ ವಿಪುಲ ಉದ್ಯೋಗಾವಕಾಶಗಳಿಂದಾಗಿ ಪ್ರಸ್ತುತ ಪ್ರಪಂಚದ 'ಬೆಸ್ಟ್ ಲಿವೇಬಲ್' ಸಿಟಿಗಳಲ್ಲಿ ಒಂದು ಎಂಬುವುದು ಈ ಸಿಡ್ನಿಯ ಇನ್ನೊಂದು ವಿಶೇಷಣ.

ವಿದ್ಯಾವಂತ ಮತ್ತು ಪ್ರತಿಷ್ಠಿತ ಅನುಷ್ಠಾನನಿಷ್ಠ ಪರಂಪರೆಯ ಹಿನ್ನೆಲೆಯುಳ್ಳ ಒಂದಷ್ಟು ಮಂದಿ ನಮ್ಮವರು ಸೇರಿದಲ್ಲಿ ದೇಗುಲಗಳು, ಮಠಮಂದಿರಗಳು ಸ್ಥಾಪನೆಗೊಳ್ಳುವುದು ಆಶ್ಚರ್ಯವೇನೂ ಅಲ್ಲ. ಅದು ಯಾವ ದೇಶವೇ ಆಗಿರಲಿ, ಯಾವ ನಗರವೇ ಆಗಿರಲಿ ನಮ್ಮವರು ನಮ್ಮತನವನ್ನೆಂದಿಗೂ ಬಿಟ್ಟುಕೊಡುವುದಿಲ್ಲ. ಅದರಲ್ಲೂ ಪರದೇಶದಲ್ಲಿರುವವರು ನಮ್ಮ ಧರ್ಮ ಮತ್ತು ಸಂಸ್ಕೃತಿಯ ಪಾಲನೆ

ಮತ್ತು ರಕ್ಷಣೆಗೋಸ್ಕರ ಯಾವ ತ್ಯಾಗ ಮತ್ತು ಪ್ರಯತ್ನಕ್ಕೂ ಹಿಂಜರಿಯುವುದಿಲ್ಲ. ಹೀಗೆ ಆಸ್ಟ್ರೇಲಿಯಾ ನೆಲದಲ್ಲಿ ಧರ್ಮಸಂಸ್ಥಾಪನೆಗೋಸ್ಕರ ಭಕ್ತರ ಅತೀವ ಒತ್ತಾಯದ ಮೇರೆಗೆ ಮೆಲ್ಬೋರ್ನ್ ಮಹಾನಗರದಲ್ಲಿ ಪಾದಾರ್ಪಣೆಗೈದ ಪರಮಪೂಜ್ಯ ಪುತ್ತಿಗೆ ಶ್ರೀಪಾದರನ್ನು ಸಿಡ್ನಿಯ ಭಾರತೀಯರು ಹರಸಾಹಸ ಮಾಡಿ ಮೊದಲ ಬಾರಿಗೆ ತಮ್ಮೂರಿಗೆ ಕರೆಸಿಕೊಂಡದ್ದು 2013ನೇ ಇಸವಿಯಲ್ಲಿ. ತದನಂತರ ಸಿಡ್ನಿಯಲ್ಲೂ ಶ್ರೀ ಮಠದ ಶಾಖೆಯ ಸ್ಥಾಪನೆಯಾಗಬೇಕೆಂಬ ಒತ್ತಾಯ ಪೂರ್ವಕ ವಿನಂತಿಯೂ ಶ್ರೀಗಳ ಸಮ್ಮುಖದಲ್ಲಿ ಸಮರ್ಪಣೆಯಾಯಿತು.

ಅತ್ತ ಕಡೆ ಮೆಲ್ಬೋರ್ನ್‌ನಲ್ಲಿ ಸ್ಥಾಪನೆಗೊಂಡಿದ್ದ ಶ್ರೀ ಮಠದ ಶಾಖೆಯು ಒಂದು ಹಂತಕ್ಕೆ ಬೆಳೆದು ನಿಂತು, ಅಲ್ಲಿನ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಅನೇಕ ಭಕ್ತರಿಗೆ ನೆಮ್ಮದಿಯನ್ನು, ಸಂತೃಪ್ತಿಯನ್ನು ತಂದುಕೊಡುವಲ್ಲಿ ಯಶಸ್ಸನ್ನು ಸಾಧಿಸುತ್ತಿದ್ದರೆ, ಇತ್ತ ನಮ್ಮ ಸಿಡ್ನಿಯ ಭಕ್ತರಲ್ಲಿದ್ದ ತಮ್ಮಲ್ಲಿಯೂ ಅಂತಹ ಶ್ರೀ ಮಠದ ಸ್ಥಾಪನೆಯಾಗಬೇಕೆಂಬ ತೀವ್ರ ಹಂಬಲ 2018ರಲ್ಲಿ ಮತ್ತೆ ಪೂಜ್ಯ ಶ್ರೀಪಾದರನ್ನು ಒತ್ತಾಯಪೂರ್ವಕವಾಗಿ ತಮ್ಮೂರಿಗೆ ಕರೆಸುವಂತೆ ಮಾಡಿತು. ಪೂರ್ವಭಾವಿಯಾಗಿ ಒಂದಷ್ಟು ಜನರು ಮುಂದೆ ಬಂದು ಧನಸಂಗ್ರಹವನ್ನು ಮತ್ತು ಶ್ರೀ ಮಠದ ಸ್ಥಾಪನೆಗೋಸ್ಕರ ಸೂಕ್ತ ಸ್ಥಳಗಳ ಅನ್ವೇಷಣೆಯನ್ನೂ ಪ್ರಾರಂಭಿಸಿಯಾಗಿತ್ತು!

ಅದರಂತೆ ಪೂಜ್ಯ ಶ್ರೀಪಾದರ ಸಂಕಲ್ಪ ಶಕ್ತಿಯೂ ಸಾಕಾರಗೊಂಡು 2018ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಸಿಡ್ನಿಯ 'ತುಂಗಬೀ' ಎಂಬ ಪ್ರದೇಶದಲ್ಲಿ ಶ್ರೀ ಮಠದ ಪುಟ್ಟ ಶಾಖೆಯು ಪ್ರಾರಂಭಗೊಂಡಿತು. ಅದರ ಕತೆಯೂ ಸ್ವಾರಸ್ಯಕರವಾಗಿದೆ! ಶ್ರೀಲಂಕಾ ಮೂಲದ ಒಬ್ಬ ವ್ಯಕ್ತಿಗೆ ಸೇರಿದ ಮನೆಯಾಗಿತ್ತದು. ಆ ಸಮಯದಲ್ಲಿ ಬೇರೆ ಕೆಲವು ಸ್ಥಳಗಳನ್ನು ನೋಡಿದ್ದರೂ ಶ್ರೀಗಳಿಗೆ ಮೆಚ್ಚುಗೆಯಾಗಿದ್ದು ಈ ಮನೆ ಮಾತ್ರ. ಆದರೆ ಅವನು ಒಪ್ಪಬೇಕಲ್ಲ? ಆತ ಸ್ವಯಂ ಅನ್ಯಧರ್ಮೀಯನಾಗಿದ್ದರೂ ಪೂಜ್ಯ ಶ್ರೀಪಾದರನ್ನು ಕಂಡಾಕ್ಷಣ ಆತನಿಗೆ ಏನನ್ನಿಸಿತೋ ಏನೋ? ಸ್ವಲ್ಪ ಸಮಯದ ಮಟ್ಟಿಗೆ ನಿಮ್ಮ ಧಾರ್ಮಿಕ ಅನುಷ್ಠಾನಗಳನ್ನು ಇಲ್ಲಿ ನಡೆಸಿಕೊಂಡು ಹೋಗಿ, ಆದಷ್ಟು ಬೇಗ ಬೇರೆ

ಸ್ಥಳವನ್ನು ಹುಡುಕಿ ಎಂದು ಹೆಚ್ಚಿನ ಬಾಡಿಗೆಯನ್ನೂ ಬಯಸದೆ ತನ್ನ ಜಾಗವನ್ನು ಬಿಟ್ಟುಕೊಟ್ಟದ್ದು ಮಾತ್ರ ನಿಜಕ್ಕೂ ಆಶ್ಚರ್ಯ! ಜನಗಳ ಕಿರಿಕಿರಿ, ಕಾನೂನು ತೊಂದರೆಗಳು ಇತ್ಯಾದಿ ಅನೇಕ ಕಾರಣಗಳಿಂದಾಗಿ ಸಾಮಾನ್ಯವಾಗಿ ವಿದೇಶಗಳಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಸುಲಭದಲ್ಲಿ ಯಾರೂ ತಮ್ಮ ಸ್ಥಳಗಳನ್ನು ಬಿಟ್ಟುಕೊಡುವುದಿಲ್ಲ. ಶ್ರೀಗಳ ಇಚ್ಛೆಗೆ ದೇವರ ಅನುಗ್ರಹದ ಮುದ್ರೆ ಇದ್ದೇ ಇರುತ್ತದೆಯಲ್ಲವೇ? ಸೂಕ್ತವಾದ ವೈದಿಕ ಸಂಸ್ಕಾರಗಳೊಂದಿಗೆ ಆ ಸ್ಥಳವನ್ನು ಶುದ್ಧೀಕರಣಗೊಳಿಸಿ ಶ್ರೀಕೃಷ್ಣ, ಪ್ರಾಣದೇವರು ಮತ್ತು ಶ್ರೀರಾಯರ ಮೃತ್ತಿಕಾಬೃಂದಾವನವನ್ನು ಶ್ರೀಗಳ ಅಮೃತಹಸ್ತದಿಂದ ವಿಧ್ಯುಕ್ತವಾಗಿ ಸ್ಥಾಪನೆಗೊಳಿಸಲಾಯಿತು.

ಆರಂಭದಲ್ಲಿ ಶ್ರೀ ಮಠದ ಸಿಡ್ನಿಶಾಖೆಯು ಚೆನ್ನಾಗಿಯೇ ನಡೆಯಿತು. ಶ್ರೀಗಳು ನೇಮಿಸಿದ, ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ಸೂಕ್ತ ತರಬೇತಿ ಪಡೆದ ಯುವ ಅರ್ಚಕರು ಶ್ರೀ ಮಠವನ್ನು ಸಮರ್ಪಕವಾಗಿ ಮುನ್ನಡೆಸಿಕೊಂಡು ಬಂದರು. ಜನರ ಸಹಕಾರವೂ ಅದ್ಭುತವಾಗಿ ಮೂಡಿಬಂತು. ಶ್ರೀಮಠದ ಇತರ ಶಾಖೆಗಳಂತೆಯೇ ಎಲ್ಲ ಧಾರ್ಮಿಕ ವಿಧಿಗಳು, ಪಾಠಪ್ರವಚನ, ಅನ್ನದಾನಾದಿ ಸೇವೆಗಳು ವಿಜೃಂಭಣೆಯಿಂದ ಸಂಪನ್ನಗೊಂಡವು. ಆದರೆಮುಂದೆ ಬಂದೊದಗಿದ ಕೋವಿಡ್ ಮಹಾಮಾರಿಯು ಒಂದಷ್ಟು ಸಮಯ ಆಸ್ಟ್ರೇಲಿಯಾವನ್ನೂ ತಲ್ಲಣಗೊಳಿಸಿತು. ಸುಮಾರು ಒಂದೂವರೆ ವರ್ಷ ನಿಶ್ಚೇಷ್ಟಿತವಾಗಿ ಕಳೆದುಹೋಯಿತು.

ಸ್ಥಳದ ಮಾಲೀಕನಿಗೆ ಮುಂಚೆ ಮಾತು ಕೊಟ್ಟಂತೆ ವರ್ಷಾಂತ್ಯದಲ್ಲಿ ಪ್ರಸ್ತುತ ಸ್ಥಳವನ್ನು ಬಿಟ್ಟುಕೊಟ್ಟು, ಬೇರೆ ಜಾಗವನ್ನು ನೋಡಬೇಕಿತ್ತು. ಆದರೆ ಕೋವಿಡ್ ನಂತರ ಎಲ್ಲೆಡೆ ಸ್ಥಳದ ಬೆಲೆಯೂ ಹೆಚ್ಚಿತು ಮತ್ತು ಶ್ರೀಮಠದ ಆರ್ಥಿಕ ಪರಿಸ್ಥಿತಿಯೂ ಅಷ್ಟೊಂದು ಗಟ್ಟಿಯಾಗಿರಲಿಲ್ಲ. ಹೇಗೋ ಹರಸಾಹಸಪಟ್ಟು 2024ನೇ ಇಸವಿಯಲ್ಲಿ ಪಕ್ಕದ 'ರಿವರ್ಸ್ಟನ್' ಎಂಬ ಪ್ರದೇಶದಲ್ಲಿ ಬಾಡಿಗೆಯ ಸ್ಥಳವನ್ನು ಹುಡುಕಿ ಅಲ್ಲಿಗೆ ಶ್ರೀಮಠವನ್ನು ಸ್ಥಳಾಂತರಿಸಲಾಯಿತು. ಆದರೆ ಶಾಶ್ವತವಾದ ನೆಲೆಯನ್ನು ಅತಿಶೀಘ್ರದಲ್ಲಿ ಕಂಡುಕೊಳ್ಳಲೇಬೇಕಾದ ಅನಿವಾರ್ಯತೆಯಂತೂ ಹೆಗಲಮೇಲಿನ ಭಾರದಂತೆ ಹೆಚ್ಚುವರಿ ಹೊರೆಯಾಗಿ ಕಾಡುತ್ತಲೇ ಇತ್ತು!

ತನ್ಮಧ್ಯದಲ್ಲಿ ಶ್ರೀಮಠದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುವ ಅಂತರಂಗ ಭಕ್ತರೊಬ್ಬರಿಗೆ ಪರಿಚಿತನಾಗಿದ್ದ ಪಂಜಾಬಿ ಉದ್ಯಮಿಯೊಬ್ಬನಿಗೆ ಶ್ರೀಮಠದ ಸಂಪರ್ಕವಾಯಿತು. ಸಾಮಾನ್ಯವಾಗಿ ಪಂಜಾಬಿಗಳಿಗೆ ನಮ್ಮ ದಾಕ್ಷಿಣ್ಯಾತ್ಯರೆಂದರೆ ಅಷ್ಟಕ್ಕಷ್ಟೆ. ಪರಸ್ಪರ ಭಾಷೆ, ವಿಧಿವಿಧಾನಗಳು ಇತ್ಯಾದಿ ಅನೇಕ ವ್ಯತ್ಯಾಸಗಳೇ ನಮ್ಮೊಳಗಿನ ಈಅಸಮಾಧಾನದ ಧೋರಣೆಗೆ ಕಾರಣ. ಆದರೆ ನಮ್ಮ ಶ್ರೀಮಠದ ಶ್ರದ್ಧಾಭಕ್ತಿ ಮತ್ತು ಜ್ಞಾನಪೂರ್ವಕ ಶಿಸ್ತುಬದ್ಧ ಆಚರಣೆಗಳನ್ನು ನೋಡಿದ ಬಳಿಕ ಆಮನುಷ್ಯನ ಧೋರಣೆಯೂ ಬದಲಾಯಿತೆನ್ನಿ! ಸ್ಥಳೀಯವಾಗಿ 'ಬಾತ್ಲಾ ಗ್ರೂಪ್' ಎಂಬ ಹೆಸರಿನಲ್ಲಿ ಪ್ರಸಿದ್ಧ ಬಿಲಿಯನ್‌ಗಟ್ಟಲೆ ಡಾಲರುಗಳ 'ರಿಯಲ್ ಎಸ್ಟೇಟ್' ಉದ್ಯಮವನ್ನು ನಡೆಸುತ್ತಿದ್ದ ಆ ವ್ಯಕ್ತಿ ತನ್ನ ಸುಪರ್ದಿಯಲ್ಲಿದ್ದ ದೊಡ್ಡ ಮನೆಯೊಂದನ್ನು ಶ್ರೀ ಮಠಕ್ಕೆ ಹಾಗೆಯೇ ಬಿಟ್ಟುಕೊಡಲು ಸನ್ನದ್ಧನಾಗಿದ್ದ! ಒಂದು ಶುಭದಿವಸ ಕೇವಲ ಎರಡು ಡಾಲರುಗಳನ್ನು ಪಡೆದುಎರಡು ಮಿಲಿಯನ್ ಡಾಲರ್ ಬೆಲೆಯುಳ್ಳ ಆ ಮನೆಯ ಕೀಲಿಕೈಯನ್ನೂ ತಂದುಕೊಟ್ಟ! ಆದರೆ ಪರ್ಯಾಯ ಪೂರ್ವದಲ್ಲಿ ಅಲ್ಲಿಗೆ ಭೇಟಿಕೊಟ್ಟ ಪೂಜ್ಯ ಶ್ರೀಗಳಿಗೇನೋ ಆ ಜಾಗ ಇಷ್ಟವಾಗಲಿಲ್ಲ! ಆದರೂ ನಿರಾಯಾಸವಾಗಿ ಸಿಗುತ್ತದಲ್ಲ ಎಂದು ಭಕ್ತರು ಒತ್ತಾಯಿಸಿದಾಗ ಪೂಜ್ಯ ಶ್ರೀಪಾದರು ಒಲ್ಲದ ಮನಸ್ಸಿನಿಂದ 'ಸರಿ, ನೀವು ಮುಂದೆ ಹೋಗಿ. ಕೃಷ್ಣನ ಇಚ್ಛೆಯಂತೆ ಆಗಲಿ' ಎಂದು ಸಮ್ಮತಿಯನ್ನೇನೋ ನೀಡಿದರು. ಆದರೆ ದೇವರ ಸಂಕಲ್ಪ ಬೇರೆಯೇ ಇತ್ತು! ಮುಂದೆ ಆ ಪ್ರದೇಶದಲ್ಲಿ ಮಠವನ್ನು ನಡೆಸಲು ಬೇಕಾದ ಅನುಮತಿಯನ್ನು ಪಡೆಯುವಲ್ಲಿ ಮಾತ್ರ ಆ ಉದ್ಯಮಿಯ ಪ್ರಯತ್ನ ವ್ಯರ್ಥವಾಗಿ ಹೋಯಿತು! ಸ್ಥಳೀಯ ಜನರ ತೀವ್ರ ವಿರೋಧದಿಂದಾಗಿ ನಮಗೆ ಅನುಮತಿ ಸಿಗಲೇ ಇಲ್ಲ! ಇದ್ದಕ್ಕಿದ್ದಂತೆ ಬಂದ ಸೌಭಾಗ್ಯ ಕ್ಷಣಾರ್ಧದಲ್ಲಿ ಮರೆಯಾದಂತೆ ನಮ್ಮೆಲ್ಲರನ್ನೂ ಈ ಪ್ರಸಂಗ ತೀವ್ರವಾಗಿ ನಿರಾಸೆಗೊಳ್ಳುವಂತೆ ಮಾಡಿತು.

ಆದರೆ ಈ ಘಟನೆ ಆ ಉದ್ಯಮಿಯನ್ನು ಶ್ರೀಮಠಕ್ಕೆ ಇನ್ನೂ ಹತ್ತಿರವಾಗುವಂತೆ ಮಾಡಿತು. ಆತನು ತನ್ನ ಉದ್ಯಮವನ್ನು ವಿಸ್ತರಿಸುವ ಉದ್ದೇಶದಿಂದ ಆಗ ತಾನೇ ಖರೀದಿಸಲು ಉದ್ದೇಶಿಸಿದ ಇನ್ನೊಂದು ಜಾಗವನ್ನು ಶ್ರೀಮಠಕ್ಕೆ ಸೂಕ್ತವಾಗಬಹುದೆಂದು ಸೂಚಿಸಿದ. ತನ್ನ ಎಲ್ಲ ಸಂಪರ್ಕ ಮತ್ತು ಪ್ರಭಾವವನ್ನು ಬಳಸಿ ಅನುಮತಿಯನ್ನು

ಪಡೆಯಲೂ ಯಶಸ್ವಿಯಾದ. ಆದರೆ ಆ ಜಾಗವನ್ನು ಕೊಂಡುಕೊಳ್ಳುವ ಸಾಮರ್ಥ್ಯ ಶ್ರೀಮಠದ ಈ ಪುಟ್ಟಶಾಖೆಗೆ ಎಲ್ಲಿಂದ ಬರಬೇಕು? 'ಮಾರ್ಸ್ಡೆನ್ ಪಾರ್ಕ್' ಎಂಬ ಪ್ರದೇಶದಲ್ಲಿ ಅತ್ಯಂತ ಉತ್ತಮವೆನಿಸಿದ ಆಯಕಟ್ಟಿನ ಜಾಗದಲ್ಲಿರುವ ಒಂದು ಎಕರೆ ವಿಸ್ತಾರದ ಸುಂದರ ನಿವೇಶನವದು! ಸುಮಾರು ಎಂಟು ಮಿಲಿಯನ್ ಡಾಲರ್ ಬೆಲೆಬಾಳುವ ಆ ಸ್ಥಳವನ್ನು ತಾನು ಖರೀದಿಸಿ ಕೇವಲ ಐದೂವರೆ ಮಿಲಿಯನ್ ಡಾಲರ್ ಬೆಲೆಗೆ ಶ್ರೀಮಠಕ್ಕೆ ಕೊಡಲು ಆತನೇನೋ ಉದ್ಯುಕ್ತನಾದ! ಆದರೆ ಅಷ್ಟೊಂದು ಹಣವನ್ನು ತರುವುದೆಲ್ಲಿಂದ?

ಏನೂ ಪ್ರಯತ್ನಿಸದೆ ಸುಮ್ಮನೆ ಕುಳಿತುಕೊಳ್ಳುವುದು ಪುತ್ತಿಗೆ ಮಠದ ಜಾಯಮಾನವೇ ಅಲ್ಲ! ಶ್ರೀಗಳ ಅಣತಿಯಂತೆ ಅತ್ಯುತ್ಸಾಹಿ ಸ್ಥಳೀಯ ಅರ್ಚಕರ ನೇತೃತ್ವದಲ್ಲಿ ಧನ ಸಂಗ್ರಹಕ್ಕೋಸ್ಕರ ರಾತ್ರಿಹಗಲು ನಾನಾವಿಧದ ಸಾತ್ವಿಕ ಮತ್ತು ಪಾರದರ್ಶಕ ಯೋಜನೆಗಳನ್ನು ಮತ್ತು ಪ್ರಯತ್ನಗಳನ್ನು ಪ್ರಾರಂಭಿಸಲಾಯಿತು. ಸ್ವಯಂಸೇವಕರ ಅನೇಕ ಗುಂಪುಗಳು ಭಕ್ತರ ಮನೆಮನೆಗೆ ಭೇಟಿಕೊಟ್ಟು ತಿಂಗಳಿಗೆ ಇಂತಿಷ್ಟು ಎಂಬಂತೆ ವಂತಿಗೆಯನ್ನು ಕೊಡುವಂತೆ ಬೇಡಿಕೊಂಡಾಗ ಸುಮಾರು ನಾಲ್ಕುನೂರು ಮನೆಯವರು ಮುಂದೆ ಬಂದರು! ಡೊನೇಶನ್, ಬಡ್ಡಿರಹಿತ ಸಾಲ ಇತ್ಯಾದಿ ಅನೇಕ ಆಯಾಮಗಳಲ್ಲಿ ದೇವರಿಗೋಸ್ಕರ ನಿಧಿ ಸಂಗ್ರಹಿಸುವ ಕಾರ್ಯ ಸಮರೋಪಾದಿಯಲ್ಲಿ ಸಂಭವಿಸಿತು. ಮತ್ತೊಂದು ಕಡೆ ಶ್ರೀಮಠದ ಆಡಳಿತ ವರ್ಗ ಮತ್ತು ಅಕೌಂಟ್ಸ್ ಟೀಮ್ ಅನೇಕ ಬ್ಯಾಂಕ್ ಹಾಗೂ ಆರ್ಥಿಕ ಸಂಸ್ಥೆಗಳಲ್ಲಿ ಸಂಪರ್ಕಿಸಿ ಬೃಹತ್ ಮೊತ್ತದ ಸಾಲವನ್ನು ಪಡೆಯುವ ಮಹಾ ಪ್ರಯತ್ನವನ್ನು ನಡೆಸುತ್ತಿತ್ತು. ದೇವರ ಅನುಗ್ರಹ ಮತ್ತು ಶ್ರೀಗಳ ಆಶೀರ್ವಾದದೊಂದಿಗೆ ಆ ಪ್ರಯತ್ನವೂ ಸಫಲವಾಯಿತು! ಆಸ್ಟ್ರೇಲಿಯಾದ ಪ್ರತಿಷ್ಠಿತ ನಾಲ್ಕು ಬ್ಯಾಂಕುಗಳಲ್ಲಿ ಒಂದಾದ CBA, 'ಕಾಮನ್ ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ' ಮೂರೂವರೆ ಮಿಲಿಯನ್ ಡಾಲರ್‌ಗಳಷ್ಟು ಸಾಲವನ್ನು ಕೊಡಲು ಒಪ್ಪಿಗೆಯನ್ನು ನೀಡಿತು! ಹೀಗೆ ಹೇಗೋ ಪ್ರಯತ್ನಪಟ್ಟು ಜಾಗವನ್ನೇನೋ ಖರೀದಿಸಿಯಾಯಿತು! ಇನ್ನು ಮುಂದೆ ಹೇಗೆ?

ಶ್ರೀ ಮಠದ ನಿರ್ಮಾಣ ಕಾರ್ಯಕ್ಕೆ ಏನಿಲ್ಲವೆಂದರೂ ಸುಮಾರು ನಾಲ್ಕು ಮಿಲಿಯನ್ ಡಾಲರ್‌ಗಳ ಅವಶ್ಯಕತೆಯಂತೂ ಇದ್ದೇ ಇದೆ. ಈಗಾಗಲೇ ನಮ್ಮ ಸಂಸ್ಥೆಯಮೇಲೆ ಬೃಹನ್ಮೊತ್ತದ ಸಾಲದ ಹೊರೆಯಿದೆ! ಅದರ ಕಂತುಗಳನ್ನು ಕಟ್ಟುವಷ್ಟರಲ್ಲೇ ನಮಗೆ ಸಾಕುಸಾಕಾಗುತ್ತಿದೆ. ಇನ್ನೂ ಹೆಚ್ಚಿನ ಧನಸಂಗ್ರಹ ನಮ್ಮಿಂದ ಸಾಧ್ಯವೇ ಎಂಬ ಚಿಂತೆ ನಮ್ಮೆಲ್ಲರನ್ನೂ ಕಾಡುತ್ತಿತ್ತು. ತನ್ಮಧ್ಯದಲ್ಲಿ ದೇಶದ ಚುನಾವಣೆಯೂ ಘೋಷಣೆಯಾಯಿತು. ಆಗ ಶ್ರೀಮಠಕ್ಕೆ ಬಂದ ಸ್ಥಳೀಯ ಸಂಸದ ಸ್ಥಾನಾಕಾಂಕ್ಷಿಯೊಬ್ಬರು ಶ್ರೀ ಮಠದ ದೇವರ ಮತ್ತು ಶ್ರೀಗುರುರಾಯರ ಮುಂದೆ ಬಂದು ವಿಶೇಷ ಪ್ರಾರ್ಥನೆಯನ್ನು ಮಾಡಿ ಹೋದರು! ತಾನು ಗೆದ್ದರೆ ಶ್ರೀ ಮಠದ ನವನಿರ್ಮಾಣಕ್ಕೆ ಸರಕಾರದಿಂದ ದೊಡ್ಡ ಮೊತ್ತದ ಸಹಾಯವನ್ನು ಮಾಡುವುದು ಅವರ ಸಂಕಲ್ಪವಾಗಿತ್ತು!

ಆಶ್ಚರ್ಯವೆಂಬಂತೆ ಶ್ರೀ ದೇವರು ಮತ್ತು ಗುರುರಾಯರು ಅವರಿಗೆ ಜಯವನ್ನು ತಂದು ಕೊಟ್ಟರು! ಅವರ ಹೆಸರು 'ಮಿಷೆಲ್ ರೋಲ್ಯಾಂಡ್' ನಿಕಟಪೂರ್ವ ಸರಕಾರದಲ್ಲಿ ಫೆಡರಲ್ ಕಮ್ಯುನಿಕೇಶನ್ ಮಿನಿಸ್ಟರ್ ಆಗಿದ್ದರವರು! ಪ್ರಸ್ತುತ ನೂತನ ಸರಕಾರದಲ್ಲಿ ಅವರಿಗೆ 'ಅಟಾರ್ನಿ ಜನರಲ್ ಆಫ್ ಆಸ್ಟ್ರೇಲಿಯಾ' ಎಂಬ ಪರಮೋನ್ನತ ಪದವಿಯನ್ನು ಘೋಷಿಸಲಾಗಿದೆ! ತಮ್ಮ ಈ ವಿಜಯೋತ್ಸವದ ಸಂದರ್ಭದಲ್ಲಿ ಮರೆಯದೆ ಶ್ರೀಮಠವನ್ನು ಕೃತಜ್ಞತಾ ಪೂರ್ವಕವಾಗಿ ಸಂಪರ್ಕಿಸಿದ ಮಾನ್ಯ ಸಂಸದರು ತಮ್ಮ ವಾಗ್ದಾನಕ್ಕೆ ತಾವು ಬದ್ಧರಾಗಿರುವುದಾಗಿ ತಿಳಿಸಿದ್ದಾರೆ. ಈ ನಡುವೆ ಶ್ರೀಮಠ ನವನಿರ್ಮಾಣಕ್ಕೆ ದೇಣಿಗೆಯನ್ನು ಸಂಗ್ರಹಿಸುವ ಪ್ರಯತ್ನವೂ ಭರದಿಂದ ಸಾಗುತ್ತಿದ್ದು ಪೂಜ್ಯ ಶ್ರೀಪಾದರು ತಮ್ಮ ಚತುರ್ಥ ಪರ್ಯಾಯವನ್ನು ಅಭೂತಪೂರ್ವ ಯಶಸ್ಸಿನೊಂದಿಗೆ ಮುಗಿಸಿ ಬರುವಷ್ಟರಲ್ಲಿ ಸಿಡ್ನಿಯ ಶ್ರೀಮಠವೂ ಉದ್ಘಾಟನಗೆ ಸಿದ್ಧವಾಗುವ ಸರ್ವಲಕ್ಷಣಗಳೂ ಇದೀಗ ಸ್ಪಷ್ಟವಾಗಿ ಗೋಚರಿಸುತ್ತಿವೆ. ಉಳಿದದ್ದು ಭಗವದಿಚ್ಛೆ!

# ನನ್ನ ಗುರುಗಳು



**ಶ್ರೀ ನಿತೀಶ್ ಕುಮಾರ್**
ಶ್ರೀಕೃಷ್ಣವೃಂದಾವನ, ಸಿಡ್ನಿ, ಆಸ್ಟ್ರೇಲಿಯಾ

**ಮಾ**ನವನ ಜೀವನದಲ್ಲಿ ಗುರುಗಳ ಸ್ಥಾನ ಅತ್ಯಂತ ಉನ್ನತವಾದುದು. ಅಜ್ಞಾನ ಎಂಬ ಅಂಧಕಾರದಿಂದ ಜ್ಞಾನ ಎಂಬ ಬೆಳಕಿನತ್ತ ಮಾನವನನ್ನು ನಡೆಸುವಶಕ್ತಿ ಗುರುಗಳಲ್ಲಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಂತಹ ಮಹಾನ್ಗುರುಗಳಾಗಿ ನನ್ನ ಜೀವನವನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿರುವವರು ಪರಮ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು.

ಮಾಧ್ವ ಸಂಪ್ರದಾಯದ ಉಜ್ವಲ ಪರಂಪರೆಯನ್ನು ಸಮರ್ಪಕವಾಗಿ ಮುಂದುವರೆಸುತ್ತಿರುವ ಹಾಗೂ ಪರಿಶುದ್ಧವಾದ ತತ್ವಸಿದ್ಧಾಂತವನ್ನು ಭೋಧಿಸುತ್ತಿರುವ ನಮ್ಮ ಗುರುಗಳು ದೇಶವಿದೇಶಗಳಲ್ಲೂ ಅಪಾರ ಶಿಷ್ಯಸಂಪತ್ತನ್ನು ಪಡೆದಿದ್ದಾರೆ – ಹಾಗೂ ತ್ಯಾಗ, ತಪಸ್ಸು ಹಾಗೂ ತತ್ತ್ವಜ್ಞಾನಗಳ ಜೀವಂತ ಪ್ರತೀಕವಾಗಿದ್ದಾರೆ. ಜಗದ್ಗುರು ಶ್ರೀಮದಾನಂದತೀರ್ಥರು ಪ್ರತಿಪಾದಿಸಿದ ತತ್ವವಾದದ ಸಿದ್ಧಾಂತವನ್ನು ಅವರು ತಮ್ಮ ಜೀವನದಲ್ಲಿಯೇ ಅನುಸರಿಸಿ, ಅದನ್ನು ಜನಸಾಮಾನ್ಯರಿಗೆ ಸರಳ, ಸುಗಮ ಮತ್ತು ಸ್ಪಷ್ಟ ರೀತಿಯಲ್ಲಿ ಬೋಧಿಸುತ್ತಿದ್ದಾರೆ.

ಮಾಧ್ವ ತತ್ವದ ಸಾರವನ್ನು ಈ ಶ್ಲೋಕವು ಸಂಕ್ಷಿಪ್ತವಾಗಿ ಹೀಗೆ ವಿವರಿಸುತ್ತದೆ.

ಹರಿಃಸರ್ವೋತ್ತಮೋವಿಷ್ಣುಃವಾಯುರ್ಜೀವೋತ್ತಮಃಸ್ಮೃತಃ ।
ತತ್ವವಿಚಾರಏವಾಯಂಮಧ್ವಸಿದ್ಧಾಂತಉಚ್ಯತೇ ॥

ಹೀಗೆ ಈ ಶ್ಲೋಕದಲ್ಲಿ ಪ್ರತಿಪಾದಿಸಿದಂತೆ, ಹರಿಯೇ ಸರ್ವೋತ್ತಮನು ಎಂಬ ಸಿದ್ಧಾಂತವನ್ನು ಉಪದೇಶಿಸುತ್ತಾ ಕೃಷ್ಣನ ಪೂಜಾದಿ ಸೇವಾ ಕೈಂಕರ್ಯಗಳಲ್ಲಿ ಸದಾ ತಲ್ಲೀನರಾಗಿದ್ದಾರೆ.

ಶ್ರೀಗಳು ನಿತ್ಯಹಸನ್ಮುಖಿಯಾಗಿಯೂ ಅತ್ಯಂತ ಸರಳ ಹಾಗೂ ಶಿಸ್ತುಬದ್ಧ ಜೀವನವನ್ನು ಅನುಸರಿಸುವ ಮಹಾತ್ಮರು. ಅನೇಕ

ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಉತ್ತಮ ಸಂಸ್ಕಾರ, ಭಕ್ತಿ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ನಮ್ಮ ಗುರುಗಳು ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆ. ಅವರು ನೀಡುವ ಮಾರ್ಗದರ್ಶನ ಅನೇಕ ಜೀವ– ಜೀವನಗಳಿಗೆ ದೀಪಸ್ತಂಭದಂತೆ ಬೆಳಕು ಚೆಲ್ಲುತ್ತಿದೆ.

ಗುರು ಮಹಿಮೆಯನ್ನು ವರ್ಣಿಸುವ ಈ ಶ್ಲೋಕವು ಅವರ ವ್ಯಕ್ತಿತ್ವಕ್ಕೆ ಸಮರ್ಪಕವಾಗಿ ಹೊಂದುತ್ತದೆ ಎನ್ನುವುದು ನನ್ನ ಭಾವನೆ.

ಅಜ್ಞಾನತಿಮಿರಾಂಧಸ್ಯಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂಯೇನತಸ್ಮೈಶ್ರೀಗುರವೇನಮಃ ॥

ಶ್ರೀಗಳು ಅವರು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಮಾಜಸೇವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿಯೂ ಅನನ್ಯಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯೆ ಮತ್ತು ಭಕ್ತಿಯ ಸಮನ್ವಯದಿಂದಲೇ ವ್ಯಕ್ತಿಯೂ ಸಮಾಜವೂ ಶ್ರೇಷ್ಠತೆಯನ್ನು ಸಾಧಿಸಬಹುದು ಎಂಬುದು ಅವರ ಸುದೃಢ ನಂಬಿಕೆ. ಮಾಧ್ವಗುರುಪರಂಪರೆಯನ್ನು ಸದಾ ಸ್ಮರಿಸುತ್ತಾ, ಆಚಾರ್ಯರ ಆದರ್ಶಗಳನ್ನು ಆಚಾರದಲ್ಲೇ ಅನುಸರಿಸುವ ಶ್ರೀಗಳು ನಮ್ಮಂಥ ಸಾವಿರಾರು ಅಜ್ಞಾನಿಗಳ ಜ್ಞಾನದೀಪವಾಗಿದ್ದಾರೆ.

ಶ್ರೀಮದಾನಂದತೀರ್ಥಭಗವತ್ಪಾದಾನ್ವಂದೇನಿರಂತರಂಸದಾ ।
ಯತ್ಪ್ರಸಾದಾತ್ಅವಾಪ್ತೋಽಯಂತತ್ವಜ್ಞಾನಪ್ರಬೋಧಕಃ ॥

ಗುರುಗಳ ಮಹತ್ವವನ್ನು ಸಂಪೂರ್ಣವಾಗಿ ಪದಗಳಲ್ಲಿ ಕಟ್ಟಿಹಾಕುವುದು ಅಸಾಧ್ಯ. ನನ್ನ ಜೀವನದಲ್ಲಿ ನಾನು ಸಾಧಿಸಿದ ಯಾವುದೇ ಸಾಧನೆ ಪ್ರತ್ಯಕ್ಷವಾಗಿರಲಿ ಅಥವಾ ಪರೋಕ್ಷವಾಗಿರಲಿ ಅದಕ್ಕೆ ಮೂಲಕಾರಣ ನಮ್ಮ ಗುರುಗಳೇ ಎಂಬುವುದು ನನ್ನ ಅಚಲ ನಂಬಿಕೆ. ನಾನು ಇಂದು ಸಂಪಾದಿಸಿದ ಆತ್ಮವಿಶ್ವಾಸ, ಶಿಸ್ತು, ದೃಢನಿಲುವು

ಹಾಗೂ ಜೀವನದ ದೃಷ್ಟಿಕೋನ, ಜನರ ಪ್ರೀತಿ, ಪೌರೋಹಿತ್ಯ ವಿದ್ಯೆಯೂ ಕೂಡ ಶ್ರೀಗಳ ಭಿಕ್ಷೆ ಹಾಗೂ ಕೃಪೆಯ ಫಲವಾಗಿದೆ. ನಾನು ನನ್ನ ಜೀವನದಲ್ಲಿ ಗಳಿಸಿದ ವಿದ್ಯಾಸಂಪತ್ತು ಇರಬಹುದು ಅಥವಾ  ಧನಸಂಪತ್ತು ಇರಬಹುದು ಅವುಗಳೆಲ್ಲವೂ ಗುರುಗಳ ಅನುಗ್ರಹದ ಫಲವೇ. ಅವರ ಮಾರ್ಗದರ್ಶನ, ಆಶೀರ್ವಾದ ಮತ್ತು ಪ್ರೇರಣೆಯಿಲ್ಲದೆ ಈ ಯಾವುದೂ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನನ್ನ ಜೀವನದ ಸಕಲ ಸಾಧನೆಗಳನ್ನು ನಾನು ನನ್ನದ್ದೆಂದು ಪರಿಗಣಿಸದೆ, ಅವುಗಳನ್ನು ಗುರುಚರಣಗಳಿಗೆ ಸಮರ್ಪಿಸುತ್ತೇನೆ. ಈ ಭಾವವನ್ನು ಈ ಶ್ಲೋಕ ಅತ್ಯಂತ ಸುಂದರವಾಗಿ ಪ್ರತಿಬಿಂಬಿಸುತ್ತದೆ.

ನಗುರೋರಧಿಕಂತತ್ವಂನಗುರೋರಧಿಕಂತಪಃ ।
ತತ್ವಜ್ಞಾನಾತ್ಪರಂನಾಸ್ತಿತಸ್ಮೈಶ್ರೀಗುರವೇನಮಃ ॥

ಅಜ್ಞಾನವನ್ನು ನಿವಾರಿಸಿ ಜ್ಞಾನವನ್ನು ದಾನ ಮಾಡುವ ಗುರುಗಳಿಲ್ಲದೆ ಮಾನವನ ಜೀವನ ಅಪೂರ್ಣ. ಇಂತಹ ಮಹಾನ್ಗುರುಗಳು ನಮ್ಮ ಜೀವನದಲ್ಲಿ ದೊರಕಿರುವುದೇ ನಮ್ಮ ಭಾಗ್ಯ. ಹಾಗೂ ಅವರ ಭಕ್ತಿಪೂರ್ವಕ ಅನುಷ್ಠಾನಗಳ ಸಾಧನೆಯ ವೈಖರಿಯೇ ಒಂದು ಅದ್ಭುತ. ಎಷ್ಟೇ ಒತ್ತಡಗಳಿದ್ದರೂ ಅಥವಾ ಸಮಯದ ಅಭಾವವಿದ್ದರೂ ಒಂದು ಎಳ್ಳುಕಾಳಿನಷ್ಟೂ ಕೊರತೆ ಬಾರದೆ ತಮ್ಮ ನಿತ್ಯ ಪೂಜಾದಿ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುತ್ತಾ ಸಮಸ್ತ ಲೋಕಕ್ಕೆ ಶ್ರೀಕೃಷ್ಣನ ಅನುಗ್ರಹಕ್ಕೋಸ್ಕರ ಬೇಡುವ ಪರಿ ವರ್ಣನಾತೀತ.

ನಮ್ಮ ಜನ್ಮಭೂಮಿಯಲ್ಲೇ ನಾವು ನಮ್ಮ ಧರ್ಮವನ್ನು ಮರೆಯುತ್ತಿರುವಾಗ ಬೇರೆ ಅನ್ಯಧರ್ಮೀಯ ಹಾಗೂ ಧರ್ಮವನ್ನೇ ನಂಬದ ವಿದೇಶದ ನೆಲೆಯಲ್ಲಿ ಆಚಾರ್ಯರ ತತ್ವಭೋದನೆ, ಕೃಷ್ಣನ ಭಕ್ತಿಸಾಧನೆಯನ್ನು ಅಲ್ಲಿಯ ಜನರಿಗೆ ಹಾಲು ಕುಡಿಸಿದಷ್ಟು ನಿರಾಸಾಯವಾಗಿ ಭೋದಿಸಿ ಅಲ್ಲಿ ಕೃಷ್ಣನ ದೇವಾಲಯವನ್ನು ಸ್ಥಾಪಿಸಿ ಸನಾತನ ಧರ್ಮದ ಉಳಿವಿಗಾಗಿ ತನ್ನ ಜನ್ಮವನ್ನೇ ಧಾರೆಎರೆದು ನಿತ್ಯನಿರಂತರ ಪಾಠಪ್ರವಚನಕ್ಕಾಗಿ ಹಲವಾರು ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ನೆಲಿಸಿದ ಆಸ್ತಿಕ ಜನರಿಗಾಗಿ

ಮಾಡಿದ ಈ ಕಾರ್ಯವನ್ನು ಎಷ್ಟೇ ವರ್ಣಿಸಿ ಹೇಳಿದರೂ ಮುಗಿಯದ ಆರಂಭವಿದು. ಆ ವೈಭವವನ್ನು ಪ್ರತ್ಯಕ್ಷವಾಗಿ ಕಂಡು ಅನುಭಸಿದವರಿಗೆ ಹೇಳುವ ಇಚ್ಛೆಯಿದ್ದರೂ ಪದಗಳ ಅಭಾವೇ ಎದುರಾಗುತ್ತದೆ.

ಅವರ ಅನುಗ್ರಹ ಮತ್ತು ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಧರ್ಮ ಹಾಗೂ ಸತ್ಯದಮಾರ್ಗದಲ್ಲಿ ನಡೆಯುವುದೇ ನಮ್ಮ ಪರಮ ಕರ್ತವ್ಯ ಎಂದು ಭಾವಿಸುತ್ತೇನೆ. ನನ್ನ ಗುರುಗಳಾದ ಶ್ರೀಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಪಾದಪದ್ಮಗಳಲ್ಲಿ ನನ್ನ ಜೀವನದ ಸಕಲ ಸಾಧನೆಗಳನ್ನು ಅರ್ಪಿಸಿ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ. ಅವರು ಸದಾ ನಮ್ಮನ್ನು ಸನ್ಮಾರ್ಗದಲ್ಲಿ ನಡೆಸಲಿ ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ.




SHRI KRISHNA VRUNDAVANA, SEATTLE, WASHINGTON, USA.

# 'ಸಿಯಾಟಲ್'ನಲ್ಲಿ 'ಸೆಟಲ್' ಆದ ಶ್ರೀನಿವಾಸ!

**ಅ**ಮೇರಿಕಾ ದೇಶದ ವಾಯವ್ಯ ಮೂಲೆಯಲ್ಲಿರುವ ಬೃಹತ್ ರಾಜ್ಯ 'ವಾಷಿಂಗ್ಟನ್'. ಅದರ ಪೂರ್ವ ಮತ್ತು ದಕ್ಷಿಣ ಭಾಗವನ್ನು 'ಇಡಾಹೋ' ಮತ್ತು 'ಓರೆಗನ್' ಎಂಬ ಎರಡು ರಾಜ್ಯಗಳು ಸಂಪೂರ್ಣವಾಗಿ ಸುತ್ತುವರಿದಿದ್ದು, ಉತ್ತರ ಭಾಗದುದ್ದಕ್ಕೂ 'ಕೆನಡಾ' ದೇಶದ ಗಡಿಯಿದೆ. ಪಶ್ಚಿಮದಲ್ಲಿ ಜಪಾನ್ ದೇಶದವರೆಗೂ ವ್ಯಾಪಿಸಿದ ವಿಶಾಲವಾದ 'ಫೆಸಿಫಿಕ್' ಮಹಾಸಾಗರವಿದೆ. ರಾಜಧಾನಿಯಾದ 'ಒಲಿಂಪಿಯಾ' ಎಂಬ ಪುಟ್ಟ ನಗರದಿಂದ ಸ್ವಲ್ಪ ಉತ್ತರಕ್ಕೆ ಸಾಗಿದರೆ ಸಿಗುವ ಸುಂದರ ನಗರವೇ 'ಸಿಯಾಟಲ್'.

ಅಮೇರಿಕಾದ ಈ ಪ್ರತಿಷ್ಠಿತ 'ಸಿಯಾಟಲ್' ಪಟ್ಟಣವು 'ಎಮರಾಲ್ಡ್ ಸಿಟಿ' ಎಂಬ ತನ್ನ ವಿಶಿಷ್ಟ ನಾಮಧೇಯದಿಂದಲೂ ಜಗಸಿದ್ಧ. ಕಾರಣ ಇಲ್ಲಿನ ಸಸ್ಯರಾಶಿಯ ನಿತ್ಯಹರಿದ್ವರ್ಣ ಮತ್ತು ಸದಾ ಮೋಡಕವಿದ ವಾತಾವರಣ. ವಿಸ್ತಾರವಾದ ಪಶ್ಚಿಮ ಕರಾವಳಿಗೆ ಅಡ್ಡವಾಗಿ ನಿಂತಿರುವ 'ಒಲಿಂಪಿಕ್' ಪರ್ವತ ಶ್ರೇಣಿಯು, ಸಮುದ್ರಮುಖೇನ ಸದಾ ಬೀಸುವ ಬಲವಾದ ಗಾಳಿ ಮತ್ತು ಕಾರ್ಮೋಡಗಳ ನಾಗಾಲೋಟಕ್ಕೆ ಇಲ್ಲಿ ಬ್ರೇಕ್ ಹಾಕುತ್ತದೆ. ತುಂಬುಗರ್ಭದ ಕಪ್ಪು ಮೋಡಗಳಿಗೆ ಈ ಪ್ರದೇಶವು ದೇವರು ನಿರ್ಮಿಸಿದ ತಂಗುದಾಣದಂತಿದೆ. ಹಾಗಾಗಿ ವರ್ಷದಲ್ಲಿ ನೂರೈವತ್ತಕ್ಕೂ ಹೆಚ್ಚು ದಿವಸ ಇಲ್ಲಿ ಮಳೆ ಬೀಳುತ್ತದೆ. ಆರ್ದ್ರ ಕಾಡುಗಳು, ತೇವಾಂಶಯುಕ್ತ ಗಾಳಿ ಮತ್ತು ಫಲವತ್ತಾದ ಮಣ್ಣು 'ಸಿಯಾಟಲ್'ನ ಮತ್ತೊಂದು ವಿಶೇಷಣ. ತತ್ಪರಿಣಾಮವಾಗಿ ಸಮೃದ್ಧವಾದ ಫಲ ಮತ್ತು ಖನಿಜ ಸಂಪತ್ತು ಈ ನಗರಕ್ಕೆ ನೈಸರ್ಗಿಕವಾದ ಸಿರಿವಂತಿಕೆಯನ್ನು ತಂದುಕೊಟ್ಟಿದೆ. ಹಾಗಾಗಿ ಜಿಂಕೆ, ಕರಡಿ ಮೊದಲಾದ ಅನೇಕ ಪ್ರಾಣಿಗಳು, ರಣಹದ್ದು ಮೊದಲಾದ ವಿಶಿಷ್ಟ ಪಕ್ಷಿಗಳು, ವಿಷಯುಕ್ತ ಹಾವುಗಳು ಮತ್ತು ಸಮುದ್ರಭಾಗದಲ್ಲಿಯೂ ತಿಮಿಂಗಿಲ, ಶಾರ್ಕ್ ಮೊದಲಾದ ಅಸಂಖ್ಯ ಜೀವರಾಶಿಗಳಿಗೂ ಈ ಪ್ರದೇಶವು ಆಶ್ರಯವನ್ನು ಕೊಟ್ಟಿದೆ. ಅಮೇರಿಕಾ ದೇಶವು ಉತ್ಪಾದಿಸುವ ಆಪಲ್ ಹಣ್ಣುಗಳಲ್ಲಿನ ಮುಕ್ಕಾಲುಪಾಲು ಸೃಷ್ಟಿಯಾಗುವುದೇ ಈ ವಲಯದಲ್ಲಂತೆ!

ಸುಮಾರು ನಲುವತ್ತೈದು ವರ್ಷಗಳ ಹಿಂದೆಯೇ ಇಲ್ಲಿ ನೆಲೆಗೊಂಡು ಇಂದು ವಿಶ್ವ ವಿಖ್ಯಾತಿಯೊಂದಿಗೆ ಮೆರೆಯುತ್ತಿರುವ 'ಮೈಕ್ರೋಸಾಫ್ಟ್' ಮತ್ತು 'ಸ್ಟಾರ್ ಬಕ್ಸ್' ಎಂಬ ಶ್ರೀಮಂತ ಕಂಪೆನಿಗಳ ಪ್ರಧಾನ ಕಚೇರಿಗಳಿರುವುದು ಇದೇ ಸಿಯಾಟಲ್‌ನಲ್ಲಿ. ಅಮೇಜಾನ್ ಮೊದಲಾದ ಇತರ ಅನೇಕ ದೈತ್ಯ ಕಂಪೆನಿಗಳಿಗೂ ಇದುವೇ ರಾಜಧಾನಿ. ಅದಲ್ಲದೆ ಅಮೇರಿಕಾದ ಪ್ರತಿಷ್ಠಿತ ವಿಮಾನ ತಾಯಾರಿಕಾ ಸಂಸ್ಥೆ 'ಬೋಯಿಂಗ್' ಕೂಡ ಇಲ್ಲಿ ತನ್ನ ವಿಶಾಲವಾದ ಕಾರ್ಖಾನೆಯನ್ನು ಹೊಂದಿದೆ. ಹಾಗಾಗಿ ಪ್ರಪಂಚದಾದ್ಯಂತ ಪಸರಿಸಿದ ಅನೇಕ ಮಂದಿ ವಿದ್ಯಾವಂತರನ್ನು, ಬುದ್ಧಿವಂತರನ್ನು ಈ ಸಿಯಾಟಲ್ ಮಹಾನಗರವು ಸ್ವಾಗತಿಸಿ ತನ್ನೊಡಲಿನಲ್ಲಿ ಅಶ್ರಯವನ್ನು ನೀಡಿದೆ. ಇದೀಗ ಸಿಯಾಟಲ್ ತನ್ನ ಘನತೆಯನ್ನು ಇನ್ನಷ್ಟು ಹೆಚ್ಚಿಸಿಕೊಂಡು ಅಮೇರಿಕಾದ ಪ್ರತಿಷ್ಠಿತ ದುಬಾರಿ ನಗರಗಳಲ್ಲಿ ಒಂದಾಗಿ ಮೆರೆಯುತ್ತಿದೆ . ಪ್ರಸ್ತುತ ಇಲ್ಲಿ ನೆಲೆಸಿರುವ ಭಾರತೀಯರ ಸಂಖ್ಯೆಯೇ ಸುಮಾರು ಒಂದೂವರೆ ಲಕ್ಷ!

ವಿಶ್ವದಾದ್ಯಂತ ವ್ಯಾಪಿಸಿದ ನಮ್ಮ ಸನಾತನ ಧರ್ಮೀಯರ ಅನ್ಯಾದೃಶವಾದ ಒಂದು ವಿಶೇಷವೆಂದರೆ ಅದು ಸ್ವಾಭಿಮಾನ. ತಾವೆಲ್ಲಿ ಹೋದರೂ ತಮ್ಮ ಸಂಸ್ಕೃತಿ, ಆಚರಣೆಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವ ಹೆಮ್ಮೆ ನಮ್ಮ ಭಾರತೀಯರದ್ದು. ನಮ್ಮವರು ಹೋದಲ್ಲೆಲ್ಲ ದೇಶಿಯ ದಿನಸಿ ಅಂಗಡಿಗಳು, ರೆಸ್ಟೋರೆಂಟ್‌ಗಳು ಮತ್ತು ಮಠ ಮಂದಿರಗಳು ಸ್ಥಾಪನೆಯಾಗಲೇಬೇಕು. ಅದರಂತೆಯೇ ಸಿಯಾಟಲ್‌ನಲ್ಲಿ ಕೂಡ ಅನೇಕ ಸಾಂಸ್ಕೃತಿಕ, ಧಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡು ನಮ್ಮವರೆಲ್ಲ ಒಟ್ಟಾಗಿ ಸೇರಿ ಹಬ್ಬ ಹರಿದಿನಗಳನ್ನು ಸಂಭ್ರಮದಿಂದ ಆಚರಿಸುವ ಪ್ರಕ್ರಿಯೆ ಹಲವು ದಶಕಗಳ ಹಿಂದೆಯೇ ಪ್ರಾರಂಭವಾಗಿತ್ತು. ಆದರೂ ಪರಮ ಪೂಜ್ಯ ಪುತ್ತಿಗೆ ಶ್ರೀಪಾದರಿಂದ ಅನೇಕ ಕಡೆ ಸ್ಥಾಪಿತವಾದ ಮಠ ಮಂದಿರಗಳು ಇಲ್ಲಿನ ಕನ್ನಡಿಗರಿಗೂ ವಿಶೇಷ ಆಕರ್ಷಣೆಯಾಗಿತ್ತು. ಏಕೆಂದರೆ ಇತರ ಧಾರ್ಮಿಕ ಸಂಸ್ಥೆಗಳಿಗೆ ಹೋಲಿಸಿದರೆ ಶ್ರೀ ಪುತ್ತಿಗೆ ಮಠದ ಶಾಖೆಗಳ ಕಾರ್ಯಪ್ರವೃತ್ತಿ ಮಾತ್ರ ಅತ್ಯಂತ ವಿಭಿನ್ನ ಮತ್ತು ಜನಪ್ರಿಯವೆನಿಸಿಕೊಂಡು ಅದಾಗಲೇ ಪ್ರಸಿದ್ಧಿಯನ್ನು ಪಡೆದಿತ್ತು.

ಫೀನಿಕ್ಸ್‌ನಲ್ಲಿರುವ ಶ್ರೀ ಮಠದ ಶಾಖೆ, ಶ್ರೀ ವೆಂಕಟಕೃಷ್ಣ ಕ್ಷೇತ್ರದಲ್ಲಿ ನಡೆಯುತ್ತಿದ್ದ 'ಯಜುಃಸಂಹಿತಾ ಯಾಗ'ವೆಂಬ ವಿಶೇಷ ಕಾರ್ಯಕ್ರಮ ನಿಮಿತ್ತ ಚಿತ್ತೈಸಿದ ಪರಮ ಪೂಜ್ಯ ಶ್ರೀಪಾದರನ್ನು ಸಿಯಾಟಲ್‌ನ ಭಕ್ತ ಸಮೂಹವೂ ಭಕ್ತಿಯಿಂದ ಆಹ್ವಾನಿಸಿತು. ಅದು 2021ನೇ ಇಸವಿಯ ಪೂರ್ವಭಾಗ. ಶ್ರೀಗಳ ಆಗಮನಕ್ಕೆ ಮುನ್ನವೇ ಸಾಕಷ್ಟು ಸಿದ್ಧತೆ ಮತ್ತು ಚಿಂತನೆಗಳನ್ನು ನಡೆಸಿದ್ದ ಆ ಭಕ್ತವೃಂದ ಶ್ರೀ ಮಠದ ಶಾಖೆಯನ್ನು ಅತಿಶೀಘ್ರದಲ್ಲಿಯೇ ಆರಂಭಿಸುವಂತೆ ಶ್ರೀಗಳನ್ನು ಒತ್ತಾಯಿಸಿತು. ತನ್ಮಧ್ಯದಲ್ಲಿ ಶ್ರೀ ಮಠದ ಸ್ಥಾಪನೆಯ ಕನಸುಕಂಡಿದ್ದ ಶುದ್ಧಹೃದಯದ ಭಕ್ತರೊಬ್ಬರು ವಿಶಾಲವಾದ ತಮ್ಮ ಮನೆಯ ಒಂದು ಭಾಗವನ್ನೇ ಶ್ರೀ ಮಠಕ್ಕೆ ಸಮರ್ಪಿಸಲು ಮುಂದೆ ಬಂದರು!

ಆ ಪ್ರದೇಶ ಮತ್ತು ನಿವೇಶನ ಅತ್ಯಂತ ಪ್ರಶಸ್ತವೆನಿಸಿದ್ದು ಮತ್ತು ಶ್ರೀ ಮಠದ ಶುಭಾರಂಭಕ್ಕೆ ಕಾಲಕೂಡಿ ಬಂದದ್ದು ಜೊತೆಗೆ ಶ್ರೀಗಳ ಸನ್ನಿಧಾನ, ಭಕ್ತವೃಂದದ ಒತ್ತಾಯ, ಸಹಕಾರ ಎಲ್ಲವೂ ಒಟ್ಟು ಸೇರಿದ ಪುಣ್ಯಕಾಲವಾಗಿತ್ತದು! ಸಿಯಾಟಲ್ ನಲ್ಲಿ ಶ್ರೀ ಮಠದ ಶಾಖೆಯು ಶ್ರೀ ವೆಂಕಟಕೃಷ್ಣ ವೃಂದಾವನ ಎಂಬ ನಾಮಧೇಯದೊಂದಿಗೆ ಶುಭಾರಂಭವನ್ನು ಕಂಡಿತು. ಅನತಿ ಕಾಲದಲ್ಲಿಯೇ ಶ್ರೀಗಳ ಅಮೃತಹಸ್ತದಿಂದ ಕಡೆಗೋಲು ಕೃಷ್ಣ ಮತ್ತು ಸಪರಿವಾರ ಶ್ರೀನಿವಾಸ ದೇವರ ಪ್ರತಿಷ್ಠಾಪನೆಯೂ ಆಯಿತು! ಯಥಾಪ್ರಕಾರ ನಿತ್ಯ ಪೂಜೆ, ಅನ್ನದಾನಾದಿ ನಿತ್ಯಸೇವೆಗೆ ಸರ್ವ ವ್ಯವಸ್ಥೆಗಳನ್ನೂ ಸಂಸ್ಥಾಪಿಸಿ ಪೂಜ್ಯ ಶ್ರೀಪಾದರು ಸಿಯಾಟಲ್ ಭಕ್ತರ ಕನಸನ್ನು ನನಸುಗೊಳಿಸಿದ ಮತ್ತೊಂದು ಐತಿಹಾಸಿಕ ಪುಣ್ಯಕೀರ್ತಿಗೆ ಭಾಜನರಾದರು!

ಶ್ರೀನಿವಾಸನ ಕಾರಣಿಕದ ಬಗ್ಗೆ ಕೇಳಬೇಕೇ? ಭಕ್ತಿಯಿಂದ ಪೂಜಿಸಿದರೆ ತನ್ನ ಸಾನ್ನಿಧ್ಯದ ಜೊತೆಗೆ ಸಮೃದ್ಧಿಯನ್ನೂ ಅನುಗ್ರಹಿಸುವ ಆ ಕರುಣಾಮಯ ವೇಕಟೇಶ್ವರ ಶ್ರೀ ಮಠದ ಸಿಯಾಟಲ್ ಶಾಖೆಯನ್ನು ಅತಿ ಶ್ರೀಘ್ರದಲ್ಲಿ ಅಭಿವೃದ್ಧಿಗೊಳ್ಳುವಂತೆ ಮಾಡಿದ! ಕೆಲವೇ ತಿಂಗಳುಗಳಲ್ಲಿ ಶ್ರೀ ಮಠವು 'ರೆಡ್ ಮಂಡ್' ಎಂಬ ಪ್ರದೇಶದಲ್ಲಿ ಇನ್ನಷ್ಟು ದೊಡ್ಡದಾದ ಸ್ವಂತ ನಿವೇಶನವನ್ನು ಖರೀದಿಸಿ ಅಲ್ಲಿಗೆ ಸ್ಥಳಾಂತರಗೊಂಡಿತು.

ಇದೀಗ ನಿರಂತರ ಪೂಜೆ, ಭಜನೆ, ಪ್ರಸಾದ ಮತ್ತು ಅನೇಕ ಧಾರ್ಮಿಕ, ವೈದಿಕ ಸೇವಾವಕಾಶಗಳೊಂದಿಗೆ ಸಿಯಾಟಲ್‌ನ ಶ್ರೀ ವೆಂಕಟಕೃಷ್ಣ ವೃಂದಾವನವು ತನ್ನ ಜನಪ್ರಿಯತೆಯನ್ನು ದಿನೇ ದಿನೇ ವೃದ್ಧಿಸಿಕೊಂಡು ಪುಣ್ಯಕ್ಷೇತ್ರವಾಗಿ ಮೆರೆಯುತ್ತಿದೆ. ಜೊತೆಗೆ ಶ್ರೀ ಮಠದ ಶ್ರೀನಿವಾಸಕಲ್ಯಾಣವೇ ಮೊದಲಾದ ಅನೇಕ ಅದ್ದೂರಿಯ ಕಾರ್ಯಕ್ರಮಗಳ ಆಯೋಜನೆಯು ಸಾವಿರಾರು ಭಕ್ತರಿಗೆ ಭಾಗವಹಿಸುವ ಅವಕಾಶವನ್ನು ಕಲ್ಪಿಸಿಕೊಟ್ಟು ಅವರಿಗೆ ವಿಶೇಷ ಸಮಾಧಾನವನ್ನು ಮತ್ತು ಸಂತೃಪ್ತಿಯನ್ನು ಕೂಡ ಕರುಣಿಸುತ್ತಿದೆ.

●

# ಕರುಣೆಯ ಕಡಲು ನಮ್ಮ ಗುರುಗಳು



**ಶ್ರೀ ಶ್ರೀಪತಿ ತಂತ್ರಿ**
ವೆಂಕಟಕೃಷ್ಣ ವೃಂದಾವನ, ಸಿಯಾಟಲ್, USA

"**ಕ್ರಿ**ಮಿಯಿಂದ ರಾಜ್ಯವಾಳಿಸಿದೆ ಜಗತ್ಸ್ವಾಮಿ ಚರ್ಯವ ನೀ ತೋರಿಸಿದೆ" ಎಂಬುವುದಾಗಿ ಶ್ರೀ ವಾದಿರಾಜರು, ಯಾವುದೋ ಒಂದು ಪುಟ್ಟ ಕ್ರಿಮಿಯನ್ನು ರಾಜ್ಯವೊಂದರ ರಾಜನನ್ನಾಗಿ ಮಾಡಿಮೆರೆಸಿ ಅವನ ಮೇಲೆ ವೇದವ್ಯಾಸ ದೇವರು ತೋರಿಸಿದ ಕರುಣೆಯನ್ನು ವರ್ಣಿಸುತ್ತಾರೆ. ದೇವರ ಸರ್ವಸಾಮರ್ಥ್ಯವನ್ನು ಪ್ರತಿಪಾದಿಸುತ್ತಾರೆ. ಅಂತಹ ಶ್ರೀ ವೇದವ್ಯಾಸರನ್ನು ನಿರಂತರ ಉಪಾಸನೆ ಮಾಡುವುದರ ಮೂಲಕ ನಮ್ಮ ಗುರುಗಳೂ ಕರುಣೆಯೇ ಮೊದಲಾದ ವಿಶೇಷ ಗುಣಗಳ ಸಿದ್ಧಿಯನ್ನು ಸಾಧಿಸಿದ್ದಾರೆ ಎನ್ನುವುದು ನನ್ನ ಭಾವನೆ. 'ಯಥಾ ಉಪಾಸತೇ ತಥೈವ ಭವತಿ'. ನನ್ನಂತಹ ಅನೇಕ ಸಾಮಾನ್ಯ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿಸಿ ಉತ್ತಮ ಉದ್ಯೋಗಾವಕಾಶಾದಿಗಳನ್ನು ಕೊಟ್ಟು ಉದ್ಧರಿಸಿದ ಪೂಜ್ಯ ಶ್ರೀಪಾದರೊಳಗೆ ತುಂಬಿತುಳುಕುತ್ತಿರುವ ಕರುಣೆಯೆಂಬ ವಿಶೇಷಗುಣಕ್ಕೆ ನಾವೇ ಪ್ರತ್ಯಕ್ಷನಿದರ್ಶನಗಳು. ಫಲಾನುಭವಿಗಳು.

ಪೂಜ್ಯ ಶ್ರೀಪಾದರು ಹಗಲು ರಾತ್ರಿಯೆನ್ನದೆ ಇಷ್ಟೊಂದು ಪರಿಶ್ರಮವಹಿಸಿ ಧರ್ಮಪ್ರಚಾರ, ಮಠಮಂದಿರಗಳ ಸ್ಥಾಪನೆ ಇತ್ಯಾದಿಗಳನ್ನು ಯಾಕೆ ಮಾಡಬೇಕು? ಅದರಿಂದ ಅವರಿಗೇನು ಲಾಭವಿದೆ? ಎಂದು ವಿಮರ್ಶಿಸಿದರೆ ಶ್ರೀಗಳು ಎಷ್ಟು ಕರುಣಾಮಯಿಗಳು ಎಂಬುವುದು ಎಲ್ಲರಿಗೂ ಅರ್ಥವಾದೀತು. ಏಕೆಂದರೆ ಪೂಜ್ಯರಿಗೆ ಶಿಷ್ಯವರ್ಗದ ಮೇಲಿರುವ ಕರುಣೆಯನ್ನು ಹೊರತುಪಡಿಸಿ ಮತ್ಯಾವ ಕಾರಣವೂ ಅಲ್ಲಿ ಕಾಣುವುದಿಲ್ಲ. ವಿದೇಶಗಳಲ್ಲೂ ನೆಲೆಸಿದ ನಮ್ಮ ಜನರು ಸಂಸ್ಕಾರಹೀನರಾಗಬಾರದು, ಅದಕ್ಕೋಸ್ಕರವಾದರೂ ಅಲ್ಲಿ ಹೋಗಿ ಮಠಮಂದಿರಗಳನ್ನು

ನಿರ್ಮಿಸಿ ಅವರನ್ನು ಧರ್ಮನಿರತರಾಗಿಸಿ ಆಧ್ಯಾತ್ಮಿಕವಾಗಿ ಉದ್ಧರಿಸಬೇಕು ಎನ್ನುವ ನಿಃಸ್ವಾರ್ಥ ಸಂಕಲ್ಪ ಪೂಜ್ಯ ಶ್ರೀಪಾದರ ಉದಾರತೆಯನ್ನು ಪ್ರತಿನಿಧಿತ್ತದೆ.

ತಮ್ಮ ನಾಲ್ಕೂ ಪರ್ಯಾಯಗಳಲ್ಲಿ ಪೂಜ್ಯ ಶ್ರೀಪಾದರು ಕೈಗೊಂಡ ಅತ್ಯಪೂರ್ವ ಸಾಮಾಜಮುಖಿ ಯೋಜನೆಗಳು ಶ್ರೀಗಳಿಗಿರುವ ಸಾಮಾಜಿಕ ಕಳಕಳಿಯನ್ನು ಎತ್ತಿತೋರಿಸುತ್ತವೆ. ಯಾತ್ರಾರ್ಥಿಗಳ ಅನುಕೂಲಕ್ಕೋಸ್ಕರ ಸುಸಜ್ಜಿತ ಶೌಚಾಲಯಗಳ ನಿರ್ಮಾಣ, ಸುವರ್ಣಪಥ, ಅನ್ನಬ್ರಹ್ಮ , ರಾಜಾಂಗಣದ ಪಕ್ಕದ ಮೇಲ್ಛಾವಣಿ ಇತ್ಯಾದಿ ಅನೇಕ ಮಹತ್ಕಾರ್ಯಗಳಿಗೂ ದೂರದೂರಿನಿಂದ ಮಳೆಬಿಸಿಲೆನ್ನದೆ ಬರುವ ಭಕ್ತರ ಮೇಲೆ ಶ್ರೀಗಳಿಗಿರುವ ಕರುಣೆಯೇ ಕಾರಣವಲ್ಲವೇ?

ವಿದೇಶಗಳಲ್ಲಿನ ವಿಚಿತ್ರ ಹವಾಮಾನಗಳು, ತೀವ್ರ ಚಳಿ ಸೆಖೆ ಮುಂತಾದ ಸವಾಲುಗಳನ್ನು ಲೆಕ್ಕಿಸದೆ ತಮ್ಮ ಅನುಷ್ಠಾನಗಳಲ್ಲಿ ರಾಜಿ ಮಾಡಿಕೊಳ್ಳದೆ ಕಷ್ಟಪಡುವ ಪೂಜ್ಯ ಶ್ರೀಪಾದರ ಮೂಲ ಉದ್ದೇಶ ಜನಗಳಿಗೆ ಅನುಕೂಲವಾಗಲಿ. ಸನಾತನ ಪರಂಪರೆ ಉಳಿಯಲಿ ಬೆಳೆಯಲಿ ಎನ್ನುವುದಷ್ಟೇ. ಇಲ್ಲವಾದರೆ ತಾವಾಯಿತು ತಮ್ಮ ಜ್ಞಾನಸಾಧನೆ, ಮೋಕ್ಷಸಾಧನೆಯಾಯಿತು ಎಂದು ಶ್ರೀಗಳು ಉಡುಪಿಯಲ್ಲೋ ಪುತ್ತಿಗೆಯಲ್ಲೋ ಆರಾಮವಾಗಿ ತಮ್ಮ ಸಾಧನಾನುಷ್ಠಾನಗಳನ್ನು ಮಾಡಿಕೊಂಡು ಕಾಲ ಕಳೆಯಬಹುದಿತ್ತು.

ಪೂಜ್ಯ ಶ್ರೀಪಾದರ ಅಂತರಂಗದಲ್ಲಿ ಸದಾ ಉಕ್ಕಿ ಹರಿಯುತ್ತಿರುವ ಕರುಣೆಯ ಕಾರಣದಿಂದಾಗಿ ಇದೀಗ ವಿದೇಶಗಳಲ್ಲೂ ಹದಿನೈದು ಕೃಷ್ಣಮಂದಿರಗಳು ನಿರ್ಮಾಣವಾಗಿವೆ. ಸಾವಿರಾರು ಭಕ್ತರು ನೆಮ್ಮದಿಯನ್ನು ಕಾಣುವಂತಾಗಿದೆ. ಹತ್ತಾರು ವೈದಿಕರು ಉತ್ತಮ ಉದ್ಯೋಗ ಮತ್ತು ಸಂಪಾದನೆಯೊಂದಿಗೆ ಉತ್ಕೃಷ್ಟಜೀವನವನ್ನು ನಡೆಸುವಂತಾಗಿದೆ. ಅಂತಹ ನಮ್ಮ ಗುರುಗಳ ಕರುಣೆಯ ಪ್ರವಾಹ ನಿತ್ಯ ನಿರಂತರವಾಗಿರಲಿ. ಅದರಿಂದ ಇನ್ನಷ್ಟು ಸಜ್ಜನರಿಗೆ ಅನುಕೂಲಗಳಾಗಲಿ.



SHRI VENKATA KRISHNA VRUNDAVANA, AUSTIN, TEXAS, USA.

# ಆಸ್ಟಿನ್‌ನ ಆಸ್ತಿಕರಿಗೊಲಿದ ಉಡುಪಿಯ ಕೃಷ್ಣ !

ಶ್ರೀಕೃಷ್ಣನ ಸ್ವರೂಪವಿರುವುದೇ ಹಾಗೆಯೇ ! ಎಷ್ಟು ಸ್ಥೂಲವೋ ಅಷ್ಟೇ ಸೂಕ್ಷ್ಮವಂತೆ! ಒಳಗೂ ಹೊರಗೂ ಮತ್ತು ಎಲ್ಲೆಡೆಯೂ, ಎಲ್ಲ ಕಾಲದಲ್ಲಿಯೂ ವ್ಯಾಪಿಸಿರುವ ಅವನನ್ನು ಕಾಣಲು ನಮ್ಮಿಂದ ಸಾಧ್ಯವಿಲ್ಲವಂತೆ! 'ಸೂಕ್ಷ್ಮತ್ವಾತ್ ತದವಿಜ್ಞೇಯಂ' ಆದರೂ ಭಕ್ತಿಯಿಂದ ಅವನನ್ನು ಹತ್ತಿರ ಮಾಡಿಕೊಂಡವನಿಗೆ ತನ್ನ ಸಮೀಪದಲ್ಲಿಯೇ ಗೋಚರಿಸುತ್ತಾನಂತೆ! ದುರಹಂಕಾರದಿಂದ ದೂರ ಸರಿದವನಿಂದ ದೂರವಾಗುತ್ತಲೇ ಹೋಗುತ್ತಾನಂತೆ! 'ದೂರಸ್ಥಂ ಚಾಂತಿಕೇ ಚ ತತ್' ಹಾಗೆಯೇ ಎಲ್ಲರ ಹೃದಯದೊಳಗಿನ ಶಾಶ್ವತ ನಿವಾಸಿಯಾಗಿರುವ ನಮ್ಮ ಸಿರಿ ಕೃಷ್ಣನು ಸ್ಥಿರನೂ ಹೌದು ಮತ್ತು ಚರನೂ ಹೌದಂತೆ! 'ಬಹಿರಂತಶ್ಚ ಭೂತಾನಾಂ ಅಚರಂ ಚರಮೇವ ಚ' ಅವನು ಹಾಗಿರುವುದರಿಂದಲೇ ಈ ಭೂಮಂಡಲದಲ್ಲಿ ಅಲ್ಲಲ್ಲಿ ವಿಗ್ರಹ ರೂಪದಲ್ಲೂ ಕಾಣಿಸಿಕೊಂಡು ತನ್ನನ್ನುನಂಬಿದವರನ್ನು, ಆರಾಧಿಸಿದವರನ್ನು ಉದ್ಧರಿಸುವುದಂತೆ! ಭಕ್ತರು ಯಾವ ರೀತಿಯಲ್ಲಿ ಅವನ ಉಪಾಸನೆ ಮಾಡುತ್ತಾರೋ ತನ್ಮಾರ್ಗದಲ್ಲಿಯೇ ಅವರನ್ನು ಸಂರಕ್ಷಿಸುವುದುನಮ್ಮ ಶ್ರೀಕೃಷ್ಣನ ವಿಶೇಷತೆಯಂತೆ! 'ಯೇ ಯಥಾ ಮಾಂ ಪ್ರಪದ್ಯಂತೇ ತಾನ್ ತಥೈವ ಭಜಾಮ್ಯಹಮ್'

ಹೀಗೆ ನಮ್ಮ ಕರುಣಾಮಯಿ ಶ್ರೀ ಕೃಷ್ಣನ ವಿಶಿಷ್ಟ ವಿಗ್ರಹರೂಪದ ಸಾನ್ನಿಧ್ಯವನ್ನು ಪಡೆದು ಕೃತಾರ್ಥರಾದ ಪುಣ್ಯಾತ್ಮರ ಸಾಲಿಗೆ ನಮ್ಮ 'ಆಸ್ಟಿನ್' ನಗರವಾಸಿ ಭಕ್ತರೂ ಸೇರಿಕೊಳ್ಳುತ್ತಾರೆ! ಏಕೆಂದರೆ ತಮ್ಮೂರಿನಲ್ಲೂ ಉಡುಪಿಕೃಷ್ಣನ ಸನ್ನಿಧಾನದ ಸಂಸ್ಥಾಪನೆಯಾಗಬೇಕೆಂಬ ದೀರ್ಘಕಾಲದ ಕನಸು ಹೊತ್ತವರವರು! ಅದಕ್ಕೋಸ್ಕರ ಹತ್ತಾರು ವರ್ಷಗಳ ಕಾಲ ಕಾದು ಕುಳಿತರು! ಬೇಡಿಕೊಂಡರು! ತಮ್ಮ ದೃಢಭಕ್ತಿಯ ಪ್ರಭಾವದಿಂದ ಕೊನೆಗೂ ತಮ್ಮ ಆರಾಧ್ಯಮೂರ್ತಿ ಉಡುಪಿಯ ಶ್ರೀಕೃಷ್ಣನನ್ನು ತಮ್ಮಲ್ಲಿಗೆ ಕರೆಸಿಕೊಂಡೇ ಬಿಟ್ಟರು! ಇದು ಭಕ್ತಿಗಿರುವ ಶಕ್ತಿ! ಕೃಷ್ಣನನ್ನು ಮೆಚ್ಚಿಸಲಿಕ್ಕಿರುವ ಏಕೈಕ ಯುಕ್ತಿ! 'ಭಕ್ತ್ಯಾತ್ವನನ್ಯಯಾ ಶಕ್ಯಃ ಅಹಂ ಏವಂ ವಿಧೋಽರ್ಜುನ'

ಶೋಭಕೃತ್ ಸಂವತ್ಸರದ ಚೈತ್ರ ಕೃಷ್ಣ ಚತುರ್ಥೀ ಅಂದರೆ 2023ನೇ ಇಸವಿಯ ಎಪ್ರಿಲ್ 09 ಭಾನುವಾರವು ನಮ್ಮ ಉಡುಪಿಯ ಶ್ರೀಕೃಷ್ಣನು ಅಧಿಕೃತವಾಗಿ ಆಸ್ಟಿನ್ ನಿವಾಸಿಯೆನಿಸಿದ ಐತಿಹಾಸಿಕ ಪುಣ್ಯದಿನ. ತತ್ಪೂರ್ವದಲ್ಲಿ ಬಹಳಷ್ಟು ಸಮಯದ ಹಿಂದೆಯೇ ಪಕ್ಕದ ಹ್ಯೂಸ್ಟನ್ ಮತ್ತು ಡಲ್ಲಾಸ್ ಮಹಾನಗರಗಳಲ್ಲಿ ಶ್ರೀಕೃಷ್ಣವೃಂದಾವನದ ಸಂಸ್ಥಾಪನೆಯನ್ನು ಪರಮಪೂಜ್ಯ ಪುತ್ತಿಗೆ ಶ್ರೀಪಾದರು ಮಾಡಿಯಾಗಿತ್ತು. ಆದರೆ ಆಸ್ಟಿನ್ ನಿವಾಸಿ ಭಕ್ತರ ಬಹುಕಾಲದ ಬೇಡಿಕೆ ಸಾಕಾರಗೊಳ್ಳಲು ಕಾಲಪಕ್ವವಾಗಿರಲಿಲ್ಲ. ತಮ್ಮ ಚತುರ್ಥ ಪರ್ಯಾಯದ ಪೂರ್ವಭಾವಿ ಸಂಚಾರವನ್ನು ಆಸ್ಟಿನ್ ಪ್ರದೇಶಕ್ಕೂ ವಿಸ್ತರಿಸುವ ನಿರ್ಧಾರವನ್ನು ಪೂಜ್ಯ ಶ್ರೀಪಾದರು ಕೈಗೊಂಡಾಗ ಸ್ಥಳೀಯ ಭಕ್ತರು ಮತ್ತಷ್ಟು ಜಾಗ್ರತರಾದರು. ಈ ಸಲ ನಮ್ಮೂರಿನಲ್ಲಿ ಶ್ರೀ ಮಠದ ಸ್ಥಾಪನೆಯಾಗಲೇಬೇಕೆಂದು ದೃಢಸಂಕಲ್ಪ ಮಾಡಿದರು. ನಿಗದಿತ ಕಾರ್ಯಕ್ರಮಗಳಿಗನುಸಾರವಾಗಿ ಪೂಜ್ಯ ಶ್ರೀಪಾದರು ತಮ್ಮ ಪರಿವಾರದೊಡನೆ ಆಸ್ಟಿನ್ ಮಹಾನಗರಕ್ಕೆ ಕಾಲಿರಿಸುವ ಸಾಕಷ್ಟು ಮುಂಚೆಯೇ ಶ್ರೀ ಮಠದ ಸ್ಥಾಪನೆಗೆ ಬೇಕಾದ ಸಕಲ ಸಿದ್ಧತೆಯನ್ನೂ ಸ್ಥಳೀಯ ಭಕ್ತರು ಮಾಡಿಕೊಂಡಿದ್ದರು!

ಹಿಂದಿನ ಎರಡು ದಶಮಾನಗಳಿಂದ ವಿದೇಶಗಳಲ್ಲಿ ಶ್ರೀ ಮಠದ ಅನೇಕ ಶಾಖೆಗಳು ಸಂಸ್ಥಾಪನೆಗೊಂಡಿದ್ದು ಮತ್ತು ಅಲ್ಲಿನ ಭಕ್ತರ ತನ್ನಿಮಿತ್ತವಾದ ಸರ್ವ ಪ್ರಯತ್ನಗಳ ಬಗ್ಗೆಯೂ ಆಸ್ಟಿನ್ ನಗರವಾಸಿ ಭಕ್ತರಿಗೆ ಸ್ಪಷ್ಟವಾದ ಅರಿವಿತ್ತು. ಅದಕಾರಣ ಶ್ರೀಮಠದ ಸ್ಥಾಪನೆಗೆ ಸೂಕ್ತವಾದ ಸ್ಥಳದ ಅನ್ವೇಷಣೆ, ಧನಸಂಗ್ರಹಾದಿ ಎಲ್ಲ ಕಾರ್ಯಗಳನ್ನು ಪೂರ್ವಭಾವಿಯಾಗಿಯೇ ನಿರ್ವಹಿಸುವ ಯೋಜನೆಯನ್ನೂ ಅವರು ರೂಪಿಸಿಕೊಂಡಿದ್ದರು. ಪೂಜ್ಯ ಶ್ರೀಪಾದರ ಆಗಮನ, ಸಂದರ್ಶನ, ಪರಿಶೀಲನೆ, ಒಪ್ಪಿಗೆ ಮತ್ತು ಅಂತಿಮ ತೀರ್ಮಾನದ ಪುಣ್ಯಕ್ಷಣಕ್ಕೋಸ್ಕರ ಅವರು ಬಹುನಿರೀಕ್ಷೆಯೊಂದಿಗೆ ಕಾದು ಕುಳಿತಿದ್ದರು. ಅವರ ಗುರು ಭಕ್ತಿ ಮತ್ತು ಹರಿ ಭಕ್ತಿಯ ಪ್ರಭಾವವೇ ಇರಬೇಕು, ಒಂದೆರಡು ದಿನಗಳಲ್ಲಿಯೇ ಪೂಜ್ಯ ಶ್ರೀಪಾದರು ಅವರ ಪ್ರಾಮಾಣಿಕ ಪ್ರಯತ್ನವನ್ನು ಮೆಚ್ಚಿ, ಯೋಗ್ಯ ಸ್ಥಳವೊಂದನ್ನು ಗುರುತಿಸಿ ಶ್ರೀಮಠದ ಸಂಸ್ಥಾಪನೆಯ ಪ್ರಕ್ರಿಯೆಗೆ

ಅಧಿಕೃತ ಚಾಲನೆಯನ್ನು ಕೊಟ್ಟೇಬಿಟ್ಟರು! ಮುಂದೆ ಶ್ರೀಗಳ ನಿರ್ದೇಶನದಂತೆ ಬಹುತೇಕ ಭಾರತೀಯರು ವಾಸವಿರುವ 'Cedar Park' ಎಂಬಲ್ಲಿ ಸುಮಾರು ಒಂದೂವರೆ ಎಕರೆ ವಿಸ್ತಾರದ ನಿವೇಶನದಲ್ಲಿ ಶ್ರೀಮಠವು ಸಂಸ್ಥಾಪನೆಗೊಂಡಿತು. ಉಡುಪಿ ಶ್ರೀಕೃಷ್ಣ, ಮುಖ್ಯಪ್ರಾಣ ಮತ್ತು ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಮೃತ್ತಿಕಾವೃಂದಾವನದ ಪ್ರತಿಷ್ಠಾಪನೆಯಾಯಿತು.

ಅಮೇರಿಕಾ ದೇಶದ ಎರಡನೇ ಬೃಹತ್ ರಾಜ್ಯವೆನಿಸಿದ 'ಟೆಕ್ಸಾಸ್'ನ ಪ್ರಸ್ತುತ ರಾಜಧಾನಿಯೇ 'ಆಸ್ಟಿನ್' ಎಂಬ ಮಹಾನಗರ. ಪೂರ್ವದಲ್ಲಿ ಇದೊಂದು ಪುಟ್ಟ ಹಳ್ಳಿಯಾಗಿತ್ತು. ಇದರ ಮೂಲಹೆಸರು 'ವಾಟರ್ಲೂ'. 'ಕೊಲರಾಡೋ' ಎಂಬ ಸುಂದರ ನದಿಯ ದಡದಲ್ಲಿ ರೂಪುಗೊಂಡಿದ್ದ ಈ ಪ್ರದೇಶವು ಮೂಲತಃ ಟೊಂಕಾವಾ, ಕೊಮಂಚೆ ಇತ್ಯಾದಿ ಹೆಸರಿನ ಇಲ್ಲಿನ ಪ್ರಾದೇಶಿಕ ಬುಡಕಟ್ಟು ಜನಾಂಗಗಳಿಗೆ ಸೇರಿತ್ತು. ಸುಮಾರು 2 ಲಕ್ಷದ 68 ಸಾವಿರ ಚರದ ಮೈಲಿ ವಿಸ್ತೀರ್ಣದ ಈಗಿನ ಸಂಪೂರ್ಣ 'ಟೆಕ್ಸಾಸ್' ಪ್ರದೇಶವು ಅಮೇರಿಕಾ ದೇಶದ ಪ್ರತಿಷ್ಠಿತ ಭಾಗವಾಗಿ, 28ನೇ ರಾಜ್ಯವಾಗಿ, ಗುರುತಿಸಿಕೊಂಡದ್ದು 1845ರಲ್ಲಿ. ತತ್ಪೂರ್ವದಲ್ಲಿ ಫಲವತ್ತಾದ ಈ ಭೂಪ್ರದೇಶದ ಸ್ವಾಧೀನತೆಗೋಸ್ಕರ ಅನೇಕ ಯುದ್ಧಗಳು, ಹೋರಾಟಗಳು ಸಂಭವಿಸಿದ್ದವು. ತಮ್ಮ ಪಾಡಿಗೆ ತಾವು ನೆಮ್ಮದಿಯಿಂದ ವಾಸಿಸುತ್ತಿದ್ದ ಇಲ್ಲಿನ ಬುಡಕಟ್ಟು ಜನಾಂಗದವರನ್ನು ಮೊದಲು ಒಕ್ಕಲೆಬ್ಬಿಸಿದವರು 'ಸ್ಪೈನ್' ದೇಶದ ಅನ್ವೇಷಕರು, ಸುಮಾರು ಹದಿನೈದನೆಯ ಶತಮಾನದ ಪೂರ್ವ ಭಾಗದಲ್ಲಿ. ನಂತರ ಇಲ್ಲಿ ಆಕ್ರಮಣಗೈದು ಕೆಲಕಾಲ ಆಡಳಿತ ನಡೆಸಿದವರು ಫ್ರೆಂಚರು. ಆಮೇಲೆ ಪಕ್ಕದ ಮೆಕ್ಸಿಕನ್ನರೂ ಸ್ವಲ್ಪ ಸಮಯ ಈ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡರು. ಒಂದಷ್ಟು ಕಾಲ ಸ್ವಾಯತ್ತದೇಶವಾಗಿಯೂ ಈ ಪ್ರದೇಶವು ಗುರುತಿಸಕೊಂಡಿತ್ತು. ಹೀಗೆ ಸುಮಾರು ಮೂರು ಶತಮಾನಗಳಲ್ಲಿ ಅನೇಕ ರಕ್ತಸಿಕ್ತ ಹೋರಾಟಗಳು ಮತ್ತು ರಾಜಕೀಯ ಬೆಳವಣಿಗೆಗಳನ್ನು ಕಂಡ ಬಳಿಕ ಈ ಟೆಕ್ಸಾಸ್ ಪ್ರದೇಶವು ಅಮೇರಿಕಾದ ವಶವಾಗಿ ಪ್ರತಿಷ್ಠಿತ ರಾಜ್ಯವೆಂಬ ಸ್ಥಾನಮಾನವನ್ನು ಪಡೆಯಿತು. 1846ನೇ ಇಸವಿಯಲ್ಲಿ ಟೆಕ್ಸಾಸ್‌ನ ರಾಜಧಾನಿಯಾಗಿ ಈ 'ವಾಟರ್ಲೂ' ಎಂಬ

ಸುಂದರ ಪ್ರದೇಶವನ್ನೇ ಗುರುತಿಸಿ, ಇಲ್ಲಿನ ಶ್ರೇಯೋಭಿವೃದ್ಧಿಗೋಸ್ಕರ ಸಾಕಷ್ಟು ಶ್ರಮ ವಹಿಸಿದ ಇಲ್ಲಿನ ಪ್ರಸಿದ್ಧ ನೇತಾರ ಮತ್ತು ಟೆಕ್ಸಾಸ್‌ನ ಪಿತಾಮಹನೆಂದೇ ಪ್ರಸಿದ್ಧನಾದ 'ಸ್ಟೀಫನ್ ಎಫ್ ಆಸ್ಟಿನ್'ನ ಸ್ಮರಣಾರ್ಥವಾಗಿ ಇಲ್ಲಿಗೆ 'ಆಸ್ಟಿನ್' ಮಹಾನಗರವೆಂದು ಮರುನಾಮಕರಣ ಮಾಡಲಾಯಿತು.

ಸುಮಾರು ಹತ್ತೊಂಭತ್ತನೆಯ ಶತಮಾನದಿಂದ ಅತಿ ಶೀಘ್ರದಲ್ಲಿ ಅಭಿವೃದ್ಧಿಗೊಳ್ಳುತ್ತಾ ಬಂದ ಈ ಪ್ರದೇಶಕ್ಕೆ ಎಲ್ಲ ಸೌಲಭ್ಯಗಳನ್ನೂ ಸರಕಾರವು ಕಲ್ಪಿಸಿಕೊಟ್ಟಿತು. ಸ್ಥಳೀಯ ಆಡಳಿತವೂ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ವಲಸಿಗರನ್ನು ಈ ಆಸ್ಟಿನ್ ಪ್ರದೇಶದತ್ತ ಹೃತ್ಪೂರ್ವಕವಾಗಿ ಸ್ವಾಗತಿಸಿತು. 1888ನೇ ಇಸವಿಯಲ್ಲಿ ಪೂರ್ಣಗೊಂಡ ಇಟಾಲಿಯನ್ ವಾಸ್ತು ಶೈಲಿಯ ಟೆಕ್ಸಾಸ್ ಸ್ಟೇಟ್ ಕ್ಯಾಪಿಟಲ್ ಬಿಲ್ಡಿಂಗ್, ಮತ್ತು ಹೆಚ್ಚು ಕಡಿಮೆ ಅದೇ ಸಮಯದಲ್ಲಿ ಆಸ್ಟಿನ್ ನಲ್ಲಿ ಸ್ಥಾಪನೆಗೊಂಡ ಪ್ರತಿಷ್ಠಿತ 'ಟೆಕ್ಸಾಸ್ ಸ್ಟೇಟ್ ಯೂನಿವರ್ಸಿಟಿ' ಕೂಡ ಈ ವಲಯಕ್ಕೆ ಹೆಚ್ಚಿನ ವಿದ್ಯಾಸಕ್ತರು, ಬುದ್ಧಿವಂತರು ಮತ್ತು ಉದ್ಯಮಿಗಳು ಬರುವಂತೆ ಮಾಡಿತು. ಇದೀಗ ಸುಮಾರು ಐನೂರಕ್ಕೂ ಹೆಚ್ಚು ದೊಡ್ಡ ದೊಡ್ಡ ಕಂಪೆನಿಗಳು ಇಲ್ಲಿ ತಮ್ಮ ಪ್ರಧಾನ ಶಾಖೆಗಳನ್ನು ತೆರೆದು ಲಕ್ಷಾಂತರ ಮಂದಿಗೆ ಉದ್ಯೋಗಾವಕಾಶಗಳನ್ನು ಕರುಣಿಸಿವೆ. ಅವುಗಳಲ್ಲಿ ಗೂಗಲ್, ಐಬಿಎಮ್, ಡೆಲ್, ಇಂಟೆಲ್, ಇಬೇ ಇತ್ಯಾದಿ ಪ್ರಸಿದ್ಧ ಮಾಹಿತಿ ತಂತ್ರಜ್ಞಾನ ಕಂಪೆನಿಗಳೂ ಸೇರಿವೆ. ಅದರಿಂದಾಗಿ ಆಸ್ಟಿನ್ ಮಹಾನಗರವನ್ನು ದಕ್ಷಿಣದ 'ಸಿಲಿಕಾನ್ ವ್ಯಾಲಿ' ಎಂಬುವುದಾಗಿಯೂ ಕರೆಯುತ್ತಾರೆ. ಮತ್ತು ಈ ಪ್ರದೇಶವು ಟೆಕ್ಸಾಸ್ ರಾಜ್ಯದ ಅತಿಸುರಕ್ಷಿತ ಹಾಗೂ ದುಬಾರಿ ವಾಸಯೋಗ್ಯ ಪಟ್ಟಣವಾಗಿಯೂ ಗುರುತಿಸಲ್ಪಟ್ಟಿದೆ. ಪ್ರಸ್ತುತ ಸುಮಾರು ಎಪ್ಪತ್ತು ಸಾವಿರದಷ್ಟು ಮಂದಿ ನಮ್ಮ ಸನಾತನ ಧರ್ಮೀಯರು ಇಲ್ಲಿ ಮನೆಮಾಡಿಕೊಂಡು ಉತ್ತಮ ವಿದ್ಯೆ, ಉದ್ಯೋಗಗಳೊಂದಿಗೆ ಪ್ರತಿಷ್ಠಿತ ಜೀವನವನ್ನು ನಡೆಸುತ್ತಿದ್ದಾರೆ.

ಪ್ರಸ್ತುತ ಇಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಶ್ರೀಕೃಷ್ಣ ವೃಂದಾವನದ ಆಸ್ಟಿನ್ ಶಾಖೆಯು ಅತಿ ಶೀಘ್ರದಲ್ಲಿಯೇ ಜನಾನುರಾಗವನ್ನು ಸಂಪಾದಿಸಿಕೊಂಡಿದೆ. ಪ್ರತಿನಿತ್ಯವೂ ಅನೇಕ ನೂತನ ಭಕ್ತರನ್ನೂ ತನ್ನತ್ತ ಆಕರ್ಷಿಸುತ್ತಿದೆ. ಇಲ್ಲಿ ನಿಯೋಜನೆಗೊಂಡ ಶ್ರೀ ಮಠದ ಶಿಷ್ಯವರ್ಗವು ಪೂಜ್ಯ ಶ್ರೀಪಾದರ ಆಶಯ ಮತ್ತು ಮಾರ್ಗದರ್ಶನದಂತೆ ನಿತ್ಯ ತ್ರಿಕಾಲಪೂಜೆ, ಭಜನೆ, ವೇದ ಪಾರಾಯಣ, ಹೋಮ ಹವನ, ಪಾಠಪ್ರವಚನ, ಅನ್ನಸಂತರ್ಪಣೆ ಇತ್ಯಾದಿ ಸೇವೆಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿದೆ. ತನ್ಮೂಲಕ ಶ್ರೀ ಪುತ್ತಿಗೆ ಮಠವು ಸನಾತನ ಧರ್ಮದ ಸಂರಕ್ಷಣೆ ಮತ್ತು ಪಾಲನೆ, ಪೋಷಣೆಯ ಬಗೆಗಿನ ತನ್ನ ಕಾರ್ಯವ್ಯಾಪ್ತಿಯನ್ನು ಅಮೇರಿಕಾದ ಆಸ್ಟಿನ್ ಮಹಾನಗರಕ್ಕೂ ವಿಸ್ತರಿಸಿದೆ.

●

# ಪಾಂಸವಃಪಾವಯಂತು



**ಶ್ರೀ ಅವಿನಾಶ್ ಆಚಾರ್ಯ**
ಶ್ರೀಕೃಷ್ಣವೃಂದಾವನ, ಆಸ್ಟಿನ್, USA

**ನ**ಮ್ಮ ಗುರುಗಳ ಗುಣಗಾನ ಮಾಡುವುದೆಂದರೆ ಸಾಗರದ ನೀರನ್ನು ಬೊಗಸೆಯಲ್ಲಿ ಅಳೆಯುವಂತೆ. ಆಗಸದ ಅಪರಿಮಿತ ನಕ್ಷತ್ರಗಳನ್ನು ಬರಿಗಣ್ಣಿನಲ್ಲಿ ಎಣಿಸಲು ಹೊರಟಂತೆ. ಆದರೂ ನನ್ನ ಸ್ವರೂಪೋದ್ಧಾರಕ ಗುರುಗಳ ಕುರಿತು ಒಂದೆರಡು ತೊದಲುನುಡಿಗಳನ್ನಾದರೂ ನುಡಿಯಲೇ ಬೇಕೆಂಬ ತುಡಿತ ನನ್ನನ್ನು ಆಗಾಗ ಮಾತನಾಡಿಸುತ್ತದೆ. ಅಜ್ಞಾನದ ಕೂಪದಲ್ಲಿ ಕೂಪಮಂಡೂಕದಂತಿದ್ದ ನನ್ನಂತಹ ಅನೇಕ ಮಂದಿ ಶಿಷ್ಯರನ್ನು ಉದ್ಧರಿಸಿದ ಗುರುಗಳಿಗೆ ಭಕ್ತಿಪೂರ್ವಕವಾಗಿ ನಾನು ಸಲ್ಲಿಸಲೇಬೇಕಾದ ಕೃತಜ್ಞತೆಯ ದ್ಯೋತಕವಾಗಿ ಈ ಬಾಲಿಶ ನುಡಿಗಳು. ಗುರುಗಳ ಪದಕಮಲಕ್ಕೆ ನನ್ನದೊಂದೆರಡು ಗುರುಗುಣಸ್ತವನದ ವಾಕ್ಕುಸುಮಗಳು.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುವಂತೆ–

"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ।
ತತ್ಸ್ವಯಂ ಯೋಗಸಂಸಿದ್ಧಃಕಾಲೇನಾತ್ಮನಿವಿಂದತಿ॥"

ನಮ್ಮ ಈ ಅಮೂಲ್ಯವಾದ ಮನುಷ್ಯ ಜನ್ಮವನ್ನು ಸಾರ್ಥಕಗೊಳಿಸಲು ಜ್ಞಾನಕ್ಕಿಂತ ಪಾವನವಾದ ಅನ್ಯಮಾರ್ಗವೆಂಬುವುದಿಲ್ಲ. ಕಾಲಕೂಡಿ ಬಂದಾಗ ಆ ಪರಿಶುದ್ಧ ಅರಿವನ್ನು ಹರಿಸಿ ನಮ್ಮನ್ನು ಉದ್ಧರಿಸಬಲ್ಲ ಸಮರ್ಥರಾದ ಗುರುಗಳ ಸಹಯೋಗವನ್ನು ಆ ದೇವರೇ ನಮಗೆ ಕರುಣಿಸುತ್ತಾನಂತೆ. ಭಾಗ್ಯವಶಾತ್ ನಮಗೆ ಆ ಪುಣ್ಯಕಾಲವು ಈ ಜನ್ಮದಲ್ಲೇ ಒದಗಿ ಬಂದಿದೆ. ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರಂತಹ ಗುರುಗಳ

ಕೃಪಾದೃಷ್ಟಿಗೆ ಗೋಚರವಾಗುವ ಅದೃಷ್ಟ ಒಲಿದು ಬಂದಿದೆ. ಅಜ್ಞಾನದ ಆಳ ಕಂದಕದಲ್ಲಿದ್ದ ನಮ್ಮನ್ನು ಉದ್ಧರಿಸಬಲ್ಲ ಜ್ಞಾನವನ್ನು ಕೇವಲ ಕರುಣೆಯಿಂದ ನಮಗೆ ನಿರ್ವ್ಯಾಜವಾಗಿ ಒದಗಿಸಿ ನಮ್ಮನ್ನು ಉನ್ನತಿಯ ಹಾದಿಯಲ್ಲಿ ತಂದು ನಿಲ್ಲಿಸಿದ ನಮ್ಮ ಗುರುಗಳ ಹೃದಯ ಶ್ರೀಮಂತಿಕೆಯನ್ನು ವರ್ಣಿಸುವುದೆಂತು?

ಇಪ್ಪತ್ತೆಂಟು ವರ್ಷಗಳ ಹಿಂದೆಯೇ ಅಮೇರಿಕಾ ದೇಶಕ್ಕೆ ಪಾದಾರ್ಪಣೆಗೈದು, ಅಲ್ಲಿನ ಲಕ್ಷಾಂತರ ಅನಿವಾಸಿ ಭಾರತೀಯರಿಗೆ ಸಂಸ್ಕಾರ ದೊರಕಬೇಕು ಮತ್ತು ಭಗವತ್ಪ್ರಜ್ಞೆಯು ಎಲ್ಲರಲ್ಲೂ ಬೆಳೆಯಬೇಕು ಎಂಬ ಧ್ಯೇಯದಿಂದ, ಎಷ್ಟೇ ಸವಾಲು, ಅಪಮಾನಗಳು ಎದುರಾದರೂ ಲೆಕ್ಕಿಸದೆ ಮುನ್ನುಗ್ಗಿ ಸಾಗಿ ಅಭೂತಪೂರ್ವ ಧರ್ಮಕ್ರಾಂತಿಯೆಂಬ ಯಶಸ್ಸನ್ನು ಸಾಧಿಸಿದ ಮಹನೀಯರು ನಮ್ಮ ಗುರುಗಳು. ಜಗದ್ಗುರು ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವ ಸಿದ್ಧಾಂತವು ನಿಂತನೀರಿನಂತೆ ಕೇವಲ ಭಾರತಕ್ಕಷ್ಟೇ ಸೀಮಿತವಾಗಬಾರದು, ವಿಶಾಲ ಸಮುದ್ರದಂತೆ ವಿಶ್ವವ್ಯಾಪಿಯಾಗಬೇಕು ಎಂದು ಪರಿಶ್ರಮ ವಹಿಸಿ ಸಪ್ತ ಸಮುದ್ರಗಳಾಚೆಗೂ ಪಸರಿಸಿ ಮೆರೆಸಿ ಮೇರುತುಲ್ಯ ಕೀರ್ತಿಯನ್ನು ಸಂಪಾದಿಸಿಕೊಂಡವರು ನಮ್ಮ ಗುರುಗಳು.

ಅಮೇರಿಕಾದ ಹನ್ನೊಂದು ಮಹಾನಗರಗಳಲ್ಲಿ, ಮತ್ತು ಆಸ್ಟ್ರೇಲಿಯಾ, ಇಂಗ್ಲೆಂಡ್ ಕೆನಡಾ ದೇಶಗಳಲ್ಲೂ 'ಶ್ರೀಕೃಷ್ಣಾವೃಂದಾವನ'ಗಳನ್ನು ಸ್ಥಾಪಿಸಿ, ನಿತ್ಯ ಭಗವದ್ಗೀತಾ ಪಾರಾಯಣ, ತ್ರಿಕಾಲ ಕೃಷ್ಣಪೂಜೆ, ಹೋಮ-ಹವನಗಳು, ಪಿತೃಕಾರ್ಯಗಳು ಹಾಗೂ ಬಂದವರಿಗೆ ಪ್ರತಿನಿತ್ಯ ಉಚಿತ ಭೋಜನ ಪ್ರಸಾದದ ವ್ಯವಸ್ಥೆ ಇತ್ಯಾದಿ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಟ್ಟವರು ನಮ್ಮ ಗುರುಗಳು. ತನ್ಮೂಲಕ ಧರ್ಮಪ್ರಚಾರದ ದಾರಿ ವಿಶಾಲವಾಗಿ ತೆರೆದುಕೊಂಡಿತು. ಅಮೇರಿಕಾದಲ್ಲಿ ನಾನು ಮೊದಲು ಸೇವೆಸಲ್ಲಿಸಿದ ನ್ಯೂಜೆರ್ಸಿಯ ಮಠವಂತೂ ಭೂ ವೈಕುಂಠದಂತೆ ಇತ್ತು. ಅಲ್ಲಿನ ಭಕ್ತರ ಏಕಾದಶೀ ಉಪವಾಸ ಚಾತುರ್ಮಾಸ್ಯಾದಿ ವ್ರತಗಳ ನಿಷ್ಠೆಯ ಅನುಷ್ಠಾನಗಳನ್ನು ಕಂಡಾಗ

ನನಗೇ ಆಶ್ಚರ್ಯವೆನಿಸಿತು. ಅದರಿಂದಾಗಿ ನಾನೂ ಆತ್ಮವಿಮರ್ಶೆ ಮಾಡಿಕೊಳ್ಳುವಂತಾಯಿತು. ಮುಂದೆ ನನ್ನ ಅಧ್ಯಯನ ಅನುಷ್ಠಾನಗಳೂ ಗಟ್ಟಿಗೊಂಡವು.

'ಅದ್ವೇಷ್ಟಾಸರ್ವಭೂತಾನಾಂಮೈತ್ರಃಕರುಣಏವಚ' ಎಂಬ ಶ್ರೀ ಕೃಷ್ಣನ ವಚನಕ್ಕೆ ನೈಜ ಉದಾಹಣೆಯಂತಿರುವ ನಮ್ಮ ಗುರುಗಳ ಕರುಣೆಗೆ ಜಾತಿ, ಮತ, ಪಂಥಗಳ ಎಲ್ಲೆಯೆಂಬುವುದೇ ಇಲ್ಲ. ಎಲ್ಲರಿಗೂ ಒಳಿತಾಗಲೆಂಬ ಸಂಕಲ್ಪದೊಂದಿಗೆ ನಮ್ಮ ಗುರುಗಳು ಸಂಯೋಜಿಸಿದ ಯೋಜನೆಗಳಿಗೂ ಲೆಕ್ಕವಿಲ್ಲ. ಅಂತಹ ನಮ್ಮ ಗುರುಗಳ ಆ ಕಾರುಣ್ಯಸರಣಿಯು ಅವರನ್ನು ಪ್ರತಿಷ್ಠಿತ ವಿಶ್ವಸಂಸ್ಥೆಯ ಧಾರ್ಮಿಕ ವಿಭಾಗದ ಅಧ್ಯಕ್ಷರನ್ನಾಗಿಸಿತು. ಅವರ ತಪೋಬಲವು ಭಾರತದ ಜನಪ್ರಿಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರೇ ಸ್ವತಃ ಶ್ರೀಗಳ ಸನ್ನಿಧಿಗೆ ಧಾವಿಸಿ ಬಂದು, ಶ್ರೀಗಳ ಅಮೃತ ಹಸ್ತದಿಂದ ಮಾಧ್ವಚಿಹ್ನೆಯಾದ ಅಕ್ಷತೆ ಅಂಗಾರವನ್ನು ಹಣೆಯಲ್ಲಿ ಧರಿಸಿ, ಶ್ರೀ ಮಧ್ವರ ಗುಣಗಾನವನ್ನು ಮಾಡಿ, 'ಭಾರತಭಾಗ್ಯವಿದಾತಾ' ಎಂಬ ಉಪಾಧಿಯನ್ನು ಪಡೆದು ಕೃತಕೃತ್ಯರಾಗುವಂತೆ ಮಾಡಿತು.

ಇಂತಹ ಅನೇಕ ಮಹನೀಯ ಗುಣಗಳಿಂದ ಭೂಷಿತರಾದ ಗುರುಗಳ ಬಗ್ಗೆ ಅಲ್ಪಮತಿ ನಾನೇನು ಹೇಳಬಲ್ಲೆ? ಅನುದಿನವೂ ಅವರ ಚರಣಕ್ಕೆರಗಿ ಪಾದಧೂಳಿಯು ನನ್ನನ್ನು ಪಾವನಗೊಳಿಸಲಿ "ಪಾಂಸವಃಪಾವಯಂತು" ಎಂದು ಭಕ್ತಿಯಿಂದ ಬೇಡಿಕೊಳ್ಳಬಲ್ಲೆನಷ್ಟೇ.

"ಕೃಷ್ಣಾರ್ಪಣಮಸ್ತು"




SHRI KRISHNA VRUNDAVANA, CHICAGO, ILLINOIS, USA.

# ಶಿಕಾಗೋದಲ್ಲಿ ಶ್ರೀಕೃಷ್ಣವೃಂದಾವನ

**ಸ್ವಾ**ಭಿಮಾನಿ ಸನಾತನಿಗಳಿಗೆ ಅಮೇರಿಕ ಎಂದಾಕ್ಷಣ ಮೊದಲು ನೆನಪಾಗುವ ಮಹಾನಗರವೇ ಶಿಕಾಗೋ! ಕಾರಣ ಸರ್ವವಿದಿತ ಮತ್ತು ಬಹುವಿಶ್ರುತ! ಪ್ರಸ್ತುತ ಶಿಕಾಗೋದ ಹೃದಯಭಾಗದಲ್ಲಿರುವ 'ವಿವೇಕಾನಂದ ವೇ' ಎಂಬ ಹೆಸರಿನ ಮುಖ್ಯ ರಸ್ತೆಯೊಂದಕ್ಕೆ ಕಾಲಿರಿಸಿದಾಗ ಪ್ರತಿಯೋರ್ವ ಭಾರತೀಯನಿಗೂ ರೋಮಾಂಚನವಾಗುತ್ತದೆ! ಸೆಪ್ಟೆಂಬರ್ 11, 1893 ರಂದು ಶಿಕಾಗೋದಲ್ಲಿ ನಡೆದ ಐತಿಹಾಸಿಕ ಜಾಗತಿಕ ಧರ್ಮಸಭೆಯಲ್ಲಿ ವಿಶ್ವದ ಗಮನ ಸೆಳೆದ ಮತ್ತು ಎಲ್ಲರ ಗೌರವವನ್ನು ಸಂಪಾದಿಸಿದ ವಿವೇಕಾನಂದರ ಆ ಅದ್ಭುತ ಭಾಷಣದ ನೆನಪಾಗುತ್ತದೆ. ತನ್ಮೂಲಕ ಅವರಿಗೆ ಮತ್ತು ನಮ್ಮ ಸನಾತನ ಹಿಂದೂಪರಂಪರೆಗೆ ಉತ್ತಮ ಹೆಸರು ಮತ್ತು ಉನ್ನತ ಸ್ಥಾನಮಾನವನ್ನು ಕಲ್ಪಿಸಿಕೊಟ್ಟ ನಮ್ಮ ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ನಮಗೆ ಹೆಮ್ಮೆಯೆನಿಸುತ್ತದೆ! ಏಕೆಂದರೆ ಅಲ್ಲಿಯ ತನಕ ಕಾಲವಶಾತ್ ಮೊಗಲರಿಂದ ಆರಂಭಿಸಿ ಬ್ರಿಟಿಷರವರೆಗಿನ ವಿದೇಶೀ ದರೋಡೆಕೋರರ, ಮತಾಂಧರ ಹಲವು ಶತಮಾನಗಳ ಪರ್ಯಂತದ ಆಕ್ರಮಣಕ್ಕೆ ತುತ್ತಾಗಿ ಬಳಲಿ ಬಸವಳಿದ ಭಾರತಕ್ಕೆ ಮತ್ತು ಇಲ್ಲಿನ ಆಧ್ಯಾತ್ಮಿಕ ಸಂಪತ್ತಿಗೆ ಅನ್ಯದೇಶಗಳಲ್ಲಿ ಯಾವ ಮನ್ನಣೆಯೂ ಇರಲಿಲ್ಲ! ಅಂದು ಭಗವಂತ ಶ್ರೀ ವಿವೇಕಾನಂದರ ಮೂಲಕ ಜಾಗತಿಕವಾಗಿ ಕವಿದಿದ್ದ ಭಾರತದ ಬಗೆಗಿನ ಮೌಢ್ಯದ ಮುಸುಕನ್ನು ಬದಿಗೆ ಸರಿಸಿದ್ದು ನಮ್ಮ ಪಾಲಿಗೊಂದು ಸುಮಧುರ ಇತಿಹಾಸ! ಹೀಗೆ ಕಾಲವು ಪಕ್ವವಾದಾಗ ಅರ್ಹರು ಧರಿಸಿದ ಮುತ್ತಿನ ಕಂಠೀಸರವು ಎಲ್ಲರ ಗಮನವನ್ನೂ ತನ್ನತ್ತ ಸೆಳೆಯುತ್ತದೆ. ಇಲ್ಲವಾದರೆ ಮೂಢರಿಗೆ ಹೇಗೆ ತಾನೆ ಗೊತ್ತಾಗಬೇಕು ಮುತ್ತಿನ ಬೆಲೆ?

ಅಂತಹ ಚಿಕಾಗೋ ಎಂಬ ತಂಪು ನಗರವೆಂದರೆ ಬಹುಶಃ ವಾಯುದೇವರಿಗೂ ಬಲು ಪ್ರೀತಿ. ಚಳಿಗಾಲದಲ್ಲಂತೂ ಇಲ್ಲಿನ ಬೀಸುಗಾಳಿಯು ಒಂದು ಕ್ಷಣವೂ ಸುಮ್ಮನಿರದೆ ವಾತಾವರಣವನ್ನು ತೀವ್ರ ಹಿಮಮಯವನ್ನಾಗಿಸುತ್ತದೆ. ಅತೀವ ಶೀತಲವನ್ನಾಗಿಸುತ್ತದೆ.

ಜೊತೆಗೆ ಬೇಸಿಗೆಯಲ್ಲೂ ಹಿತವಾಗಿ ಬೀಸುತ್ತಾ ಇಲ್ಲಿನ ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಅದಕ್ಕೆ ಮೂಲ ಕಾರಣ ಅಲ್ಲಿನ ವಿಶಾಲವಾದ ಮಿಷಿಗನ್ ಲೇಕ್ ಎಂಬ ಬೃಹತ್ ಸರೋವರ. ಉತ್ತರ ಅಮೇರಿಕಾದಲ್ಲಿರುವ ಮೂರನೇ ಬೃಹತ್ ಜಲರಾಶಿಯಿದು. 58,000ಕಿ.ಮೀ ವಿಸ್ತರಿಸಿದ ಈ ವಿಶಾಲ ಸರೋವರದ ವ್ಯಾಪ್ತಿ ನಮ್ಮ ಕರ್ನಾಟಕದ (1.91 ಲಕ್ಷ ಕಿ.ಮೀ.) ಮೂರನೇ ಒಂದು ಭಾಗದಷ್ಟು ದೊಡ್ಡದಂತೆ! ವಿಸ್ಕಾನ್ಸಿನ್, ಇಲಿನಾಯ್ಸ್, ಇಂಡಿಯಾನ ಮತ್ತು ಮಿಷಿಗನ್ ಎಂಬ ನಾಲ್ಕು ರಾಜ್ಯಗಳನ್ನು ವ್ಯಾಪಿಸಿದ ಈ ಸುಂದರ ಸರೋವರದ ಮೂತಿಯ ಭಾಗದಲ್ಲಿ ಮೂಗುತಿಯಂತಿರುವ ನಗರವೇ ಈ ನಮ್ಮ ಶಿಕಾಗೋ!

ಇಲಿನಾಯ್ಸ್ ರಾಜ್ಯದ ಮುಖ್ಯ ನಗರವಾಗಿರುವ ಶಿಕಾಗೋ, ರಾಜ್ಯ ರಾಜಧಾನಿ ಸ್ಪ್ರಿಂಗ್ ಫೀಲ್ಡ್ ನಿಂದ ಈಶಾನ್ಯಕ್ಕೆ ಸುಮಾರು 186 ಮೈಲಿ ದೂರದಲ್ಲಿದೆ. 1871 ನೇ ಇಸವಿಯಲ್ಲಿ ಇಲ್ಲೊಂದು ಬೃಹತ್ ಅಗ್ನಿದುರಂತವೊಂದು ಸಂಭವಿಸಿ ಇಡೀ ನಗರವನ್ನೇ ಕಬಳಿಸಿ ಬಿಟ್ಟಿತ್ತಂತೆ! ಮುಂದಿನ ಎರಡೇ ದಶಕಗಳಲ್ಲಿ ಅಂದರೆ ಸುಮಾರು 1893ರ ಹೊತ್ತಿಗೆ ಈ ನಗರವು ಅನೇಕ ಅದ್ಭುತ ಮತ್ತು ಸುಂದರ ಕಟ್ಟಡಗಳೊಂದಿಗೆ ಪುನರ್ನಿರ್ಮಿತವಾಗಿ 'ಸಿಟಿ ಬ್ಯೂಟಿಫುಲ್' ಎಂಬ ಅಭಿಯಾನದೊಂದಿಗೆ ತತ್ಕಾಲೀನ ಇನ್ನಿತರ ಆಧುನಿಕ ನಗರಗಳ ನವ ನಿರ್ಮಾಣಕ್ಕೆ ಮಾದರಿಯೆನಿಸಿತಂತೆ! ಇಡೀ ನಗರವನ್ನು ಸೀಳಿಕೊಂಡು ಸರಿಯುವ ಸುಂದರ ಶಿಕಾಗೋ ಮಹಾನದಿ ಇಲ್ಲಿನ ಮತ್ತೊಂದು ಆಕರ್ಷಣೆ. 1889ನೇ ಇಸವಿಯಲ್ಲೇ ಕೃತಕ ತಿರುವು ಮತ್ತು ಅನೇಕ ಹೊಸ ನಾಲೆಗಳ ನಿರ್ಮಾಣದೊಂದಿಗೆ ಬಹುವಿಧದಲ್ಲಿ ಉಪಯೋಗಿಯಾಗಿ ಬಳಕೆಯಾಗುತ್ತಿರುವ ಈ ನದಿಯೂ ನಗರದ ಅಭಿವೃದ್ಧಿಗೆ ತನ್ನ ದೊಡ್ಡಮಟ್ಟದ ಕೊಡುಗೆಯನ್ನೇ ಕೊಟ್ಟಿದೆ. ಚಿಕಾಗೋ ರಿವರ್ ವಾಕ್ ಮತ್ತು ಮಿಲೇನಿಯಂ ಪಾರ್ಕ್ ಕೂಡ ಅತ್ಯಂತ ರಮಣೀಯವಾಗಿದ್ದು ಪ್ರವಾಸಿಗರನ್ನು ನಿರಂತರ ತನ್ನತ್ತ ಆಕರ್ಷಿಸುತ್ತಿದೆ.

ಇಂತಹ ಚಿಕಾಗೋ ಎಂಬ ಅಮೇರಿಕಾದ ಐತಿಹಾಸಿಕ ನಗರಕ್ಕೆ ಪುತ್ತಿಗೆ ಶ್ರೀಗಳು ಮೊದಲ ಬಾರಿಗೆ ಆಗಮಿಸಿದ್ದು 1997ರಲ್ಲಿ. ಅಲ್ಲಿಂದ ಅನೇಕ ಸಲ ಪೂಜ್ಯ

ಶ್ರೀಗಳ ಯಾತ್ರೆ ಈ ಪ್ರದೇಶದಲ್ಲಿ, ಅಂದರೆ ಡೆಟ್ರಾಯಿಟ್, ಮಿಲ್ವಾಕೀ, ಕಲಮಜೂ ಮುಂತಾದ ಕಡೆ ಸಂಭವಿಸಿದರೂ ಶಾಖಾಮಠದ ಸ್ಥಾಪನೆಗೆ ಮಾತ್ರ ಕಾಲ ಕೂಡಿಬಂದಿರಲಿಲ್ಲ. ಯಥಾಪ್ರಕಾರ ಡೆಟ್ರಾಯಿಟ್ ಮತ್ತು ಚಿಕಾಗೋ ನಗರಗಳಲ್ಲಿ ಈ ಬಗೆಗಿನ ಪ್ರಸ್ತಾಪವಂತೂ ಶ್ರೀಗಳ ಸನ್ನಿಧಿಯಲ್ಲಿ ಆಗಾಗ ಚರ್ಚೆಯಾಗುತ್ತಿತ್ತು. ಅನೇಕ ಭಕ್ತರು ಅನೇಕ ರೀತಿಗಳಲ್ಲಿ ತಮ್ಮ ಮನವಿಯನ್ನು ಸಲ್ಲಿಸುತ್ತಲೇ ಇದ್ದರು.

2022ನೇ ಇಸವಿಯ ಮಧ್ಯಭಾಗದಲ್ಲಿ ಪೂಜ್ಯ ಶ್ರೀಪಾದರ ಚತುರ್ಥ ಪರ್ಯಾಯದ ಪೂರ್ವಭಾವಿ ಸಿದ್ಧತೆಗಳು ಆರಂಭಗೊಂಡವು. ಪೂಜ್ಯರ ವಿಶ್ವಸಂಚಾರ ಸಂಕಲ್ಪದ ಪ್ರಮುಖ ಪ್ರದೇಶಗಳ ಪಟ್ಟಿಯಲ್ಲಿ ಚಿಕಾಗೋ ಮಹಾನಗರವೂ ಸೇರ್ಪಡೆಯಾಗಿತ್ತು. ತನ್ನಿಮಿತ್ತದ ಎಲ್ಲ ವ್ಯವಸ್ಥೆಗಳನ್ನೂ ಅಚ್ಚುಕಟ್ಟಾಗಿ ಮಾಡಿಕೊಂಡ ಸ್ಥಳೀಯ ಭಕ್ತರು ಶ್ರೀಗಳ ಆಗಮನಕ್ಕಾಗಿ ಕಾಯುತ್ತಲೂ ಇದ್ದರು. ಪೂರ್ವ ನಿಗದಿತ ವೇಳಾಪಟ್ಟಿಯಂತೆ ಸಪರಿವಾರರಾದ ಪೂಜ್ಯ ಶ್ರೀಪಾದರು ಮತ್ತು ಸಂಸ್ಥಾನ ಶ್ರೀ ವಿಟ್ಠಲದೇವರ ಸವಾರಿ ಡೆಟ್ರಾಯಿಟ್‌ನಿಂದ ಚಿಗಾಗೋ ತನಕ ವೈಭವದಿಂದ ಆಗಮಿಸಿತು. ಆದ್ದೂರಿಯ ಸ್ವಾಗತ, ಮತ್ತು ನೂರಾರು ಜನರ ಸಮ್ಮುಖದಲ್ಲಿ ನಡೆದ ಸಂಸ್ಥಾನಪೂಜೆ, ಪ್ರವಚನ, ಗುರುವಂದನೆ ಇತ್ಯಾದಿ ಅಪೂರ್ವ ಕಾರ್ಯಕ್ರಮಗಳಿಗೆ ಶಿಕಾಗೋ ಮಹಾನಗರವೂ ಸಾಕ್ಷಿಯಾಯಿತು. ಬಹುಕಾಲದಿಂದ ಅಲ್ಲಿ ನೆಲೆಸಿದ್ದ ನೂರಾರು ಭಕ್ತ ಕುಟುಂಬಗಳು ಪೂಜ್ಯ ಶೀಗಳ ಆಗಮನೋತ್ಸವ ಮತ್ತು ತನ್ನಿಮಿತ್ತದ ಕೆಲದಿನಗಳ ಬಿರುಸಿನ ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಭ್ರಮಿಸಿದ್ದೂ ಒಂದು ಅವಿಸ್ಮರಣೀಯ ಅನುಭವ.

ಅದೇ ಸಂದರ್ಭದಲ್ಲಿ ಅತ್ಯಂತ ಧರ್ಮಿಷ್ಠರು, ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತರು ಮತ್ತು ಜಿಜ್ಞಾಸುಗಳಾದ ಸುಮಾರು ಹತ್ತಿಪ್ಪತ್ತು ಮಂದಿ ಸಮರ್ಥ ಸಜ್ಜನರು ಒಟ್ಟು ಸೇರಿ ಶಿಗಾಗೋದಲ್ಲಿ ಶ್ರೀಕೃಷ್ಣವೃಂದಾವನವನ್ನು ಸ್ಥಾಪಿಸಲೇ ಬೇಕೆಂದು ಶ್ರೀಗಳನ್ನು ಪರಿಪರಿಯಾಗಿ ಭಿನ್ನವಿಸಿಕೊಂಡರು. ಇಲ್ಲಿ ಅನೇಕ ದೇವಸ್ಥಾನಗಳಿದ್ದರೂ, ಮತ್ತು ಅನೇಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದರೂ ಅದರ ಪ್ರಭಾವ

ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುತ್ತಿಲ್ಲ. ಅಂತಹ ಮಂದಿರಗಳು ಕೇವಲ ಧನವಂತರಾದ ಕೆಲವು ಲೌಕಿಕ ಜನರ ಧಾರ್ಮಿಕ ಮುಖವಾಡ ಮತ್ತು ಸ್ವಪ್ರತಿಷ್ಠೆಯ ಕೇಂದ್ರಗಳಾಗಿಬಿಟ್ಟಿವೆ. ಧರ್ಮಾಸಕ್ತರಿಗೆ ಮತ್ತು ಜ್ಞಾನಪಿಪಾಸುಗಳಿಗೆ ಅದರಿಂದೇನೂ ಪ್ರಯೋಜನವಾಗುತ್ತಿಲ್ಲ. ತುಳಸಿ ಮತ್ತು ಶಾಲಗ್ರಾಮದ ಸ್ಪರ್ಶವಾದ ನೀರು ಮಾತ್ರ ತೀರ್ಥವಾಗುವಂತೆ ಸ್ವಾಮಿಗಳು ಸ್ವತಃ ಚಿತ್ತೈಸಿ ತಮ್ಮ ಅಮೃತ ಹಸ್ತದಿಂದ ಪ್ರತಿಷ್ಠಾಪಿಸಿದರೆ ಮಾತ್ರ ಅದು ಮಠ ಎನ್ನಿಸಿಕೊಳ್ಳುತ್ತದೆ. ನ್ಯೂಜೆರ್ಸಿ, ಫೀನಿಕ್ಸ್ ಇತ್ಯಾದಿ ಅನ್ಯಪ್ರದೇಶಗಳಲ್ಲಿ ಶ್ರೀ ಮಠದ ಸ್ಥಾಪನೆಯಾದ ಮೇಲೆ ನಮ್ಮ ಸಮುದಾಯದವರಲ್ಲಿ ಆದ ಧನಾತ್ಮಕ ಬದಲಾವಣೆಗಳನ್ನು ನಾವೂ ಗಮನಿಸಿದ್ದೇವೆ. ಅಲ್ಲಿನ ಮಕ್ಕಳು ಮತ್ತು ಯುವಕರಂತೆ ಶಿಕಾಗೋದಲ್ಲಿನ ನಮ್ಮ ಯುವಜನತೆಯೂ ಧರ್ಮಾಸಕ್ತರಾಗಬೇಕು, ಶ್ರದ್ಧಾಳುಗಳಾಗಬೇಕು. ಅದಕ್ಕೋಸ್ಕರ ಅತಿ ಶೀಘ್ರದಲ್ಲಿ ಶ್ರೀಮಠದ ಶಾಖೆಯನ್ನು ಶ್ರೀಗಳು ಶಿಕಾಗೋದಲ್ಲಿ ಆರಂಭಿಸಲೇಬೇಕು, ಶ್ರೀ ಕೃಷ್ಣನನ್ನು ಮತ್ತು ರಾಯರ ವೃಂದಾವನವನ್ನು ಪ್ರತಿಷ್ಠಾಪಿಸಬೇಕು ಎಂಬುವುದು ಅವರ ಭಕ್ತಿಪೂರ್ವಕ ಒತ್ತಾಯವಾಗಿತ್ತು. ಆದರೆ ಈಗ ತಮ್ಮ ಬಳಿ ಅಷ್ಟೊಂದು ಸಮಯವಿಲ್ಲ. ಮುಂದೆ ಪರ್ಯಾಯ ಮುಗಿದ ಬಳಿಗೆ ಈ ಬಗ್ಗೆ ವಿಮರ್ಶಿಸುತ್ತೇವೆ ಎಂದಷ್ಟೇ ತಿಳಿಸಿದ ಶ್ರೀಗಳು ತಮ್ಮ ಸಂಚಾರವನ್ನು ಮುಂದುವರಿಸಿದರು.

ಆದರೆ ಶಿಕಾಗೋ ಭಕ್ತರ ಆ ಭಾವಪೂರ್ಣವಾದ ಪ್ರಾರ್ಥನೆ ಮಾತ್ರ ಪೂಜ್ಯ ಶ್ರೀಪಾದರ ಚಿತ್ತದಲ್ಲಿ ಅಚ್ಚೊತ್ತಿ ಕುಳಿತಿತ್ತು. ಸದಾ ನಮ್ಮ ಧರ್ಮ ಮತ್ತು ಸಮುದಾಯದ ಶ್ರೇಯಸ್ಸನ್ನಷ್ಟೇ ಬಯಸುವ ಪೂಜ್ಯರ ಪರಿಶುದ್ಧ ಮನಸ್ಸೂ ಆ ಭಕ್ತರ ನಿಷ್ಕಲ್ಮಶ ಮನವಿಯನ್ನೇ ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಿತ್ತು ಎಂದು ಕಾಣುತ್ತದೆ. ಪೂರ್ವ ನಿಗದಿತ ಸಂಚಾರ ಕ್ರಮದಂತೆ ಒಹಾಯೋ, ಪೀಟ್ಸ್ ಬರ್ಗ್, ಬಫೆಲೋ, ಬೋಸ್ಟನ್ ಇತ್ಯಾದಿ ಪ್ರದೇಶಗಳಲ್ಲಿ ಸಂಚರಿಸಿ ಮುಂದೆ ವರ್ಜೀನಿಯಾ, ಯಾರ್ಲಿ ಗಳನ್ನು ದಾಟಿ ಅಟ್ಲಾಂಟಕ್ಕೆ ತಲುಪುತ್ತಿದ್ದಂತೆ ಶಿಕಾಗೋ ಕುರಿತಾದ ಶ್ರೀಗಳ ಚಿಂತನೆಯು ಮತ್ತಷ್ಟು ಪ್ರಬಲವಾಗ ತೊಡಗಿತು. ಒಂದು ದಿನ ತಮ್ಮ ಶಿಷ್ಯರನ್ನೆಲ್ಲ ಕರೆದ ಪೂಜ್ಯ ಶ್ರೀಪಾದರು ಚಿಕಾಗೋದಲ್ಲಿ

ಶ್ರೀಮಠದ ಸ್ಥಾಪನೆಯಾಗಲೇಬೇಕು, ಹಾಗೆಂದು ತಮಗೆ ದೈವ ಪ್ರೇರಣೆಯಾಗಿದೆ. ಅತಿಶೀಘ್ರದಲ್ಲಿ ಆ ಪ್ರಯುಕ್ತ ನೀವೆಲ್ಲರೂ ಪ್ರಯತ್ನಿಸಬೇಕು ಎಂದು ಆಜ್ಞಾಪಿಸಿದರು!

ಮರುಕ್ಷಣದಲ್ಲೇ ತನ್ನಿಮಿತ್ತ ತೀವ್ರ ಆಸಕ್ತಿತೋರಿಸಿದ್ದ ಶಿಕಾಗೋ ಭಕ್ತವರ್ಗಕ್ಕೆ ಪರಮ ಪೂಜ್ಯ ಶ್ರೀಪಾದರ ಸಂಕಲ್ಪವನ್ನು ತಿಳಿಸಲಾಯಿತು. ಆಗ ಅನಿರೀಕ್ಷಿತ ಸಂದೇಶದಿಂದ ಸಂಭ್ರಮಪಟ್ಟ ಆ ಶಿಕಾಗೋ ಭಕ್ತರು ತತ್‌ಕ್ಷಣ ಕಾರ್ಯ ಪ್ರವೃತ್ತರಾದರು! ತಮಗೆ ತಿಳಿದ ರೀತಿಯಲ್ಲಿ ಸೂಕ್ತ ಜಾಗದ ಅನ್ವೇಷಣೆಗೆ ಸರ್ವಪ್ರಯತ್ನವನ್ನು ಮಾಡಿದರು. ಆಗ ಚಿಗಾಗೋ ಬಳಿಯ 'ಪಾಲಟೈನ್' ಎಂಬಲ್ಲಿ ಸುಮಾರು ಒಂದೂವರೆ ಎರಕೆ ವಿಸ್ತೀರ್ಣದ ನಿವೇಶನ ಮತ್ತು ದೊಡ್ಡ ಮನೆಯೊಂದು ಮಾರಾಟಕ್ಕಿದೆ ಎಂಬುವುದು ತಿಳಿದುಬಂತು! ಶ್ರೀಗಳ ಆದೇಶದಂತೆ ಶ್ರೀಮಠದ ಪ್ರತಿನಿಧಿಗಳನ್ನು ಅಲ್ಲಿಗೆ ಕಳಿಸಿ ಅದರ ಬಗೆಗಿನ ಸಂಪೂರ್ಣ ಮಾಹಿತಿಗಳನ್ನು ಕಲೆಹಾಕಲಾಯಿತು! ಆಶ್ಚರ್ಯವೆಂದರೆ ಚಿಕಾಗೋದಲ್ಲಿ ಸಂಚರಿಸುತ್ತಿರುವ ಸಂದರ್ಭದಲ್ಲಿ ಆ ನಿವೇಶನವನ್ನು ಪೂಜ್ಯ ಶ್ರೀಪಾದರು ಗಮನಿಸಿದ್ದರು. ಮಾರಾಟಕ್ಕಿದೆ ಎಂಬ ಫಲಕವನ್ನು ಕಂಡ ಕೂಡಲೇ ಕಾರು ನಿಲ್ಲಿಸುವಂತೆ ಹೇಳಿ, ತಾವೇ ಸ್ವತಃ ಕೆಳಗಿಳಿದು ಆ ಜಾಗವನ್ನು ಪರೀಕ್ಷಿಸಿದ್ದರು!

ಅಂದರೆ ಆ ಜಾಗದಲ್ಲಿಯೇ ಶ್ರೀಮಠದ ನಿರ್ಮಾಣವಾಗಬೇಕೆನ್ನುವುದು ಸಾಕ್ಷಾತ್ ಶ್ರೀ ಕೃಷ್ಣನದ್ದು ಮತ್ತು ರಾಯರದ್ದೇ ಇಚ್ಛೆಯಾಗಿತ್ತು! ಮತ್ತು ತನ್ನಿಮಿತ್ತ ಪೂಜ್ಯ ಶ್ರೀಪಾದರಿಗೂ ಮತ್ತು ಭಕ್ತವರ್ಗಕ್ಕೂ ಪ್ರಬಲವಾದ ಪ್ರೇರಣೆಯನ್ನಿತ್ತು ಇಷ್ಟೆಲ್ಲಾ ಚಟುವಟಿಕೆಗಳು ಬಿರುಸಿನಲ್ಲಿ ಮತ್ತು ಯಶಸ್ವಿಯಾಗಿ ಸಂಭವಿಸುವಂತೆ ಮಾಡಿದ್ದೂ ಆ ದೈವೇಚ್ಛೆಯೇ! ಇಲ್ಲದಿದ್ದರೆ ಅಂತಹ ಅತ್ಯಂತ ಅನುಕೂಲಕರ ಪ್ರದೇಶದಲ್ಲಿ ಬಿಸಿದೋಸೆಯಂತೆ ಮಾರಟವಾಗಿ ಹೋಗಬೇಕಾಗಿದ್ದ ಆ ಜಾಗವು ಯಾವುದೇ ಆಫರ್ ಇಲ್ಲದೆ ಅಷ್ಟು ದಿವಸ ಹಾಗೇ ಉಳಿದದ್ದು ಹೇಗೆ? ಅದಲ್ಲದೆ, ಈ ಜಾಗದಲ್ಲಿ ಶ್ರೀಗಳು ಕಾಲಿರಿಸಿದ ಬಗ್ಗೆ ಯಾವ ಸೂಚನೆಯೂ ಇಲ್ಲದ ಆ ಶಿಕಾಗೋ ಭಕ್ತರ ಹತ್ತಾರು ದಿನಗಳ ಅನ್ವೇಷಣೆಯಲ್ಲಿ ಕೂಡ ಶ್ರೀಮಠದ ಸ್ಥಾಪನೆಗೆ ಈ ಜಾಗವೊಂದೇ ಸೂಕ್ತವಾದದ್ದು ಎಂದು ಕಂಡುಬರುವುದೆಂದರೇನು?

ನಂತರ ಆ ಜಾಗವನ್ನು ಖರೀದಿಸುವ ಮತ್ತು ಬೇಕಾದ ಮಾರ್ಪಾಟುಗಳನ್ನು ಮಾಡುವ ಶ್ರೀಮಠದ ಸುಮಾರು ಅರ್ಧಮಿಲಿಯನ್ ಡಾಲರ್‌ಗಳಷ್ಟು ವೆಚ್ಚದ ಯೋಜನೆಗೆ ರೂಪುರೇಷೆಗಳು ಸಿದ್ಧಗೊಂಡವು. ಸ್ಥಳೀಯ ಭಕ್ತರ ಸಂಪೂರ್ಣ ಸಹಕಾರ, ಉದಾರ ದೇಣಿಗೆ ಮತ್ತು ಬ್ಯಾಂಕ್ ಸಾಲದ ಸಹಾಯದೊಂದಿಗೆ ಶ್ರೀ ಮಠದ ಸ್ಥಾಪನೆಯ ಎಲ್ಲ ಸಿದ್ಧತೆಗಳೂ ಸಾಂಗೋಪಾಂಗವಾಗಿ ಸಂಪನ್ನಗೊಂಡವು. ಮುಂದೆ ಶ್ರೀ ಶೋಭಕೃತ್ ಸಂವತ್ಸರದ ಚೈತ್ರ ಶುಕ್ಲ ತ್ರಯೋದಶೀ April 03, 2023 ಸೋಮವಾರದಂದು ಶುಭಮುಹೂರ್ತದಲ್ಲಿ ಶ್ರೀ ಕೃಷ್ಣವೃಂದಾವನದ ಶಿಕಾಗೋ ಶಾಖೆಯು ಲೋಕಾರ್ಪಣೆಗೊಂಡಿತು. ಪರಮ ಪೂಜ್ಯ ಶ್ರೀಪಾದರ ಅಮೃತಹಸ್ತದಿಂದ ಉಡುಪಿ ಶ್ರೀಕೃಷ್ಣ, ಮುಖ್ಯಪ್ರಾಣ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ವೃಂದಾವನದ ಪ್ರತಿಷ್ಠಾಪನೆಯು ತಂತ್ರಸಾರೋಕ್ತ ವಿಧಿವಿಧಾನಗಳೊಂದಿಗೆ ವೈಭವೋಪೇತವಾಗಿ ಸಂಪನ್ನಗೊಂಡಿತು.

●

# ವಿದೇಶಗಳಲ್ಲಿ ವಿಶೇಷ ಸಾಧನೆ, ಪೂಜ್ಯ ಗುರುಗಳ ಹಿರಿಮೆ



**ಶ್ರೀ ಸಾತ್ವಿಕ್ ಬೆಳಿರಾಯ**
ಶ್ರೀಕೃಷ್ಣವೃಂದಾವನ, ಚಿಕಾಗೊ USA

**ನಾ**ನು ಶ್ರೀಪುತ್ತಿಗೆ ಮಠದ ಶಿಷ್ಯವರ್ಗಕ್ಕೆ ಸೇರಿದವನೆನ್ನುವುದೇ ನನ್ನ ಜೀವನದ ಅತಿ ದೊಡ್ಡ ಸೌಭಾಗ್ಯ. ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಶ್ರೀಮಠದ ಶಿಕಾಗೋ ಶಾಖೆಯಲ್ಲಿ ಸೇವೆಸಲ್ಲಿಸಲು ಸಿಕ್ಕಿರುವ ಅವಕಾಶ, ನನ್ನ ಜೀವನ ಯಾತ್ರೆಯ ಅತಿ ಪವಿತ್ರವಾದ ಒಂದು ಅಧ್ಯಾಯವೆಂದೇ ಭಾವಿಸುತ್ತೇನೆ.

ಪೂಜ್ಯರ ತಪೋಮಯ ಜೀವನ ಶೈಲಿಯೇ ಒಂದು ಆದರ್ಶ. ಧರ್ಮಪ್ರಚಾರ ನಿಮಿತ್ತದ ಪೂಜ್ಯರ ನಿರಂತರ ಪ್ರಯಾಣವೆನ್ನುವುದು ಅವರ ಶಿಷ್ಯಾನುಗ್ರಹ ಯಜ್ಞದ ಒಂದು ಭಾಗವೆನ್ನಬಹುದು. "ಸನಾತನ ಧರ್ಮವನ್ನು ಗಡಿಗಳಾಚೆಗೂ ಕೊಂಡೊಯ್ಯುವುದು" ಎಂಬ ಶ್ರೀಗಳ ಅಚಲ ಸಂಕಲ್ಪ ಎಲ್ಲ ಅಡೆತಡೆಗಳನ್ನೂ ಮೀರಿ ಇದೀಗ ಅಭೂತಪೂರ್ವ ಯಶಸ್ಸನ್ನು ಸಾಧಿಸಿದೆ. ವಿದೇಶಗಳಲ್ಲಿ ಅನೇಕ ಶಾಖೆಗಳನ್ನು ತೆರೆಯುವ ಮೂಲಕ ಭಾರತದ ಧರ್ಮಪತಾಕೆಯನ್ನು ಎತ್ತಿಹಿಡಿದು ವಿಶ್ವಗೋಚರವನ್ನಾಗಿಸಿದೆ. ಅದೃಷ್ಟವಶಾತ್ ಪೂಜ್ಯ ಸ್ವಾಮೀಜಿಯವರ ಶಿಷ್ಟಶಿಷ್ಯೋದ್ಧರಣವೆಂಬ ಪರಮೋದಾತ್ತ ಸಂಕಲ್ಪಯುಕ್ತ ಧರ್ಮಯಾತ್ರೆಯಲ್ಲಿ ಭಾಗವಹಿಸುವ, ಸೇವೆ ಸಲ್ಲಿಸುವ ಭಾಗ್ಯ ನನಗೂ ಲಭಿಸಿದೆ.

ಪೂಜ್ಯ ಸ್ವಾಮೀಜಿಯವರ ದೃಷ್ಟಿಯಲ್ಲಿ ವಿದೇಶ ಪ್ರಚಾರ ಎಂದರೆ ಕೇವಲ ಮಠ ಮಂದಿರ ಕಟ್ಟುವುದಲ್ಲ, ಅಲ್ಲಿ ನೆಲಸಿರುವ ಪ್ರತಿ ಕುಟುಂಬಕ್ಕೂ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಒದಗಿಸುವುದು, ಅವರನ್ನು ಧರ್ಮಿಷ್ಠರನ್ನಾಗಿಸುವುದು. ಈ ಸಂಕಲ್ಪದೊಂದಿಗೆ ಪೂಜ್ಯರಿಂದ ಇಲ್ಲಿಯ ತನಕ ವಿದೇಶಗಳಲ್ಲಿ 15 ಆಧ್ಯಾತ್ಮಿಕ ಕೇಂದ್ರಗಳ ಸ್ಥಾಪನೆಯಾಗಿದ್ದು, ಪ್ರಸ್ತುತ ವಿದೇಶವಾಸಿ ಭಾರತೀಯ ಸಮುದಾಯದ ಧಾರ್ಮಿಕ

ಹಾಗೂ ಸಾಂಸ್ಕೃತಿಕ ಅನುಷ್ಠಾನಗಳಿಗೆ ಅಗತ್ಯವಾಗಿ ಬೇಕಾದ ಎಲ್ಲ ಸವಲತ್ತುಗಳನ್ನೂ ಪೂರೈಸುತ್ತಿವೆ. ಉಡುಪಿಯಲ್ಲಿ ಉಗಮಗೊಂಡ ಶ್ರೀಮಧ್ವ ಸಿದ್ಧಾಂತವೆಂಬ ಭಕ್ತಿಕುಸುಮದ ಕಂಪು ಇದೀಗ ಗೀತಾಪಾಠ, ಧರ್ಮಶಿಕ್ಷಣ, ಹಬ್ಬ ಹರಿದಿನದ ಆಚರಣೆಗಳ ಮೂಲಕ ವಿದೇಶದ ಮಣ್ಣಿನಲ್ಲೂ ಸೊಂಪಾಗಿ ಹರಡುತ್ತಿದೆ.

ಅರಿಜೋನಾಸ್ಟೇಟ್ಯುನಿವರ್ಸಿಟಿ, ಹಿಂದು ಯುನಿವರ್ಸಿಟಿ (ಒರ್ಲ್ಯಾಂಡೋ) ಮುಂತಾದ ವಿಶ್ವಮಟ್ಟದ ವೇದಿಕೆಗಳಲ್ಲಿ ಮಧ್ವತತ್ತ್ವ, ಗೀತಾಸಂದೇಶ, ಮತ್ತು ವಿಶ್ವಶಾಂತಿ ಕುರಿತಾಗಿ ಅವರು ನೀಡಿದ ಭಾಷಣಗಳು ಜ್ಞಾನ ಮತ್ತು ಭಕ್ತಿ ಎರಡನ್ನೂ ಸಮಾನ ಸ್ತರದಲ್ಲಿ ಬೆಳೆಸುವಂತೆ ಮಾಡಿದೆ. "Religion should unite, not divide" ಎಂಬ ಪ್ರಸಿದ್ಧ ವಾಕ್ಯೋಕ್ತಿಯ ಅಂತರಾರ್ಥದಲ್ಲಿ ಪೂಜ್ಯ ಶ್ರೀಗಳ ಧಾರ್ಮಿಕ ಚಿಂತನೆಯ ಅಂತಃಸತ್ವವು ಅಡಕವಾಗಿದೆ. ಇದನ್ನೇ ಅವರು ವಿಶ್ವದಾದ್ಯಂತ ಹರಡಿರುವ ಸನಾತನ ಭಕ್ತವರ್ಗದ ಹೃದಯಕ್ಕೂ ತಲುಪುವಂತೆ ಮಾಡಿ, ಎಲ್ಲ ಭಾಷೆ, ನಂಬಿಕೆಗಳ ಜನರೂ ಒಂದುಗೂಡುವಂತೆ ಮಾಡಿತೋರಿಸಿದ್ದಾರೆ. ನಮ್ಮ ಶಾಖೆಗಳಲ್ಲಿ ಎಲ್ಲ ಜಾತಿಯ ಮತ್ತು ತ್ರಿಮತಸ್ಥ ಭಕ್ತರೂ ಐಕ್ಯಮತ್ಯದಿಂದ ಬಂದು ಸೇವೆ ಸಲ್ಲಿಸುತ್ತಿರುವುದೇ ಅದಕ್ಕೆ ಪ್ರತ್ಯಕ್ಷ ಸಾಕ್ಷಿ!

ನನ್ನ ಜೀವನದ ಪ್ರತಿಯೊಂದು ಹಂತದಲ್ಲೂ ಪೂಜ್ಯ ಸ್ವಾಮೀಜಿಯವರ ಆಶೀರ್ವಾದ, ಅವರ ಕೃಪಾದೃಷ್ಟಿ ಮತ್ತು ಪ್ರೇರಣೆ ಮಾರ್ಗದರ್ಶನವನ್ನಿತ್ತು ನನ್ನನ್ನ ಧನ್ಯನನ್ನಾಗಿಸಿದೆ. ನನ್ನಂತಹ ಅಲ್ಪಕರ್ಮಿಯನ್ನು ತಮ್ಮ ವಿಶ್ವಧರ್ಮ ಪ್ರಚಾರ ಯಾತ್ರೆಯ ಒಂದು ಚಿಕ್ಕ ಸಾಧನವಾಗಿ ಬಳಸಿಕೊಂಡಿರುವುದು ಅವರ ಪರಮಕೃಪೆ ಮತ್ತು ನನ್ನ ಸೌಭಾಗ್ಯ ಎಂದು ಭಾವಿಸುತ್ತೇನೆ. ಸ್ವಾಮೀಜಿಯವರ ಸೇವೆಗೆ ಸದಾ ಕಟಿಬದ್ಧನಾದ ನಾನು ಸಲ್ಲಿಸಬಲ್ಲ ಕೃತಜ್ಞತಾಪೂರ್ವಕ ಪ್ರಾರ್ಥನೆಯಿಷ್ಟೇ;

"ಗುರುಗಳೇ, ನಿಮ್ಮ ಆಶೀರ್ವಾದದ ಬೆಳಕು ಸದಾ ನನ್ನ ಕರ್ತವ್ಯದ ನಿರ್ವಹಣೆಗೆ, ಜೀವನ ಸಾಧನೆಗೆ ದಾರಿದೀಪವಾಗಲಿ. ನಿಮ್ಮ ಅನುಗ್ರಹದಿಂದ ಪ್ರಾಪ್ತವಾದ ತತ್ವಜ್ಞಾನದ ಬೆಳಕನ್ನು ಮುಂದಿನ ತಲೆಮಾರಿಗೂ ಉಳಿಸಿಕೊಳ್ಳುವ ಯೋಗ್ಯತೆ ನನಗೆ ಪ್ರಾಪ್ತಿಯಾಗಲಿ"

"ಧರ್ಮೋ ವಿಶ್ವಮಲಂಕರೋತಿ ಜ್ಞಾನಂ ಭಕ್ತ್ಯಾ ಸುವಿಭೂಷಿತಂ ಯತ್ರಗುರುಸ್ತತ್ರ ನಿತ್ಯಂ ವಿಜಯಃ ಸತ್ಯಸಂಗತಿಃ"


भारत
INDIA
500
2025
श्री मध्वाचार्य
SRI MADHVACHARYA

# ಭಾರತೀಯ ಅಂಚೆಚೀಟಿ ಮತ್ತು ಜಗದ್ಗುರು ಶ್ರೀ ಮಧ್ವಾಚಾರ್ಯರು

**ಪ್ರ**ಸ್ತುತ ಪ್ರಪಂಚದಲ್ಲಿರುವ 195 ದೇಶಗಳಲ್ಲಿ ಅಂಚೆ ಇಲಾಖೆಯೇ ಇಲ್ಲದ ದೇಶವೆನ್ನುವುದು ಒಂದೇ ಒಂದು ಕೂಡ ಇಲ್ಲವಂತೆ! ಅಂದರೆ ಅಷ್ಟರ ಮಟ್ಟಿಗೆ 'ಅಂಚೆ ವ್ಯವಸ್ಥೆಯೆನ್ನುವುದು' ತನ್ನ ಘನತೆಯನ್ನು ವಿಶ್ವದಾದ್ಯಂತ ಇಂದಿಗೂ ಉಳಿಸಿಕೊಂಡಿದೆ ಎನ್ನಬಹುದು! ಇದೀಗ ನಮ್ಮ ನಡುವಿನ ಸಂವಹನ ಮತ್ತು ಮಾಹಿತಿ ವಿನಿಮಯಕ್ಕೆ ಅತ್ಯಂತ ಆಧುನಿಕ ವ್ಯವಸ್ಥೆಗಳು ಲಭ್ಯವಿವೆ. ನಮ್ಮದೀಗ ಸ್ಯಾಟಲೈಟ್ ಮತ್ತು ಡಿಜಿಟಲ್ ಪ್ರಪಂಚ! ಯಾರು ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಕ್ಷಣಾರ್ಧದಲ್ಲಿ ಸಂಪರ್ಕಿಸಿ ವಿಚಾರಿಸಿಕೊಳ್ಳುವುದು, ನಿಖರವಾದ ಮಾಹಿತಿಯನ್ನು ಪಡೆಯುವುದು ನಮ್ಮಿಂದ ಸಾಧ್ಯವಿದೆ. ಹಾಗಾಗಿ ಕೇವಲ ಸಂವಹನಕ್ಕೋಸ್ಕರ, ವಸ್ತು ವಿನಿಮಯಕ್ಕೋಸ್ಕರ ಅಂಚೆ ವ್ಯವಸ್ಥೆಯನ್ನೀಗ ಯಾರೂ ಎಲ್ಲಿಯೂ ಅವಲಂಬಿಸಿಕೊಂಡಿಲ್ಲ. ಆದರೂ ಪ್ರತಿಯೊಂದು ದೇಶದ ಗೌರವಾನ್ವಿತ ಸಂವಹನ ಮಾಧ್ಯಮದ ಮನ್ನಣೆಯೆನ್ನುವುದು ಅಲ್ಲಿನ ಅಂಚೆ ಇಲಾಖೆಗಿರುತ್ತದೆ! ಭಾರತೀಯ ಅಂಚೆ ಇಲಾಖೆಗೂ ಬಹುಕಾಲದಿಂದ ಸಂದು ಬಂದಂತಹ ಆ ಘನತೆ ಗೌರವದ ಸ್ಥಾನಮಾನ, ಯಥಾಪ್ರಕಾರ ನಮ್ಮ ದೇಶದ ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ.

ನಾವು ಇದೀಗ ಬಳಸುತ್ತಿರುವ ಅಂಚೆ ವ್ಯವಸ್ಥೆಯ ಮಾದರಿಯು ಆರಂಭಗೊಂಡದ್ದು ಪುರಾತನ ಈಜಿಪ್ಟ್ ದೇಶದಲ್ಲಂತೆ! ಕ್ರಿಸ್ತಪೂರ್ವ ಸುಮಾರು 2400ರಲ್ಲಿ 'ಫೆರೋಸ್' ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ ಬಹು ಗೌರವಾನ್ವಿತ ಈಜಿಪ್ಷಿಯನ್ ಆಡಳಿತಗಾರರು ಅವರ ಆಂತರಿಕ ಸಂದೇಶ ಮತ್ತು ದಾಖಲೆಗಳ ವಿನಿಮಯಕ್ಕೋಸ್ಕರ 'ಅಂಚೆ ವ್ಯವಸ್ಥೆಯ ಮಾದರಿಯನ್ನು' ಆರಂಭಿಸಿದರಂತೆ. ಬಹುವಿಸ್ತಾರವಾಗಿದ್ದ ತಮ್ಮ ಸಂಸ್ಥಾನದೊಳಗೆ ಅಲ್ಲಲ್ಲಿ ಕಚೇರಿಗಳಂತಹ ನಿರ್ವಾಹಕವ್ಯವಸ್ಥೆಯನ್ನೂ ಸ್ಥಾಪಿಸಿದ್ದರಂತೆ. ಕ್ರಮೇಣ ಈ ಕಾರ್ಯತಂತ್ರವನ್ನು

ಪರ್ಷಿಯನ್ ಸಂಸ್ಥಾನ (ಕ್ರಿ. ಪೂ. 550–330), ಚೀನಾದ ಹ್ಯಾನ್ ಸಾಮ್ರಾಜ್ಯಾಧಿಪತಿಗಳು (ಕ್ರಿ.ಪೂ. 306–221) ಮತ್ತು ತರುವಾಯ ಈಗಿನ ಬಹುತೇಕ ದಕ್ಷಿಣ ಅಮೇರಿಕಾವನ್ನು ವ್ಯಾಪಿಸಿಕೊಂಡು ಬೃಹತ್ತಾಗಿ ಮೆರೆಯುತ್ತಿದ್ದ ಅಂದಿನ 'ಇಂಕಾ' ಸಾಮ್ರಾಜ್ಯಾಧಿಪತಿಗಳು (ಕ್ರಿ.ಶ. 1438–1533) ಬಳಕೆಗೆ ತಂದರಂತೆ.

ನಂತರ ಕ್ರಿ.ಶ. ಹದಿನೈದನೆಯ ಶತಮಾನಕ್ಕಾಗುವಾಗ ಅಂದಿನ ಪ್ರಸಿದ್ಧ ಬ್ರಿಟಿಷ್ ದೊರೆ ಹೆನ್ರಿ VIII ಎಂಬಾತ 'ಮಾಸ್ಟರ್ ಆಫ್ ದಿ ಪೋಸ್ಟ್' ಎಂಬ ಹುದ್ದೆಯನ್ನು ಸ್ಥಾಪಿಸಿ ಅಂಚೆ ಇಲಾಖೆಯನ್ನು ಸುವ್ಯವಸ್ಥಿತವನ್ನಾಗಿಸಿದನಂತೆ. ತದನಂತರ 1635ರಲ್ಲಿ ಆಗಿನ ಆಂಗ್ಲ ರಾಜ ಚಾರ್ಲ್ಸ್ I ಎಂಬಾತ 'ರಾಯಲ್ ಮೈಲ್ಸ್' ಎಂಬ ಹೆಸರಿನಲ್ಲಿ ಅಂಚೆ ಇಲಾಖೆಯ ಸೇವೆಯನ್ನು ಸಾರ್ವಜನಿಕರಿಗೂ ಲಭ್ಯವಾಗುವಂತೆ ಮಾಡಿದನಂತೆ. (ಪ್ರಸ್ತುತ ಇಂಗ್ಲೆಂಡ್ ದೇಶದ ಆ ಅಂಚೆ ಇಲಾಖೆಯು ಅದೇ ಹೆಸರಿನಲ್ಲಿ ಈವತ್ತಿಗೂ ತನ್ನ ಸೇವೆಯನ್ನು ಮುಂದುವರಿಸಿದೆ) ಮುಂದೆ ಬಿಟಿಷ್ ಸಾಮ್ರಾಜ್ಯವು ವ್ಯಾಪಿಸಿದಲ್ಲೆಲ್ಲ ಪ್ರಸಿದ್ಧವಾದ 'ಈ ಪೋಸ್ಟಲ್ ಸರ್ವಿಸ್' ನಿಧಾನಕ್ಕೆ ಜನಪ್ರಿಯವಾಗತೊಡಗಿತು. ಹಾಗೆಯೇ ಅದರ ಅಗತ್ಯವನ್ನು ಮನಗಂಡ ಪ್ರತಿಯೊಂದು ಸ್ವತಂತ್ರ ದೇಶವೂ ಅಂಚೆ ಇಲಾಖೆಯನ್ನು ಅಧಿಕೃತವಾಗಿ ತನ್ನ ವ್ಯವಸ್ಥೆಯೊಳಗೂ ಸೇರಿಸಿಕೊಳ್ಳಲಾರಂಭಿಸಿತು. ಹೀಗೆ ಅಮೇರಿಕಾದಲ್ಲಿ ಪೋಸ್ಟಲ್ ವ್ಯವಸ್ಥೆಯು ಪ್ರಾರಂಭಗೊಂಡಿದ್ದು 1775ರಲ್ಲಿ, ಬೆಂಜಮಿನ್ ಫ್ರಾಂಕ್ಲಿನ್ ನ ಕಾಲದಲ್ಲಿ. ಅದಕ್ಕೂ ಮುನ್ನ, 1760ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಮುಖಾಂತರ ಭಾರತದಲ್ಲಿ ಅಂಚೆಸೇವೆಯು ಆರಂಭಗೊಂಡಿತಂತೆ!

ಅಂದಿನ ಕಾಲದಲ್ಲಿ ಪತ್ರಮುಖೇನ ಸಂದೇಶಗಳನ್ನು ರವಾನಿಸುವಲ್ಲಿ ಜನಪ್ರಿಯತೆಯನ್ನು, ಪ್ರಸಿದ್ಧಿಯನ್ನು ಮತ್ತು ಗೌರವವನ್ನು ಸಂಪಾದಿಸಿದ್ದ ಅಂಚೆಇಲಾಖೆಯಲ್ಲಿ ಇದೀಗ ಪತ್ರಗಳ ವಿನಿಮಯವಾಗುವುದು ಅತ್ಯಂತ ವಿರಳ. ಈಮೈಲ್, ವಾಟ್ಸಾಪ್ ಇತ್ಯಾದಿಗಳು ಶುರುವಾದಮೇಲೆ ಕಾಗದದಲ್ಲಿ ಪತ್ರಗಳನ್ನು ಬರೆದು ಕಳಿಸುವ ಅವಶ್ಯಕತೆಯೂ ನಮಗೆ ಇಲ್ಲವೆನ್ನಿ. ಆದರೂ ಕೆಲವೊಂದು ಅಧಿಕೃತ ಸರಕಾರೀ ಪತ್ರ ವ್ಯವಹಾರಗಳನ್ನು ಗೌರವಪೂರ್ವಕವಾಗಿ ನಡೆಸಲು ಎಲ್ಲ ದೇಶಗಳೂ

ಅಂಚೆ ಇಲಾಖೆಯನ್ನೇ ಬಳಸಿಕೊಳ್ಳುತ್ತಿವೆ. ಹಾಗಾಗಿ ಅಂಚೆ ಇಲಾಖೆ, ಅಂಚೆಚೀಟಿ ಇತ್ಯಾದಿಗಳ ಮಾನ್ಯತೆ ಇಂದಿಗೂ ಹಾಗೆಯೇ ಉಳಿದಿದೆ ಎನ್ನಬಹುದು.

ಇತಿಹಾಸ ತಜ್ಞರು ಗುರುತಿಸುವಂತೆ ಅತ್ಯಂತ ಪುರಾತನವಾದ ಪತ್ರ ವ್ಯವಹಾರದ ದಾಖಲೆಯು ಲಭ್ಯವಾಗುವುದು ಪರ್ಷಿಯಾ ದೇಶದಲ್ಲಂತೆ. ಕ್ರಿ.ಪೂ. 500ನೇ ಶತಮಾನದಲ್ಲಿ ಆ  ಬರೆದವಳು ಅಂದಿನ ರಾಣಿ 'ಅಟೋಸ್ಸಾ' ಎಂಬವಳಂತೆ. ಆದರೆ ಆಗಿನ್ನೂ ನಾವಿಂದು ಕಾಣುವ ಕಾಗದದ ಆವಿಷ್ಕಾರವಾಗಿರಲಿಲ್ಲವಂತೆ! ಕಾಗದವನ್ನು ಕಂಡುಹಿಡಿದವನು ಚೀನಾ ದೇಶದ 'ಟ್ಸಾಯ್ ಲೂನ್' ಎಂಬವನಂತೆ! ಅದು ಕ್ರಿ.ಶ. ಸುಮಾರು 105ರಲ್ಲಿ ಎಂದು ಹೇಳುತ್ತಾರೆ. ಆದರೆ ನಮ್ಮ ಭಾರತೀಯ ಐತಿಹಾಸಿಕ ಗ್ರಂಥಗಳಲ್ಲಿ ಉಲ್ಲೇಖಿತವಾದಂತೆ ಜಗತ್ತಿನ ಮೊತ್ತ ಮೊದಲ ಪತ್ರವ್ಯವಹಾರದ ದಾಖಲೆಯಿರುವುದು ನಮ್ಮ ಶ್ರೀ ಕೃಷ್ಣನ ಹೆಸರಿನಲ್ಲಿ! ಅದಕ್ಕೆ ಸಾಕ್ಷಿಯೆಂಬಂತೆ ಆತ ತಾನು ರುಗ್ಮಿಣಿಗೆ ಬರೆದ ಪ್ರೇಮಪತ್ರದ ಸುಂದರ ಸಂದೇಶವು ನಮ್ಮ ಬಳಿ ಈಗಲೂ ಲಭ್ಯವಿದೆ ತಾನೆ? ಇನ್ನು ವ್ಯಾಸರು ಹೇಳಿದಂತೆ ಗಣಪತಿ ಮಹಾಭಾರತವನ್ನು ಬರೆದದ್ದು, ಮತ್ತು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಅಕ್ಷರಾಭ್ಯಾಸಾದಿ ಸಂಸ್ಕಾರಗಳು, ತಾಳೆಗರಿಯಲ್ಲಿ ಲಭ್ಯವಿರುವ ಅನೇಕ ಪ್ರಾಚೀನ ಗ್ರಂಥಗಳು ಇತ್ಯಾದಿ ವಿಶೇಷಗಳನ್ನು ಗಮನಿಸುವಾಗ ಬರವಣಿಗೆ, ಪತ್ರಸಂದೇಶಗಳ ವಿನಿಮಯ ಇತ್ಯಾದಿ ಅಚ್ಚುಕಟ್ಟಾದ ವ್ಯವಸ್ಥೆಗಳು ನಮ್ಮಲ್ಲೇ ಸುವ್ಯವಸ್ಥಿತವಾಗಿತ್ತು ಎನ್ನುವುದೂ ತಿಳಿದುಬರುತ್ತದೆ.

ಇನ್ನು ಈ ಅಂಚೆಚೀಟಿಯ ಇತಿಹಾಸವನ್ನು ಗಮನಿಸುವುದಾದರೆ ವಿಶ್ವದ ಮೊತ್ತ ಮೊದಲ ಅಂಚೆ ಚೀಟಿ ಬಿಡುಗಡೆಗೊಂಡದ್ದು ಕ್ರಿ.ಶ. 1840ರಲ್ಲಿ. 'ಪೆನ್ನಿಬ್ಲ್ಯಾಕ್' ಎಂಬ ಹೆಸರಿನಲ್ಲಿ ಬ್ರಿಟಿಷ್ ರಾಣಿ ವಿಕ್ಟೋರಿಯಾಳ ಭಾವಚಿತ್ರದೊಂದಿಗೆ ಕಪ್ಪುಬಿಳುಪು ಬಣ್ಣದ ಮೊದಲ ಅಂಚೆಚೀಟಿ ಮುದ್ರಣಗೊಂಡಿತಂತೆ. ಭಾರತದಲ್ಲಿ ಮೊದಲು ಬಿಡುಗಡೆಗೊಂಡ ಅಂಚೆ ಚೀಟಿಯ ಹೆಸರು ‘Seinde Blak’. 1852ರಲ್ಲಿ ಬ್ರಿಟಿಷ್ ಆಡಳಿತದ ಸಿಂಧ್ ಪ್ರಾಂತ್ಯದಲ್ಲಿ ಇದರ ಬಳಕೆಯಾಯಿತಂತೆ. ಮತ್ತು ಇದು ಏಷ್ಯಾಖಂಡದಲ್ಲಿ ಬಿಡುಗಡೆಗೊಂಡ ಮೊದಲ ಅಂಚೆ ಚೀಟಿಯಂತೆ! ಮುಂದೆ ಸ್ವತಂತ್ರ

ಭಾರತದ ಸರಕಾರವು ಬಿಡುಗಡೆಗೊಳಿಸಿದ್ದು ಗಾಂಧೀಜಿಯ ಭಾವಚಿತ್ರವಿರುವ ಅಂಚೆಚೀಟಿಯನ್ನು, ಕ್ರಿ.ಶ.1948ರಲ್ಲಿ.

ಪತ್ರ ವ್ಯವಹಾರಗಳಿಗೆ ಕೇವಲ ಅಂಚೆ ಇಲಾಖೆಯನ್ನು ಮಾತ್ರ ಅವಲಂಬಿಸಿದ್ದ ಆಗಿನ ಕಾಲದಲ್ಲಿ ಅಂಚಿಚೀಟಿಗೂ ಬಹಳ ಗೌರವದ ಸ್ಥಾನಮಾನಗಳಿತ್ತು. ಮತ್ತು ಬಳಕೆಯಾದ ಬಳಿಕ ಅಪೂರ್ವ ಅಂಚೆಚೀಟಿಗಳನ್ನು ಸಂರಕ್ಷಿಡುವ, ಮತ್ತು ಅನ್ಯದೇಶಗಳ ಅಂಚೆಚೀಟಿಗಳನ್ನು ಸಂಗ್ರಹಿಸುವ ಹವ್ಯಾಸವನ್ನೂ ಕೆಲವರು ಬೆಳೆಸಿಕೊಂಡು ಬಂದರು. ಅದೇ ಸಂದರ್ಭದಲ್ಲಿ ತಮ್ಮ ಅನ್ಯಾದೃಶ ವಿಶೇಷ ಕೊಡುಗೆಗಳೊಂದಿಗೆ ದೇಶದಲ್ಲಿ ಪ್ರಸಿದ್ಧರಾದ ಅನೇಕ ಮಹನೀಯರ ಭಾವಚಿತ್ರಗಳನ್ನು ಅಂಚೆ ಚೀಟಿಗಳಲ್ಲಿ ಮುದ್ರಿಸಿ ಅವರ ವಿಶೇಷ ಕೊಡುಗೆಗಳನ್ನು ಸ್ಮರಿಸಿ ಗೌರವ ಸಲ್ಲಿಸುವ ಸಂಪ್ರದಾಯವನ್ನು ಭಾರತ ಸರಕಾರವು ಪ್ರಾರಂಭಿಸಿತು. ಹಾಗೆ ಪೋಸ್ಟಲ್ ಸ್ಟಾಂಪ್ ಮುಖೇನ ಮೊದಲ ಗೌರವವನ್ನು ಸಂಪಾದಿಸಿದ ದೇಶದ ಪ್ರಸಿದ್ಧ ಧಾರ್ಮಿಕ ವ್ಯಕ್ತಿಯೆಂದರೆ ಸ್ವಾಮಿ ವಿವೇಕಾನಂದರು. ಅವರ ಭಾವಚಿತ್ರವಿರುವ ಅಂಚೆಚೀಟಿ ಬಿಡುಗಡೆಗೊಂಡದ್ದು ಕ್ರಿ.ಶ. 1963ರಲ್ಲಿ. ಮುಂದೆ ಶ್ರೀ ಅರಬಿಂದೋ (1964), ಡಾ. ಭಗವಾನ್ ದಾಸ್ (1969) ಇತ್ಯಾದಿ ಅನೇಕರ ಸ್ಮರಣಾರ್ಥ ಅಂಚೆಚೀಟಿಗಳು ಬಿಡುಗಡೆಗೊಂಡವು. ಬುದ್ಧ, ಮಹಾವೀರ ಇತ್ಯಾದಿ ಅನೇಕ ಮಹಾಸಂತರ ಸ್ಟ್ಯಾಂಪ್‌ಗಳೂ ಬಿಡುಗಡೆಗೊಂಡವು. ಆದರೆ ದೇಶದ ಅತ್ಯಂತ ಪ್ರಸಿದ್ಧ ದಾರ್ಶನಿಕರೆನಿಸಿದ ಶ್ರೀ ಶಂಕರಾಚಾರ್ಯರ ಸ್ಮರಣಾರ್ಥ ಅಂಚೆಚೀಟಿಯು ಮುದ್ರಣವಾಗಿ ಬಿಡುಗಡೆಗೊಂಡಿದ್ದು ಮಾತ್ರ ಮೇ 17, 1989ರಂದು! ಮತ್ತು ಮಂಡನ ಮಿಶ್ರರೊಡನೆ ಶ್ರೀ ಶಂಕರರು ವಾಕ್ಯಾರ್ಥ ನಡೆಸುವ ಪೋಸ್ಟಲ್ ಕವರ್ ಬಿಡುಗಡೆಗೊಂಡದ್ದು 2024ರಲ್ಲಿ. ಹಾಗೆಯೇ ಶ್ರೀ ರಾಮಾನುಜರದ್ದು ಅವರ ಜನ್ಮ ಸಹಸ್ರಮಾನೋತ್ಸವದ ಸಂದರ್ಭದಲ್ಲಿ ಅಂದರೆ 2017ನೇ ಇಸವಿಯಲ್ಲಿ!

ಇದೀಗ ಈ ಜಗತ್ತು ಕಂಡ ಇನ್ನೋರ್ವ ಅಪೂರ್ವ ತತ್ವಜ್ಞಾನಿ ಜಗದ್ಗುರು ಶ್ರೀ ಮಧ್ವಾಚಾರ್ಯರ ಭಾವಚಿತ್ರವಿರುವ ಅಂಚೆಚೀಟಿಯನ್ನು ಶ್ರೀ ನರೇಂದ್ರಮೋದಿ ನೇತೃತ್ವದ ಕೇಂದ್ರ ಸರಕಾರವು ಬಿಡುಗಡೆಗೊಳಿಸಿದೆ. ನಮ್ಮ ಸನಾತನ ಪರಂಪರೆಯಲ್ಲಿ

ಬಹುಮಾನ್ಯವೆನಿಸಿದ ಬ್ರಹ್ಮಸೂತ್ರಗಳಿಗೆ ಇಪ್ಪತ್ತೆರಡನೆಯ ಭಾಷ್ಯಕಾರರಾಗಿ ತತ್ವಜ್ಞಾನದ ಮುಖೇನ ವಿಶ್ವದ ಗಮನಸೆಳೆದ, ಭಕ್ತಿಮಾರ್ಗ ಪ್ರವರ್ತಕರೆನಿಸಿದ ಶ್ರೀ ಮಧ್ವರನ್ನು ಭಾರತ ಸರಕಾರವು ಗೌರವಪೂರ್ವಕವಾಗಿ ಸಂಸ್ಮರಿಸಿದೆ. ತನ್ಮೂಲಕ ಸಮಗ್ರ ಕರ್ನಾಟಕ ಮತ್ತು ತುಳುನಾಡಿಗೆ ವಿಶೇಷ ಗೌರವದ ಸಂದಾಯವಾಗಿದೆ. ತನ್ನಿಮಿತ್ತ ಭಾರತೀಯ ಅಂಚೆ ಇಲಾಖೆಯ ಘನತೆಯೂ ಹೆಚ್ಚಿದೆ.

ಈ ಸಂಭ್ರಮದ ಸಂದರ್ಭಕ್ಕೋಸ್ಕರ ಕಳೆದ ಹತ್ತಾರು ವರ್ಷಗಳಿಂದ ಅವಿರತವಾಗಿ ಪ್ರಯತ್ನಿಸಿದ ಮಣಿಪಾಲದ ಪ್ರತಿಷ್ಠಿತ ಮತ್ತು ವಿಶ್ವಪ್ರಸಿದ್ಧ ವಿದ್ಯಾಸಂಸ್ಥೆ 'MAHE'ಯ ಭಗೀರಥ ಪ್ರಯತ್ನವೂ ಅಭಿನಂದನಾರ್ಹ. ಅವರ ಆ ಮಹಾ ಪ್ರಯತ್ನಕ್ಕೆ ಕೈಜೋಡಿಸಿ ಸಮಸ್ತ, ಕನ್ನಡಿಗ ಮತ್ತು ತುಳುವ ಮಹಾಜನತೆಯ ಮಹಾಸಂಕಲ್ಪವನ್ನು ಸಾಕಾರಗೊಳಿಸಿದ ಪ್ರಸ್ತುತ ಚತುರ್ಥ ಬಾರಿಗೆ ಪರ್ಯಾಯ ಸರ್ವಜ್ಞ ಪೀಠಾಧೀಶ್ವರರಾದ ಶ್ರೀ ಪುತ್ತಿಗೆ ಮಠಾಧೀಶರಾದ ಪರಮ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರಿಗೂ ನಮ್ಮ ಅನಂತ ನಮನಗಳು.

ಅದರಲ್ಲೂ ಈ ಅಪೂರ್ವ ಮತ್ತು ಐತಿಹಾಸಿಕ ಸುಂದರ ಕ್ಷಣವು, ತತ್ವಜ್ಞಾನದ ಪ್ರಸಾರಕ್ಕೋಸ್ಕರ ವಿಶ್ವದಾದ್ಯಂತ ಸಂಚರಿಸಿ, ಅನೇಕ ದೇಶಗಳಲ್ಲಿ ಹತ್ತಾರು ಧಾರ್ಮಿಕ ಕೇಂದ್ರಗಳನ್ನು ಸಂಸ್ಥಾಪಿಸಿದ ಪೂಜ್ಯ ಪುತ್ತಿಗೆ ಶ್ರೀಪಾದರ ಪರ್ಯಾಯ ಕಾಲದಲ್ಲಿ, ಮತ್ತು ಇನ್ನೂ ವಿಶೇಷವೆಂಬಂತೆ ಅವರ ಜನ್ಮದಿನದಂದೇ, ಉಡುಪಿಯಲ್ಲೇ ಲೋಕಾರ್ಪಣೆಗೊಂಡಿರುವುದು ಇನ್ನೂ ವಿಶೇಷ! ಮತ್ತು ಇದು ಪ್ರಪಂಚದಾದ್ಯಂತ ವ್ಯಾಪಿಸಿರುವ ಪೂಜ್ಯ ಶ್ರೀಪಾದರ ಸಹಸ್ರಾರು ಅಭಿಮಾನಿಗಳಿಗೆ, ಶಿಷ್ಯರಿಗೆ ಅತೀವ ಹೆಮ್ಮೆಯನ್ನು, ಸಂತಸವನ್ನು ಮತ್ತು ಸಂಭ್ರಮವನ್ನು ಉಂಟುಮಾಡಿದೆ! ಪೂಜ್ಯರಲ್ಲಿ ಸನ್ನಿಹಿತರಾಗಿರುವ ಜಗದ್ಗುರು ಶ್ರೀಮನ್ ಮಧ್ವಾಚಾರ್ಯರಿಗೆ ನಮ್ಮೆಲ್ಲರ ಭಕ್ತಿಪೂರ್ವಕ ಪ್ರಣಾಮಗಳನ್ನು ಸಮರ್ಪಿಸೋಣ. ಜೈ ಶ್ರೀಕೃಷ್ಣ ! ಜೈ ಶ್ರೀ ಮಧ್ವ !





# ಶ್ರೀಗಳ ಸಂಕಲ್ಪಶಕ್ತಿಗೊಲಿದ ಗೀತಾಕೃಷ್ಣ !

**ಪ**ರಮಪೂಜ್ಯ ಪುತ್ತಿಗೆ ಶ್ರೀಪಾದರ ಚತುರ್ಥ ಪರ್ಯಾಯದಲ್ಲಿನ ಅನುದಿನದ ಅದ್ಭುತ ಕಾರ್ಯಕ್ರಮಗಳ ಅನ್ಯಾದೃಶ ವೈಭವವನ್ನು ಕಣ್ಣಾರೆ ಕಂಡವರಿಗೆ ಕಾಡುವ ಪ್ರಶ್ನೆಯೊಂದೇ! ಅರೆ! ಇದು ಹೇಗೆ ಸಾಧ್ಯ!?

ಹದಿನಾಲ್ಕು ವರ್ಷಗಳಿಗೊಮ್ಮೆ ಮಾತ್ರ ಸಿಗುವ ಮತ್ತು ಕೇವಲ ಎರಡು ವರ್ಷಗಳಿಗಷ್ಟೇ ಸೀಮಿತವಾದ ಈ ಅವಕಾಶದಲ್ಲಿ ಇಷ್ಟೊಂದು ರಾಶಿ ರಾಶಿ ಅತ್ಯಪೂರ್ವವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುವುದೆಂದರೆ ಯಾರೂ ಸುಲಭವಾಗಿ ನಂಬುವ ಮಾತಲ್ಲ! ಏಕೆಂದರೆ ಅಲ್ಲಿ ಪೂರ್ವಸಿದ್ಧತೆಗೆ ಯಾವ ಅವಕಾಶಗಳೂ ಇಲ್ಲ! ಮತ್ತು ನಿತ್ಯಾನುಷ್ಠಾನ, ಪೂಜಾ, ಪಾಠಪ್ರವಚನಾದಿ ತಮ್ಮ ನಿತ್ಯ ಸಂಚಾರದ ಅನೇಕ ಮುಖ್ಯ ಕರ್ತವ್ಯಗಳ ಜೊತೆಗೆ ಪೂಜ್ಯರಿಗೆ ಅನ್ಯ ವ್ಯವಹಾರಗಳ ಬಗ್ಗೆ ಯೋಚಿಸಲು ಕಿಂಚಿತ್ತು ಸಮಯವೂ ಸಿಗುವುದಿಲ್ಲ! ಆದರೂ ಪೂಜ್ಯ ಶ್ರೀಪಾದರು ಸಂಪಾದಿಸಿದ ಈ ಅಭೂತಪೂರ್ವ ಮತ್ತು ಅತ್ಯಂತ ಅಸಂಭವವೆನಿಸಿದ ಅದ್ಭುತ ಯಶಸ್ಸುಗಳ ಸರಮಾಲೆಯ ಹಿಂದಿರುವ ಗುಟ್ಟೇನು ಗೊತ್ತೇ? 'ಅವರ ಸಂಕಲ್ಪ ಶಕ್ತಿ ಮತ್ತು ಶ್ರೀಕೃಷ್ಣಾನುಗ್ರಹ!'

ಕೇವಲ ಹದಿಮೂರರ ಹರೆಯದಲ್ಲೇ ಪ್ರಾಪ್ತವಾದ ಪ್ರಥಮ ಪರ್ಯಾಯದಲ್ಲಿ ಪರಮಪೂಜ್ಯ ಶ್ರೀಪಾದರು ತಾವು ತಮ್ಮ ಪರಮ ಮುಗ್ಧ ಮತ್ತು ನಿಷ್ಕಲ್ಮಶ ಮನಸ್ಸಿನೊಂದಿಗೆ ಅತ್ಯಂತ ನಿಷ್ಠೆಯಿಂದ, ಶ್ರದ್ಧೆಯಿಂದ, ಭಕ್ತಿ ಪುರಸ್ಸರವಾಗಿ ಕಟ್ಟುನಿಟ್ಟಿನ ಕಠಿಣ ತಪಸ್ಸಿನೋಪಾದಿಯಲ್ಲಿ ಸಲ್ಲಿಸಿದ ಆ ಎರಡು ವರ್ಷದ ನಿರಂತರ ಸೇವೆಗೆ ಶ್ರೀಕೃಷ್ಣನು ಸಂಪೂರ್ಣವಾಗಿ ಒಲಿದು ಬಿಟ್ಟಿದ್ದಾನೆ, ಮತ್ತು ಪೂಜ್ಯರ ಎಲ್ಲ ಸಂಕಲ್ಪಗಳನ್ನೂ ಸಾಕಾರಗೊಳಿಸಲು ಶ್ರೀಗಳ ಜೊತೆಗೆ ಸರ್ವದಾ ಕಟಿಬದ್ಧನಾಗಿ ನಿಂತಿದ್ದಾನೆ ಎಂದು ನಾವು ಘಂಟಾಘೋಷವಾಗಿ ಹೇಳಬಹುದು! ಅವರ ಜೀವನಗಾಥೆಯನ್ನು ಗಮನಿಸಿದರೆ ನಮಗದು ನಿಃಸಂದೇಹವಾಗಿ ಹೌದೇ ಹೌದೆನ್ನಿಸುತ್ತದೆ. ಏಕೆಂದರೆ ಮುಂದೆ ಅವರು

ಎಲ್ಲಿಯೂ ಸೋತದ್ದಿಲ್ಲ! ತಾವು ಸಂಕಲ್ಪಿಸಿದ ಮಹತ್ಕಾರ್ಯಗಳೆಲ್ಲವನ್ನೂ ಅತ್ಯಂತ ಯಶಸ್ವಿಯಾಗಿ, ಅಚ್ಚುಕಟ್ಟಾಗಿ ಸಾಧಿಸಿ ತೋರಿಸಿದ್ದಾರೆ!

ತಮ್ಮ ಎರಡನೇ ಪರ್ಯಾಯದಲ್ಲಿ ನಿರ್ಮಿತವಾದ ಉಡುಪಿಯ 'ಐಕಾನ್' ಸ್ವಾಗತಗೋಪುರ, ಭವ್ಯ ಗೀತಾಮಂದಿರ ಮತ್ತು ತದನಂತರದ ಕಾಲಘಟ್ಟದಲ್ಲಿ ಹಾಗೂ ತೃತೀಯ ಪರ್ಯಾಯ ಕಾಲದಲ್ಲಿ ನಿರ್ಮಾಣಗೊಂಡ ರತ್ನರಥ, ಅನ್ನಬ್ರಹ್ಮ, ಅನ್ನಯಜ್ಞ, ಪಶ್ಚಿಮಗೋಪುರ, ಬೆಂಗಳೂರಿನ ಗೋವರ್ಧನ ಮಂದಿರ, ಅಮೇರಿಕ, ಇಂಗ್ಲೆಂಡ್, ಕೆನಡ, ಆಸ್ಟ್ರೇಲಿಯಾದಿ ವಿದೇಶಗಳಲ್ಲಿ ನಿರ್ಮಾಣಗೊಂಡ ಹದಿನೈದು ಅದ್ಭುತ ಶ್ರೀಕೃಷ್ಣಮಂದಿರಗಳು ಹಾಗೆಯೇ ಬೆಂಗಳೂರು, ಪುತ್ತಿಗೆ ಮತ್ತು ಪಾಡಿಗಾರಿನಲ್ಲಿ ಪ್ರತ್ಯೇಕ ಮೂರು ಲೌಕಿಕ, ವೈದಿಕ ಬೃಹತ್ ವಿದ್ಯಾಲಯಗಳು ಮತ್ತು ತನ್ಮಧ್ಯದಲ್ಲಿ ವಿಶ್ವದಾದ್ಯಂತ ಆಯೋಜಿಸಿದ ಅನೇಕ ಬೃಹತ್ ಕಾರ್ಯಕ್ರಮಗಳು, ಸಮಾರಂಭಗಳು ಹೀಗೆ ತಾವು ಸಂಕಲ್ಪಿಸಿದ ಎಲ್ಲ ಅತ್ಯಂತ ಅಸಂಭವನೀಯವೆನಿಸಿದ ಕಾರ್ಯಗಳಲ್ಲೂ ಯಶಸ್ಸನ್ನು ಸಾಧಿಸಿದ ಪರಮ ಪೂಜ್ಯರ ಯಶೋಗಾಥೆ ಪ್ರಸ್ತುತ ಚತುರ್ಥ ಪರ್ಯಾಯದಲ್ಲಿ ಇನ್ನಷ್ಟು ಪ್ರಬಲವಾಗಿ, ಪರಿಣಾಮಕಾರಿಯಾಗಿ ಮುಂದುವರಿಯುತ್ತಿದೆ ಎನ್ನಬಹುದು!

ರಭಸದಿಂದ ಹರಿಯುವ ಗಂಗೆಯ ಪರಿಶುದ್ಧ ನೀರನ್ನು ಬೃಹತ್ ಬಂಡೆಗಳ ಯಾವ ರಾಶಿಯಾದರೂ ತಡೆಯುವುದು ಸಾಧ್ಯವೇ? ಎಲ್ಲವನ್ನೂ ಎದುರಿಸಿಕೊಂಡು ಎಲ್ಲವನ್ನೂ ತನ್ನೊಡಲಿನಲ್ಲಿ ಸೇರಿಸಿಕೊಂಡು ಗಂಗೆ ತಾನು ಬೃಹದಾಕಾರವನ್ನು ತಾಳುತ್ತಲೇ ಗಮ್ಯವಾದ ಸಾಗರವನ್ನು ನಿಶ್ಚಯವಾಗಿ ಸೇರುವಂತೆ ಪೂಜ್ಯ ಶ್ರೀಪಾದರು, ಹೆಜ್ಜೆ ಹೆಜ್ಜೆಗೂ ಎದುರಾಗುವ ಮತ್ಸರಿಗಳ ಎಲ್ಲ ಉಪಟಳ, ಅಪಪ್ರಚಾರಾದಿ ಅವಿರತ ಬಾಧೆಗಳನ್ನು ನಿರಾಯಾಸದಿಂದ ಎದುರಿಸುತ್ತಾ ತಮ್ಮ ಶುದ್ಧಸಂಕಲ್ಪದ ಮತ್ತಷ್ಟು ಸಾಧನೆಗಳನ್ನು ಇನ್ನಷ್ಟು ಬೃಹತ್ತಾಗಿಸಿಕೊಂಡು ಅವುಗಳನ್ನು ಶ್ರೀಕೃಷ್ಣನ ಚರಣಗಳಿಗೆ ತಲುಪಿಸುವಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ.

'ಇಷ್ಟಾನ್ ಭೋಗಾನ್ ಹಿ ವೋ ದೇವಾಃ ದಾಸ್ಯಂತೇ ಯಜ್ಞಭಾವಿತಾಃ' ನೀವು ನಡೆಸುವ ಶ್ರದ್ಧಾಪೂರ್ವಕವಾದ ಯಜ್ಞಗಳಿಂದ ಸಂತೃಪ್ತರಾದ ದೇವತೆಗಳು

ನಿಮ್ಮ ಇಷ್ಟಾರ್ಥಗಳನ್ನು ಖಂಡಿತವಾಗಿಯೂ ನೆರವೇರಿಸಿಕೊಡುತ್ತಾರೆ ಎಂಬ ಶ್ರೀಕೃಷ್ಣನ ಅಭಯ ವಚನಕ್ಕೆ ಪೂಜ್ಯ ಶ್ರೀಪಾದರೇ ನಮಗೆ ಪ್ರತ್ಯಕ್ಷ ನಿದರ್ಶನ! ಇಲ್ಲವಾದರೆ ಶ್ರೀಕೃಷ್ಣಸನ್ನಿಧಿಯಲ್ಲಿ ನಿತ್ಯವೂ ನಡೆಯುವ ಅಖಂಡ ಗೀತಾಪಾರಾಯಣ, ಕೋಟಿಗೀತಾ ಲೇಖನ ಯಜ್ಞ, ಅಂತಾರಾಷ್ಟ್ರೀಯ ಗೀತಾಸಮ್ಮೇಳನ, ಲಕ್ಷ ಕಂಠಗೀತಾಪಾರಾಯಣ, ರತ್ನಮಂಟಪ, ಸುವರ್ಣಕವಚ, ಸುವರ್ಣಪಥ, ಸುವರ್ಣರಥಾದಿ ಅತ್ಯಪೂರ್ವ ಮತ್ತು ಅಸಾಧಾರಣ ಮಹತ್ಕಾರ್ಯಗಳು ನಿರ್ವಿಘ್ನವಾಗಿ ಸಂಪನ್ನಗೊಳ್ಳುವುದು ಹೇಗೆ ಸಾಧ್ಯ?

ಆಹಾರ, ವಿಶ್ರಾಂತಿ, ನಿದ್ರಾದಿ ಯತ್ಕಿಂಚಿತ್ ಅನಿಶಿದ್ಧ ಸುಖಲೇಷಗಳನ್ನೂ ಪರಿತ್ಯಜಿಸಿ, ಕೇವಲ ನಿರಂತರ ಪರಿಶ್ರಮದೊಂದಿಗೆ ತಮ್ಮ ದೇಹಾರೋಗ್ಯವನ್ನೂ ಲೆಕ್ಕಿಸದೆ, ರಥಚಕ್ರದಂತೆ ತನ್ನನ್ನು ತಾನು ನವೆಸುತ್ತಾ. ಈ ಎಲ್ಲ ಮಹತ್ಕಾರ್ಯಗಳನ್ನೂ ಯಜ್ಞದೋಪಾದಿಯಲ್ಲಿ ಮತ್ತು ಕೇವಲ ಲೋಕಕಲ್ಯಾಣದ ಉದ್ದೇಶದಿಂದ ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ಸಮರ್ಪಿಸಿಕೊಂಡು ಬಂದ ಶ್ರೀಗಳ ಶುದ್ಧಮನಸ್ಸಿನ ಎಲ್ಲ ಸಂಕಲ್ಪಗಳನ್ನು ಯಜ್ಞಭಾವಿತರಾದ ಎಲ್ಲ ದೇವತೆಗಳೂ ಯಶಸ್ವಿಯಾಗಿ ನೆರೆವೇರಿಸಿಕೊಡುವುದರಲ್ಲಿ ಯಾವ ಸಂಶಯವೂ ಇಲ್ಲ! ಅದಕ್ಕೇ ಇರಬೇಕು, ತಮ್ಮ ಪರ್ಯಾಯದಲ್ಲಿ ಎಲ್ಲರೂ ಉಡುಪಿಗೆ ಬಂದು ಶ್ರೀ ಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಬೇಕು ಎಂಬ ಶ್ರೀಪಾದರ ಪ್ರಬಲ ಇಚ್ಛೆಯಂತೆ ಪ್ರಸ್ತುತ ಪರ್ಯಾಯದಲ್ಲಿ ಶ್ರೀಕೃಷ್ಣನ ದರ್ಶನ ಮತ್ತು ಶ್ರೀಗಳ ಭೇಟಿಗೆಂದು ಬರದ ಮಹನೀಯರೇ ಇಲ್ಲವೆನ್ನಬಹುದು! ಹಾಗೆಯೇ ಕಳೆದ ಹದಿನಾರು ವರ್ಷಗಳಿಂದ ಯಾರ್ಯಾರೋ ಶತಾಯ ಗತಾಯ ಪ್ರಯತ್ನಿಸಿದರೂ ಸಾಧ್ಯವಾಗದ ಪ್ರಧಾನ ಮಂತ್ರಿಗಳ ಉಡುಪಿಯಾತ್ರೆ, ಶ್ರೀಕೃಷ್ಣದರ್ಶನ ಪ್ರಸ್ತುತ ಪರ್ಯಾಯದಲ್ಲೇ ಸಂಪನ್ನಗೊಳ್ಳುತ್ತಿರುವುದು ಕೂಡ ಶ್ರೀಗಳ ಸಂಕಲ್ಪಶಕ್ತಿ ಮತ್ತು ಶ್ರೀಕೃಷ್ಣಾನುಗ್ರಹದಿಂದ ಮಾತ್ರ ಸಾಧ್ಯ ಎನ್ನಲಡ್ಡಿಯಿಲ್ಲವಲ್ಲವೇ?

●

## ಕೃತಜ್ಞತೆಗಳು


- ನ್ಯೂಜೆರ್ಸಿ ಶ್ರೀಕೃಷ್ಣನ ಮತ್ತು ಶ್ರೀಗಳ ಅಂತರಂಗ ಭಕ್ತರಾದ ಶ್ರೀ ವಿವೇಕ್ ಶೆಣೈ, ಶ್ರೀಮತಿ ಮಾಯಾ ಶೆಣೈ ದಂಪತಿಗಳು.
- ನನ್ನ ಹಲವು ಪುಸ್ತಕಗಳನ್ನು ಚಂದವಾಗಿ ಮುದ್ರಿಸಿಕೊಟ್ಟ ಶ್ರೀ ಅನಂತ್ ಶೆಣೈ, ಜುಪಿಟರ್ ಉಪ್ಪಿನಂಗಡಿ.
- ಖ್ಯಾತ Photo Journalist ಶ್ರೀ ಆಸ್ಟ್ರೋ ಮೋಹನ್ ಉಡುಪಿ.
- ಪ್ರಸಿದ್ಧ Photographer ಶ್ರೀ ಅನಂತಕೃಷ್ಣ ಭಾಗವತ್ ಉಡುಪಿ.
- ನನ್ನ ಎಲ್ಲ ಹಿತೈಷಿಗಳು, ಅಭಿಮಾನಿಗಳು ಮತ್ತು ಶಿಷ್ಯವೃಂದ.
- ನನ್ನ ಎಲ್ಲ ಸಾಧನೆಗಳ ಹಿನ್ನೆಲೆಯ ಅವ್ಯಕ್ತಶಕ್ತಿ ನನ್ನ ಪ್ರೀತಿಯ ಪತ್ನಿ ಶ್ರೀಮತಿ ದಿವ್ಯಾ ಮತ್ತು ಮಕ್ಕಳು ಸುಧನ್ವ, ಸುಧಾಮ

ಮತ್ತು

ಈ ಅಪೂರ್ವ ಪುಸ್ತಕದ ಸೃಷ್ಟಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲ ಸಹೃದಯರಿಗೂ ನನ್ನ ಹೃದಯಾಂತರಾಳದ ಶುಭಹಾರೈಕೆಗಳು ಮತ್ತು ಧನ್ಯವಾದಗಳು.




**ಡಾ। ಯೋಗೀಂದ್ರ ಭಟ್ ಉಳಿ**

ಶ್ರೀ ಗುರುಭ್ಯೋನಮಃ

||ಅಸ್ಮದ್ಗುರ್ವಂತರ್ಗತ ಶ್ರೀಮನ್ಮಧ್ವಾಂತರ್ಗತ ಶ್ರೀವೇದವ್ಯಾಸಾಯ ನಮಃ ||



ಶ್ರೀಕೃಷ್ಣಪೂಜಾರ್ಪಿತಚಿತ್ತವೃತ್ತಿಂ ವಿರಕ್ತಚೂಡಾಮಣಿಮಿಂದುಶಾಂತಂ
ಅನಂತಸದ್ಭಕ್ತಪ್ರಿಯಂ ಮಮಾಪಿ ಸುಗುಣೇಂದ್ರತೀರ್ಥಂ ಪರಮಾಶ್ರಿತೋಽಹಂ

# ಶ್ರೀಕೃಷ್ಣಾರ್ಪಣಮಸ್ತು

✍️ಡಾ|| ಯೋಗೀಂದ್ರ ಭಟ್ ಉಳಿ